ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ವಾ.ಸಾ.ಇ/ಹಾ/518/ದೇಶಪಾಂಡೆಪಬ್ಲಿಸಿಟಿ/2023–24 ಪಂ.ರಾ.ಇಂ.ವಿಭಾಗ, ಹಾವೇರಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಚೇರಿ, ನಂ.2 ಹಾರಂಗಿ ಬಲದಂಡೆ ನಾಲಾ ವಿಭಾಗ, ಹುಣಸೂರು, ಮೈಸೂರು ಜಿಲ್ಲೆ– 571 105.
Ph: 08222-252211 Fax: 252211 Email: eeharangi@yahoo.co.in
ಸಂಖ್ಯೆ: ಕಾ.ಇಂ/ ನಂ.2 ಹಾ.ಬ.ನಾ.ವಿ–ಹು/ ಸ.ಇಂ/ ಅಲ್ಪಾವಧಿ ಟೆಂಡರ್–04/2023–24/ ದಿನಾಂಕ: 02.03.2024

ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ ದಿನಾಂಕ: 07.03.2024
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮೂಲಕ ಮಾತ್ರ)

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 04/2023–24, ದಿ: 02.03.2024ರ 4 ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ ವಿಳಾಸ: https://kppp.karnataka.gov.in/kppp. ರಲ್ಲಿ ಪಡೆಯಬಹುದಾಗಿದೆ. ಉಳಿದಂತೆ ಷರತ್ತುಗಳಲ್ಲಿ ಬದಲಾವಣೆಯಿರುವುದಿಲ್ಲ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
DIPR/DDMYS/KSMCA/1273/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಬಸವನಗುಡಿ ವಿಭಾಗ, ಬಿಬಿಎಂಪಿ ಕಟ್ಟಡ, ಚನ್ನಮ್ಮನಕೆರೆ ಅಚ್ಚುಕಟ್ಟು, ವಿದ್ಯಾಪೀಠ, ಬಿಎಸ್‌ಕೆ 3ನೇ ಹಂತ, ಬೆಂಗಳೂರು–85.
ಸಂಖ್ಯೆ: ಕಾಪಾಅ(ಬಗು)/ಇ–ಪ್ರೊ/11/2023-24 ದಿನಾಂಕ: 07-03-2024

ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ಕೆಡಬ್ಲ್ಯೂ–4)
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ ಲಕೋಟೆ ಪದ್ಧತಿ)
ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ, ಬೃಬೆಂಮಪಾ ಬೆಂಗಳೂರು ರವರು ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	ವಾರ್ಡ್ ನಂ.199, 200 ಮತ್ತು 201 ಗಿರಿನಗರ ಉಪ ವಿಭಾಗದ ರಸ್ತೆಗಳು, ಒಳಚರಂಡಿಗಳು ಪಾದಚಾರಿ ಮಾರ್ಗಗಳು ಕಲ್ವರ್ಟ್‌ಗಳ ಸಮಗ್ರ ಅಭಿವೃದ್ಧಿ ಮತ್ತು ಇತರ ಅತ್ಯಗತ್ಯ ಅಭಿವೃದ್ಧಿ ಕಾಮಗಾರಿಗಳು. ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಸೇರಿ) (ಲಕ್ಷ ರೂ.ಗಳಲ್ಲಿ): 39492143.63. ಇಎಂಡಿ (ರೂ.ಗಳಲ್ಲಿ): 6,00,000/-.
2)	ವಾರ್ಡ್ ನಂ.196, 197 ಮತ್ತು 198 ಬಸವನಗುಡಿ ಉಪ ವಿಭಾಗದ ರಸ್ತೆಗಳು, ಒಳಚರಂಡಿಗಳು ಪಾದಚಾರಿ ಮಾರ್ಗಗಳು ಕಲ್ವರ್ಟ್‌ಗಳ ಸಮಗ್ರ ಅಭಿವೃದ್ಧಿ ಮತ್ತು ಇತರ ಅತ್ಯಗತ್ಯ ಅಭಿವೃದ್ಧಿ ಕಾಮಗಾರಿಗಳು. ಟೆಂಡರ್‌ಗಿಟ್ಟ ಮೊತ್ತ (ಜಿಎಸ್‌ಟಿ ಸೇರಿ) (ಲಕ್ಷ ರೂ.ಗಳಲ್ಲಿ): 39488454.24. ಇಎಂಡಿ (ರೂ.ಗಳಲ್ಲಿ): 6,00,000/-.

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 07–03–2024 ರಿಂದ ಡೌನ್‌ಲೋಡ್ ಮಾಡಬಹುದು. 2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 15–03–2024ರ ಸಂಜೆ 5:30 ಗಂಟೆಯವರೆಗೆ. 3) ಪೂರ್ವ-ಬಿಡ್ ಸಭೆಯು ದಿನಾಂಕ: 11–03–2024ರ ಸಂಜೆ 3:30 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ದಾಖಲೆಗಳನ್ನು ತೆರೆಯುವ ದಿನಾಂಕ 18–03–2024 ರಂದು ಬೆಳಗ್ಗೆ 11:00 ಗಂಟೆಗೆ. 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 22–03–2024 ರಂದು ಬೆಳಗ್ಗೆ 11:00 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ, ಬೃಬೆಂಮಪಾ.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಅಡ್ಡ ರಸ್ತೆ, ಹಳೆ ಮದ್ರಾಸ್ ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಬಸ್ ಡಿಪೊ ಹತ್ತಿರ, ಬೆಂಗಳೂರು–560038, ದೂ: 91–80–25196100, 25196124, ಇ–ಮೇಲ್: info@kuidfc.com ವೆಬ್‌ಸೈಟ್: www.kuidfc.com
ಸಂ. ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಂ/08/2023–24 ದಿನಾಂಕ: 08.03.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (2ನೇ ಕರೆ)

ಕೆಯುಐಡಿಎಫ್‌ಸಿ ಸಂಸ್ಥೆಯು, N.G.T ಪರಿಹಾರ ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ **"Faecal Sludge Treatment Plants (FSTP) including Operation and Maintenance for 5 years under NGT Environmental Compensation funds on DBOT model"** ಯೋಜನೆಗಾಗಿ ಅರ್ಹ ಗುತ್ತಿಗೆದಾರರಿಂದ 12 ಪ್ಯಾಕೇಜ್‌ಗಳಲ್ಲಿ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in)** ಲಭ್ಯವಿರುತ್ತದೆ.

Package No.	Tender document available date in e-procurement website	Last date for bid submission
Package 1 to Package 12	09.03.2024	03.04.2024 up to 5.00 p.m.

ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೆಯುಐಡಿಎಫ್‌ಸಿ

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518
ಸಂಖ್ಯೆ: ಡಿಪಿಎಸ್/ಸಿಎಸ್‌ಟಿಜಿ/ಟಿಪಿಬಿ/5/2024 ದಿನಾಂಕ: 06.03.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ವಿವಿಧ ಬಗೆಯ ಲಕೋಟೆಗಳ ಪಂಚಿಂಗ್ ಮತ್ತು ಪೇಸ್ಟಿಂಗ್ ಕಾರ್ಯನಿರ್ವಹಿಸಲು ಮತ್ತು ಕ್ಲಾತ್‌ಲೈನ್ ಲಕೋಟೆಗಳನ್ನು ಮುದ್ರಿಸಿ ಪೂರೈಸಲು ಬೆಂಗಳೂರಿನಲ್ಲಿನ (ಬಿ.ಬಿ.ಎಂ.ಪಿ ವಲಯ) ಅರ್ಹ ಸಂಸ್ಥೆಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.114.11/– ಲಕ್ಷಗಳಾಗಿದ್ದು ಇದರ ಒಟ್ಟು ಇ.ಎಂ.ಡಿ ಮೊತ್ತ ರೂ.5.71/– ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:14.03.2024. ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:11.03.2024 ರಂದು ಬೆಳಗ್ಗೆ 11.30 ಗಂಟೆಗೆ ಮೇಲ್ಕಂಡ ವಿಳಾಸದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿರುತ್ತದೆ. ವಿವರವಾದ ಟೆಂಡರ್ ದಸ್ತಾವೇಜನ್ನು website:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಸಹಾಯಕ ನಿರ್ದೇಶಕರು (ಜೆ.ನಿ)
ವಾ.ಸಾ.ಸಂ.ಇ/ವಾಪ್ರ/4135ಆಕಾರ್/2023–24 ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ

ಜಿಲ್ಲಾ ಪಂಚಾಯತ, ಕೊಪ್ಪಳ.

ಭಾಗ – "ಎ"

ಟೆಂಡರಿನ ವಿವರಗಳ ಘೋಷವಾರು

2024–25ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಹಾತ್ಮಾ ಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುವ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯಲು ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಇ–ಟೆಂಡರನ್ನು ಎರಡು ಲಕೋಟೆಗಳಲ್ಲಿ ಸಲ್ಲಿಸಲು ಜಿಲ್ಲಾ ಪಂಚಾಯತಿ ಕೊಪ್ಪಳ ಇವರು ಅಹ್ವಾನಿಸಿರುತ್ತಾರೆ. ಆಸಕ್ತಯುಳ್ಳ ಟೆಂಡರುದಾರರು, ಟೆಂಡರ್ https://www.eproc.karnataka.gov.in ವೆಬ್ ಸೈಟಿನಿಂದ ತೆಗೆದುಕೊಳ್ಳಲು ತಿಳಿಸಲಾಗಿದೆ. (ಎಲ್ಲಾ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ: 08539–220002, E-Mail: ceo_zp_kpl@nic.in)

1) **ಕಾಮಗಾರಿ ಹೆಸರು** : 2024–25ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಹಾತ್ಮಾ ಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುವ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯಲು ಮಾನವ ಸಂಪನ್ಮೂಲ ಸಂಸ್ಥೆಯನ್ನು ಇ–ಟೆಂಡರ ಮೂಲಕ ಆಯ್ಕೆ ಮಾಡುವ ಕುರಿತು. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : **542.57**. ಇ.ಎಮ್.ಡಿ ಮೊತ್ತ (ರೂ.ಲಕ್ಷಗಳಲ್ಲಿ) : **8.14**. ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ : **20/03/2024 ಸಂಜೆ 5.00 ಗಂಟೆಗೆ**. ಟೆಂಡರಿನ ದಾಖಲೆಗಳನ್ನು ವೆಬ್ ಸೈಟಿನಲ್ಲಿ ಪಡೆಯುವ ದಿನಾಂಕ : **07/03/2024**. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **22/03/2024**. ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : **26/03/2024**.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ವಾ.ಸಾ.ಇ./ಕೊಪ್ಪಳ/534/2023–24/ದೇಶಪಾಂಡೆ ಪಬ್ಲಿಸಿಟಿ ಜಿಲ್ಲಾ ಪಂಚಾಯತ, ಕೊಪ್ಪಳ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು–560040
ನಂ.: ಕಾಪಾಅ(ಗೋರಾನ)/ಟೆಂಡರ್/ಜಿಎಲ್–11/2023–24 ದಿನಾಂಕ: 07.03.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಳ ಸಹಿದಾರರು ಈ ಕೆಳಗೆ ವಿವರಿಸಲಾದ ಕಾಮಗಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಂದಾಯಿತ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಐಟಂ ರೇಟ್ ಆಧಾರದಲ್ಲಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು ದ್ವಿ ಲಕೋಟೆ ಕಾಮಗಾರಿಗಳು
1	ಮಾರುತಿಮಂದಿರ ಉಪ ವಿಭಾಗದಲ್ಲಿ ವಾರ್ಡ್ ನಂ. 138 – ಕಾವೇರಿಪುರ, ವಾರ್ಡ್ ನಂ. 139 – ಮೂಡಲಪಾಳ್ಯ, ವಾರ್ಡ್ ನಂ. 140 – ಮಾರುತಿ ಮಂದಿರ ವಾರ್ಡ್‌ಗಳಲ್ಲಿ ರಸ್ತೆ ಮೂಲಸೌಕರ್ಯ ಕಾಮಗಾರಿಗಳ ಅಭಿವೃದ್ಧಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು. **BBMP/2023-24/OW/WORK_INDENT2764 Call-2.** ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00. ಇಎಂಡಿ (ರೂ. ಗಳಲ್ಲಿ): 4.50

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **14.03.2024**ರ **ಸಂಜೆ 4:00 ಗಂಟೆಯ** ವರೆಗೆ. (3) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ: **15.03.2024**ರ **ಸಂಜೆ 4:30 ಗಂಟೆಗೆ**. (4) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **ತಾಂತ್ರಿಕ ಪ್ರಸ್ತಾವನೆಗೆ ಅನುಮೋದನೆ ದೊರೆತನಂತರ**. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗೋವಿಂದರಾಜನಗರ ವಿಭಾಗ, ಬಿಬಿಎಂಪಿ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ:ರಾಗಾವಿ/ಇಎನ್‌ಜಿ/ಸಿಓಎನ್/ಎಎಲ್‌ಎಲ್/ಸಿಓಎಲ್/ಕೆಎಎಲ್/46/2023–24 ದಿನಾಂಕ:07.03.2024

ಟೆಂಡರ್ ಪ್ರಕಟಣೆ

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಇವರು ಮೈಸೂರಿನಲ್ಲಿ ರಾಗಾಆವಿವಿ ಕಲಬುರಗಿಯಲ್ಲಿ Construction of Allied Health Sciences College ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: http://kppp.karnataka.gov.in Tender No: RGUHSK/2023-24/BD/WORK_INDENT3 ನಲ್ಲಿ ಪಡೆಯಬಹುದು.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	07/03/2024
ಆಕ್ಷೇಪಣೆ/ವಿಚಾರಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ	20/03/2024 ಮಧ್ಯಾಹ್ನ 12:00 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ	21/03/2024 ಮಧ್ಯಾಹ್ನ 2:30 ಗಂಟೆಗೆ
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ	15/04/2024 ಸಂಜೆ 5:30 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	17/04/2024 ಬೆಳಿಗ್ಗೆ 11:30 ಗಂಟೆಗೆ
ಬಿಡ್ ಪೂರ್ವ ಭಾವಿ ಸಬೆಯ ಮತ್ತು ಟೆಂಡರ್ ತೆರೆಯುವ ಸ್ಥಳ: ಕುಲಸಚಿವರ ಕಚೇರಿ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, ಬೆಂಗಳೂರು	

ಸಹಿ/–
ವಾ.ಸಾ.ಸಂ.ಇ/4155(B)/2023–24 ಕುಲಸಚಿವರು

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎ.ಇ–1/ಕೆ.ಕೆ.ಆರ್.ಡಿ.ಬಿ/ಟೆಂಡರು/2023–24/1584 ದಿನಾಂಕ 06–03–2024.

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕರಾಜ್ಯಪಾಲರ ಪರವಾಗಿ ನೊಂದಾಯಿತಅರ್ಹ ಸಂಸ್ಥೆಗಳು ಅಥವಾಅಧಿಕೃತ ಡೀಲರ್‌ಗಳಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯಡಿ **ಕೆ.ಕೆ.ಆರ್.ಡಿ.ಬಿ** ಯೋಜನೆ ಅಡಿಯಲ್ಲಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಅಕ್ಷರದಾಸೋಹ ಯೋಜನೆಗೆ ಮದ್ಯಾಹ್ನ ಬಿಸಿ ಊಟಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲು **01** ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರಟೆಂಡರು ಅಹ್ವಾನಿಸಿದೆ.

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 06–03–2024 ರಿಂದ ದಿನಾಂಕ 16–03–2024** ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ **ದಿನಾಂಕ 16–03–2024** ರ ಸಂಜೆ 4.00 ಗಂಟೆವರೆಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಟೆಂಡರುಗಳನ್ನು **ದಿನಾಂಕ 19–03–2024** ರ ಬೆಳ್ಳಗೆ 10.30ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/974/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಪೂರ್ವ ವಲಯ – ಕೆರೆಗಳು)
ರೂಂ ನಂ. 309, 3ನೇ ಮಹಡಿ, ಅನೆಕ್ಸ್–3 ಬಿಲ್ಡಿಂಗ್, ಬಿಬಿಎಂಪಿ ಪ್ರಧಾನ ಕಛೇರಿ, ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ: ಕಾಅ–ಪೂರ್ವ(ಕೆರೆಗಳು)/ಟಿಎನ್–08/2023–24 ದಿನಾಂಕ: 07–03–2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಪೂರ್ವ ವಲಯ – ಕೆರೆಗಳು), ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗೆ ಬೃಬೆಂಮಪಾಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	"ಕಾಚರಕನಹಳ್ಳಿ ಕೆರೆಯಲ್ಲಿ ಬಾಕಿ ಮತ್ತು ಇತರೆ ಸುಧಾರಣೆ ಕಾಮಗಾರಿಗಳು ಹಾಗೂ ಹಲಸೂರು ಕೆರೆಯಲ್ಲಿ ಸಂಗ್ರಹಣಾ ಸಾಮರ್ಥ್ಯ (ಡಿಸಿಲ್ಟಿಂಗ್) ಹೆಚ್ಚಿಸುವುದು ಮತ್ತು ಇತರೆ ಕಾಮಗಾರಿಗಳು. **(ಸಾಮಾನ್ಯ) – ಕಾಮಗಾರಿಯ ಮೊತ್ತ (ರೂ. ಲಕ್ಷಗಳಲ್ಲಿ): 1300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1500000.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **12–03–2024, 10.00 ಗಂಟೆಯ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **18–03–2024 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಕೆರೆಗಳು, ನಂ.308, 3ನೇ ಮಹಡಿ, ಅನೆಕ್ಸ್–2 ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **13–04–2024 ರಂದು 16.30 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **15–04–2024 ರಂದು 16.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಪೂರ್ವ ವಲಯ – ಕೆರೆಗಳು), ಬಿಬಿಎಂಪಿ.

KARNATAKA NEERAVARI NIGAM LIMITED.
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ, ಮಏಕಾನಿ ವಿಭಾಗ ನಂ.1 ರಾಮದುರ್ಗ ಫೋನ ನಂ.08335–242143.
ಸಂಖ್ಯೆ: ಕನೀನಿನಿ/ಮಏಕಾನಿ/ವಿ–1/ಡಿಬಿ/ಲೆ.ಶಿ.4701/ಕನ್ಸಲ್ಟೆನ್ಸಿ/ಟೆಂಡರ್/2023–24/1288 ದಿನಾಂಕ:–05/03/2024

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರು, ಕನೀನಿನಿ, ಮಏಕಾನಿ. ವಿಭಾಗ ನಂ.1, ರಾಮದುರ್ಗ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ act 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ ಕೆ.ಸಿ–4 ನಿಯಮದನ್ವಯ ನೊಂದಾಯಿತರಾದ ಕನ್ಸಲ್ಟೆನ್ಸಿ ಏಜೆನ್ಸಿ ಎನ್ರೋಲ್ಡ್ ಇನ್ ಕೆ.ಪಿ.ಡಬ್ಲ್ಯೂ.ಡಿ. ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಶೇಕಡಾವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ ಕರೆಯಲಾಗಿದೆ.

ಸಾಮಾನ್ಯ ಕಾಮಗಾರಿಗಳು (04) ಕಾಮಗಾರಿಗಳ ಇಂಡೆಂಟ್ ನಂಬರುಗಳು 44, 45, 46, 48, ಇದ್ದು, ಟೆಂಡರಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಹೊರತುಪಡಿಸಿ) ರೂ. 33.86ಲಕ್ಷ ರಿಂದ ರೂ. 75.90ಲಕ್ಷಗಳು ಇರುತ್ತವೆ. ಇ.ಎಂ.ಡಿ ಮೊತ್ತವು ರೂ.80,000/– ರಿಂದ ರೂ.1,79,500/–ರ ವರೆಗೆ ಇರುತ್ತವೆ.

ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಮಏಕಾನಿ. ವಿಭಾಗ ನಂ.1, ರಾಮದುರ್ಗ ಕಚೇರಿಯಲ್ಲಿ ಟೆಂಡರ ಕುರಿತು ವಿಚಾರಣೆ ನಡೆಸಲು ಕೊನೆಯ ದಿನಾಂಕ 13–03–2024, 16.00 ಘಂಟೆಯವರೆಗೆ. ಟೆಂಡರಗಳನ್ನು ದಿ:07–03–2024 ರಿಂದ ದಿ: 16–03–2024 ರಂದು 16.00 ಘಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 18–03–2024, 16.30 ಘಂಟೆಗೆ, ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://www.kppp.karnataka.gov.in ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರನಲ್ಲಿ ಯಾವುದೇ ಬದಲಾವಣೆಗಳು/ಮಾರ್ಪಾಡುಗಳು ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಕೆಪಿಪಿ –ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು
DIPR/BGM/RO-NO-1359/KSMCA/2023-24 ಕನೀನಿನಿ., ಮಏಕಾನಿ, ವಿಭಾಗ ನಂ.1 ರಾಮದುರ್ಗ

ಕರ್ನಾಟಕ ವಿಧಾನ ಪರಿಷತ್ತು
ಅಂಚೆ ಪೆಟ್ಟಿಗೆ ಸಂಖ್ಯೆ: 5079, ವಿಧಾನ ಸೌಧ, ಬೆಂಗಳೂರು–560 001. ದೂರವಾಣಿ ಸಂಖ್ಯೆ: 080–22250450.
ಸಂಖ್ಯೆ: ಕವಿಪ/ಆ–1/179/ನೇನೇ/2023 ದಿನಾಂಕ: 06.03.2024

ಪತ್ರಿಕಾ ಪ್ರಕಟಣೆ

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಖಾಲಿಯಿರುವ ವಾಹನ ಚಾಲಕರು ಹಾಗೂ 'ಡಿ' ಗುಂಪು ಹುದ್ದೆಗಳ ನೇರ ನೇಮಕಾತಿಗಾಗಿ ಅಧಿಸೂಚನೆಯನ್ನು ದಿನಾಂಕ: 04.03.2024ರಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಅಧಿಸೂಚನೆಯನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ವಯೋಮಿತಿ, ವಿದ್ಯಾರ್ಹತೆ ಮತ್ತು ಇನ್ನಿತರೆ ಸಂಪೂರ್ಣ ಮಾಹಿತಿಗಳಿಗಾಗಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವೆಬ್‌ಸೈಟ್: https://www.kla.kar.nic.in/council/Career.htm ನಲ್ಲಿ ವೀಕ್ಷಿಸಿ **ದಿನಾಂಕ: 05.04.2024** ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಸಹಿ/–
ಕಾರ್ಯದರ್ಶಿ
ವಾಸಾಸಂಇ/ವಾ.ಪ್ರ/4138/ಎಂಎಎ/2023–24 ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ಸರ್ಕಾರ
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರ ಕಛೇರಿ, ಅಜ್ಜರಕಾಡು, ಉಡುಪಿ ಜಿಲ್ಲೆ, ಉಡುಪಿ–576101 ದೂರವಾಣಿ ಸಂಖ್ಯೆ; 0820–2985429
No. DPMU/UDUPI/Drugs/535/2023-24 Date: 06-03-2024

ಈ–ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಹಾಗೂ 15ನೇ ಹಣಕಾಸು ಆಯೋಗದಡಿಯಲ್ಲಿ ಉಡುಪಿ ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಔಷಧಿಗಳನ್ನು 2024–2025ನೇ ಸಾಲಿಗೆ ಪೂರೈಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯೂಮೆಂಟ್ ಸಿಸ್ಟಂನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆ, ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್‌ಸೈಟ್ www.https://kppp.karnataka.gov.in/ ನಲ್ಲಿ ನೋಡಬಹುದಾಗಿದೆ.

1. ಟೆಂಡರ್ ಆರಂಭ ದಿನಾಂಕ: 07–03–2024
2. ಆಕ್ಷೇಪಣೆಗಳಿಗೆ ಅಂತಿಮ ದಿನಾಂಕ: 11–03–2024ರ ಸಂಜೆ 3.00 ಗಂಟೆಯವರೆಗೆ
3. ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ: 08–04–2024ರ ಪೂರ್ವಾಹ್ನ 11.30 ಗಂಟೆಯವರೆಗೆ
4. ತಾಂತ್ರಿಕ ಬಿಡ್ ತೆರೆಯುವ ದಿ:10–04–2024 ಮಧ್ಯಾಹ್ನ 12.00 ಗಂಟೆಯ ನಂತರ
5. ಟೆಂಡರ್ ಅಂದಾಜು ಮೊತ್ತ ರೂ. 20 ಲಕ್ಷ.

ಸಹಿ/– (ಡಾ.ಐ.ಪಿ.ಗಡಾದ)
ಜಿಲ್ಲಾ ಆರೋಗ್ಯ ಮತ್ತು ಕು. ಕ. ಅಧಿಕಾರಿ, ಉಡುಪಿ ಜಿಲ್ಲೆ

ಕರ್ನಾಟಕ ಸರ್ಕಾರ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಆಯುಕ್ತರ ಕಛೇರಿ, ಕೆ.ಆರ್. ವೃತ್ತ, ಬೆಂಗಳೂರು
ದೂರವಾಣಿ ಸಂಖ್ಯೆ : 91-080–22212408, ಫ್ಯಾಕ್ಸ್ ನಂ. : 91-080–22277528
ಸಂಖ್ಯೆ: E-1345335/SSLR-DRONOTEND/4/2024 ದಿನಾಂಕ : 06.03.2024

ಇ–ಟೆಂಡರ್ ಅಧಿಸೂಚನೆ

ವಿಷಯ: ಮಂಡ್ಯ ಜಿಲ್ಲೆಯಲ್ಲಿ ವೈಮಾನಿಕ ಸಮೀಕ್ಷೆ (Aerial Survey) ಮೂಲಕ ORI Generation For Large Scale Mapping ಸೇವೆಗಾಗಿ ಟೆಂಡರ್ ಆಹ್ವಾನಿಸುವ ಬಗ್ಗೆ.

ಭೂಮಾಪನ ಇಲಾಖೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಅಧುನಿಕ ತಂತ್ರಜ್ಞಾನ ಆಧಾರಿತ ವೈಮಾನಿಕ (Aerial Survey) ಮೂಲಕ ORI Generation For Large Scale Mapping ಸೇವೆ ಒದಗಿಸುವ ಕುರಿತು ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇಲಾಖೆಯು ಈ ಸೇವೆಯನ್ನು ಒದಗಿಸಲು ಆಸಕ್ತಿಹೊಂದಿರುವಂತಹ ಸಂಸ್ಥೆಗಳಿಂದ ಆರ್ ಎಫ್ ಪಿ ಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, ದಿನಾಂಕ: **06.03.2024** ರಿಂದ **http://www.eproc.karnataka.gov.in** ರಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿನಾಂಕ: **05.04.2024** ಆಗಿರುತ್ತದೆ.

ಸಂಪರ್ಕಿಸಬೇಕಾದ ಅಧಿಕಾರಿ
ಕೆ.ಜಯಪ್ರಕಾಶ
ಹೆಚ್ಚುವರಿ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
ದೂ: 080–22214715

ಸಹಿ/–
(ಕೆ.ಜಯಪ್ರಕಾಶ)
ಹೆಚ್ಚುವರಿ ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು

ವಾಸಾಸಂಇ/ವಾ.ಪ್ರ/4096/ಶಿರಡಿ ಸಾಯಿ/2023–24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರು, ಎಚ್.ಬಿ.ಸಿ ವಿಭಾಗ ಅಥಣಿ–591304, ಕಾರ್ಯಾಲಯ,ತಾ:ಅಥಣಿ ಜಿ:ಬೆಳಗಾವಿ(ಕರ್ನಾಟಕ)
ಸಂ.ಕನೀನಿನಿ/ಎಚ್.ಬಿ.ಸಿ/ಪಿಬಿ/ಟೆಂಡರ್/2023–24/3808 ದಿನಾಂಕ: 04.03.2024

ಅಲ್ಪಾವಧಿ ಟೆಂಡರ ಅಧಿಸೂವನೆ
(ಕೆ.ಪಿ.ಪಿ. ಪ್ರೋಟಲ್–ಸಂಗ್ರಹಣಾ ಕೋಶದ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ ನಿಯಮಿತ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ ಎಚ್.ಬಿ.ಸಿ ವಿಭಾಗ ತಾ:ಅಥಣಿ ಜಿ:ಬೆಳಗಾವಿ ಇವರು ಕಾಮಗಾರಿಯನ್ನು ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಯಮದನ್ವಯ ಮೊದಲನೇ ಹಾಗೂ ಎರಡನೇ ಲಕೋಟೆಯನ್ನು ಈ ಸಂಗ್ರಹಣಾ ಕೋಶದ ಮುಖಾಂತರ ಶೇಕಡಾವಾರು ಟೆಂಡರನ್ನು, ಪಿ.ಡಬ್ಲೂಡಿ ಕ್ಲಾಸ್–2 ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ ಮೊದಲನೇ ಹಾಗೂ ಎರಡನೇ ಕವರಿನ ವಿಧಾನದಲ್ಲಿ (as per KTPP act 2000) ಅನುಸರಿಸಬೇಕು. ಖಾಲಿ ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ www.kpp-portal.karnataka.gov.in ಮೂಲಕ ಪಡೆದುಕೊಳ್ಳಬಹುದು ಮತ್ತು ಎಲೆಕ್ಟ್ರಾನಿಕ್ ಟೆಂಡರ್ ಮೂಲಕ ಮಾತ್ರ ಸಲ್ಲಿಸಬಹುದು.

ಟೆಂಡರಗಿಟ್ಟ ಅಂದಾಜು ಮೊತ್ತ 1) ರೂ.489.61 ಲಕ್ಷ 2) ರೂ.489.61 ಲಕ್ಷ 3)ರೂ.489.61 ಲಕ್ಷ 4)ರೂ.489.61 ಲಕ್ಷ 5)ರೂ. 489.61 ಲಕ್ಷ 6)ರೂ.489.61 ಲಕ್ಷ 7) ರೂ.489.61 ಲಕ್ಷ 8) ರೂ. 489.61 ಲಕ್ಷ.

1:ಇ ಸಂಗ್ರಹಣಾ ಕೋಶದಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ:11.03.2024 ರ 10.30 ಬೆಳಿಗ್ಗೆ ರಿಂದ 18.03.2024 ರ ಸಾಯಂಕಾಲ 4.00 ಗಂಟೆ ವರಗೆ, 2:ಟೆಂಡರ್ ಪ್ರಶ್ನೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ:16.03.2024 ರ ಸಾಯಂಕಾಲ 4.00 ವರೆಗೆ, 3:ಪ್ರಿ ಬಿಡ್ ಮಿಟಿಂಗ್ ದಿನಾಂಕ: (ಕಾ.ನಿ.ಇಂ. ಕನಿನಿನಿ ಎಚ್.ಬಿ.ಸಿ. ವಿಭಾಗ ಅಥಣಿ):ದಿನಾಂಕ 16.03.2024ರ 11.00 ಬೆಳಿಗ್ಗೆ, 4:ಪೂರ್ಣವಾಗಿ ತುಂಬಿದ ಇ ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:11.03.2024 ರ 10.30 ಬೆಳಿಗ್ಗೆ ರಿಂದ 18.03.2024 ರ ಸಾಯಂಕಾಲ 4.00 ಗಂಟೆ ವರಗೆ, 5:ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (ಎಚ್.ಬಿ.ಸಿ ವಿಭಾಗ ಕಛೇರಿ ಅಥಣಿಯಲ್ಲಿ):20.03.2024 ರ ಬೆಳಿಗ್ಗೆ 11.00 ಗಂಟೆಗೆ. 6:ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 22.03.2024 ರ ಬೆಳ್ಳಿಗ್ಗೆ 11.00 ಗಂಟೆಗೆ (ತಾಂತ್ರಿಕ ಬಿಡ್ ಅನುಮೊದನೆ ನಂತರ), 7:ಗುತ್ತಿಗೆದಾರರು ಮೂಲ ದಾಖಲೆಗಳನ್ನು ಇ.ಇ. ಕನೀನಿನಿ ಎಚ್.ಬಿ.ಸಿ. ವಿಭಾಗ ಅಥಣಿ ಕಚೇರಿಯಲ್ಲಿ ಹಾಜರಪಡಿಸುವ ದಿನಾಂಕ:21.03.2024 ಬೆಳ್ಳಿಗ್ಗೆ 11.00 ಗಂಟೆಗೆ.

ಇನ್ನೂಳಿದಂತೆ ಯಾವುದಾದರೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಇ ಸಂಗ್ರಹಣಾ ಕೋಶ ವೆಬ್ ಸೈಟ್ http//:www.kppp.karnataka.gov.in/kpp-protal/index.seam link ಮುಖಾಂತರ ಹಾಗೂ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಎಸ್.ಜಿ. ಶ್ರೀನಾಥ್, ಕಾರ್ಯನಿರ್ವಾಹಕ ಇಂಜಿನೀಯರರು,
DIPR/BGM/RO-NO-1358/KSMCA/2023-24 ಎಚ್.ಬಿ.ಸಿ ವಿಭಾಗ, ಅಥಣಿ

ನಗರಸಭಾ ಕಾರ್ಯಾಲಯ, ತಿಪಟೂರು
ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ದೂ: 08134–250785, E-mail:itstaff_ulb_tiptur@yahoo.co.in, www.tipturcity.mrc.gov.in
ನಂ.ನ.ಸ.ತಿ/ತಾಂಶಾ/ಪಿ.ಆರ್/ /2023–24 ದಿನಾಂಕ:

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಆದ್ಯಾದೇಶ 1999 – 2000ರ ನಿಯಮಗಳಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು ಗುತ್ತಿಗೆದಾರರಿಂದ ಹಾಗೂ ಸರಬರಾಜು ರವರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು)

ಕ್ರ ಸಂ	ಇಂಡಟ್ ನಂಬರ್	ಅಂದಾಜು ಮೊತ್ತ ರೂ.ಲಕ್ಷ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2023-24/SE2498/CALL-2	9,95,000/-	24,875/-	11.03.2024	12.03.2024

ಸಹಿ/– ಪೌರಾಯುಕ್ತರು, ನಗರಸಭೆ, ತಿಪಟೂರು.
DIPR/TUM/619/KSMCA/2023-24

ಮಾರ್ಚ್ ಆರಂಭದಲ್ಲೇ ನೀರಿನ ಕೊರತೆ • ಜನರಿಗೆ ಬೇಸಿಗೆ ಕಳೆಯುವುದು ಹೇಗೆ ಎಂಬ ಚಿಂತೆ

ಜನವಸತಿ ಪ್ರದೇಶಗಳಲ್ಲಿ 'ಜಲ ಕ್ಷಾಮ'

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ಮಾರ್ಚ್ ತಿಂಗಳ ಆರಂಭದಲ್ಲೇ ನೀರಿನ ಸಮಸ್ಯೆ ಉಂಟಾಗಿದೆ. ಇನ್ನು ಏಪ್ರಿಲ್, ಮೇ ತಿಂಗಳಲ್ಲಿ ದೇವರೇ ಕಾಪಾಡಬೇಕು...' ಎನ್ನುತ್ತಾ ಆಕಾಶದತ್ತ ನೋಟ ಬೀರಿ ಕೈಮುಗಿದರು ನಾಯಂಡಹಳ್ಳಿಯ ಸೀನಾ.

ನಗರದಲ್ಲಿ ಉದ್ಭವಿಸಿರುವ ನೀರಿನ ಸಮಸ್ಯೆಯ ಒಂದು ಉದಾಹರಣೆ ಇದು.

ಈ ಸಮಸ್ಯೆ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ, ನಗರದ ಅನೇಕ ಭಾಗಗಳಲ್ಲಿ ಇದಕ್ಕಿಂತ ಇನ್ನೂ ಕಠಿಣ ಪರಿಸ್ಥಿತಿ ಇದೆ. ಅದರಲ್ಲಿಯೂ ನಗರದ ಹೊರವಲಯದಲ್ಲಿ ಸಮಸ್ಯೆ ವಿಪರೀತವಾಗಿದೆ. ದುಡ್ಡಿದ್ದವರು ಟ್ಯಾಂಕರ್ ನೀರು ಖರೀದಿಸಿ ತಂದು ತುಂಬಿಸಿಟ್ಟುಕೊಳ್ಳುತ್ತಿದ್ದಾರೆ. ಬಡ ವರ್ಗದವರು ಸಂಘ, ಸಂಸ್ಥೆಗಳು, ಬಿಬಿಎಂಪಿ ಪೂರೈಸುವ ಉಚಿತ ನೀರಿಗಾಗಿ ಕಾಯುತ್ತಿದ್ದಾರೆ.

ಮೈಸೂರು ರಸ್ತೆ ಭಾಗದಲ್ಲಿರುವ ಪಂತರಪಾಳ್ಯ ಅಂಬೇಡ್ಕರ್ ನಗರ, ಉಲ್ಲಾಳು ಸಹಿತ ನಗರದ ಹಲವು ಕಡೆಗಳಿಗೆ ಕಾವೇರಿ ನೀರು ಪೂರೈಕೆ ಇಲ್ಲ. ಉಳಿದ ಕಡೆಗಳಲ್ಲಿ ನಾಲ್ಕು ದಿನಕ್ಕೊಮ್ಮೆ, ವಾರಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದ್ದರೂ, ಅರ್ಧ ಅಥವಾ ಮುಕ್ಕಾಲು ಗಂಟೆಗಳಲ್ಲಿ ನೀರು ಬಂದ್ ಆಗುತ್ತಿದೆ.

ದಾಸರಹಳ್ಳಿ ಭಾಗದಲ್ಲಿ ಪೀಣ್ಯ, ಗಣಪತಿನಗರ, ಶೆಟ್ಟಿಹಳ್ಳಿ, ಮಲ್ಲಸಂದ್ರ, ಚೊಕ್ಕಸಂದ್ರ, ಹೆಗ್ಗನಹಳ್ಳಿ, ರಾಜಗೋಪಾಲನಗರ, ಗೆಳೆಯರ ಬಳಗ, ಕಿರ್ಲೋಸ್ಕರ್ ಬಡಾವಣೆ, ಮಂಜುನಾಥ ನಗರ, ಬ್ಯಾಟರಾಯಪುರ, ಥಣಿ ಸಂದ್ರ ಸಹಿತ ಅನೇಕ ಪ್ರದೇಶಗಳಲ್ಲಿ ಕೊಳವೆಬಾವಿಗಳೂ ಬತ್ತಿವೆ. ಇಲ್ಲೆಲ್ಲ ನೀರಿನ ಹಾಹಾಕಾರ ಎದ್ದಿದೆ. ಬನ್ನೇರುಘಟ್ಟ, ಎಚ್‌ಎಸ್‌ಆರ್‌ಲೇಔಟ್, ಯಲಹಂಕ ಭಾಗದ ಜನವಸತಿ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ತೀವ್ರವಾಗಿದೆ.

'ಅಪಾರ್ಟ್‌ಮೆಂಟ್'ಗಳಿಗೂ ಕಷ್ಟ: ನಗರದ ಹೊರವಲಯದಲ್ಲಿರುವ ವಸತಿ ಸಮುಚ್ಚಯಗಳೂ ನೀರಿನ ಸಮಸ್ಯೆ ಎದುರಿಸುತ್ತಿವೆ. ಕೃಷ್ಣಯ್ಯನ ಪಾಳ್ಯದಲ್ಲಿರುವ ಕರ್ನಾಟಕ ಹೈಕೋರ್ಟ್ ನ್ಯಾಯಾಲಯ ಸಿಬ್ಬಂದಿ ವಸತಿ ಸಮುಚ್ಚಯದ ನಿವಾಸಿಗಳು ಎರಡು ವಾರಗಳಿಂದ ನೀರಿಲ್ಲದೇ ಪರದಾಡುತ್ತಿದ್ದಾರೆ. ಬನ್ನೇರುಘಟ್ಟ, ಕನಕಪುರ ರಸ್ತೆ ಸೇರಿದಂತೆ, ನಗರದ ಹೊರವಲಯದಲ್ಲಿರುವ ಹಲವು ಅಪಾರ್ಟ್‌ಮೆಂಟ್‌ಗಳ ಸಮುಚ್ಚಯದವರು ಟ್ಯಾಂಕರ್ ನೀರಿನ ಮೊರೆ ಹೋಗುತ್ತಿದ್ದಾರೆ.

ಮಿತ ಬಳಕೆಗೆ ಮೊರೆ : ನೀರಿನ ಸಮಸ್ಯೆ ಉಲ್ಬಣವಾಗುತ್ತಿದ್ದಂತೆ, ಅಪಾರ್ಟ್‌ಮೆಂಟ್‌ನವರು ನೀರನ್ನು ಮಿತವಾಗಿ ಬಳಸಲು ನಿಯಮಗಳನ್ನು ರೂಪಿಸಿಕೊಳ್ಳುತ್ತಿದ್ದಾರೆ. ಇಪ್ಪತ್ನಾಲ್ಕು ಗಂಟೆಯೂ ನೀರು ಪೂರೈಸುತ್ತಿದ್ದ ಅಪಾರ್ಟ್‌ಮೆಂಟ್‌ಗಳಲ್ಲಿ ಈಗ ಪಾಳಿ ಮೇಲೆ ನೀರು ಕೊಡಲಾಗುತ್ತಿದೆ. ವಿಶ್ವಪ್ರಿಯನಗರದ ಗುರುಕೃಪಾ ಅಪಾರ್ಟ್‌ಮೆಂಟ್, ಕ್ರೆಡೆನ್ಸ್ ಅಪಾರ್ಟ್‌ಮೆಂಟ್‌ಗಳಲ್ಲಿ ಬೆಳಿಗ್ಗೆ ಮೂರು ಗಂಟೆ ಮತ್ತು ಸಂಜೆ ಮೂರು ಗಂಟೆ ಮಾತ್ರ ನೀರು ಹರಿಸಿ ಟ್ಯಾಂಕ್ ಬಂದ್ ಮಾಡುತ್ತಿದ್ದಾರೆ. ಮನೆಗಳಲ್ಲಿ ಮೂರು ಶೌಚಾಲಯಗಳಿದ್ದರೂ ಒಂದನ್ನು ಮಾತ್ರ ಬಳಕೆ ಮಾಡಬೇಕು. ಕಾರು, ಬೈಕ್‌ಗಳನ್ನು ತೊಳೆಯಬಾರದ ಎಂದು ಸೂಚನೆ ನೀಡುತ್ತಿದ್ದಾರೆ.

ಸಪ್ತಗಿರಿ ಲೇಔಟ್‌ನಲ್ಲಿ ಬಾಡಿಗೆದಾರರಿಗೆ ಮಾಲೀಕರು 'ನೀರನ್ನು ಮಿತವಾಗಿ ಬಳಸಿ' ಎಂಬ ವಾಟ್ಸ್‌ಆ್ಯಪ್ ಸಂದೇಶ ಕಳಿಸುತ್ತಿದ್ದಾರೆ. 'ನಾಲ್ಕು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದೆ. ಹಾಗಾಗಿ ಸಾಧ್ಯವಾದಷ್ಟು ಕಡಿಮೆ ಬಳಸಿ. ಈ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಎದುರಿಸುವುದೇ ದೊಡ್ಡ ಸವಾಲು' ಎಂಬ ಮಾಹಿತಿಯನ್ನು ಎಸ್‌ಎಂಎಸ್‌ನಲ್ಲಿ ಕಳಿಸುತ್ತಿದ್ದಾರೆ.

'ಟ್ಯಾಂಕರ್' ಅವಲಂಬನೆ : ಆರ್‌ಆರ್ ನಗರದ ಮೆಲೋಡಿ ಅಪಾರ್ಟ್‌ಮೆಂಟ್ಸ್, ಗೊಟ್ಟಿಗೆರೆಯ ಜೆಪಿಸಿ ಪಟೇಲ್ ಅಪಾರ್ಟ್‌ಮೆಂಟ್, ರಾಯರ ನೆರಳು ಅಪಾರ್ಟ್‌ಮೆಂಟ್ಸ್, ಚನ್ನಸಂದ್ರದ ಹಿಲ್ ವ್ಯೂ ರೆಸಿಡೆನ್ಸಿ, ಷಣ್ಮುಖ ರೆಸಿಡೆನ್ಸಿ ಜ್ಞಾನಭಾರತಿ ಪ್ರೆಸ್ ಲೇಔಟ್‌ಗಳಲ್ಲಿ ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸುತ್ತಿದ್ದಾರೆ. ರಾಜರಾಜೇಶ್ವರಿನಗರ ಐಡಿಯಲ್ ಹೋಮ್ಸ್ ಬಡಾವಣೆ, ಬಂಗಾರಪ್ಪ ಗುಡ್ಡ, ಕೆರೆಪಾಳ್ಯ, ಚನ್ನಸಂದ್ರ, ಗಟ್ಟಿಗೆರೆ, ರಾಮ್ಕೊ ಲೇಔಟ್ ಇನ್ನಿತರ ಕಡೆಗಳಿಗೆ ಜಲಮಂಡಳಿಯಿಂದಲೇ ಉಚಿತವಾಗಿ ನೀರು ಪೂರೈಕೆ ಮಾಡಲಾಗುತ್ತಿದೆ.

'ತಲಾ 2000 ಲೀಟರ್ ಸಾಮರ್ಥ್ಯದ 4 ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಇಟ್ಟುಕೊಂಡು ನೀರು ಸಾಗಿಸುತ್ತಿದ್ದೇವೆ. ಒಂದು ವಾಹನ ದಿನಕ್ಕೆ ಏಳೆಂಟು ಟ್ರಿಪ್ ಮಾಡಲು ಸಾಧ್ಯವಾಗುತ್ತಿದೆ. ಬಿಸಿಲೇರುತ್ತಿದ್ದಂತೆ ಕೊಳವೆಬಾವಿಗಳಲ್ಲಿ ನೀರು ಆಳಕ್ಕೆ ಹೋಗುತ್ತದೆ. ಮಧ್ಯಾಹ್ನ ಒಂಟು ಸಿಂಟೆಕ್ಸ್ ತುಂಬಿಸಬೇಕಿದ್ದರೆ ಒಂದೂವರೆ ತಾಸು ಬೇಕಾಗುತ್ತದೆ. ಅದಕ್ಕಾಗಿ ಬೆಳಿಗ್ಗೆ ಮತ್ತು ಸಂಜೆಯ ಹೊತ್ತಿನಲ್ಲಿ ನೀರು ಪೂರೈಸುತ್ತಿದ್ದೇವೆ ಎಂದು ಚಾಲಕರಾದ ದಿಲೀಪ್, ನಾಗರಾಜ್ ಮಾಹಿತಿ ನೀಡಿದರು.ಸುಡುಬಿಸಿಲು ಈಗಷ್ಟೇ ಆರಂಭವಾಗಿದೆ. ಏಪ್ರಿಲ್, ಮೇ ಕಳೆಯಬೇಕಿದೆ. ನಗರದಲ್ಲಿ ನೀರು ನಿರ್ವಹಣೆಯಲ್ಲಿ ಅಧಿಕಾರಿಗಳು, ಎಂಜಿನಿಯರ್‌ಗಳು ಜಾಣ್ಮೆ ತೋರದೇ ಇದ್ದರೆ, ಜನರು ಮಿತಬಳಕೆ ಮಾಡದೇ ಇದ್ದರೆ ಜಲಕ್ಷಾಮದ ಹೊಡೆತಕ್ಕೆ ನಗರ ನಲುಗಿ ಹೋಗಲಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ನಾಯಂಡಹಳ್ಳಿಯ ಪಂತರಪಾಳ್ಯ ಅಂಬೇಡ್ಕರ್‌ನಗರದಲ್ಲಿ ನೀರು ಹೊತ್ತುತಂದು ಬಟ್ಟೆ ಒಗೆಯುತ್ತಿದ್ದ ದೃಶ್ಯ ಕಂಡುಬಂತು
ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ಜಲ ಜಂಜಾಟ 1

ಅಂಕಿ ಅಂಶಗಳು

16,781 ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಇರುವ ಕೊಳವೆಬಾವಿಗಳು

6,997 ಬತ್ತಿ ಹೋಗಿರುವ ಕೊಳವೆಬಾವಿಗಳು

7,784 ಚಾಲ್ತಿಯಲ್ಲಿರುವ ಕೊಳವೆ ಬಾವಿಗಳು

₹556 ಕೋಟಿ ಜಲಮಂಡಳಿ ಮತ್ತು ಬಿಬಿಎಂಪಿಯಿಂದ ಕುಡಿಯುವ ನೀರು ಪೂರೈಕೆಗಾಗಿ ನಗರದ 28 ವಿಧಾನಸಭಾ ಕ್ಷೇತ್ರಗಳಿಗೆ ಮೀಸಲಿಟ್ಟಿರುವ ಮೊತ್ತ

ಬೆಂಗಳೂರಿನ ರಾಜರಾಜೇಶ್ವರಿನಗರದ ಹಲಗೆ ವಡೇರಹಳ್ಳಿ ಕೆರೆಯು ಮಳೆಯ ಕೊರತೆಯಿಂದ ಬತ್ತಿಹೋಗಿದೆ

ನಗರದ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ

ಬೆಂಗಳೂರು ಜಲಮಂಡಳಿಯಿಂದ ವಿವಿಧ ಬಡಾವಣೆಗಳ ಜನವಸತಿ ಪ್ರದೇಶ, ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿರುವುದು

ಪ್ರತಿಭಟನೆಯ ಕೂಗು

ನೀರಿನ ಹಾಹಾಕಾರ ಹೆಚ್ಚಾಗುತ್ತಿದ್ದಂತೆ ಜನರು ಪ್ರತಿಭಟನೆ ನಡೆಸಲು ಆರಂಭಿಸಿದ್ದಾರೆ. ಪರಂಗಿಪಾಳ್ಯ, ಕೂಡ್ಲು, ಬಂಡೇಪಾಳ್ಯಗಳಲ್ಲಿ ಕುಡಿಯಲು ನೀರು ಪೂರೈಕೆಯಾಗುತ್ತಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಶುಕ್ರವಾರ (ಮಾರ್ಚ್ 1) ರಾತ್ರಿ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಜಲಮಂಡಳಿ ಕಚೇರಿ ಎದುರು ದಿಢೀರ್ ಪ್ರತಿಭಟನೆ ನಡೆಸಿದ್ದರು. ಹೇರೋಹಳ್ಳಿ ವಾರ್ಡ್ ನಂಬರ್ 72ರ ವ್ಯಾಪ್ತಿಯಲ್ಲಿರುವ ಅಂಜನಾನಗರದ ಗದ್ದೆಕಾನ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಉಲ್ಬಣಿಸಿರುವ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ಗದ್ದೆಕಾನ್ ನಿವಾಸಿಗಳು ಬಿಬಿಎಂಪಿ ಮುಖ್ಯ ಕಚೇರಿ ಎದುರು ಖಾಲಿ ಕೊಡ ಹಿಡಿದು ಸೋಮವಾರ ಪ್ರತಿಭಟನೆ ನಡೆಸಿದ್ದರು.

ಮಹದೇವಪುರ ಕ್ಷೇತ್ರದ ಗುಂಜೂರುಪಾಳ್ಯ ಕಾಲೊನಿಯಲ್ಲಿ ನೀರಿನ ಸಮಸ್ಯೆ ಗಂಭೀರವಾಗಿದೆ. ನೀರು ಬಿಡುವವರು ಮಾಡುತ್ತಿರುವ ತಾರತಮ್ಯ ಕೂಡ ಇದಕ್ಕೆ ಕಾರಣ. ಎಂಜಿನಿಯರ್‌ಗಳು, ಅಧಿಕಾರಿಗಳು ಮೌನ ವಹಿಸುತ್ತಿದ್ದಾರೆ ಎಂದು ಸ್ಥಳೀಯ ನಿವಾಸಿಗಳು ತಲೆಮೇಲೆ ಖಾಲಿ ಕೊಡ ಹೊತ್ತು ಪ್ರತಿಭಟನೆ ನಡೆಸಿದ್ದರು.

ಕಾಕ್ಸ್ ಟೌನ್‌ನಲ್ಲಿ ಕುಡಿಯುವ ನೀರು ಸಿಗುತ್ತಿಲ್ಲ. ಸಮರ್ಪಕವಾಗಿ ನೀರು ಪೂರೈಕೆ ಮಾಡಿ ಎಂದು ಭಾರತೀನಗರ ಒಕ್ಕಲಿಗರ ವೇದಿಕೆಯ ನೇತೃತ್ವದಲ್ಲಿ ಮಹಿಳೆಯರು ಖಾಲಿ ಕೊಡ ಹಿಡಿದು ಗುರುವಾರ ಪ್ರತಿಭಟನೆ ಹಮ್ಮಿಕೊಂಡಿದ್ದರು.

ನೀರಿನ ಬವಣೆ

ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರ ಉಂಟಾಗಿದೆ. ನಿಮ್ಮ ಪ್ರದೇಶದಲ್ಲಿಯೂ ನೀರಿನ ಬವಣೆ ಇದ್ದರೆ ಬರೆದು ಕಳುಹಿಸಿ

ವಾಟ್ಸ್‌ಆ್ಯಪ್ ನಂಬರ್:
9606038256

ಜನ ಏನಂತಾರೆ?



ಅಂಚೆಪಾಳ್ಯದಲ್ಲಿ ನಾಲ್ಕೈದು ದಿನಗಳಿಗೊಮ್ಮೆ ನೀರು ಬರುತ್ತಿದೆ. ಶುದ್ಧಕುಡಿಯುವ ನೀರಿನ ಘಟಕದಲ್ಲಿ ₹ 5ಕೊಟ್ಟು ಕುಡಿಯುವ ನೀರು ತರುತ್ತಿದ್ದೇವೆ. ಅದರ ಕೊಳವೆಬಾವಿಯಲ್ಲಿ ಸದ್ಯ ನೀರಿದ್ದು, ಬತ್ತಿ ಹೋದರೆ ಕುಡಿಯುವ ನೀರಿಗೂ ಪರದಾಡಬೇಕಾಗುತ್ತದೆ.

ನೂರುಲ್ಲಾ, ಅಂಚೆಪಾಳ್ಯ ನಿವಾಸಿ

ಕೊಳವೆಬಾವಿ ಕೆಟ್ಟು ಹೋಗಿ ಎರಡು ತಿಂಗಳಿನಿಂದ ನೀರಿಗಾಗಿ ಪರದಾಡುತ್ತಿದ್ದೇವೆ. ಈಗ ಸರಿ ಮಾಡಿದ್ದಾರೆ. ಆದರೂ ನಿತ್ಯ ಬರುತ್ತಿಲ್ಲ. ಬಂದಾಗ ತುಂಬಿಸಿಟ್ಟುಕೊಳ್ಳಬೇಕು.

ಪದ್ಮಾ, ಅಂಬೇಡ್ಕರ್‌ನಗರ

ಇಲ್ಲಿ 32 ಮನೆಗಳಿವೆ. ಕಾವೇರಿ ನೀರು ಸಂಪರ್ಕ ಇಲ್ಲ. ದೂರದಿಂದ ನೀರು ತರಬೇಕು. ಇಲ್ಲಿ ಕೊಳವೆಬಾವಿ ನೀರು ಪೂರೈಕೆಯಾಗುತ್ತಿದ್ದು, 10 ದಿನಗಳಿಂದ ನೀರು ಬಂದಿರಲಿಲ್ಲ. ಇವತ್ತು ನೀರು ಬಂದಿದೆ.

ಹಸೈನ್, ಪಂತರಪಾಳ್ಯ

ನಾವು ಮೂರನೇ ಮಹಡಿಯಲ್ಲಿ ಇದ್ದೇವೆ. ಸಣ್ಣ ಮಗು ಇದೆ. ಮಗುವಿನ ಬಟ್ಟೆ ತೊಳೆಯಬೇಕು. ನೀರು ಬರುತ್ತಿಲ್ಲ. ನಾವು ನೀರು ಹೊತ್ತುಕೊಂಡು ಬಂದು ಡ್ರಮ್‌ನಲ್ಲಿ ತುಂಬಿಸಿ ಬಳಿಕ ಅದಕ್ಕೆ ಮೋಟಾರ್ ಪಂಪು ಇಟ್ಟು ಮೇಲೆ ಟ್ಯಾಂಕ್‌ಗೆ ಹಾಕುತ್ತಿದ್ದೇವೆ. ಒಂದು ವಾರದಿಂದ ಬಟ್ಟೆ ತೊಳೆದಿರಲಿಲ್ಲ. ಇವತ್ತು ಬಟ್ಟೆ ಹಿಡಿದುಕೊಂಡು ಕೆಳಗೆ ಬಂದಿದ್ದೇನೆ.

ರಾಜೇಶ್ವರಿ, ಅಂಬೇಡ್ಕರ್‌ನಗರ

ನೀರಿಲ್ಲದ ಪರಿಣಾಮಗಳು...

- ವಿಜಯನಗರದಲ್ಲಿರುವ ಕೋಚಿಂಗ್ ಸೆಂಟರ್‌ನವರು ವಿದ್ಯಾರ್ಥಿಗಳಿಗೆ ಒಂದು ವಾರದವರೆಗೆ ಆನ್‌ಲೈನ್ ತರಗತಿಗಳಿಗೆ ಹಾಜರಾಗಲು ಸೂಚಿಸಿದ್ದಾರೆ.
- ಬನ್ನೇರುಘಟ್ಟ ರಸ್ತೆಯಲ್ಲಿರುವ ಶಾಲೆಯೊಂದು ಮುಚ್ಚಿದ್ದು, ಆನ್‌ಲೈನ್ ತರಗತಿಗಳಿಗೆ ಹಾಜರಾಗುವಂತೆ ವಿದ್ಯಾರ್ಥಿಗಳಿಗೆ ಸೂಚನೆ ನೀಡಲಾಗಿದೆ.
- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹಕಚೇರಿಗೂ ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆಯಾಗಿದೆ.
- ಸಾಮಾನ್ಯ ದಿನಗಳಲ್ಲಿ ಪ್ರತಿ ಟ್ಯಾಂಕರ್ ನೀರಿಗೆ ₹700–₹800 ಇದ್ದಿದ್ದು, ಈಗ ₹ 1,500ರಿಂದ ₹ 2,500ರವರೆಗೆ ಏರಿದೆ.
- ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಯುವಕನೊಬ್ಬ ತನ್ನ ಮನೆಯಲ್ಲಿ ಸ್ನಾನ ಮಾಡಲೂ ನೀರಿಲ್ಲದಂತಾಗಿ ಬನಶಂಕರಿಯಲ್ಲಿರುವ ಸ್ನೇಹಿತನ ಮನೆಗೆ ಸ್ನಾನಕ್ಕೆ ಹೋಗಬೇಕಾದ ಪ್ರಸಂಗ ಎದುರಾಗಿದೆ.
- ಐಟಿ, ಬಿಟಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಕೆಲವರು ಕಂಪನಿಗಳಲ್ಲಿರುವ ಜಿಮ್‌ಗೆ ತೆರಳಿ ಸ್ನಾನ ಮಾಡಿಕೊಂಡು ಬರುತ್ತಿದ್ದಾರೆ.

ನಾಯಂಡಹಳ್ಳಿಯಲ್ಲಿ ನೀರಿಗಾಗಿ ಕೊಡ ಹಿಡಿದು ನಡೆಯುತ್ತಿರುವುದು.

ಪ್ರತಿಭಟನೆ... ನಗರದ ಜನತೆಯ ಬೇಡಿಕೆಗೆ ತಕ್ಕಂತೆ ಕುಡಿಯುವ ನೀರನ್ನು ಪೂರೈಕೆ ಮಾಡುವಂತೆ ಆಗ್ರಹಿಸಿ ಭಾರತಿನಗರ ನಾಗರಿಕರ ವೇದಿಕೆಯ ಸದಸ್ಯರು ನಟಿ ತಾರಾ ಅನುರಾಧ ಅವರ ನೇತೃತ್ವದಲ್ಲಿ ಕಾಕ್ಸ್‌ಟೌನ್‌ನ ಡಾ.ರಾಜ್‌ಕುಮಾರ್ ಪ್ರತಿಮೆ ಮುಂಭಾಗದಲ್ಲಿ ಗುರುವಾರ ಖಾಲಿ ಕೊಡಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು

ಬಿಡಿಎ ಸದಸ್ಯರಾಗಿ ಇಬ್ಬರು ಶಾಸಕರು

ಬೆಂಗಳೂರು: ಪುಲಿಕೇಶಿನಗರ ಶಾಸಕ ಎ.ಸಿ. ಶ್ರೀನಿವಾಸ್, ಆನೇಕಲ್ ಶಾಸಕ ಬಿ. ಶಿವಣ್ಣ, ಕೆಪಿಸಿಸಿ ಕಾರ್ಮಿಕ ಕೋಶದ ಅಧ್ಯಕ್ಷ ಕೆ. ಪುಟ್ಟಸ್ವಾಮಿಗೌಡ ಮತ್ತು ಆನಂದ ಪ್ರಸಾದ್ ಅವರನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನಾಗಿ ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡಿದೆ.

ಬೆಂಗಳೂರು ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿ ದೇವನಹಳ್ಳಿಯ ವಿ. ಶಾಂತ ಕುಮಾರ್, ಸದಸ್ಯರಾಗಿ ವಿ. ಮಂಜು ನಾಥ್, ವಿ. ರಾಮಚಂದ್ರಪ್ಪ ಮತ್ತು ಸಿ. ಪ್ರಸನ್ನಕುಮಾರ್ ಅವರನ್ನು ನೇಮಿಸಲಾಗಿದೆ. ಕನಕಪುರ, ದೊಡ್ಡಬಳ್ಳಾಪುರ, ಮಾಗಡಿ, ಚನ್ನಪಟ್ಟಣ ಯೋಜನಾ ಪ್ರಾಧಿಕಾರಕ್ಕೂ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಲಾಗಿದೆ.

ಕೆರೆಯಂಗಳಗಳಲ್ಲಿ ಫಿಲ್ಟರ್ ಬೋರ್‌ವೆಲ್

ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಾಹಿತಿ

ಪ್ರಜಾವಾಣಿ ವಾರ್ತೆ

ರಾಮ್ ಪ್ರಸಾತ್ ಮನೋಹರ್

ಬೆಂಗಳೂರು: 'ನೀರಿನ ಕೊರತೆ ನೀಗಿಸಲು ಕೆರೆಯಂಗಳದಲ್ಲಿ ಫಿಲ್ಟರ್ ಬೋರ್‌ವೆಲ್‌ಗಳನ್ನು ಅಳವಡಿಸಲು ಕ್ರಿಯಾಯೋಜನೆ ತಯಾರು ಮಾಡಿಕೊಂಡಿದ್ದೇವೆ' ಎಂದು ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ವಿ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

'ದೇವನಹಳ್ಳಿಯಲ್ಲಿ ಕೆರೆಯಂಗಳದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಿಂದ (ಐಐಎಸ್‌ಸಿ) ಈ ಪ್ರಯೋಗ ಮಾಡಿ, ನೀರು ಪೂರೈಕೆ ಮಾಡುತ್ತಿದ್ದಾರೆ. ಈ ವಿಧಾನದಿಂದ ನೀರು ಸಂಗ್ರಹಿಸಿ ಅದನ್ನು ಶುದ್ಧೀಕರಿಸಿ ಗುಣಮಟ್ಟದ ನೀರು ಪೂರೈಕೆ ಮಾಡಲಾಗುತ್ತಿದೆ. ಸದ್ಯ 40 ಲಕ್ಷ ಲೀಟರ್ ನೀರು ಬಳಕೆಯಾಗುತ್ತಿದೆ. ಅದೇ ಮಾದರಿಯಲ್ಲಿ ಬೆಂಗಳೂರಿನ ಇತರ ಕೆರೆಗಳಲ್ಲಿಯೂ ಪ್ರಯೋಗ ಮಾಡಲಾಗುವುದು' ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ನಾಯಂಡಹಳ್ಳಿ ಕೆರೆ, ಚಿಕ್ಕಬಾಣಾವರ ಕೆರೆ, ವರ್ತೂರು ಕೆರೆ ಸೇರಿದಂತೆ ಏಳೆಂಟು ಕೆರೆಗಳನ್ನು ಗುರುತಿಸಲಾಗಿದೆ. ಅಲ್ಲಿ ನಮ್ಮ ಅಧಿಕಾರಿಗಳು, ಜಲತಜ್ಞರು, ಐಐಎಸ್‌ಸಿ ವಿಜ್ಞಾನಿಗಳು ತೆರಳಿ ಪರಿಶೀಲನೆ ನಡೆಸಲಿದ್ದಾರೆ. ನೀರು ಲಭ್ಯವಿರುವ ಕೆರೆಗಳಲ್ಲಿ ಫಿಲ್ಟರ್ ಬೋರ್‌ವೆಲ್ ಅಳವಡಿಸಲಾಗುವುದು. ಒಂದು ತಿಂಗಳ ಒಳಗೆ ಈ ಕೆಲಸ ಆಗಲಿದೆ ಎಂದು ವಿವರಿಸಿದರು.

ನಗರದ ಹೊರವಲಯದಲ್ಲಿ ಕಾವೇರಿ ನೀರು ಪೂರೈಕೆ ಬಹಳ ಕಡಿಮೆ ಇದೆ. ಕೊಳವೆಬಾವಿಯಿಂದಲೇ ನೀರು ಪೂರೈಕೆಯಾಗುತ್ತಿತ್ತು. ಈಗ ಕೊಳವೆಬಾವಿಗಳಲ್ಲೂ ನೀರು ಕಡಿಮೆಯಾಗಿರುವುದರಿಂದ ಕಾವೇರಿ ನೀರಿಗೆ ಬೇಡಿಕೆ ಇಟ್ಟಿದ್ದಾರೆ. ಕಾವೇರಿ ಹಂತ–5ನೇ ಯೋಜನೆಯಡಿ ಮೇ ತಿಂಗಳಾಂತ್ಯಕ್ಕೆ ಕಾವೇರಿ ನೀರು ಪೂರೈಕೆಯಾಗಲಿದೆ. ಅಲ್ಲಿವರೆಗೆ ನೀರು ಪೂರೈಸಲು ಫಿಲ್ಟರ್ ಬೋರ್‌ವೆಲ್ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಅಪಾರ್ಟ್‌ಮೆಂಟ್‌ಗಳಲ್ಲಿ ಕಾವೇರಿ ನೀರು ಬಳಕೆ ಇರಲಿಲ್ಲ. ಕೊಳವೆಬಾವಿ ನೀರನ್ನೇ ಬಳಸುತ್ತಿದ್ದರು. ನೀರಿನ ಕೊರತೆ ಉಂಟಾದರೆ, ಖಾಸಗಿ ಟ್ಯಾಂಕರ್‌ಗಳನ್ನು ಅವಲಂಬಿಸುತ್ತಿದ್ದರು. ಅವರೂ ಕಾವೇರಿ ನೀರಿಗೆ ಬೇಡಿಕೆ ಇಟ್ಟಿದ್ದಾರೆ. ಅಪಾರ್ಟ್‌ಮೆಂಟ್‌ಗಳ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಪುನರ್‌ಬಳಕೆ ಮಾಡಿಕೊಳ್ಳಬೇಕು. ಕುಡಿಯಲು ಹೊರತುಪಡಿಸಿ ಇತರೆ ಬಳಕೆಗೆ ಈ ನೀರು ಉಪಯೋಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

'ಜಲಮಂಡಳಿಯಿಂದ ಒಂದು ಟ್ಯಾಂಕರ್ ನೀರಿಗೆ ₹ 240 ಶುಲ್ಕ ಪಡೆದು ಮನೆಗಳಿಗೆ ನೀರು ಪೂರೈಸಲಾಗುತ್ತಿತ್ತು. ಈ ಬಾರಿಯೂ ಆರಂಭದಲ್ಲಿ ಈ ರೀತಿ ನೀರು ಪೂರೈಕೆ ಮಾಡಲಾಗುತ್ತಿದೆ. ಇನ್ನು ಹೀಗೆ ಮುಂದುವರಿಸುವುದು ಕಷ್ಟ. ಸಾರ್ವಜನಿಕವಾಗಿ ನೀರು ಪೂರೈಕೆ ಮಾಡಲಾಗುವುದು. ಆದರೆ ವೈಯಕ್ತಿಕವಾಗಿ ಸಂಪ್‌ಗಳಿಗೆ ಪೂರೈಸುವುದಿಲ್ಲ. ಜನರು ಸಹಕರಿಸಬೇಕು' ಎಂದು ಮನವಿ ಮಾಡಿದರು.

ನಗರ ವ್ಯಾಪ್ತಿಯಲ್ಲಿ ಸುಮಾರು 1,200 ಕೊಳವೆಬಾವಿಗಳು ಕೆಟ್ಟು ಹೋಗಿವೆ. ಅದರಲ್ಲಿ 400 ಕೊಳವೆಬಾವಿಗಳನ್ನು ದುರಸ್ತಿ ಮಾಡಿಸಿದ ನಂತ 250ರಲ್ಲಿ ನೀರು ಸಿಕ್ಕಿದೆ ಎಂದರು.

'ನಗರದ 336 ಪ್ರದೇಶಗಳಲ್ಲಿ 1000ದಿಂದ 3000 ಲೀಟರ್ ಸಾಮರ್ಥ್ಯದ ಟ್ಯಾಂಕರ್ ಇಟ್ಟು ಬೆಳಿಗ್ಗೆ ಮತ್ತು ಸಂಜೆ ನೀರು ತುಂಬಿಸಲಾಗುವುದು. ಸಾರ್ವಜನಿಕರು ಮಿತವಾಗಿ ಬಳಸಬೇಕು. ಜಲಮಂಡಳಿಯ 210 ಟ್ಯಾಂಕ್ ಬಳಕೆ ಮಾಡುತ್ತಿದ್ದೇವೆ. ಟಾಟಾ ಎಸಿ ವಾಹನಗಳನ್ನು ಮತ್ತು ಟ್ರ್ಯಾಕ್ಟರ್‌ಗಳನ್ನು ಬಾಡಿಗೆ ಪಡೆದು ಸಿಂಟೆಕ್ಸ್ ಟ್ಯಾಂಕ್ ಇಟ್ಟು ನೀರು ಪೂರೈಕೆ ಮಾಡಲಾಗುತ್ತಿದೆ' ಎಂದು ವಿವರಿಸಿದರು.

ದುರ್ಬಳಕೆ ನಿಷೇಧ

ಕುಡಿಯುವ ನೀರನ್ನು ವಾಹನ ತೊಳೆಯಲು, ಗಿಡಗಳನ್ನು ಬೆಳೆಸಲು ಬಳಸುತ್ತಿರುವುದು ಕಂಡು ಬಂದಿದೆ. ಈ ರೀತಿ ಬಳಕೆಯನ್ನು ನಿಷೇಧಿಸಿ ಆದೇಶ ಹೊರಡಿಸಲಾಗುವುದು ಎಂದು ಬಿಯುಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಕಟ್ಟಡ ನಿರ್ಮಾಣಕ್ಕೆ ಕುಡಿಯುವ ನೀರನ್ನು ಬಳಸಬಾರದು. ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡಿ (ಗ್ರೀನ್ ವಾಟರ್) ಬಳಕೆ ಮಾಡಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿರುವ 1300 ಪಾರ್ಕ್‌ಗಳಲ್ಲಿಯೂ ಪುನರ್‌ಬಳಕೆಯ ನೀರನ್ನೇ ಬಳಸಬೇಕು ಎಂದರು.

ಹೆಸರಘಟ್ಟದ ತೋಟಗೆರೆ ಬಸವಣ್ಣ ದೇವರ ಜಾತ್ರೆ

ದನಗಳ ಜಾತ್ರೆಗೂ ಬರದ ಛಾಯೆ

• ಬೈಲಮೂರ್ತಿ ಜಿ.

ಹೆಸರಘಟ್ಟ: ಸಮೀಪದ ತೋಟಗೆರೆ ಬಸವಣ್ಣ ದೇವಸ್ಥಾನ ಕ್ಷೇತ್ರದಲ್ಲಿ ಏಳು ದಿನಗಳಿಂದ ನಡೆಯುತ್ತಿರುವ ದನಗಳ ಜಾತ್ರೆಯಲ್ಲಿ 300ಕ್ಕೂ ಅಧಿಕ ರಾಸುಗಳು ಸೇರಿವೆ. ಶುಕ್ರವಾರ ಜಾತ್ರೆ ಸಮಾರೋಪಗೊಳ್ಳಲಿದೆ.

₹40 ಸಾವಿರದಿಂದ ಗರಿಷ್ಠ ₹ 5.50 ಲಕ್ಷ ಬೆಲೆಯಿರುವ ರಾಸುಗಳನ್ನು ರೈತರು ಜಾತ್ರೆಗೆ ವ್ಯಾಪಾರಕ್ಕಾಗಿ ಕರೆತಂದಿದ್ದಾರೆ. ಹಳ್ಳಿಕಾರ್ ತಳಿ ಎತ್ತುಗಳಿವೆ. ವಿವಿಧ ದೇಸಿ ತಳಿಯ ಆಕಳುಗಳಿವೆ. ಸೀಮೆ ಹಸುಗಳನ್ನೂ ರೈತರು ಜಾತ್ರೆ ಕರೆತಂದಿದ್ದಾರೆ.

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ರಾಮನಗರ ಜಿಲ್ಲೆಯ ಮಾಗಡಿ ಸುತ್ತಮುತ್ತಲಿನ ಹಳ್ಳಿಗಳಿಂದ ರೈತರು ತಮ್ಮ ರಾಸುಗಳನ್ನು ಕರೆತಂದಿದ್ದಾರೆ.

'ನಾಟಿ ತಳಿ ಆಕಳಿನ ಹಾಲು ಗುಣಮಟ್ಟದಿಂದ ಕೂಡಿರುತ್ತದೆ. ಬೇಡಿಕೆಯೂ ಇದೆ. ಈ ಆಕಳು ನಿತ್ಯ ಎರಡು ಲೀಟರ್ ಹಾಲು ಕೊಡಬಹುದು. ಆದರೆ, ಆ ಹಾಲಿನಿಂದ ಗುಣಮಟ್ಟದ ತುಪ್ಪ ಸಂಗ್ರಹವಾಗುತ್ತದೆ. ತುಪ್ಪಕ್ಕೂ ಬಹಳ ಬೇಡಿಕೆ ಇದೆ' ಎಂದು ನಾಟಿ ಆಕಳನ್ನು ಕರೆತಂದಿದ್ದ ರೈತ ಕೀರ್ತಿ, ದೇಸಿ ತಳಿಗಳ ಹಾಲಿನ ಗುಣವಿಶೇಷವನ್ನು ವಿವರಿಸಿದರು.

ಸಮೀಪದ ಶ್ಯಾಮಭಟ್ಟರ ಪಾಳ್ಯದಿಂದ ಬಂದಿದ್ದ ರೈತ ಬಸವರಾಜಯ್ಯ, 'ಈ ಬಾರಿ ಮಳೆ ಕೊರತೆ ಇರುವುದರಿಂದ ಹೊಸಕೋಟೆ ಮಂಡ್ಯ ಮೈಸೂರು ಜಿಲ್ಲೆಗಳಿಂದ ಖರೀದಿದಾರರು ಬಂದಿಲ್ಲ. ಹೀಗಾಗಿ, ಜಾನುವಾರುಗಳ ವ್ಯಾಪಾರ ಸ್ವಲ್ಪ ಕಡಿಮೆ ಇದೆ. ಪ್ರತಿ ವರ್ಷ ಭಾರಿ ದರವಿರುವ ರಾಸುಗಳ ವ್ಯಾಪಾರಕ್ಕೆ ಬರುತ್ತಿದ್ದವು. ಈ ವರ್ಷ ರಾಸುಗಳ ವ್ಯಾಪಾರವೇ ಕಡಿಮೆಯಾಗಿದೆ' ಎಂದು ಬರಗಾಲದ ಪರಿಣಾಮವನ್ನು ವಿವರಿಸಿದರು.

'ಕಳೆದ ವರ್ಷಕ್ಕಿಂತ ಈ ವರ್ಷ ಜಾತ್ರೆಗೆ ಬಂದಿರುವ ಜಾನುವಾರುಗಳ ಸಂಖ್ಯೆ ತುಸು ಹೆಚ್ಚೇ ಇದೆ. ಆದರೆ, ಮೊದಲು ಹಳ್ಳಿಗಳಲ್ಲಿ ಜಾನುವಾರು ಆಧಾರಿತ ಕೃಷಿ ಇತ್ತು. ರೈತರು ವ್ಯವಸಾಯಕ್ಕಾಗಿ ರಾಸುಗಳನ್ನು ಅವಲಂಬಿಸುತ್ತಿದ್ದರು. ಈಗ ಕಾರ್ಮಿಕರ ಕೊರತೆಯಿಂದಾಗಿ, ಎತ್ತುಗಳ ಜಾಗದಲ್ಲಿ ಯಂತ್ರಗಳು ಬಂದಿವೆ. ಹೀಗಾಗಿ ಕೊಳ್ಳುವವರು ಕಡಿಮೆಯಾಗಿದ್ದಾರೆ' ಎಂದು ರೈತರೊಬ್ಬರು ವಿಶ್ಲೇಷಿಸಿದರು.

ಜಾತ್ರೆಗೆ ಕರೆತಂದಿರುವ ರಾಸುಗಳು

ಹೋರಿಗಳನ್ನು ಕಟ್ಟುವ ಕಸುಬು ಬಿಡಲು ಸಾಧ್ಯವಿಲ್ಲ. ಸಂಪ್ರದಾಯ, ಖುಷಿಗಾಗಿ ₹ 5.50ಲಕ್ಷ ಬೆಲೆ ಬಾಳುವ ಹೋರಿಗಳನ್ನು ಸಾಕಿದ್ದೇನೆ. ಇವು ಮಾರಾಟವಾಗುವ ನಿರೀಕ್ಷೆ ಇದೆ

ಕೇಶವಮೂರ್ತಿ, ಬೀರಯ್ಯನಪಾಳ್ಯ



ಮೊದಲಿನಿಂದಲೂ ಪಶು ಸಂಗೋಪನೆ ಎಂದರೆ ನನಗೆ ತುಂಬಾ ಅಚ್ಚು ಮೆಚ್ಚು. ಓದಿನ ಜೊತೆಯಲ್ಲಿಯೇ ಹೋರಿ ಸಾಕಾಣಿಕೆಯನ್ನು ಅಭ್ಯಾಸವನ್ನಾಗಿ ಮಾಡಿಕೊಂಡಿದ್ದೇನೆ

ಸಿದ್ಧಾರ್ಥ, ತೋಟಗೆರೆ

'ಕಲಬುರಗಿ–ಬೆಂಗಳೂರು ಮಧ್ಯೆ ವಂದೇ ಭಾರತ್ ರೈಲು'

ಪ್ರಜಾವಾಣಿ ವಾರ್ತೆ

ಕಲಬುರಗಿ: ಈ ಭಾಗದ ಜನತೆಯ ಬಹು ದಿನಗಳ ಬೇಡಿಕೆಯಾಗಿದ್ದ ಕಲಬುರಗಿ–ಬೆಂಗಳೂರು ಮಧ್ಯೆ ವಂದೇ ಭಾರತ್ ರೈಲು ಓಡಿಸಲು ನಿರ್ಧರಿಸಲಾಗಿದ್ದು, ಮಾರ್ಚ್ 12ರಂದು ಪ್ರಧಾನಿ ನರೇಂದ್ರ ಮೋದಿ ರೈಲಿಗೆ ಚಾಲನೆ ನೀಡಲಿದ್ದಾರೆ.

ಈ ಕುರಿತು ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಸಂಸದ ಡಾ.ಉಮೇಶ ಜಾಧವ, 'ನಮ್ಮ ಬೇಡಿಕೆಗೆ ಸ್ಪಂದಿಸಿ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ವಂದೇ ಭಾರತ್ ರೈಲಿಗೆ ಅನುಮೋದನೆ ನೀಡಿದ್ದಾರೆ. ಪ್ರಧಾನಿಯವರು ಉದ್ಘಾಟಿಸಲಿರುವ ವಿವಿಧ ಕಾರ್ಯಕ್ರಮಗಳ ಪಟ್ಟಿಯಲ್ಲಿ ವಂದೇ ಭಾರತ್ ರೈಲು ಸಹ ಇದೆ. ಕಲಬುರಗಿ–ಬೆಂಗಳೂರು ಮಧ್ಯೆ ವಾರಕ್ಕೊಮ್ಮೆ ಸಂಚರಿಸುವ ರೈಲನ್ನು ಇತ್ತೀಚೆಗಷ್ಟೇ ಘೋಷಿಸಿದ್ದರು' ಎಂದು ತಿಳಿಸಿದ್ದಾರೆ.

ಮಾರ್ಚ್ 9ರಂದು ವಾರದ ರೈಲು ಉದ್ಘಾಟನೆಯಾಗಲಿದೆ.

ಮುಂಬೈ–ಸೋಲಾಪುರ ಮಧ್ಯೆ ಸಂಚರಿಸುತ್ತಿರುವ ವಂದೇ ಭಾರತ್ ರೈಲನ್ನು ಕಲಬುರಗಿವರೆಗೆ ವಿಸ್ತರಿಸ ಬೇಕು ಎಂದು ಸಂಸದ ಡಾ.ಜಾಧವ್ ರೈಲ್ವೆ ಸಚಿವರಿಗೆ ಮನವಿ ಮಾಡಿದ್ದರು. ಇದಕ್ಕೆ ಪೂರಕವಾಗಿ ಕಲಬುರಗಿಯಲ್ಲಿ 2ನೇ ಪಿಟ್‌ಲೈನ್ ನಿರ್ಮಾಣ ಕಾಮಗಾರಿಗೆ ಈಚೆಗೆ ಚಾಲನೆ ನೀಡಲಾಗಿತ್ತು.

ವಾರದ ರೈಲಿನ ವೇಳಾಪಟ್ಟಿ

ದಶಕಗಳ ಬೇಡಿಕೆಯಾದ ಕಲಬುರಗಿ–ಬೆಂಗಳೂರು ಮಧ್ಯದ ಉದ್ಘಾಟನಾ ರೈಲಿನ ವೇಳಾಪಟ್ಟಿಯನ್ನು ಮಧ್ಯ ರೈಲ್ವೆ ಬಿಡುಗಡೆ ಮಾಡಿದ್ದು, ಮಾರ್ಚ್ 9ರಂದು ಸಂಜೆ 5.10ಕ್ಕೆ ಕಲಬುರಗಿಯಿಂದ ಹೊರಡುವ ರೈಲು ಶಹಾಬಾದ್, ವಾಡಿ, ಯಾದಗಿರಿ, ರಾಯಚೂರು, ಮಂತ್ರಾಲಯ, ಅಧೋನಿ, ಗುಂತಕಲ್, ಅನಂತಪುರ, ಧರ್ಮಾವರಂ, ಯಲಹಂಕ ಮೂಲಕ ಮಾ 10ರಂದು ಬೆಳಗಿನ ಜಾವ 4.15ಕ್ಕೆ ಬೆಂಗಳೂರಿನ ಬೈಯಪ್ಪನಹಳ್ಳಿ ತಲುಪಲಿದೆ.

547 ಕಿ.ಮೀ. ದೂರ ಕ್ರಮಿಸಲು ಈ ರೈಲು 11 ಗಂಟೆ ತೆಗೆದುಕೊಳ್ಳಲಿದೆ.

ಈ ರೈಲಿನ ಘೋಷಣೆ ಮಾಡಿದ ಬಳಿಕ ಕೇಂದ್ರ ಸರ್ಕಾರ ಗುರುವಾರ ವಂದೇ ಭಾರತ್ ರೈಲಿನ ಘೋಷಣೆ ಮಾಡಿದೆ.

ಕಾರ್ಗೊ ಟರ್ಮಿನಲ್‌ಗೆ ಒಪ್ಪಿಗೆ: ಕಲಬುರಗಿಯ ಹಿರೇನಂದೂರು ಭಾರತ್ ಪೆಟ್ರೋಲಿಯಂ ನಿಗಮದ ಪೆಟ್ರೋಲಿಯಂ ಉತ್ಪನ್ನ ಸಂಗ್ರಹಗಾರವನ್ನು ಗತಿ ಶಕ್ತಿ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆಯು ಗುರುತಿಸಿ ಘೋಷಣೆ ಮಾಡಿದೆ. ಇತ್ತೀಚೆಗಷ್ಟೇ ಬಿಪಿಸಿಎಲ್ ತೈಲ ಸಂಗ್ರಹಾಗಾರದ ಸಾಮರ್ಥ್ಯವನ್ನು 30 ಸಾವಿರ ಕಿಲೋ ಲೀಟರ್‌ಗೆ ಹೆಚ್ಚಿಸಿ ಪ್ರಧಾನಿಯವರು ಲೋಕಾರ್ಪಣೆ ಮಾಡಿದ್ದರು ಎಂದು ಸಂಸದರು ತಿಳಿಸಿದರು.

ಆರು ತಿಂಗಳಾದರೂ ರಚನೆ ಆಗದ ವನ್ಯಜೀವಿ ಮಂಡಳಿ • ನೀತಿ ನಿಯಮಗಳ ಉಲ್ಲಂಘನೆ ಆರೋಪ

ಸ್ಥಾಯಿ ಸಮಿತಿ ಸಭೆ ನಿರ್ಣಯಗಳಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯನ್ನು ರಚನೆ ಮಾಡದೇ, ಫೆ.28ರಂದು ಅಸ್ತಿತ್ವಕ್ಕೆ ಬಂದ ಅಧಿಕಾರಿಗಳಷ್ಟೇ ಇರುವ ಸ್ಥಾಯಿ ಸಮಿತಿಯು ಕೆಲವು ಪ್ರಮುಖ ತೀರ್ಮಾನ ತೆಗೆದುಕೊಂಡಿದೆ.

'ವನ್ಯಜೀವಿ ಮಂಡಳಿ ರಚನೆ ಮಾಡದೇ ಆರು ತಿಂಗಳಾಗಿದೆ. ವನ್ಯಜೀವಿ ಮಂಡಳಿ ರಚನೆ ಮಾಡಿದ ಬಳಿಕವೇ ಸ್ಥಾಯಿ ಸಮಿತಿ ರಚಿಸಬೇಕು. ತರಾತುರಿಯಲ್ಲಿ ಸ್ಥಾಯಿ ಸಮಿತಿ ರಚಿಸಲಾಗಿದೆ. ಇದರಲ್ಲೂ ಅಧಿಕಾರೇತರರನ್ನೂ ನೇಮಿಸಬೇಕು. ಆದರೆ, ಸರ್ಕಾರ ನೀತಿ–ನಿಯಮಗಳನ್ನು ಗಾಳಿಗೆ ತೂರಿ ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಿದೆ' ಎಂದು ಹೆಸರು ಹೇಳಲು ಇಚ್ಛಿಸದ ವನ್ಯಜೀವಿ ತಜ್ಞರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅರಣ್ಯ ಮತ್ತು ವನ್ಯಜೀವಿ ಪ್ರದೇಶಗಳಿಗೆ ಸಂಬಂಧಿಸಿದ ಯೋಜನೆಗಳಿಗೆ ವನ್ಯಜೀವಿ ಮಂಡಳಿಯ ಒಪ್ಪಿಗೆ ಅತಿ ಮುಖ್ಯ. ಮಂಡಳಿಯ ಸದಸ್ಯರ ಅಭಿಪ್ರಾಯವನ್ನು ಆಧರಿಸಿ ಸರ್ಕಾರ ನಿರ್ಣಯಗಳನ್ನು ತೆಗೆದುಕೊಳ್ಳಬೇಕು. ಆದರೆ, ರಾಜ್ಯದಲ್ಲಿ ವನ್ಯಜೀವಿ ಮಂಡಳಿಯ ಅನುಪಸ್ಥಿತಿಯಲ್ಲಿ ಸ್ಥಾಯಿ ಸಮಿತಿ ನಿರ್ಣಯ ತೆಗೆದುಕೊಂಡಿರುವುದು ನಿಯಮಗಳ ಉಲ್ಲಂಘನೆ ಎಂದು ಅವರು ಹೇಳಿದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ನೇತೃತ್ವದಲ್ಲಿ ನಡೆದ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಸಭೆ

ವನ್ಯಜೀವಿ ಸಂರಕ್ಷಣಾ ತಿದ್ದುಪಡಿ ಕಾಯ್ದೆ–2022ರ ಅನ್ವಯ ವನ್ಯಜೀವಿ ಮಂಡಳಿಯಲ್ಲಿ ಮುಖ್ಯಮಂತ್ರಿ ಅಧ್ಯಕ್ಷರಾಗಿ, ಅರಣ್ಯ ಸಚಿವರು ಉಪಾಧ್ಯಕ್ಷರಾಗಿರಬೇಕು. ಅಧಿಕಾರಿಗಳು ಮತ್ತು ಅಧಿಕಾರಿಗಳಲ್ಲದ ಸದಸ್ಯರೂ ಮಂಡಳಿಯಲ್ಲಿ ಕಡ್ಡಾಯವಾಗಿರಬೇಕು. ಅಲ್ಲದೇ, ಅರಣ್ಯ ಸಚಿವರು ಅಧ್ಯಕ್ಷರಾಗಿರುವ ಸ್ಥಾಯಿ ಸಮಿತಿಗೆ ವನ್ಯಜೀವಿ ಮಂಡಳಿಯ ಕೆಲ ಅಧಿಕಾರೇತರ ಸದಸ್ಯರನ್ನೂ ನಾಮ ನಿರ್ದೇಶನ ಮಾಡಬೇಕು. ಆದರೆ, ಇದು ಯಾವುದೂ ಪಾಲನೆ ಆಗಿಲ್ಲ ಎಂದು ಅವರು ವಿವರಿಸಿದರು.

ಬುಧವಾರ ನಡೆದ ಸ್ಥಾಯಿ ಸಮಿತಿ ಸಭೆಯಲ್ಲಿ ವೆಸ್ಟ್‌ಕೋಸ್ಟ್ ಕಾಗದದ ಕಾರ್ಖಾನೆಯ ಎರಡು ವಿಷಯಗಳು ಪ್ರಸ್ತಾಪಕ್ಕೆ ಬಂದಿದ್ದು, ಅದರಲ್ಲಿ ಒಂದು ಪ್ರಸ್ತಾಪಕ್ಕೆ ಮಾತ್ರ ಒಪ್ಪಿಗೆ ಸಿಕ್ಕಿದೆ. ಕಾರ್ಖಾನೆಯ ಚಟುವಟಿಕೆ ವಿಸ್ತರಿಸುವ ಮತ್ತೊಂದು ಪ್ರಸ್ತಾಪವನ್ನು ಮುಂದೂಡಲಾಗಿದೆ. ಇವೆರಡಲ್ಲದೇ ಇನ್ನೂ ಹಲವು ವಿಷಯಗಳು ಪ್ರಸ್ತಾಪವಾಗಿವೆ. ವನ್ಯಜೀವಿ ಮಂಡಳಿ ಇಲ್ಲದೇ ಇಂತಹ ನಿರ್ಣಯಗಳನ್ನು ತೆಗೆದುಕೊಳ್ಳುವಂತಿಲ್ಲ. ಆದ್ದರಿಂದ, ಫೆಬ್ರುವರಿಯಲ್ಲಿ ರಚಿಸಿದ ಸ್ಥಾಯಿ ಸಮಿತಿಯನ್ನು ರದ್ದುಪಡಿಸಬೇಕು ಎಂದೂ ಒತ್ತಾಯಿಸಿದರು.

ರಾಜ್ಯದಲ್ಲಿ ವನ್ಯಜೀವಿ– ಮಾನವ ಸಂಘರ್ಷ ತಾರಕಕ್ಕೆ ಏರಿದೆ. ಇಂತಹ ವಿಷಯಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ವನ್ಯಜೀವಿ ತಜ್ಞರ ಸಲಹೆಗಳು ಮುಖ್ಯವಾಗುತ್ತವೆ. ವನ್ಯಜೀವಿಗಳ ಮೇಲೆ ಗಂಭೀರ ಪರಿಣಾಮ ಬೀರುವ ಯೋಜನೆಗಳ ಬಗ್ಗೆ ಸ್ಥಾಯಿ ಸಮಿತಿಯು ಚರ್ಚೆ ನಡೆಸಿ, ಕೆಲವು ಪ್ರಸ್ತಾವನೆಗಳಿಗೆ ನೀಡಿರುವುದು ದುರದೃಷ್ಟಕರ ಎಂದು ಅವರು ಹೇಳಿದರು.

> **ಕಾನೂನು ಉಲ್ಲಂಘಿಸಿ ವನ್ಯಜೀವಿ ಮಂಡಳಿಯಿಂದ ಅಧಿಕಾರೇತರ ಸದಸ್ಯರನ್ನು ಹೊರಗಿಟ್ಟಿರುವುದು ವನ್ಯ ಸಂಪತ್ತನ್ನು ಲೂಟಿ ಹೊಡೆಯುವ ಹುನ್ನಾರವೇ?**
> **ಆರ್.ಅಶೋಕ,** ವಿಧಾನಸಭೆ ವಿರೋಧಪಕ್ಷದ ನಾಯಕ,

> **ಕಾನೂನು ಬಾಹಿರವಾಗಿ ವನ್ಯಜೀವಿ ಸ್ಥಾಯಿ ಸಮಿತಿ ರಚಿಸಿಕೊಂಡು ತಮಗೆ ಬೇಕಾದಂತೆ ಅಧಿಕಾರ ಚಲಾಯಿಸುತ್ತಿರುವ ಅರಣ್ಯ ಸಚಿವರ ನಡೆ ಅನುಮಾನ ಹುಟ್ಟಿಸುವಂತಿದೆ**
> **ಡಾ.ಸಿ.ಎನ್.ಅಶ್ವತ್ಥನಾರಾಯಣ,** ಬಿಜೆಪಿ ಶಾಸಕ

ಸದಸ್ಯತ್ವಕ್ಕಾಗಿ 'ಕೈ' ಕಾರ್ಯಕರ್ತರ ಕಾಟ

'ವನ್ಯಜೀವಿ ಮಂಡಳಿ ಸದಸ್ಯರ ನೇಮಕಕ್ಕಾಗಿ ಸಿದ್ಧಪಡಿಸಿರುವ ಕಡತ ಕಳೆದ ಮೂರು ತಿಂಗಳಿಂದ ಅರಣ್ಯ ಸಚಿವರ ಬಳಿಯೇ ಇದ್ದು, ಅದಕ್ಕೆ ಮುಕ್ತಿ ನೀಡಲು ಸಚಿವರು ಆಸಕ್ತಿ ತೋರಿಸುತ್ತಿಲ್ಲ' ಎಂದು ಇಲಾಖೆ ಮೂಲಗಳು ಹೇಳಿವೆ.

ಆರು ತಿಂಗಳ ಹಿಂದೆ ಕಡತ ಮುಖ್ಯಮಂತ್ರಿ ಬಳಿ ಹೋದಾಗ ಅಲ್ಲಿ ಕೆಲವು ಹೆಸರುಗಳು ಬದಲಾದವು. ಬಳಿಕ ಕಡತ ಅರಣ್ಯ ಸಚಿವರ ಬಳಿಗೆ ಬಂದ ನಂತರ, ಅಲ್ಲಿಯೇ ಉಳಿದಿದೆ.

ವನ್ಯಜೀವಿ ಮಂಡಳಿಗೆ ತಜ್ಞರನ್ನು ಮಾತ್ರ ನೇಮಿಸಬೇಕು ಎಂಬುದು ನಿಯಮ. ಆದರೆ, ಅದು ಭರ್ತಿ ಆಗದ ಕಾರಣ ಕಾಂಗ್ರೆಸ್ ಕಾರ್ಯಕರ್ತರು ಸಚಿವರಿಗೆ ಪ್ರತಿನಿತ್ಯ ಬಂದು ಅರ್ಜಿಗಳನ್ನು ನೀಡುತ್ತಿದ್ದಾರೆ. ಸುಮಾರು 500 ಕ್ಕೂ ಹೆಚ್ಚು ಅರ್ಜಿಗಳು ಸಚಿವರ ಮುಂದಿವೆ ಎಂದು ಮೂಲಗಳು ತಿಳಿಸಿವೆ.

'ಮಂಡಳಿ ರಚನೆ ಆಗದೇ ಸ್ಥಾಯಿ ಸಮಿತಿಯಲ್ಲಿ ನಿರ್ಣಯ ತೆಗೆದುಕೊಳ್ಳುವುದು ತಪ್ಪಾಗುತ್ತದೆ' ಎಂದು ಇಲಾಖೆ ಅಧಿಕಾರಿಗಳು ಸಚಿವರ ಗಮನಕ್ಕೆ ತಂದಾಗ, 'ಏನೂ ಆಗಲ್ಲ, ನಾನು ನೋಡಿಕೊಳ್ಳುತ್ತೇನೆ. ಚಿಂತಿಸಬೇಡಿ. ನಿರ್ಣಯಗಳನ್ನು ತೆಗೆದುಕೊಳ್ಳೋಣ' ಎಂದು ಹೇಳಿದರೆಂದು ಮೂಲಗಳು ತಿಳಿಸಿವೆ. ಈ ಭರವಸೆಯ ಮೇರೆಗೆ ಬುಧವಾರದ ಸಭೆಯಲ್ಲಿ ಹಲವು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

'ಸ್ಥಾಯಿ ಸಮಿತಿ ನಿರ್ಣಯ ತೆಗೆದುಕೊಳ್ಳಬಹುದು'

'ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ನಿರ್ಣಯಗಳನ್ನು ತೆಗೆದುಕೊಳ್ಳಲು 2022 ರ ವನ್ಯಜೀವಿ (ತಿದ್ದುಪಡಿ) ಕಾಯ್ದೆ ಅಡಿ ಅವಕಾಶ ಇದೆ' ಎಂದು ಹೆಚ್ಚುವರಿ ಅರಣ್ಯ ಮುಖ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ತಿದ್ದುಪಡಿ ಕಾಯ್ದೆಯ ಸೆಕ್ಷನ್ 6 ಎ ಯಲ್ಲಿ ಸ್ಥಾಯಿ ಸಮಿತಿ ನಿರ್ಣಯ ತೆಗೆದುಕೊಳ್ಳಬಹುದು ಎಂಬ ಅಂಶ ಇದೆ. ಕೇಂದ್ರ ಮಟ್ಟದಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯಲ್ಲಿ ಪ್ರಧಾನಿಯವರು ಅಧ್ಯಕ್ಷರಾಗಿರುತ್ತಾರೆ. ಕೇಂದ್ರ ಅರಣ್ಯ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಕೇಂದ್ರದಲ್ಲಿ 14 ವರ್ಷಗಳಿಂದ ಕೇಂದ್ರ ವನ್ಯಜೀವಿ ಮಂಡಳಿ ಸಭೆ ಆಗಿಲ್ಲ. ಅಲ್ಲಿ ಸ್ಥಾಯಿ ಸಮಿತಿ ಸಭೆಗಳು ಮಾತ್ರ ನಡೆಯುತ್ತಿದೆ' ಎಂದು ಅವರು ತಿಳಿಸಿದರು.

ರಾಜ್ಯದಲ್ಲೂ ಸ್ಥಾಯಿ ಸಮಿತಿ ರಚಿಸಲು ಆದೇಶ ಬಂದಿದ್ದು, ಆ ಪ್ರಕಾರ ಸ್ಥಾಯಿ ಸಮಿತಿ ರಚಿಸಲಾಗಿದೆ. ಸ್ಥಾಯಿ ಸಮಿತಿಯಲ್ಲಿ 10 ಮಂದಿ ಅಧಿಕಾರೇತರರನ್ನು ಸೇರಿಸಬೇಕು. ಅವರನ್ನು ಸಚಿವರು ನೇಮಿಸಿದ್ದಾರೆ. ವನ್ಯಜೀವಿ ಮಂಡಳಿಯಲ್ಲಿ 10 ರಿಂದ 12 ಮಂದಿ ಅಧಿಕಾರೇತರರನ್ನು ನಾಮ ನಿರ್ದೇಶನ ಮಾಡಬೇಕು. ಅದನ್ನು ಮುಖ್ಯಮಂತ್ರಿಯವರೇ ಮಾಡಬೇಕು. ಇವರನ್ನು ಸ್ಥಾಯಿ ಸಮಿತಿಗೆ ಸೇರಿಸುವ ಬಗ್ಗೆ ಅರಣ್ಯ ಸಚಿವರು ಕ್ರಮ ವಹಿಸುತ್ತಾರೆ ಎಂದು ಕುಮಾರ್ ಪುಷ್ಕರ್ ತಿಳಿಸಿದರು.

ಯಲಹಂಕ ಸಂಯುಕ್ತ ಆವರ್ತ ವಿದ್ಯುತ್ ಸ್ಥಾವರದಿಂದ ಹೊರಬರುತ್ತಿರುವ ದಟ್ಟ ಹೊಗೆ

ವಿದ್ಯುತ್ ಸ್ಥಾವರ ಘಟಕ ಸ್ಥಗಿತಕ್ಕೆ ಸ್ಥಳೀಯ ನಿವಾಸಿಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಯಲಹಂಕ: ಸ್ಥಗಿತಗೊಂಡಿದ್ದ ಪುಟ್ಟೇನಹಳ್ಳಿ ಸಮೀಪದ ಕೆಪಿಸಿ ಅನಿಲ ವಿದ್ಯುತ್ ನಿಗಮದ ಯಲಹಂಕ ಸಂಯುಕ್ತ ಆವರ್ತ ವಿದ್ಯುತ್ ಸ್ಥಾವರ ಘಟಕ ಬುಧವಾರದಿಂದ ಪ್ರಾಯೋಗಿಕವಾಗಿ ಕಾರ್ಯಾರಂಭ ಮಾಡಿದ್ದು, ಘಟಕದಿಂದ ಹೊರ ಹೊಮ್ಮುತ್ತಿರುವ ಹೊಗೆ ಮತ್ತು ಭಾರಿ ಶಬ್ದ ಸುತ್ತಲಿನ ನಿವಾಸಿಗಳಿಗೆ ತೀವ್ರ ತೊಂದರೆಯನ್ನುಟುಮಾಡುತ್ತಿದೆ ಎಂದು ಸ್ಥಳೀಯ ನಿವಾಸಿಗಳು ಆರೋಪಿಸಿದ್ದಾರೆ.

ಶಬ್ದ ಮತ್ತು ಹೊಗೆಯಿಂದ ಬೇಸತ್ತ ನಿವಾಸಿಗಳು ಗುರುವಾರ ರಾತ್ರಿ ಘಟಕದ ಮುಂಭಾಗ ಜಮಾಯಿಸಿ, ಘಟಕದ ಕಾರ್ಯವನ್ನು ಕೂಡಲೇ ಸ್ಥಗಿತಗೊಳಿಸುವಂತೆ ಪ್ರತಿಭಟನೆ ನಡೆಸಿದರು.

ಘಟಕದಿಂದ ಉಂಟಾಗುತ್ತಿರುವ ಶಬ್ದ ಮತ್ತು ವಾಯುಮಾಲಿನ್ಯದಿಂದ ಪುಟ್ಟೇನಹಳ್ಳಿ, ಕೆಂಚೇನಹಳ್ಳಿ, ಹಾರೋಹಳ್ಳಿ, ಅನಂತಪುರ ಗೇಟ್, ಬಾಲಾಜಿ ಬಡಾವಣೆ ಸೇರಿದಂತೆ ಹಲವಾರು ಅಪಾರ್ಟ್‌ಮೆಂಟ್‌ಗಳು ನಿವಾಸಿಗಳಿಗೆ ತೀವ್ರ ತೊಂದರೆಯಾಗಿದೆ ಎಂದು ನಿವಾಸಿಗಳು ದೂರಿದರು.

ಈ ವೇಳೆ ಮಾತನಾಡಿದ ಬಾಲಾಜಿ ಬಡಾವಣೆ ನಿವಾಸಿ ಜಿ.ಎಂ.ಶಿರಹಟ್ಟಿ, 'ಘಟಕ ಹೊರಸೂಸುವ ಅಪಾಯಕಾರಿ ಹೊಗೆ ಎರಡು ಕಿಲೋಮೀಟರ್ ದೂರದವರೆಗೆ ಆವರಿಸುತ್ತಿದೆ. ಇದರಿಂದ ಜನರ ಆರೋಗ್ಯಕ್ಕೆ ತೊಂದರೆಯಾಗುತ್ತದೆ. ತಕ್ಷಣ ಈ ಘಟಕದ ಕಾರ್ಯವನ್ನು ಸ್ಥಗಿತಗೊಳಿಸಬೇಕು' ಎಂದು ಆಗ್ರಹಿಸಿದರು.

ಸ್ಥಳೀಯ ನಿವಾಸಿ ಹರೀಶ್ 'ರಾಸಾಯನಿಕಯುಕ್ತ ಹೊಗೆ ಮತ್ತು ಭಾರೀ ಶಬ್ದ ಸುತ್ತಮುತ್ತಲ ಪ್ರದೇಶದ ವಾತಾವರಣ ಕಲುಷಿತಗೊಳಿಸುತ್ತಿದೆ. ಶಬ್ದದಿಂದ ಗಾಬರಿಗೊಂಡು ಪುಟ್ಟೇನಹಳ್ಳಿ ಮತ್ತು ಯಲಹಂಕ ಕೆರೆಯಲ್ಲಿ ನೆಲಸಿದ್ದ ವಿವಿ ಧ ಜಾತಿಯ ಪಕ್ಷಿಗಳೆಲ್ಲಾ ಬೇರೆಡೆಗೆ ಸ್ಥಳಾಂತರಗೊಂಡಿವೆ' ಎಂದು ದೂರಿದರು.

ಹನಕೆರೆ ಬಳಿ ಅಂಡರ್‌ಪಾಸ್‌ಗೆ ಮಂಡ್ಯ ಶಾಸಕ ಆಗ್ರಹ; ಸಚಿವರ ಭರವಸೆ ಬಳಿಕ ಅಂತ್ಯ

ಹೆದ್ದಾರಿ ಪ್ರಾಧಿಕಾರ ಕಚೇರಿ ಎದುರು ಧರಣಿ

ಪ್ರಜಾವಾಣಿ ವಾರ್ತೆ

ರಾಮನಗರ: ಮಂಡ್ಯದ ಹನಕೆರೆಯಲ್ಲಿ ಹಾದು ಹೋಗಿರುವ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸ್ಥಳೀಯರ ಓಡಾಟಕ್ಕೆ ಅನುಕೂಲವಾಗುವಂತೆ ಅಂಡರ್ ಪಾಸ್ ನಿರ್ಮಾಣಕ್ಕೆ ಆಗ್ರಹಿಸಿ, ಕಾಂಗ್ರೆಸ್ ಶಾಸಕ ರವಿಕುಮಾರ್ ಗೌಡ ಗಣಿಗ ಅವರು ನಗರದ ಹೊರವಲಯದ ಬಸವನಪುರದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರ ಕಚೇರಿ ಎದುರು ಗುರುವಾರ ಉಪವಾಸ ಧರಣಿ ನಡೆಸಿದರು.

ಗ್ರಾಮಸ್ಥರೊಂದಿಗೆ ಕಚೇರಿ ಎದುರು ಧರಣಿ ಕುಳಿತ ರವಿಕುಮಾರ್, ಪ್ರಾಧಿಕಾರ ಮತ್ತು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. 'ಅಂಡರ್‌ಪಾಸ್‌ಗಾಗಿ ಈಗಾಗಲೇ ಪ್ರತಿಭಟನೆ ಮಾಡಿ ಲಾಠಿ ಏಟು ತಿಂದಿದ್ದೇವೆ. ಮಂಡ್ಯದಲ್ಲಿ ಬೆಂಕಿ ಹತ್ತಿ ಉರಿದಿದೆ. ಆರಂಭದಿಂದಲೂ ಅಧಿಕಾರಿಗಳು ಕೇವಲ ಭರವಸೆ ನೀಡಿಕೊಂಡೇ ಬಂದಿದ್ದಾರೆ. ನಮ್ಮ ಬೇಡಿಕೆಗೆ ಸ್ಪಂದಿಸಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಅಂಡರ್‌ಪಾಸ್‌ಗೆ ಟೆಂಡರ್ ಆಗಿದೆ. ಆದರೆ, ಗುತ್ತಿಗೆದಾರ ಸಿಗುತ್ತಿಲ್ಲ ಎಂದು ಇತ್ತೀಚೆಗೆ ಹೊಸ ನೆಪ ಹೇಳುತ್ತಿದ್ದಾರೆ. ನಾವು ಎಲ್ಲಾ ರೀತಿಯಲ್ಲೂ ಹೋರಾಟ ನಡೆಸಿ ಸಾಕಾಗಿ, ಕಡೆಗೆ ಗಾಂಧೀಜಿ ಮಾರ್ಗದಲ್ಲಿ ಕಚೇರಿ ಎದುರು ಉಪವಾಸ ಧರಣಿ ಕುಳಿತಿದ್ದೇವೆ. ಯಾವಾಗ ಕಾಮಗಾರಿ ಶುರು ಮಾಡುತ್ತಾರೊ, ಆಗ ಧರಣಿ ಕೈ ಬಿಡುವೆ' ಎಂದು ಪಟ್ಟು ಹಿಡಿದರು.

ಮಂಡ್ಯದ ಹನಕೆರೆ ಬಳಿ ಬೆಂಗಳೂರು–ಮೈಸೂರು ಹೆದ್ದಾರಿಗೆ ಅಂಡರ್‌ಪಾಸ್ ನಿರ್ಮಾಣಕ್ಕೆ ಆಗ್ರಹಿಸಿ, ಅಲ್ಲಿನ ಕಾಂಗ್ರೆಸ್ ಶಾಸಕ ರವಿಕುಮಾರ್ ಗೌಡ ಗಣಿಗ ಅವರು, ರಾಮನಗರದ ಹೊರವಲಯದ ಬಸವನಪುರದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರ ಕಚೇರಿ ಎದುರು ಗುರುವಾರ ಉಪವಾಸ ಧರಣಿ ನಡೆಸಿದರು. ಸಂಸದ ಡಿ.ಕೆ. ಸುರೇಶ್ ಅವರು ಶಾಸಕರಿಗೆ ಸಾಥ್ ನೀಡಿದರು. ರಾಮನಗರದ ಮಾಜಿ ಶಾಸಕ ಕೆ. ರಾಜು ಹಾಗೂ ಮುಖಂಡರು ಇದ್ದಾರೆ

ಸಂಸದರೇ ಕ್ರೆಡಿಟ್ ಪಡೆಯಲಿ: 'ಅಂಡರ್‌ಪಾಸ್ ಕ್ರೆಡಿಟ್‌ಗಾಗಿ ಧರಣಿ ಕುಳಿತಿದ್ದಾರೆ' ಎಂಬ ಸಂಸದೆ ಸುಮಲತಾ ಅಂಬರೀಷ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ರವಿಕುಮಾರ್, 'ಸಂಸದರಿಗೆ ಮಾಹಿತಿ ಕೊರತೆ ಇದೆ. ಮೇಲ್ಸೇತುವೆ ಆದೇಶದ ಕುರಿತು ಅವರಿಗೆ ಗೊತ್ತಿಲ್ಲ. ನಾನು ಆಗಲೇ ಅಂಡರ್‌ಪಾಸ್ ಮಾಡಿಸಿದ್ದೇನೆ ಎನ್ನುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಮೇಲ್ಸೇತುವೆಯಲ್ಲಿ ಎತ್ತಿನಗಾಡಿ ಹೋಗುವುದಕ್ಕೆ ಆಗಲ್ಲ. ಹಾಗಾಗಿ, ನಮಗೆ ಅಂಡರ್‌ಪಾಸ್ ಬೇಕು' ಎಂದರು.

ಪ್ರತಿಭಟನನಿರತರೊಂದಿಗೆ ಮಾತನಾಡಿದ ಯೋಜನಾ ನಿರ್ದೇಶಕ ರಾಹುಲ್ ಗುಪ್ತಾ, 'ಅಂಡರ್‌ಪಾಸ್ ನಿರ್ಮಾಣಕ್ಕೆ ಸಂಬಂಧಿಸಿ ಪ್ರಸ್ತಾವನೆಯನ್ನು ಕಳಿಸಿ ಕೊಟ್ಟಿದ್ದು, ಮೇಲಿನ ಹಂತದಲ್ಲಿ ಅನುಮೋದನೆ ಸಿಗಬೇಕಿದೆ. ಸಿಕ್ಕ ಬಳಿಕ ನಿರ್ಮಾಣ ಮಾಡಲಾಗುವುದು' ಎಂದು ಭರವಸೆ ನೀಡಿದರು. ಅವರ ಮಾತಿಗೆ ಒಪ್ಪದ ಧರಣಿನಿರತರು, ನಮಗೆ ಭರವಸೆ ಬೇಡ. ಅಂಡರ್‌ಪಾಸ್ ನಿರ್ಮಾಣದ ಗ್ಯಾರಂಟಿ ಬೇಕು ಎಂದು ಹೇಳಿದರು.

ಆಗ ರಾಹುಲ್ ಸ್ಥಳದಿಂದ ಕಚೇರಿಗೆ ತೆರಳಿದರು. ಧರಣಿ ವಿಷಯ ತಿಳಿದು ಸಂಸದ ಡಿ.ಕೆ. ಸುರೇಶ್ ಹಾಗೂ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಅವರು ಸಹ ಸ್ಥಳಕ್ಕೆ ಬಂದು, ರವಿಕುಮಾರ್ ಅವರೊಂದಿಗೆ ಕೆಲ ಧರಣಿ ಕುಳಿತು ಬೆಂಬಲ ವ್ಯಕ್ತಪಡಿಸಿದರು.

ಮುನ್ನೆಚ್ಚರಿಕೆ ಕ್ರಮವಾಗಿ ಪ್ರಾಧಿಕಾರದ ಕಚೇರಿ ಬಳಿ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿತ್ತು.

ಅಂಡರ್‌ಪಾಸ್‌ಗೆ ಶೀಘ್ರ ಅನುಮೋದನೆ

ಧರಣಿ ವಿಷಯ ತಿಳಿದು ಮಧ್ಯಾಹ್ನ ಸ್ಥಳಕ್ಕೆ ಬಂದ ಮಂಡ್ಯ ಉಸ್ತುವಾರಿ ಸಚಿವ ಚಲುವರಾಯ ಸ್ವಾಮಿ ಅವರು, ಶಾಸಕ ರವಿಕುಮಾರ್ ಹಾಗೂ ಗ್ರಾಮಸ್ಥರೊಂದಿಗೆ ಮಾತುಕತೆ ನಡೆಸಿ ಅಂಡರ್‌ಪಾಸ್ ನಿರ್ಮಾಣದ ಭರವಸೆ ನೀಡಿದರು.

ಬಳಿಕ ರವಿಕುಮಾರ್ ಅವರಿಗೆ ಅವರಿಗೆ ಎಳನೀರು ಕುಡಿಸಿದರು.

ಬಳಿಕ ಮಾತನಾಡಿದ ಚಲುವರಾಯಸ್ವಾಮಿ, 'ಹೆದ್ದಾರಿ ಲೋಕಾರ್ಪಣೆಗೂ ಮುನ್ನವೇ ಎಲ್ಲಾ ಸಮಸ್ಯೆ ಪರಿಹರಿಸ ಬೇಕಿತ್ತು. ಹೆದ್ದಾರಿಯಲ್ಲಿ ಅಪಘಾತಗಳು ಹೆಚ್ಚಾಗಿವೆ. ಸ್ಥಳೀಯರ ಅನುಕೂಲಕ್ಕಾಗಿ ವಿವಿಧೆಡೆ ಅಂಡರ್‌ಪಾಸ್‌ಗಳು ನಿರ್ಮಾಣವಾಗಬೇಕು. ಈ ಬಗ್ಗೆ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಶಾಸಕರ ಒತ್ತಾಯದಂತೆ ಹನಕೆರೆ ಬಳಿ ಅಂಡರ್‌ಪಾಸ್ ಮಂಜೂರಾಗಲಿದ್ದು, ತಿಂಗಳೊಳಗೆ ಅನುಮೋದನೆ ಪಡೆಯಲಾಗುವುದು. ಅದರ ನಿರ್ಮಾಣದ ಜವಾಬ್ದಾರಿ ನನ್ನದು. ನಾವೆಲ್ಲ ಇದ್ದೂ, ನೀವಿಲ್ಲಿ ಬಂದು ಧರಣಿ ಕುಳಿತಿರುವುದಕ್ಕೆ ನಾಚಿಕೆಯಾಗುತ್ತಿದೆ' ಎಂದರು.

'ಹೆದ್ದಾರಿಯಲ್ಲೂ ಕನ್ನಡಿಗರಿಗೆ ಅನ್ಯಾಯ': 'ಹೆದ್ದಾರಿ ವಿಷಯದಲ್ಲೂ ಕೇಂದ್ರ ಸರ್ಕಾರ ಕನ್ನಡಿಗರಿಗೆ ಅನ್ಯಾಯ ಮಾಡಿದೆ. ರಾಜ್ಯದಿಂದ ಕೇಂದ್ರಕ್ಕೆ ₹ 4 ಲಕ್ಷ ಕೋಟಿ ತೆರಿಗೆ ಕಟ್ಟುತ್ತೇವೆ. ಅವರು ಕೇವಲ ₹ 40 ಸಾವಿರ ಕೋಟಿ ಕೊಡುತ್ತಾರೆ. ರಾಜ್ಯದಲ್ಲಿ 10 ವರ್ಷಗಳಲ್ಲಿ ಕೇವಲ 5 ಸಾವಿರ ಕಿ.ಮೀ. ರಸ್ತೆ ನಿರ್ಮಿಸಿದ್ದಾರೆ. ಅದೇ ಉತ್ತರ ಪ್ರದೇಶದಲ್ಲಿ 13 ಸಾವಿರ ಕಿ.ಮೀ., ಮಹಾರಾಷ್ಟ್ರದಲ್ಲಿ 26 ಸಾವಿರ ಕಿ.ಮೀ. ನಿರ್ಮಿಸಿದ್ದಾರೆ. ಇದು ಕನ್ನಡರಿಗಾದ ಅನ್ಯಾಯ. ನಮ್ಮ ತೆರಿಗೆಯ ಪಾಲು ಕೊಡದವರು ರಾಜ್ಯದಲ್ಲಿ 25 ಸಾವಿರ ಕಿ.ಮೀ. ರಸ್ತೆ ನಿರ್ಮಿಸಬೇಕು. ಕೇಂದ್ರ ಸರ್ಕಾರದ ನೀತಿ ಉತ್ತರ ಭಾರತದವರಿಗೆ ಬೆಣ್ಣೆ, ದಕ್ಷಿಣ ಭಾರತದವರಿಗೆ ಸುಣ್ಣ ಎಂಬಂತಾಗಿದೆ. ಹೆದ್ದಾರಿಯ ಪ್ರವೇಶ ಮತ್ತು ನಿರ್ಗಮನ, ಸರ್ವೀಸ್ ರಸ್ತೆ, ಬಸ್ ತಂಗುದಾಣ ಸೇರಿದಂತೆ ವಿವಿಧ ಕೆಲಸಗಳಿಗೆ ₹ 600 ಕೋಟಿ ಮೀಸಲಿಡಲಾಗಿದೆ. ಆದರೆ, ಯಾವ ಕಾರ್ಯವೂ ಆಗಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸಬೇಕು' ಎಂದು ಸಂಸದ ಡಿ.ಕೆ. ಸುರೇಶ್ ಆಗ್ರಹಿಸಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 'ದಿಟ್ಟ ಮಹಿಳಾ' ಪ್ರಶಸ್ತಿ ಸ್ವೀಕರಿಸಿದ ಮಹಿಳೆಯರು ಸಾಮೂಹಿಕ ಫೋಟೊ ತೆಗೆಸಿಕೊಂಡರು

ಬಿಬಿಎಂಪಿ ನೌಕರರ ಸಂಘದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 'ದಿಟ್ಟ ಮಹಿಳಾ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಡಾ. ರಾಜ್‌ಕುಮಾರ್ ಗಾಜಿನಮನೆ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಟಿ ವಿನಯಪ್ರಸಾದ್, ಗಾಯಕಿ ಎಂ.ಡಿ. ಪಲ್ಲವಿ, ಯುನೈಟೆಡ್ ಆಸ್ಪತ್ರೆ ನಿರ್ದೇಶಕಿ ಡಾ. ವೀಣಾ ಸಿದ್ದಾರೆಡ್ಡಿ, ಎಸಿಪಿ ಎಂ.ಸಿ.ಕವಿತಾ, ನಟಿ ಶೀತಲ್ ಶೆಟ್ಟಿ, ವಕೀಲೆ ಶೀದೇವಿ ಪಾಟೀಲ, ವಾಹಿನಿ ನಿರೂಪಕಿ ಶುಭಶ್ರೀ ಜೈನ್, ಪತ್ರಕರ್ತೆ ಪ್ರತಿಮಾ ಭಟ್, ನಿರೂಪಕಿ ಪ್ರತಿಭಾ ಪ್ರಕಾಶ್, ಸಿಂಧಿ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಸುಚಿತ್ರಾ ಮತ್ತು ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 14 ಸಾಧಕ ಮಹಿಳೆಯರು ಪ್ರಶಸ್ತಿ ಸ್ವೀಕರಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ತುಷಾರ್ ಗಿರಿನಾಥ್, 'ಬಿಬಿಎಂಪಿಯಲ್ಲಿ ಶೇ 50ರಷ್ಟು ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಪೌರಕಾರ್ಮಿಕರಲ್ಲಿ ಶೇ 80ರಷ್ಟು ಮಹಿಳೆಯರಿದ್ದಾರೆ. ಬಿಬಿಎಂಪಿ ಇರುವುದು ನಾಗರಿಕರ ಸೇವೆ ಮಾಡಲು. ಒಳ್ಳೆಯ ಸೇವೆ ನೀಡಲು ಮಹಿಳಾ ಸಿಬ್ಬಂದಿ ಸಹಕಾರ ನೀಡುತ್ತಿದ್ದಾರೆ' ಎಂದರು.

ನಟಿ ಮಾಲಾಶ್ರೀ ಮಾತನಾಡಿ, 'ಹೆಣ್ಣು ಮಕ್ಕಳು ಜೀವನದ ಸ್ಫೂರ್ತಿಯಾಗಿದ್ದಾರೆ. ಮಹಿಳೆಯರು ಸಮಾಜದ ಕಣ್ಣು. ಮಹಿಳೆಯರಿಗೆ ಗೌರವ ಕೊಟ್ಟರೆ ದೇವರೆ ಒಲಿಯುತ್ತಾನೆಂದು ಪುರಾಣದಲ್ಲಿ ಉಲ್ಲೇಖಿಸಿದ್ದಾರೆ' ಎಂದರು.

ನಟ ವಿ. ರವಿಚಂದ್ರನ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಐಎಎಸ್ ಅಧಿಕಾರಿಗಳಾದ ಮೌನೀಶ್ ಮೌದ್ಗಿಲ್, ಸ್ನೇಹಾಲ್, ಸೂರಳ್ಕರ್ ವಿಕಾಸ್ ಕಿಶೋರ್, ಹರೀಶ್ ಕೆ. ಮತ್ತು ಕೆಎಎಸ್ ಅಧಿಕಾರಿ ಮಂಜುನಾಥಸ್ವಾಮಿ, ಜಂಟಿ ಆಯುಕ್ತೆ ಲಕ್ಷ್ಮಿದೇವಿ, ಸಂಘದ ಅಧ್ಯಕ್ಷರಾದ ಎ. ಅಮೃತ್ ರಾಜ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಯುನೈಟೆಡ್ ಆಸ್ಪತ್ರೆ ವತಿಯಿಂದ ಆರೋಗ್ಯ ಉಚಿತ ತಪಾಸಣೆ ಮತ್ತು ಶೇಖರ್ ಆಸ್ಪತ್ರೆ ವತಿಯಿಂದ ಕಣ್ಣಿನ ಪರೀಕ್ಷೆ ಮಾಡಲಾಯಿತು.

ಶಿವರಾತ್ರಿ: ವಿಶೇಷ ಕಾರ್ಯಕ್ರಮಕ್ಕೆ ಮುಜರಾಯಿ ಇಲಾಖೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾತ್ರಿ ದಿನ ಮುಜರಾಯಿ ದೇವಸ್ಥಾನಗಳಲ್ಲಿ ವಿಶೇಷ ಪ್ರಾರ್ಥನೆ ಮಾಡಬೇಕು. ಜೊತೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಮುಜರಾಯಿ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಜ್ಯದಲ್ಲಿ ಶಾಂತಿ, ಸಂಯಮದೊಂದಿಗೆ ಜನರಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ, ಸ್ನೇಹ ಉಂಟಾಗಲೆಂದು ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆ ಸಲ್ಲಿಸಬೇಕು. ರುದ್ರಾಭಿಷೇಕ, ರುದ್ರಹೋಮ ಪೂಜಾಕಾರ್ಯಗಳನ್ನು ವಿಶೇಷವಾಗಿ ನೆರವೇರಿಸಬೇಕು.

ಯಕ್ಷಗಾನ, ವೀರಭದ್ರ ಕುಣಿತ, ಡೊಳ್ಳು ಕುಣಿತ, ದೇಸಿ ವಾದ್ಯಗಳು, ಭರತನಾಟ್ಯ, ಭಕ್ತಿಗೀತೆ, ಸಾಂಪ್ರದಾಯಿಕ ಜನಪದ ಕಲೆಗಳು, ದಕ್ಷಯಜ್ಞ, ಶನಿಮಹಾತ್ಮೆ ಮುಂತಾದ ಶಿವ ಸಂಬಂಧಿ ಪಾರಂಪರಿಕ ಸ್ಥಳೀಯ ಕಿರುನಾಟಕಗಳನ್ನು, ಶಿವಪುರಾಣ, ಕಥಾ ಶ್ರವಣಗಳನ್ನು ಆಯೋಜಿಸಬೇಕು.

ಮರೆಯಾಗುತ್ತಿರುವ ಸಾಂಸ್ಕೃತಿಕ ಕಲೆಗಳಾದ ಗೊಂಬೆಯಾಟ, ಕೋಲಾಟಗಳನ್ನು ಕಲಾವಿದರ ಲಭ್ಯತೆ ನೋಡಿಕೊಂಡು ಹಮ್ಮಿಕೊಳ್ಳಬಹುದು ಎಂದು ಧಾರ್ಮಿಕ ದತ್ತಿ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಬಾಲಮಂಜುನಾಥ ಸ್ವಾಮಿ ಬಂಧನ

ಕುಣಿಗಲ್: ತಾಲ್ಲೂಕಿನ ಹುಲಿಯೂರುದುರ್ಗ ಹೋಬಳಿಯ ಹಂಗರಹಳ್ಳಿ ಶ್ರೀ ವಿದ್ಯಾ ಚೌಡೇಶ್ವರಿ ಮಠದ ಬಾಲ ಮಂಜುನಾಥ ಸ್ವಾಮಿ ಅವರನ್ನು ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಗುರುವಾರ ಮಧ್ಯರಾತ್ರಿ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಬಾಲಕಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಗುರುವಾರ ಮಧ್ಯರಾತ್ರಿ ವಿಚಾರಣೆ ನಡೆಸಿ ಬಂಧಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ ನೇತೃತ್ವದಲ್ಲಿ ಗುರುವಾರ ಸಂಜೆ ಮಠದಲ್ಲಿ ಬಾಲಮಂಜುನಾಥ ಸ್ವಾಮಿ ಮತ್ತು ಅವರ ಆಪ್ತ ಸಹಾಯಕ ಅಭಿಷೇಕ್ ಎಂಬುವರನ್ನು ಬಂಧಿಸಲಾಗಿದೆ.

ತಮಗೆ ಸಂಬಂಧಿಸಿದ ವಿಡಿಯೊ ತೋರಿಸಿ ಯುವತಿ ಹಾಗೂ ಕೆಲವು ಯುವಕರು ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ ಎಂದು ಆರೋಪಿಸಿ ಸ್ವಾಮಿ ಇತ್ತೀಚೆಗೆ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಬಾಲಕಿ ನೀಡಿದ ಪ್ರತಿ ದೂರಿನ ಮೇರೆಗೆ ಸ್ವಾಮೀಜಿ ಬಂಧಿಸಲಾಗಿದೆ.

ಅನ್ನಪೂರ್ಣ ತಾಯಿ, ವಿನೋದ ಸುರೇಂದ್ರಗೆ 'ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಪಾಂಡಪ್ಪ ಲಕ್ಷ್ಮಣ ಹೂಗಾರ ದತ್ತಿ ಪ್ರಶಸ್ತಿ'ಗೆ ಬೀದರ್‌ನ ಅನ್ನಪೂರ್ಣ ತಾಯಿ ಮತ್ತು ಬೆಳಗಾವಿಯ ವಿನೋದ ಸುರೇಂದ್ರ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ.

ಅನ್ನಪೂರ್ಣ ತಾಯಿ

ವಿನೋದ ಸುರೇಂದ್ರ

ಅನ್ನಪೂರ್ಣ ತಾಯಿ ಅವರು ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಮತ್ತು ಕಾನೂನು ವಿಷಯದಲ್ಲಿ ಪದವಿ ಪಡೆದಿದ್ದಾರೆ. ಬಸವ ತತ್ವ ಪ್ರಸಾರಕ್ಕೆ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೆಳಗಾವಿಯ ಭರತೇಶ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಯಾದ ವಿನೋದ ಸುರೇಂದ್ರ, ಸಂಶೋಧನಾ ವಿಜ್ಞಾನಿಯಾಗಿದ್ದಾರೆ. ಶಿಕ್ಷಣ ಮತ್ತು ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಪರಿಷತ್ತಿನ ಪ್ರಕಟಣೆ ತಿಳಿಸಿದೆ.

23 ರೈತರಿಗೆ ಸನ್ಮಾನ: ಮೂರು ದಿನಗಳ ಮೇಳಕ್ಕೆ 75 ಸಾವಿರ ಜನ ಭೇಟಿ

ರಾಷ್ಟ್ರೀಯ ತೋಟಗಾರಿಕೆ ಮೇಳ ಸಂಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು (ಐಐಎಚ್‌ಆರ್) ತನ್ನ ಆವರಣದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ ರಾಷ್ಟ್ರೀಯ ತೋಟಗಾರಿಕೆ ಮೇಳ ಗುರುವಾರ ಸಂಪನ್ನಗೊಂಡಿತು. ಮೇಳದ ಅವಧಿಯಲ್ಲಿ 75 ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿದ್ದರು.

ಐಐಎಚ್‌ಆರ್ ಅಭಿವೃದ್ಧಿಪಡಿಸಿರುವ ಹಣ್ಣು, ತರಕಾರಿ, ಹೂವು ಹಾಗೂ ಬಿತ್ತನೆ ಬೀಜಗಳನ್ನು ರೈತರ ಜತೆಗೆ ನಗರದ ಜನರೂ ಖರೀದಿಸಿದರು. ಬಿತ್ತನೆ ಬೀಜದ ಪ್ಯಾಕ್‌ಗಳಲ್ಲಿ ವಿಶೇಷವಾಗಿ ಕುಂಬಳಕಾಯಿ, ಪಾಲಕ್ ಸೊಪ್ಪು, ಹೀರೆಕಾಯಿ ಮತ್ತಿತರ ಬೀಜಗಳು ಹೆಚ್ಚಾಗಿ ಮಾರಾಟವಾದವು.

'ಕಿಚನ್ ಗಾರ್ಡನ್ ಕಿಟ್‌ಗಳಿಗೂ ಹೆಚ್ಚು ಬೇಡಿಕೆಯಿತ್ತು. 25 ನಾನಾ ತರಕಾರಿಯ ಬೀಜಗಳು, ಹೂವಿನ ಬೀಜಗಳು ಹೆಚ್ಚಾಗಿ ಮಾರಾಟವಾದವು. ಇದರ ಕೌಂಟರ್ ಪ್ರತ್ಯೇಕವಾಗಿತ್ತು. ನರ್ಸರಿಗಳಲ್ಲಿ ಇರಿಸಲಾಗಿದ್ದ ಸಸಿಗಳೂ ಹೆಚ್ಚು ಮಾರಾಟವಾಗಿವೆ' ಎಂದು ಐಐಎಚ್‌ಆರ್‌ನ ಅಧಿಕಾರಿಗಳು ಮಾಹಿತಿ ನೀಡಿದರು.

ಐಸಿಎಆರ್–ಐಐಎಚ್‌ಆರ್‌ನಲ್ಲಿ ಸಂಶೋಧಿಸಿದ 248 ಅತ್ಯಾಧುನಿಕ ತಂತ್ರಜ್ಞಾನಗಳ ಕ್ಯೂಆರ್ ಕೋಡ್‌ಗಳ ಪ್ರಕಟಣೆಗಳನ್ನು (10 ಭಾಷೆಗಳಲ್ಲಿ ಅನುವಾದಿಸಿದ ಸಂಕಲನ) ಮತ್ತು 'ಕೊಕೊಪೋನಿಕ್ಸ್–ಭವಿಷ್ಯದ ಮಣ್ಣು ರಹಿತ ತರಕಾರಿ ಉತ್ಪಾದನಾ ವ್ಯವಸ್ಥೆ' ಎಂಬ ಪ್ರಕಟಣೆಗಳನ್ನು ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ 23 ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು.

ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ತೋಟಗಾರಿಕೆ ಇಲಾಖೆ ನಿರ್ದೇಶಕ ರಮೇಶ್ ಡಿ.ಎಸ್, ಆಹಾರ ಸಂಸ್ಕರಣೆ ಮತ್ತು ಕೊಯ್ಲೋತ್ತರ ತಂತ್ರಜ್ಞಾನ ವಿಭಾಗದ ವಿಶೇಷ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಭಾಗವಹಿಸಿದ್ದರು.

'ತಂತ್ರಜ್ಞಾನ ರೈತರಿಗೆ ಪೂರಕವಾಗಿರಲಿ'

'ಹವಾಮಾನ ಏರುಪೇರುಗಳಿಗೆ ಹೊಂದಿಕೊಳ್ಳುವ ಬೆಳೆಗಳನ್ನು ರೈತರು ಬೆಳೆಯಬೇಕು. ಅದಕ್ಕೆ ಪೂರಕವಾದ ತಂತ್ರಜ್ಞಾನ ಹಾಗೂ ತಳಿಗಳನ್ನು ವಿಜ್ಞಾನಿಗಳು ಅಭಿವೃದ್ಧಿಪಡಿಸಬೇಕು' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

'ರೈತರು ಬೆಳೆದ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗಬೇಕಾದರೆ ಸಂಸ್ಕರಣೆ ಹಾಗೂ ರಫ್ತು ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ, ರೈತರ ಆದಾಯ ದ್ವಿಗುಣವಾಗುತ್ತದೆ. ನಮ್ಮ ದೇಶದ ಆಹಾರ ಪದಾರ್ಥಗಳಿಗೆ ವಿಶ್ವದಾದ್ಯಂತ ಹೆಚ್ಚು ಬೇಡಿಕೆ ಇದೆ. ನಾವು ಬೆಳೆದ ಆಹಾರ ಪದಾರ್ಥಗಳನ್ನು ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿ ಮಾಡಬೇಕು. ಆಗ ಇದಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಉತ್ತಮ ಬೆಲೆ ಸಿಗುತ್ತದೆ' ಎಂದರು.

ನಗರದಲ್ಲಿ ಇಂದು

'ಯುನಾನಿ ಸೌಂದರ್ಯ ವರ್ಧಕ ಚಿಕಿತ್ಸೆಯಿಂದ ನಿಮ್ಮ ಅನನ್ಯ ಕಾಂತಿಯನ್ನು ಸಂಭ್ರಮಿಸಿ' ರಾಷ್ಟ್ರೀಯ ಕಾರ್ಯಾಗಾರ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಅನಿಲ್ ಕುಮಾರ್ ಟಿ.ಕೆ., ರಂದೀಪ್ ಡಿ., ಶ್ರೀನಿವಾಸಲು, ನವೀನ್ ಭಟ್, ಅಬ್ದುಲ್ ನಾಸೀರ್ ಅನ್ಸಾರಿ, ಆಯೋಜನೆ: ಆಯುಷ್ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಗಾಂಧಿನಗರ, ಬೆಳಿಗ್ಗೆ 10.30

'ವರಭ್ರಷ್ಟ' ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ಡಿ. ವೆಂಕಟರಮಣಯ್ಯ, ಸಂಗೀತ: ಐ.ಟಿ.ಐ ರಾಮಮೂರ್ತಿ, ಆಯೋಜನೆ: ರಂಗಸೇತುವೆ ಟ್ರಸ್ಟ್, ಸ್ಥಳ: ಪೂರ್ಣಚಂದ್ರ ತೇಜಸ್ವಿ ರಂಗಮಂದಿರ, ಶ್ರೀಗಂಧಕಾವಲು, ಸಂಜೆ 5.30

ಅಭಿನಂದನಾ ಸಮಾರಂಭ: ಲಕ್ಷ್ಮೀನಾರಾಯ ಎನ್., ಈರಂಕಯ್ಯ ಎಚ್.ಎಂ., ವೆಂಕಟೇಶ್ ಕೆ.ಎಂ., ರವಿಕುಮಾರ್ ಎಂ., ಲಕ್ಷ್ಮೀನರಸಿಂಹಯ್ಯ ಎಂ., ಶ್ವೇತಾ ಡಿ., ಶೋಭ ಎಸ್., ಎಂ. ಪ್ರಕಾಶಮೂರ್ತಿ, ಎಲ್. ಹರ್ಷ, ಎಸ್.ವಿ. ಸೀತಾರಾಮು, ಎಸ್.ಟಿ. ಗೋಂವಿದಯ್ಯ, ಎಂ. ಚಂದ್ರಶೇಖರ್, ಆಯೋಜನೆ: ಸಂಸ್ಕೃತಿ, ಸ್ಥಳ: ಟಿ.ಆರ್. ಶಾಮಣ್ಣ ಮತ್ತು ನಾಡೋಜ ಡಾ.ಜಿ. ನಾರಾಯಣ ವೇದಿಕೆ, ಗವೀಪುರ, ಸಂಜೆ 6.30

ಶಿವರಾತ್ರಿ ವಿಶೇಷ:

ಶತರುದ್ರಾಭಿಷೇಕ: ಏಕವಾರ ರುದ್ರಾಭಿಷೇಕ, ಅತ್ಯಾಕರ್ಷಕ ಅಲಂಕಾರ, ಸ್ವತಃ ಕ್ಷೀರಾಭಿಷೇಕ, ಆಯೋಜನೆ ಮತ್ತು ಸ್ಥಳ: ಶೇಷಮಹಾಬಲಮುರಿ ಗಣಪತಿ ಸೇವಾ ಸಮಿತಿ ಟ್ರಸ್ಟ್, ರಾಮಾಂಜನೇಯ ಗುಡ್ಡದ ಹಿಂಭಾಗ ಹನುಮಂತನಗರ, ಬೆಳಿಗ್ಗೆ 8

ಮೃತ್ತಿಕಾ ಶಿವಲಿಂಗ ದರ್ಶನ: ಭಜನಾ ಕಾರ್ಯಕ್ರಮಗಳು, ಮಹಾಮಂಗಳಾರತಿ ಪ್ರಸಾದ ವಿನಿಯೋಗ, ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಬೆಳಿಗ್ಗೆ 9ರಿಂದ

ಶಿವರಾತ್ರಿ ಸ್ವರ ಸಂಭ್ರಮ: ಆಯೋಜನೆ ಮತ್ತು ಸ್ಥಳ: ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ, ಚಿಮಿಣಿ ಹಿಲ್ಸ್, ಹೆಸರಘಟ್ಟ ರಸ್ತೆ, ಬೆಳಿಗ್ಗೆ 9.30

ಮಹಾಶಿವರಾತ್ರಿ, ಬ್ರಹ್ಮರಥೋತ್ಸವ: ಸಾಂಸ್ಕೃತಿಕ ಕಾರ್ಯಕ್ರಮ: ಆಯೋಜನೆ: ಭ್ರಮರಾಂಭ ಸಮೇತ ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಮಲ್ಲೇಶ್ವರ, ಬೆಳಿಗ್ಗೆ 10

ಶಿವರಾತ್ರೋತ್ಸವ, ಮಹಾ ರುದ್ರಯಾಗ: ನಗರೇಶ್ವರ ಸ್ವಾಮಿ ಉತ್ಸವಮೂರ್ತಿ ಮೆರವಣಿಗೆ, ಅಧ್ಯಕ್ಷತೆ: ಪಿ. ವಿಜಯ ಕುಮಾರ್, ಗಿರಿಜಾ ಕಲ್ಯಾಣ ಮಹೋತ್ಸವ ಪ್ರಾರಂಭ, ಮಹಾ ಮಂಗಳಾರತಿ, ಶಿವರಾತ್ರಿ ಜಾಗರಣೆ, ಶಿವಾಭಿಷೇಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ: ನಗರೇಶ್ವರಸ್ವಾಮಿ ದೇವಾಲಯ, ಗುರುದಕ್ಷಿಣಾಮೂರ್ತಿ ಫೌಂಡೇಷನ್, ಸ್ಥಳ: ನಗರೇಶ್ವರಸ್ವಾಮಿ ದೇವಸ್ಥಾನ, ನಗರ್ತರ ಪೇಟೆ, ಮಧ್ಯಾಹ್ನ 3ರಿಂದ

ಮಹಿಳಾ ದಿನಾಚರಣೆ:

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಸಮಾಜವನ್ನು ಪ್ರಭಾವಿಸುವವರಾಗಿ ಲೇಖಕಿಯರು ಕುರಿತು ಸಂವಾದ: ಭಾಗವಹಿಸುವವರು: ಅಂಬಿಕಾ ಅನಂತ್, ಎಂ.ಎಸ್. ಆಶಾದೇವಿ, ನೀತಿ ರಾಯ್, ಶೈನೀ ಆಂಥೋನಿ ಉಷಾರಾಣಿ ರಾವ್, ಆಯೋಜನೆ: ಸಾಹಿತ್ಯ ಅಕಾಡೆಮಿ, ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಬೆಳಿಗ್ಗೆ 10.30

ಭರತನಾಟ್ಯ ಪ್ರದರ್ಶನ: 'ಭೂ ಕೈಲಾಸ': ಪ್ರಸ್ತುತಿ: ವಾಸವಿ ಮಹಿಳಾ ತಂಡ, ಆಯೋಜನೆ: ಸಿಂಧು ಭೈರವಿ ಕಲಾ ತಂಡ, ಸ್ಥಳ: ಶಿವಬಾಲಯೋಗಿ ಮಹಾರಾಜ್, ಜೆ.ಪಿ. ನಗರ, ಮಧ್ಯಾಹ್ನ 12

'ಅವ್ಯಾನ್ಸ' ಕಲಾಕೃತಿಗಳ ಪ್ರದರ್ಶನ: ಉದ್ಘಾಟನೆ: ವಿನಿತಾ ಬಾಲಿ, ಲತಾ ರೆಡ್ಡಿ, ನಿರ್ವಹಣೆ: ಎಂ.ಜಿ. ದೊಡ್ಡಮನಿ, ಆಯೋಜನೆ: ಓರ್ಜಾ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: 'ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ರೂಪಗಳಲ್ಲಿ ರಾಗಗಳು, ಲಯ ಮತ್ತು ಸಂಗೀತದ ಯೋಜನೆಗಳು: ಅತಿಥಿಗಳು: ಮೀನಾಕ್ಷಿ ರವಿ, ಮೈಥಿಲಿ ಅನಂತರಾಮನ್, ಜಾತವೇದಬ್ಯಾನರ್ಜಿ, ತಬಲಾ: ಪೂರ್ಣಿಮಾ, ಮೃದಂಗ: ರಂಜನಿ ವೆಂಕಟೇಶ್, ಪಿಟೀಲು: ಅದತಿ, ಆಯೋಜನೆ: ಕಲಾ ಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6.30

ಸೃಷ್ಟಿ ಶಿವರಾತ್ರಿ ಉತ್ಸವ: ಉದ್ಘಾಟನೆ: ರಾಧಶ್ರೀಧರ್, ಅತಿಥಿಗಳು: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಎಲ್.ವಿ. ರವಿಸುಬ್ರಮಣ್ಯ, ಉದಯ್ ಗರುಡಾಚಾರ್, ಮಹೇಶ ಜೋಶಿ, ಅಹಲ್ಯ, ಅಶೋಕ್ ಹಾರನಹಳ್ಳಿ, ಉದಯ್ ಕುಮಾರ್ ಭಾಸ್ಕರ್, ಸತೀಶ್ ಮಾಧವನ್, ಎ.ವಿ. ಸತ್ಯನಾರಾಯಣ, ಆಯೋಜನೆ: ಸೃಷ್ಟಿ ಸೆಂಟರ್ ಆಫ್ ಪರ್ಮಫಾರ್ಮಿಂಗ್ ಆರ್ಟ್ಸ್ ಆ್ಯಂಡ್ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್ ಥೆರಪಿ, ಸ್ಥಳ: ಶೃಂಗೇರಿ ಶಂಕರ ಮಠ,ಸಂಜೆ 6

'ಕಾವ್ಯ ಶಿವರಾತ್ರಿ' ಅಹೋರಾತ್ರಿ ಕಾವ್ಯಗಾಯನ: ಉದ್ಘಾಟನೆ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಜಯಕರ ಎಸ್.ಎಂ., ಅತಿಥಿಗಳು: ಶೇಖ್ ಲತೀಫ್, ಶ್ರೀನಿವಾಸ್ ಸಿ., ಗಿರಿಯಪ್ಪ ದಮ್ಮಪ್ರಿಯ, ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ, ಕಾವ್ಯಶಿವರಾತ್ರಿ ಪ್ರಸ್ತಾವನೆ: ಸಿ.ಎಂ. ನರಸಿಂಹಮೂರ್ತಿ, ಮಂಟೇಸ್ವಾಮಿ ಮತ್ತು ಮಲೆಮಹಾದೇಶ್ವರ ಮಹಾಕಾವ್ಯ ಗಾಯನ: ಅಲ್ಕೆರೆ ಶಿವಕುಮಾರ್ ಮತ್ತು ತಂಡ, 'ಮಿಸಸ್ ಅಂಬೇಡ್ಕರ್' ನಾಟಕ ಪ್ರದರ್ಶನ: ರಚನೆ: ಸಿದ್ಧರಾಮ ಕಾರಣಿಕ, ನಿರ್ದೇಶನ: ಪ್ರದೀಪ್ ತಿಪಟೂರು, ಆಯೋಜನೆ: ಜನಸಂಸ್ಕೃತಿ ಪ್ರತಿಷ್ಠಾನ ಕಾವ್ಯಮಂಡಲ, ಡಾ.ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ, ಸ್ಥಳ: ಡಾ.ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಸಂಜೆ 6ರಿಂದ

ಜಾಣಜಾಣೆಯರ ನಗೆಜಾಗರಣೆ: ಮುಖ್ಯಮಂತ್ರಿ ಚಂದ್ರು, ಎಂ. ಕೃಷ್ಣೇಗೌಡ, ಸಂಧ್ಯಾಶಣೈ, ಬೆಣ್ಣೆ ಬಸವರಾಜು, ರವಿಭಜಂತ್ರಿ, ದೇವಿಕಾ ಪರಮೇಶ್ವರಿ ಲಕ್ಷ್ಮಣ ಸುವರ್ಣ, ನಾಗರಾಜ್, ದಯಾನಂದ, ಆಶಾ ನಾಯಕ್, ಪ್ರದೀಪ್, ಪ್ರಹ್ಲಾದಾಚರ್ಯ ಮತ್ತು ತಂಡ, ಯಕ್ಷಗಾನ: ರಾಧಾಕೃಷ್ಣ ಉರಾಳ ಮತ್ತು ತಂಡ, ಆಯೋಜನೆ: ಜಾಣಜಾಣೆಯರು, ಸ್ಥಳ: ಸಿರೂರು ಪಾರ್ಕ್, ಆಟದ ಮೈದಾನ, ಮಂತ್ರಿ ಮಾಲ್ ಎದುರು, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸುಭಾಷಿತ

ಮಾನವೀಯತೆಗೆ ಎಸಗುವ ಅಪಮಾನವು ವಿನಾಶಕ್ಕೆ ಮೂಲ.

-ರವೀಂದ್ರನಾಥ ಟ್ಯಾಗೋರ್

ಕರೆ ಮಾಡಿದವರ ಹೆಸರು ಬಹಿರಂಗ ಟ್ರಾಯ್ ಶಿಫಾರಸು ಅನುಷ್ಠಾನಯೋಗ್ಯ

ಮೊಬೈಲ್ ನೆಟ್‌ವರ್ಕ್ ಸೇವೆಗಳನ್ನು ಒದಗಿಸುವ ಕಂಪನಿಗಳು, ಕರೆ ಮಾಡುವ ವ್ಯಕ್ತಿಯ ಹೆಸರು ಮೊಬೈಲ್ ಫೋನ್ ಪರದೆಯ ಮೇಲೆ ಕಾಣಿಸುವಂತೆ ಮಾಡುವ ಸೇವೆಯನ್ನು ಒದಗಿಸಬೇಕು ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಶಿಫಾರಸು ಮಾಡಿದೆ. ಹಲವು ಕಾರಣಗಳಿಗಾಗಿ ಇದು ಸ್ವಾಗತಾರ್ಹ ಶಿಫಾರಸು. ಕರೆ ಮಾಡಿದವರ ಹೆಸರು ಪರದೆಯ ಮೇಲೆ ಕಾಣಿಸುವಂತಾಗುವ ಸೇವೆಯನ್ನು ಇತರ ಸೇವೆಗಳ ಜೊತೆ ಪೂರಕ ಸೇವೆಯಾಗಿ ಒದಗಿಸಬೇಕು ಎಂದು ಟ್ರಾಯ್ ಹೇಳಿದೆ. ಇದನ್ನು ನೆಟ್‌ವರ್ಕ್ ಸೇವೆ ಒದಗಿಸುವ ಕಂಪನಿಗಳು ಪ್ರಾಯೋಗಿಕವಾಗಿ ಪರೀಕ್ಷಿಸಿ ನೋಡಬೇಕು. ನಂತರ ಅದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಬೇಕು ಎಂದು ಟ್ರಾಯ್ ಹೇಳಿದೆ. ಹೆಸರನ್ನು ಯಾವ ರೀತಿಯಲ್ಲಿ ತೋರಿಸಬೇಕು, ವಾಣಿಜ್ಯ ಉದ್ದೇಶಕ್ಕಾಗಿ ಪಡೆದ ಸಿಮ್‌ಗಳಿಗೆ ಸಂಬಂಧಿಸಿದ ಹೆಸರನ್ನು ಯಾವ ರೀತಿಯಲ್ಲಿ ತೋರಿಸಬೇಕು ಎಂಬ ವಿಚಾರವಾಗಿಯೂ ಟ್ರಾಯ್ ವಿವರಗಳನ್ನು ನೀಡಿದೆ. ಈ ಶಿಫಾರಸುಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸಿ, ಶಿಫಾರಸುಗಳಿಗೆ ಅಧಿಕೃತ ರೂಪವನ್ನು ಇನ್ನಷ್ಟೇ ನೀಡಬೇಕಿದೆ. ಹಾಗೆಯೇ, ಪರವಾನಗಿಯ ನಿಯಮಗಳಿಗೆ ದೂರಸಂಪರ್ಕ ಇಲಾಖೆಯು ಅಗತ್ಯ ಬದಲಾವಣೆಗಳನ್ನು ತರಬೇಕಿದೆ. ನಿಯಮಗಳು ಅಧಿಸೂಚನೆಯಲ್ಲಿ ಪ್ರಕಟವಾದ ನಂತರ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿಗಳು ಈ ಸೌಲಭ್ಯವನ್ನು ತಮ್ಮ ಸ್ಮಾರ್ಟ್‌ಫೋನ್‌ಗಳಲ್ಲಿ ಅಳವಡಿಸುವ ಕೆಲಸವನ್ನು ಕಾಲಮಿತಿಯಲ್ಲಿ ಮಾಡಬೇಕಿದೆ.

ಅನಪೇಕ್ಷಿತ ಕರೆಗಳ ಸಮಸ್ಯೆ ತಲೆನೋವಾಗಿ ಪರಿಣಮಿಸಿದೆ. ಈ ಶಿಫಾರಸುಗಳ ಅನುಷ್ಠಾನದಿಂದ ಈ ಸಮಸ್ಯೆಯನ್ನು ನಿಭಾಯಿಸಲು ಸಾಧ್ಯವಾಗಬಹುದು

ಈ ಶಿಫಾರಸುಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ತಂದಲ್ಲಿ, ತಲೆನೋವಾಗಿ ಪರಿಣಮಿಸಿರುವ ಅನಪೇಕ್ಷಿತ ಕರೆಗಳ (ಸ್ಪ್ಯಾಮ್ ಕರೆ) ಸಮಸ್ಯೆಯನ್ನು ನಿಭಾಯಿಸಲು ಇದು ನೆರವಾಗಬಹುದು. ತಮಗೆ ಕರೆ ಮಾಡಿರುವವರು ಯಾರು ಎಂಬುದನ್ನು ತಿಳಿದುಕೊಳ್ಳಲು ಸ್ಮಾರ್ಟ್‌ಫೋನ್ ಹಾಗೂ ಫೀಚರ್ ಫೋನ್ ಬಳಕೆದಾರರು ಈಗ ಖಾಸಗಿ ಆ್ಯಪ್‌ಗಳನ್ನು ನೆಚ್ಚಿಕೊಳ್ಳಬೇಕಾಗಿದೆ. ಅನಪೇಕ್ಷಿತ ಕರೆಗಳು ಖಾಸಗಿತನಕ್ಕೆ ಧಕ್ಕೆ ತರುತ್ತಿವೆ ಮತ್ತು ಸೈಬರ್ ವಂಚನೆಗೆ ಒಂದು ಮಾರ್ಗವನ್ನು ಕೂಡ ಕಲ್ಪಿಸಿಕೊಡುತ್ತಿವೆ. ಸೈಬರ್ ವಂಚನೆಯ ಪ್ರಕರಣಗಳು ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ವರದಿಯಾಗುತ್ತಿವೆ. ಸಮೀಕ್ಷೆಯೊಂದರಲ್ಲಿ ಪಾಲ್ಗೊಂಡಿದ್ದವರ ಪೈಕಿ ಶೇಕಡ 47ರಷ್ಟು ಮಂದಿ ಕೃತಕ ಬುದ್ಧಿಮತ್ತೆಯ ನೆರವಿನಿಂದ ಸೃಷ್ಟಿಸಿದ ವಂಚನೆಯ ಉದ್ದೇಶದ ಧ್ವನಿ ಕರೆಗಳನ್ನು ತಾವು ಸ್ವೀಕರಿಸಿದ್ದಾಗಿ ಅಥವಾ ಅಂತಹ ಕರೆಗಳನ್ನು ಸ್ವೀಕರಿಸಿದ್ದವರ ಬಗ್ಗೆ ತಮಗೆ ತಿಳಿದಿರುವುದಾಗಿ ಹೇಳಿದ್ದಾರೆ ಎಂದು ಕಂಪ್ಯೂಟರ್‌ಗಳಿಗೆ ಆ್ಯಂಟಿವೈರಸ್ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವ ಮೆಕ್‌ಅಫೆ ಕಂಪನಿ ಹೇಳಿದೆ. ಇದು ಭಾರತಕ್ಕೆ ಸಂಬಂಧಿಸಿದ ಅಂಕಿ-ಅಂಶ. ಇದು ಜಾಗತಿಕ ಮಟ್ಟದಲ್ಲಿ ಇಂತಹ ಅನುಭವ ಹೊಂದಿರುವ ಶೇ 25ರಷ್ಟು ಜನರ ಪ್ರಮಾಣಕ್ಕಿಂತ ಹೆಚ್ಚು. ಇಲ್ಲಿ ಸಮಸ್ಯೆ ಇರುವುದು ಹಣಕಾಸಿನ ನಷ್ಟದ್ದೊಂದೇ ಅಲ್ಲ. ವ್ಯಕ್ತಿಯ ಖಾಸಗಿ ದತ್ತಾಂಶಗಳಾದ ಆಧಾರ್ ಸಂಖ್ಯೆ, ಪ್ಯಾನ್ ಸಂಖ್ಯೆಯನ್ನು ಕದಿಯುವ ಕೆಲಸವನ್ನೂ ಇಂತಹ ಕರೆಗಳ ಮೂಲಕ ಮಾಡಲಾಗಿದೆ.

ಕರೆ ಮಾಡಿದ ವ್ಯಕ್ತಿ ಯಾರು ಎಂಬುದು ಗೊತ್ತಾಗದೆ ಇದ್ದಾಗ, ಅವರ ಜೊತೆ ಮಾತನಾಡುವುದು ಹಲವರ ಪಾಲಿಗೆ, ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ಮಾನಸಿಕ ಒತ್ತಡ ತರುವ ಕೆಲಸವಾಗಬಹುದು. ಕರೆಯನ್ನು ಸ್ವೀಕರಿಸುವ ವ್ಯಕ್ತಿಗೆ ತನಗೆ ಕರೆ ಮಾಡುತ್ತಿರುವವರು ಯಾರು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಇರಬೇಕು. ಆಗ ಆ ವ್ಯಕ್ತಿ ಕರೆಯನ್ನು ಸ್ವೀಕರಿಸಲು ಮಾನಸಿಕವಾಗಿ ಸಿದ್ಧವಾಗಿರುತ್ತಾನೆ. ಕರೆ ಮಾಡುತ್ತಿರುವ ವ್ಯಕ್ತಿಯ ಗುರುತು ಗೊತ್ತಾಗದೆ ಇದ್ದಲ್ಲಿ, ಆ ಅಪರಿಚಿತನಿಗೆ ಕರೆ ಸ್ವೀಕರಿಸಿದವನ ಖಾಸಗಿ ಬದುಕಿನಲ್ಲಿ ಮೂಗು ತೂರಿಸಲು ಒಂದು ಅವಕಾಶ ಇರುತ್ತದೆ. ಹಾಗಾಗಿ, ಇಲ್ಲಿ ಖಾಸಗಿತನಕ್ಕೆ ಸಂಬಂಧಿಸಿದ ವಿಚಾರಗಳೂ ಮಿಳಿತಗೊಂಡಿವೆ. ಆದರೆ, ಹೊಸ ವ್ಯವಸ್ಥೆಯಲ್ಲಿ ಕರೆ ಮಾಡಿದವರ ಖಾಸಗಿತನಕ್ಕೆ ಧಕ್ಕೆ ತರುವ ಅಂಶಗಳು ಇವೆ, ಮಹಿಳೆಯರ ಸುರಕ್ಷತೆಯ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು ಎಂದು ಖಾಸಗಿ ಸೇವಾ ಕಂಪನಿಗಳು ಹೇಳಿವೆ. ಕರೆ ಮಾಡಿದ ವ್ಯಕ್ತಿಯು ತನ್ನ ಗುರುತನ್ನು ಬಿಟ್ಟುಕೊಡದೆ ಇರುವುದಕ್ಕೆ ಹಲವು ಕಾರಣಗಳು ಇವೆ ಎಂದು ಅವು ಹೇಳುತ್ತಿವೆ. ಕೆಲವು ಕಾರಣಗಳು ಗಂಭೀರವಾದವು ಕೂಡ ಆಗಿರಬಹುದು. ಆದರೆ, ಕರೆ ಮಾಡಿದವನ ಹೆಸರನ್ನು ಪರದೆಯ ಮೇಲೆ ತೋರಿಸುವ ಸೌಲಭ್ಯವು, ಹೆಸರು ತೋರಿಸದೆ ಇರುವುದಕ್ಕಿಂತ ಹೆಚ್ಚು ಅನುಕೂಲಗಳನ್ನು ಕಲ್ಪಿಸಬಲ್ಲದು. ಹೊಸ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಸಮಸ್ಯೆಗಳು ಕೂಡ ಇವೆ ಎಂದು ಕಂಪನಿಗಳು ಹೇಳಿವೆ. ಆದರೆ ಶಿಫಾರಸನ್ನು ವಿರೋಧಿಸುವ ಸಂದರ್ಭದಲ್ಲಿ ಕಂಪನಿಗಳ ಮನಸ್ಸಿನಲ್ಲಿ ಇರುವುದು ಹಣಕಾಸಿನ ಲೆಕ್ಕಾಚಾರಗಳು ಮಾತ್ರ ಎಂದು ಭಾಸವಾಗುತ್ತಿದೆ.

ಫೇಲ್ ಆಗಿರುವುದು ನಮ್ಮ ಶಿಕ್ಷಣ ವ್ಯವಸ್ಥೆಯೇ ವಿನಾ ಮುಗ್ಧ ಮಕ್ಕಳಲ್ಲ!

ಬೋರ್ಡ್ ಪರೀಕ್ಷೆ ಮತ್ತು ಕಲಿಕೆ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಸೂರಿಲ್ಲದ ಕಟ್ಟಡ, ಕಟ್ಟಡ ಕುಸಿದು ವಿದ್ಯಾರ್ಥಿ ಸಾವು, ಶೂನ್ಯ ಶಿಕ್ಷಕರ ಶಾಲೆಗಳು ನೂರಾರು, ಮಕ್ಕಳಿಗೆ ಕೂರಲು ಕನಿಷ್ಠ ಮಣೆಯೂ ಇಲ್ಲ, ಹಲವು ಶಾಲೆಗಳಲ್ಲಿ ಕುಡಿಯುವ ನೀರಿಲ್ಲ, 1ರಿಂದ 5ನೇ ತರಗತಿಯವರೆಗೆ ಒಬ್ಬನೇ ಶಿಕ್ಷಕ, ಶಿಕ್ಷಕರಿಗೆ ಚುನಾವಣಾ ಕೆಲಸ: ಕಲಿಕೆಗೆ ಕೊಕ್!, ಕೆಪಿಎಸ್ ಶಾಲೆಯಲ್ಲಿ ಕಲಿಸಲು ಶಿಕ್ಷಕರೇ ಇಲ್ಲ, ಅನಧಿಕೃತ ಶಾಲೆಗಳ ಹಾವಳಿ, ಶುಲ್ಕ ಪಾವತಿಸದ ಖಾಸಗಿ ಶಾಲಾ ಮಕ್ಕಳಿಗೆ ಪರೀಕ್ಷೆಗೆ ಕೂರಲು ಅವಕಾಶ ನಿರಾಕರಣೆ, ಪರೀಕ್ಷೆಯಲ್ಲಿ ಫೇಲಾದ 8ನೇ ತರಗತಿಯ ಮಗು ನೇಣಿಗೆ ಶರಣು... ದಿನಪತ್ರಿಕೆಗಳಲ್ಲಿ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾವು ಓದಿರುವಂತಹ ಮತ್ತು ವಸ್ತುಸ್ಥಿತಿಯನ್ನು ತೆರೆದಿಡುವ ಸುದ್ದಿಗಳ ತಲೆಬರಹದ ತುಣುಕುಗಳಿವು.

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಶಾಲೆ, ಕಾಲೇಜುಗಳಲ್ಲಿ ಕಲಿಯುತ್ತಿರುವ 5, 8, 9 ಹಾಗೂ 11ನೇ ತರಗತಿಯ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯನ್ನು ಬೋರ್ಡ್ ಮೂಲಕ ನಡೆಸಲು (ಪಬ್ಲಿಕ್ ಪರೀಕ್ಷೆ ಎಂದೇ ಜನಜನಿತ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೊರಡಿಸಿದ್ದ ಆದೇಶಕ್ಕೆ ಸಂಬಂಧಿಸಿದಂತೆ ನಡೆದಿರುವ ಬೆಳವಣಿಗೆಗಳು ಮತ್ತು ಪಬ್ಲಿಕ್ ಪರೀಕ್ಷೆ ನಡೆಸಲೇಬೇಕು ಎಂಬ ಸರ್ಕಾರದ ಮೊಂಡಾಟವನ್ನು ಈ ಸುದ್ದಿಗಳ ನೆಲೆಯಲ್ಲಿ ನಾವು ವಸ್ತುನಿಷ್ಠವಾಗಿ ಮತ್ತು ಪ್ರಾಮಾಣಿಕವಾಗಿ ವಿಶ್ಲೇಷಿಸಬೇಕಿದೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಸಂವಿಧಾನದ ಆಶಯವನ್ನು ಜಾರಿಗೊಳಿಸಲು ಶಿಕ್ಷಣ ಹಕ್ಕು ಮಸೂದೆಯನ್ನು 2009ರಲ್ಲಿ ರೂಪಿಸಿ, ಕಾಯ್ದೆಯನ್ನು 2010ರಲ್ಲಿ ಜಾರಿಗೊಳಿಸಿತು. ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ದೇಶವನ್ನು ಉದ್ದೇಶಿಸಿ ಭಾಷಣ ಮಾಡಿದಾಗ 'ಎಲ್ಲಾ ಮಕ್ಕಳಿಗೆ ಲಿಂಗ ಮತ್ತು ಸಾಮಾಜಿಕ ತಾರತಮ್ಯರಹಿತ ಶಿಕ್ಷಣವನ್ನು ಖಚಿತಪಡಿಸಲು ನಾವು ಬದ್ಧರಾಗಿದ್ದೇವೆ. ಮಕ್ಕಳು ಭಾರತದ ಜವಾಬ್ದಾರಿಯುತ ಮತ್ತು ಸಕ್ರಿಯ ನಾಗರಿಕರಾಗಲು ಅಗತ್ಯವಾದ ಕೌಶಲ, ಜ್ಞಾನ, ಮೌಲ್ಯಗಳು ಮತ್ತು ಮನೋಧರ್ಮವನ್ನು ಪಡೆದುಕೊಳ್ಳಲು ಶಿಕ್ಷಣ ಅನುವು ಮಾಡಿಕೊಡಬೇಕಿದೆ' ಎಂದು ಹೇಳಿದ್ದರು. ಇದು, ಈ ಕಾಯ್ದೆಯ ಮಹತ್ವವನ್ನು ಸಾರುವಂತಹದು.

ಈ ಕಾಯ್ದೆಯಲ್ಲಿನ ಒಂದು ಮಹತ್ವದ ಅಂಶವೆಂದರೆ, ಶಾಲೆಗೆ ಪ್ರವೇಶ ಪಡೆದ ಯಾವುದೇ ಮಗುವನ್ನು ಎಲಿಮೆಂಟರಿ ಶಿಕ್ಷಣ ಮುಗಿಯುವವರೆಗೆ ಯಾವುದೇ ತರಗತಿಯಲ್ಲಿ ನಪಾಸು ಮಾಡುವುದು ಅಥವಾ ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಮಗುವನ್ನು ಶಾಲೆಯಿಂದ ಹೊರಹಾಕುವುದು ಕಾನೂನುಬದ್ಧವಾಗಿ ನಿಷೇಧ. ಕಾರಣ, ಶಾಲೆಗೆ ಸೇರಿದ ಪ್ರತಿ ಮಗುವೂ ಕೊನೆಪಕ್ಷ ಎಂಟು ವರ್ಷಗಳು ಗುಣಮಟ್ಟದ ಶಾಲಾ ಶಿಕ್ಷಣ ಪಡೆಯಬೇಕು ಎಂಬುದು ಇದರ ಹಿಂದಿರುವ ಮಹದಾಶಯ. ಕಾಯ್ದೆಯಲ್ಲಿನ ಪ್ರತಿ ಮಹತ್ವದ ಅಂಶದ ಹಿಂದಿರುವ ಸಕಾರಣ ಮತ್ತು ತರ್ಕವನ್ನು ದಾಖಲೆಗಳಲ್ಲಿ ವಿವರಿಸಲಾಗಿದೆ. ಪಾಸು-ನಪಾಸಿನ ಬಗ್ಗೆ ಶಿಕ್ಷಕರಿಗೆ, ಶೈಕ್ಷಣಿಕ ಆಡಳಿತಗಾರರಿಗೆ ಮತ್ತು ಕಾರ್ಯಾಂಗದ ಪ್ರತಿನಿಧಿಗಳಿಗಿರುವ ತಪ್ಪುಕಲ್ಪನೆಯನ್ನು ತೊಡೆದುಹಾಕಲು ತಾತ್ವಿಕ ವಿವರಣೆಯನ್ನು ನೀಡಲಾಗಿದೆ.

ನಿರ್ದಿಷ್ಟ ಅಂಕಗಳನ್ನು ಪಡೆಯದ ಮಕ್ಕಳನ್ನು 'ಫೇಲ್' ಎಂದು ಘೋಷಿಸಿ, ಶೈಕ್ಷಣಿಕ ವ್ಯವಸ್ಥೆಯಿಂದ ಅವರನ್ನು ಹೊರದೂಡಲು ನಾವು ಪಬ್ಲಿಕ್ ಪರೀಕ್ಷೆಗಳನ್ನು ಆಯುಧವನ್ನಾಗಿ ಬಳಸುತ್ತಿದ್ದೇವೆ. ಪರೀಕ್ಷೆಗಳನ್ನು ನಡೆಸಲು ನಾವು ತೋರುವ ಅಪರಿಮಿತ ಉತ್ಸಾಹ ಅಥವಾ ಕಟ್ಟುನಿಟ್ಟಿನ ಕ್ರಮಗಳನ್ನು ಕಲಿಸುವ ವಿಷಯದಲ್ಲಿ ಏಕೆ ತೋರುವುದಿಲ್ಲ ಎಂಬ ಪ್ರಶ್ನೆಗೆ ನಮ್ಮ ಪರಿಕ್ಷಾ ಕಲಿಗಳು ಉತ್ತರಿಸುವುದಿಲ್ಲ. ಕಾರಣ, ಪರೀಕ್ಷೆ ನಡೆಸುವುದು ಸುಲಭದ ಕೆಲಸ. ಕಲಿಸುವುದು, ಕಲಿಕೆಗೆ ಅಗತ್ಯ ಭೂಮಿಕೆ ಸಿದ್ಧಪಡಿಸುವುದು ಮತ್ತು ಕನಿಷ್ಠ ಮೂಲ ಸೌಕರ್ಯಗಳನ್ನು ಒದಗಿಸುವುದು ಅತ್ಯಂತ ಕಷ್ಟದ ಮತ್ತು ಸಂಪನ್ಮೂಲ ಬೇಡುವ ಕೆಲಸ.

ಒಂದು ನಿರ್ದಿಷ್ಟ ತರಗತಿಯಲ್ಲಿ ಮಕ್ಕಳು ಒಂದು ಪೂರ್ಣ ವರ್ಷ ಕಳೆದರೂ ಅವರು ಆಯಾ ತರಗತಿಯಲ್ಲಿ ಕಲಿಯಲೇಬೇಕಾದ ಕನಿಷ್ಠ ಕಲಿಕಾ ಮಟ್ಟವನ್ನು ಮುಟ್ಟಲು ಆಗದಿದ್ದರೆ ಅದಕ್ಕೆ ಹೊಣೆ ಯಾರು, ಸೋತಿದ್ದೆಲ್ಲಿ ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಲ್ಲವೇ? ನಮ್ಮ ಶೈಕ್ಷಣಿಕ ವ್ಯವಸ್ಥೆ ಹಾಗೂ ಶಿಕ್ಷಕರು ಮತ್ತು ಹಲವು ಹಂತಗಳಲ್ಲಿ ಕಲಿಕೆಯನ್ನು ನಿರಂತರ ಉಸ್ತುವಾರಿ ಮಾಡುವ ಸಿಆರ್‌ಸಿ, ಬಿಆರ್‌ಸಿ, ಡಯಟ್, ಸಿಟಿಇ, ಡಿಎಸ್‌ಇಆರ್‌ಟಿಯಂತಹವುಗಳು ಇಂತಹ ಪ್ರಶ್ನೆಗಳಿಗೆ ಉತ್ತರಿಸಬೇಕಾದ ನೈತಿಕ ಜವಾಬ್ದಾರಿಯನ್ನು ಹೊಂದಿವೆಯಲ್ಲವೇ? ಜವಾಬ್ದಾರಿಯಿಂದ ಜಾರಿಕೊಂಡು, ಮಕ್ಕಳನ್ನು ಬಲಿಪಶುಗಳನ್ನಾಗಿಸಲು ಪರೀಕ್ಷೆ ಸುಲಭದ ಅಸ್ತ್ರವಾಗಿದೆ. ಇದು, ಮಕ್ಕಳ ಆಸಕ್ತಿ, ಉತ್ಸಾಹವನ್ನು ಕೊಂದು ಕಲಿಕೆಗೆ ಅವರನ್ನು ವಿಮುಖರನ್ನಾಗಿಸುವ ಸಾಧನದಂತಿದೆ.

ಮಕ್ಕಳು ಶಾಲೆಗೆ ಬರುವುದು ಕಲಿಯುವುದಕ್ಕೇ ವಿನಾ ನಪಾಸಾಗಲು ಅಲ್ಲ. ಒಂದು ವರ್ಷದ ನಂತರವೂ ಮಗು ಕಲಿಯಲಿಲ್ಲವೆಂದರೆ, ನಪಾಸಾಗಿದ್ದು ಮಗುವಲ್ಲ, ನಮ್ಮ ವ್ಯವಸ್ಥೆ, ಅದರ ಭಾಗವಾಗಿರುವ ನಾವು ಮತ್ತು ವ್ಯವಸ್ಥೆಯಲ್ಲಿನ ಕಟ್ಟಾಳುಗಳು ಎಂಬ ಸತ್ಯವನ್ನು ನಾವು ಅರಿಯಬೇಕಿದೆ. ಮಗುವನ್ನು ಒಮ್ಮೆ ನಾವು 'ಫೇಲ್' ಎಂದು ಘೋಷಿಸಿದರೆ, ಫೇಲ್ ಅಥವಾ ಪಾಸ್ ಎಂದರೆ ಏನೇನೂ ಅರ್ಥವಾಗದ ಚಿಕ್ಕ ವಯಸ್ಸಿನ ಮಗುವಿನ ಮನಸ್ಸಿನ ಮೇಲೆ ನಾವು ಮಾಡಬಹುದಾದ ಗಾಯದ ಬಗ್ಗೆ ಆಲೋಚಿಸಬೇಕಿದೆ. 'ನೀನು ಕಲಿಯಲು ಅನರ್ಹ' ಎಂಬ ಸಂದೇಶವನ್ನು ಮಗುವಿನ ಒಳಮನಸ್ಸಿಗೆ ಸದ್ದಿಲ್ಲದೆ ಮುಟ್ಟಿಸಿರುತ್ತೇವೆ. ಒಳಮನಸ್ಸಿನ ಮೇಲಾಗುವ- ಕಣ್ಣಿಗೆ ಕಾಣದ- ಈ ಗಾಯವು ಸೂಕ್ಷ್ಮಮತಿ ಮಕ್ಕಳು ಶಾಲೆಯನ್ನು ತೊರೆಯುವಂತೆ ಮಾಡುವ ಸಾಧ್ಯತೆ ಇದೆ. ಕಲಿಯಲು ಬಂದ ಮಕ್ಕಳನ್ನು ನಾವು ಅವೈಜ್ಞಾನಿಕ ವಿಧಾನದಿಂದ 'ನೀವು ಸೋಲಿಗೆ ಯೋಗ್ಯರು' ಎಂಬ ಹಣೆಪಟ್ಟಿ ಹಚ್ಚಿ ಹೊರಹಾಕುವ ವ್ಯವಸ್ಥೆಯನ್ನು ಶಿಕ್ಷಣ ವ್ಯವಸ್ಥೆ ಎಂದು ಕರೆಯಬೇಕೇ ಎಂಬುದರ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ.



ಶಿಕ್ಷಣ ಹಕ್ಕು ಕಾಯ್ದೆ ಪ್ರತಿಪಾದಿಸುವ ಫೇಲ್ ಇಲ್ಲದ ಕಲಿಕಾ ನೀತಿ ಮತ್ತು ಕಲಿಸುವ ವ್ಯವಸ್ಥೆಯ ಬಗ್ಗೆ ಯೋಚಿಸಬೇಕಿದೆ. ಅನುತ್ತೀರ್ಣಗೊಳಿಸಬಾರದು ಎಂದರೆ, ಕಲಿಸಬಾರದು ಎಂದು ಅರ್ಥವಲ್ಲ ಅಥವಾ ಮಕ್ಕಳ ಕಲಿಕೆಯನ್ನು ಅರಿತುಕೊಳ್ಳುವ ಅಥವಾ ನಿರ್ಣಯಿಸುವ ಕಾರ್ಯವಿಧಾನಗಳನ್ನು ತ್ಯಜಿಸಬೇಕೆಂತಲೂ ಅಲ್ಲ. ಬದಲಿಗೆ, ಆರು ತಿಂಗಳಿಗೊಮ್ಮೆ ಅಥವಾ ವರ್ಷಕ್ಕೊಮ್ಮೆ ಬೋರ್ಡ್ ಅಥವಾ ಪಬ್ಲಿಕ್ ಪರೀಕ್ಷೆಗಳನ್ನು ನಡೆಸುವ ಬದಲು ಕಲಿಕೆ ಹೇಗೆ ನಿತ್ಯ ನಿರಂತರವೋ ಅದೇ ರೀತಿಯಲ್ಲಿ ಮೌಲ್ಯಮಾಪನವೂ ನಿತ್ಯನಿರಂತರವಾಗಿರಬೇಕು ಎಂಬುದು ಆರ್‌ಟಿಇ ಕಾಯ್ದೆಯ ಆಶಯ. ಅದಕ್ಕಾಗಿಯೇ, ದೇಶದಲ್ಲಿ ಮೊದಲ ಬಾರಿಗೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವನ್ನು (ಸಿಸಿಇ) ಒಂದು ಕಾನೂನುಬದ್ಧ ಅವಕಾಶವನ್ನಾಗಿ ಕಾಯ್ದೆಯಲ್ಲಿ ಕಲ್ಪಿಸಲಾಗಿದೆ.

ಶಿಕ್ಷಣ ಹಕ್ಕು ಕಾಯ್ದೆಯಲ್ಲಿನ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ವಿಧಾನವು ಆತಂಕ, ಭಯ ಮತ್ತು ಒತ್ತಡವಿಲ್ಲದ ವಾತಾವರಣದಲ್ಲಿ ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಶಿಕ್ಷಕರೇ ಪ್ರೀತಿ- ವಿಶ್ವಾಸದಿಂದ ನಡೆಸುವ ಮೌಲ್ಯಮಾಪನವಾಗಿರುತ್ತದೆ. ಇದು, ಭಯ-ಬೆದರಿಕೆಮುಕ್ತ ಕಾರ್ಯವಿಧಾನವಾಗಿದೆ. ಮಗುವನ್ನು ಭಯ ಮತ್ತು ವೈಫಲ್ಯದ ಆಘಾತದಿಂದ ಬಿಡುಗಡೆ ಮಾಡುತ್ತದೆ. ಮಗುವಿನ ಕಲಿಕೆ ಮತ್ತು ಕಾರ್ಯಕ್ಷಮತೆಯ ಬಗ್ಗೆ ವೈಯಕ್ತಿಕ ಗಮನವನ್ನು ನೀಡಲು ಕಲಿಸಿದ ಶಿಕ್ಷಕರಿಗೆ ಅನುವು ಮಾಡಿಕೊಡುತ್ತದೆ. ಈ ವ್ಯವಸ್ಥೆಯು ಪಾಸು, ನಪಾಸು, ಶಿಕ್ಷೆ, ವೈಫಲ್ಯ, ಭಯ ಮತ್ತು ಯೋಗ್ಯರಲ್ಲ ಎಂಬ ಹಣೆಪಟ್ಟಿಯನ್ನು ಹಚ್ಚುವ ಬದಲು, ನಿರಂತರವಾಗಿ ಗುಣ-ಮಟ್ಟವನ್ನು ಸುಧಾರಿಸುವ ಅತ್ಯುತ್ತಮ ವಿಧಾನವಾಗಿದೆ. ಹಾಗೊಮ್ಮೆ, ಮಗುವಿನ ಕಲಿಕೆಯಲ್ಲಿ ನಿಧಾನಗತಿ ಅಥವಾ ತೊಂದರೆಯಿದ್ದಲ್ಲಿ ಅದು ಯಾವುದೇ ಅಂತರ್ಗತ ನ್ಯೂನತೆಯಿಂದಾಗಿ ಅಲ್ಲ. ಬದಲಿಗೆ, ಅಸಮರ್ಪಕ ಕಲಿಕಾ ಪರಿಸರ, ಕನಿಷ್ಠ ಸೌಕರ್ಯಗಳಾದ ಶಿಕ್ಷಕರು, ಪಾಠೋಪಕರಣ ಮತ್ತು ಕಲಿಕೆಗೆ ಪೂರಕವಾದ ಮೂಲ ಸೌಕರ್ಯಗಳ ಕೊರತೆಯಿಂದ ಎಂಬುದನ್ನು ಅರಿಯಬೇಕಿದೆ.

ಈಗ ಹೇಳಿ, ನಾವು ಮಕ್ಕಳ ಕಲಿಕೆಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿ, ನಿರಂತರ ಕಲಿಸುವ ವೃತ್ತಿ ನೈಪುಣ್ಯವುಳ್ಳ ಶಿಕ್ಷಕರನ್ನು ಒದಗಿಸಿ, ಕಲಿಯುವ ಮಕ್ಕಳ ಕಲಿಕೆಯ ಮಟ್ಟವನ್ನು ನಿರಂತರ ಮೌಲ್ಯಮಾಪನದ ಮೂಲಕ ತಿಳಿದು ಮಕ್ಕಳು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಕಲಿಯಲು ನಿರಂತರವಾಗಿ ಕೈಹಿಡಿದು ನಡೆಸಬಹುದಾದ ಮಕ್ಕಳಸ್ನೇಹಿ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳಬೇಕೋ ಅಥವಾ ಮಕ್ಕಳನ್ನು ಆತಂಕ, ಭಯ ಮತ್ತು ಕೆಲವೊಮ್ಮೆ ಸಾವಿಗೆ ದೂಡುವ ಬೋರ್ಡ್ ಅಥವಾ ಪಬ್ಲಿಕ್ ಪರೀಕ್ಷೆ ಆಧಾರಿತ ಕಂಠಪಾಠದ ಮೂಲಕ ಮಕ್ಕಳ ಸೃಜನಶಕ್ತಿಯನ್ನೇ ಹೊಸಕಿಹಾಕುವ ಪರೀಕ್ಷೆ ಆಧಾರಿತ ಶಿಕ್ಷಣ ವ್ಯವಸ್ಥೆ ಬೇಕೋ?

ಚುರುಮುರಿ



ನೀರು ಮತ್ತು ನಾರಿ...

• ಬಿ.ಎನ್. ಮಲ್ಲೇಶ್

'ಹಲೋ... ಹ್ಯಾಪಿ ವುಮೆನ್ಸ್ ಡೇ ಕಣೆ ಪಮ್ಮಿ, ಏನ್ಮಾಡ್ತಿದೀಯ?'

'ಥ್ಯಾಂಕ್ಸ್ ಕಣೆ ಸುಮಿ, ಸೇಮ್ ಟು ಯೂ... ಆಮೇಲೆ ನಿಮ್ಮನೆ ಕಡೆ ನೀರು ಬಿಟ್ಟಿದ್ರಾ?'

'ಅಯ್ಯೋ ಇಲ್ಲ ಕಣೆ, ವಾರ ಆತು ತಲೆಸ್ನಾನ ಮಾಡಿ, ಬೋರ್‌ವೆಲ್ ನೀರು ಸರಿಹೋಗಲ್ಲ. ಪೇಪರ್ ನೋಡಿದ್ಯಾ? ಸೀಎಂ ಮನೀಗೇ ನೀರಿಲ್ಲಂತೆ, ಟ್ಯಾಂಕರ್ ಹಾಕುಸ್ತದಾರಂತೆ...'

'ಹೌದಂತೆ, ಈಗ್ಲೇ ಹಿಂಗಾದ್ರೆ ಮೇನಲ್ಲಿ ಇನ್ನೆಂಗೆ ಅಂತ...'

'ಎಲೆಕ್ಷನ್ ಟೈಮಲ್ವಾ, ಏನಾದ್ರು ಮಾಡ್ತಾರೆ ಬಿಡು, ಆಮೇಲೆ ಮೊನ್ನೆ ರಾತ್ರಿ ಎಷ್ಟು ಒದ್ದಾಡಿಬಿಟ್ಟೆ ಗೊತ್ತಾ?'

'ಯಾಕೆ ಏನಾತು? ಹೊಟ್ಟೇಲೇನಾದ್ರು ಗಡ್‌ಬಡ್?'

'ಅಯ್ಯೋ, ಅದಲ್ಲ ಮಾರಾಯ್ತಿ, ಎಷ್ಟ್ ಸಲ ಟ್ರೈ ಮಾಡಿದೆ ಗೊತ್ತಾ? ಸರಿಹೋಗ್ಲೇ ಇಲ್ಲ...'

'ಏನು ಕುಕ್ಕರಾ? ಅಥ್ವ ನಿನ್ ಸ್ಕೂಟರಾ?'

'ಅಲ್ವೆ, ನನ್ ಫೇಸ್ ಬುಕ್ಕು. ಒಂದು ರೀಲ್ಸ್ ಮಾಡಿ ಹಾಕಿದ್ದೆ. ಎಷ್ಟು ಲೈಕ್ ಬಂದಿದಾವೆ ನೋಡಾಣ ಅಂದ್ರೆ ಅದು ಆನ್ ಆಗ್ಲೇ ಇಲ್ಲ...'

'ನಿನ್ನೆಲಿ, ಅವತ್ತು ಎಲ್ಲರ ಮೊಬೈಲ್‌ನಲ್ಲೂ ಹಂಗೇ ಆಗಿತ್ತು. ಆಮೇಲೆ ಸರಿಹೋಯ್ತಲ್ಲ...'

'ಹುಂ... ಸರಿಹೋತು, ಅದಿರ್ಲಿ, ಐನೂರು ಕೋಟಿದು ನೆಕ್ಲೇಸ್ ನೋಡಿದ್ಯಾ?'

'ಏನು? ಐನೂರು ಕೋಟಿ ನೆಕ್ಲೇಸಾ? ಯಪ್ಪಾ... ಎಲ್ಲಿ?'

'ನಿನ್ನೆಲಿ, ನೀತು ಅಂಬಾನಿ ಮೇಡಮ್ಮು ಅವರ ಮಗನ ಮದುವೇಲಿ ಹಾಕಿದ್ದ ನೆಕ್ಲೇಸು ಐನೂರು ಕೋಟಿದಂತೆ. ಪೇಪರ್‌ನಲ್ಲಿ ಬಂದಿತ್ತು'.

'ಹೌದಾ? ನೆಕ್ಲೇಸ್ ಫೋಟೊ ಹಾಕಿದ್ರಾ? ನೋಡಾದ್ರು ಖುಷಿಪಡಬೋದಿತ್ತು...'

'ಹಾಕಿದ್ರು ಕಣೆ, ಸಖತ್ತಾಗಿದೆ, ಫುಲ್ ಡೈಮಂಡ್‌ದು ಅನ್ಸುತ್ತೆ...'

'ನಿನ್ ಗಂಡಂಗೂ ಅಂಥದೊಂದು ಕೊಡ್ಸಿ ಅಂತ ಕೇಳ್ಬೇಕಿತ್ತು?'

'ಹುಂ ಕೊಡಿಸ್ತಾರೆ, ಐನೂರು ಕೋಟಿಗೆ ಎಷ್ಟು ಸೊನ್ನೆ ಗೊತ್ತಾ ಅಂತ ಕೇಳಿದ್ರು...'

'ಸರಿ ಬಿಡು, ಇಷ್ಟೇ ನಮ್ ಹಣೆಬರ. ಆಮೇಲೆ ನೀರು ಬಿಟ್ರೆ ಹೇಳು, ಹ್ಯಾಪಿ ವುಮೆನ್ಸ್ ಡೇ ಒನ್ಸ್ ಅಗೇನ್... ಬೈ...' 'ಬೈ ಬೈ ಕಣೆ...'

ದಿನದ ಟ್ವೀಟ್

ಹೇಯ ಕೃತ್ಯ...

ತುಮಕೂರಿನಲ್ಲಿ ಜಾತ್ರೆಗೆ ಬಂದಿದ್ದ ಬಾಲಕಿಯ ಮೇಲೆ ನಡೆದಿರುವ ಸಾಮೂಹಿಕ ಅತ್ಯಾಚಾರ ಅತ್ಯಂತ ಹೇಯ ಹಾಗೂ ಪೈಶಾಚಿಕ ಕೃತ್ಯ. ಕಾಂಗ್ರೆಸ್ ಆಳ್ವಿಕೆಯಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿರುವುದಕ್ಕೆ ಇದೇ ಜ್ವಲಂತ ಉದಾಹರಣೆ. ಅತ್ಯಾಚಾರಿಗಳನ್ನು ಕಂಡಲ್ಲಿ ಗುಂಡಿಕ್ಕಿ, ಮುಂದೆಂದೂ ಈ ರೀತಿಯ ಕೃತ್ಯ ಎಸಗದೇ ಇರುವಂತೆ ಪೊಲೀಸರು ಕಾರ್ಯಾಚರಣೆ ನಡೆಸಲಿ.

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

ಕಿಡಿನುಡಿ

ಯಾರು ದೇಶಪ್ರೇಮಿ, ಯಾರು ದೇಶದ್ರೋಹಿ ಎಂಬ ಕುರಿತು ಬಿಜೆಪಿಯವರ ಸರ್ಟಿಫಿಕೇಟ್ ಬೇಕಿಲ್ಲ. ನಾವೆಲ್ಲರೂ ದೇಶಪ್ರೇಮಿಗಳೇ. ಯಾರೋ ಒಬ್ಬ ಕಿಡಿಗೇಡಿ ಮಾಡಿರುವ ಕೃತ್ಯಕ್ಕೆ ಅನವಶ್ಯಕವಾಗಿ ಎಲ್ಲರಿಗೂ ಪಟ್ಟಕಟ್ಟಬಾರದು. ಇಂಥದಕ್ಕೆ ಕ್ಷಮೆ ಇರುವುದಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವುದು ಖಚಿತ.

(ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ, ರಾಮೇಶ್ವರಂ ಕೆಫೆಯಲ್ಲಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ಬಿಜೆಪಿ ಮುಖಂಡರ ಟೀಕೆಗಳಿಗೆ ಪ್ರತಿಕ್ರಿಯೆ)

ದಿನೇಶ್ ಗುಂಡೂರಾವ್, ಸಚಿವ

25 ವರ್ಷಗಳ ಹಿಂದೆ

ಸೋಮವಾರ, 8-3-1999

● **ದೆಹಲಿ ಬಳಿ ವಿಮಾನ ಸ್ಫೋಟ: 22 ಸಾವು**

ನವದೆಹಲಿ, ಮಾರ್ಚ್ 7 (ಪಿಟಿಐ, ಯುಎನ್‌ಐ)– ಭಾರತೀಯ ವಾಯುಪಡೆಗೆ ಸೇರಿದ ಎಎನ್-32 ಸರಕು ಸಾಗಣೆ ವಿಮಾನವು ಇಂದಿರಾ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೆಲವೇ ಕಿ.ಮೀ. ಅಂತರದಲ್ಲಿ ಇಂದು ಬೆಳಿಗ್ಗೆ ನಿರ್ಮಾಣ ಹಂತದಲ್ಲಿದ್ದ ನೀರಿನ ಮೇಲುತೊಟ್ಟಿ ಹಾಗೂ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ ನಂತರ ಸ್ಫೋಟಗೊಂಡು ಬೆಂಕಿ ಉಂಡೆಯಂತೆ ಉರಿದಾಗ, ಅದರಲ್ಲಿದ್ದ ಎಲ್ಲ 19 ಮಂದಿ ವಾಯುಪಡೆಯ ಸಿಬ್ಬಂದಿ ಸೇರಿ 22 ಜನ ದುರ್ಮರಣಕ್ಕೀಡಾದರು.

ನಾಲ್ವರು ಚಾಲಕ ಸಿಬ್ಬಂದಿಯೂ ಸೇರಿ ವಿಮಾನದೊಳಗಿದ್ದ ಎಲ್ಲ 19 ಮಂದಿ ಸತ್ತಿದ್ದಾರೆ. ವಿಮಾನ ಅಪ್ಪಳಿಸುವ ವೇಳೆ ನೆಲದ ಮೇಲಿದ್ದ ಮಹಿಳೆ ಮತ್ತು ಇಬ್ಬರು ಮಕ್ಕಳು ಸಜೀವ ದಹನವಾದರು. ಬೆಂಕಿ ಹೊತ್ತಿ ಉರಿಯುತ್ತಿದ್ದ ವಿಮಾನದ ಅವಶೇಷಗಳು ಜೋಪಡಿಗಳ ಮೇಲೆ ಬಿದ್ದ ಕಾರಣ ಕನಿಷ್ಠ 12 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

● **ಬಿಹಾರ: ಪ್ರಧಾನಿ ಮನವಿಗೆ ಸೋನಿಯಾ ನಕಾರ**

ನವದೆಹಲಿ, ಮಾರ್ಚ್ 7 (ಪಿಟಿಐ, ಯುಎನ್‌ಐ)– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿ, ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಿದ ನಿರ್ಣಯಕ್ಕೆ ರಾಜ್ಯಸಭೆಯಲ್ಲಿ ಬೆಂಬಲ ನೀಡುವಂತೆ ಮಾಡಿದ ಮನವಿ ವಿಫಲವಾಯಿತು.

ನಂತರ ನಡೆದ ಸಚಿವ ಸಂಪುಟ ಸಭೆಯಲ್ಲಿ ಬಿಹಾರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಅಂತ್ಯಗೊಳಿಸಲು ಎಲ್ಲ ಸದಸ್ಯರೂ ಅಭಿಪ್ರಾಯಪಟ್ಟರು ಎಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 8-3-1974

● **ಭತ್ತ-ಅಕ್ಕಿ ಬಿಟ್ಟು ಮಿಕ್ಕೆಲ್ಲ ಆಹಾರ ಧಾನ್ಯಗಳ ಸಾಗಣೆ ನಿರ್ಬಂಧ ರದ್ದು**

ಬೆಂಗಳೂರು, ಮಾರ್ಚ್ 7– ಭತ್ತ ಮತ್ತು ಅಕ್ಕಿಯನ್ನು ಬಿಟ್ಟು ಉಳಿದ ಎಲ್ಲ ಆಹಾರ ಧಾನ್ಯಗಳ ಸಾಗಾಣಿಕೆಯ ಮೇಲಿದ್ದ ನಿರ್ಬಂಧವನ್ನು ತೆಗೆದುಹಾಕಲಾಗಿದೆಯೆಂದು ಆಹಾರ ಸಚಿವ ಕೆ.ಎಚ್.ಪಾಟೀಲ್ ಅವರು ಇಂದು ವಿಧಾನ ಪರಿಷತ್ತಿನಲ್ಲಿ ಪ್ರಕಟಿಸಿದರು.

ಈ ನಿರ್ಬಂಧವನ್ನು ತೆಗೆದು ಹಾಕಿರುವುದರಿಂದ ಗೋಧಿ ಹಾಗೂ ಗೋಧಿ ಪದಾರ್ಥಗಳು, ಜೋಳ ಮತ್ತು ಒರಟು ಧಾನ್ಯವನ್ನು ರಾಜ್ಯದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಯಾವ ಅಡ್ಡಿ ಅಡಚಣೆ ಇಲ್ಲದೆ ಸಲೀಸಾಗಿ ಸಾಗಿಸಲು ಸಾಧ್ಯವಾಗುತ್ತದೆ.

● **ಟಿ.ಟಿ. ಕೃಷ್ಣಮಾಚಾರಿ ನಿಧನ**

ಮದ್ರಾಸು, ಮಾರ್ಚ್ 7– ಕೇಂದ್ರದ ಮಾಜಿ ಹಣಕಾಸು ಸಚಿವ ತಿರುವಳ್ಳೂರುತೊಟ್ಟೈ ಕೃಷ್ಣಮಾಚಾರಿ ಅವರು ಇಂದು ಮಧ್ಯಾಹ್ನ ನಿಧನರಾದರು.

74 ವರ್ಷವಾಗಿದ್ದ ಅವರಿಗೆ ಕಳೆದ ಮೇ ತಿಂಗಳಲ್ಲಿ ಹೃದಯಾಘಾತ ಸಂಭವಿಸಿತ್ತು. ಆನಂತರ ಅವರ ಆರೋಗ್ಯ ತೃಪ್ತಿಕರವಾಗಿರ-ಲಿಲ್ಲ. ಕಳೆದ ಶನಿವಾರ ಅವರ ಮೂತ್ರಕೋಶ ನಿಷ್ಕ್ರಿಯವಾಯಿತು. ಮೂತ್ರ ವಿಸರ್ಜನೆ ನಿಂತು ಹೋಯಿತು. ನಿನ್ನೆ ಸಂಜೆ ಉಸಿರಾಡುವುದರಲ್ಲೂ ಕಷ್ಟ ಕಾಣಿಸಿಕೊಂಡಿತು.

ಇಂದು ಮಧ್ಯಾಹ್ನ 12.55ಕ್ಕೆ ಟಿ.ಟಿ.ಕೆ ಅವರು ದೈವಾಧೀನರಾದರು.

ಸಂಗತ

ಬುಡಕಟ್ಟಿನ ಬಿಗಿಕಟ್ಟು ಈ 'ಬಡಾದೀದಿ'

ಮಹಿಳಾ ಸಬಲೀಕರಣಕ್ಕೆ ಮಾದರಿಯಂತಿದ್ದಾರೆ ಒಡಿಶಾದ ಯುವತಿ ಜಯಂತಿ

• ಶ್ರೀಗುರು

ಆಕೆ ಒಡಿಶಾದ ಕೋಯ ಬುಡಕಟ್ಟು ಸಮುದಾಯದ ಯುವತಿ. ಹಲವಾರು ಕಷ್ಟಗಳನ್ನು ಎದುರಿಸಿ ವಿದ್ಯೆ ಗಳಿಸಿ ತನ್ನಂತಹ ಸಾವಿರಾರು ಜನರಿಗೆ ದನಿಯಾದವರು. ಪತ್ರಿಕೋದ್ಯಮಕ್ಕೆ ಕಾಲಿಟ್ಟು ತನ್ನವರ ಕಷ್ಟನಷ್ಟಗಳಿಗೆ ಸ್ಪಂದಿಸುತ್ತ, ಮಹಿಳಾ ಸಬಲೀಕರಣ ಎಂದರೆ ಹೇಗಿರಬೇಕು ಎಂಬುದಕ್ಕೆ ಮಾದರಿಯಂತಿರುವ ಆಕೆಯ ಹೆಸರು ಜಯಂತಿ ಬುರುಡ. ರಾಜಧಾನಿ ಭುವನೇಶ್ವರದ ಕಳಿಂಗ ಟಿ.ವಿ. ವಾಹಿನಿಯಲ್ಲಿ ಕೆಲಸ ಮಾಡುತ್ತ, ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶಗಳ ಜನರ ನೋವಿಗೆ ದನಿಯಾಗುತ್ತ, ಅವರನ್ನೆಲ್ಲ ಮುಖ್ಯ ವಾಹಿನಿಗೆ ತರಬೇಕೆನ್ನುವ ಆಕಾಂಕ್ಷೆಯಿಂದ ಅವಿರತ ಪ್ರಯತ್ನ ಮಾಡುತ್ತಿದ್ದಾರೆ.

ಬಾಲ್ಯದಲ್ಲಿಯೇ 'ಜನರ ನೋವಿಗೆ ಮಿಡಿಯುವ ಕೆಲಸ ಹಿಡಿಯುತ್ತೇನೆ. ಅದಕ್ಕಾಗಿ ನಾನು ಪತ್ರಿಕೋದ್ಯಮ ಕೋರ್ಸ್ ಓದಬೇಕು' ಎಂದಾಗ, ಬಡವರಾದ ತಂದೆ ತಾಯಿ 'ಅದೆಲ್ಲಿಂದ ಸಾಧ್ಯ, ಸಾವಿರಾರು ರೂಪಾಯಿ ಖರ್ಚಾಗುತ್ತದೆ. ಅದನ್ನೆಲ್ಲ ಬಿಟ್ಟು ಮದುವೆ ಮಾಡಿಕೊಂಡು ಕಣ್ಣ ಮುಂದೆಯೇ ಇರು' ಎಂದು ಗದರಿದರು. ಇವರ ಮಾತು ಕೇಳಿದರೆ ತನ್ನ ಜನರಿಗೆ ನೆರವಾಗುವ ದಿನ ಜೀವನದಲ್ಲಿ ಬರುವುದೇ ಇಲ್ಲ ಎಂದು ನಿರ್ಧರಿಸಿ, ರಾತ್ರೋರಾತ್ರಿ ಮನೆ ಬಿಟ್ಟು ಜಿಲ್ಲಾ ಕೇಂದ್ರದ ಬುಡಕಟ್ಟು ಯುವತಿಯರ ವಸತಿ ಕೇಂದ್ರದಲ್ಲಿ ಆಶ್ರಯ ಪಡೆದ ಆಕೆ, ಕೊರಾಪುಟ್‌ನ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ದಾಖಲಾದರು. ಹಾಸ್ಟೆಲ್‌ನ ದೀದಿಯರು ಅವರ ಶುಲ್ಕ ಭರಿಸಿದರು. ಮಲಕನಗಿರಿ ಜಿಲ್ಲೆಯ ಪುಟ್ಟಹಳ್ಳಿ ಸೆರ್‌ಪಾಲಿಯ ಜಯಂತಿ, 'ನೆಟ್‌ವರ್ಕ್ ಆಫ್ ವಿಮೆನ್ ಇನ್ ಮೀಡಿಯಾ, ಇಂಡಿಯಾ'ದ ಪ್ರಪ್ರಥಮ ಫೆಲೋಶಿಪ್ ಪಡೆದು, ಪತ್ರಿಕೋದ್ಯಮದಲ್ಲಿ ಪದವಿ ಗಳಿಸಿ ಕೆಲಸಕ್ಕೂ ಸೇರಿಕೊಂಡರು.

ಮುಖ್ಯವಾಹಿನಿಯ ಪತ್ರಿಕೆ, ದೃಶ್ಯವಾಹಿನಿಗಳು ಬುಡಕಟ್ಟು ಜನರ ಸ್ಥಿತಿಗತಿಗಳ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳುವುದಿಲ್ಲ ಎಂಬುದು ಕೆಲಸ ಶುರುಮಾಡಿದ ಕೆಲವೇ ತಿಂಗಳುಗಳಲ್ಲಿ ಜಯಂತಿಗೆ ಅರಿವಾಯಿತು. ಮಾಧ್ಯಮಗಳಿಗೆ ಏನಿದ್ದರೂ ರೋಚಕ ಸುದ್ದಿ ಬೇಕು, ಅಂತೆಯೇ ಮಲಕನಗಿರಿ ಜಿಲ್ಲೆಯ ಮಾವೋವಾದಿಗಳ ಕುರಿತಾದ ಸುದ್ದಿ, ಕತೆಗಳ ಬಗ್ಗೆ ತೀವ್ರ ಆಸಕ್ತಿ ಇತ್ತೇ ವಿನಾ ಬುಡಕಟ್ಟು ಜನರ ಸಂಕಷ್ಟಗಳ ಬಗ್ಗೆ ಕಿಂಚಿತ್ತೂ ಗಮನವಿರಲಿಲ್ಲ.

ವರದಿಗಾರಿಕೆಗೆಂದು ಊರೂರು ಸುತ್ತುತ್ತಿದ್ದ ಜಯಂತಿಗೆ ಬಡಜನರು ಹೇಗೆ ವಿದ್ಯೆ ಮತ್ತು ಆರೋಗ್ಯ ವ್ಯವಸ್ಥೆಗಳಿಂದ ವಂಚಿತರಾಗುತ್ತಾರೆ ಎಂಬುದು ತಿಳಿಯಿತು. ಮುಖ್ಯವಾಗಿ ಹೆಣ್ಣುಮಕ್ಕಳು ವಿದ್ಯೆಯಿಂದ ವಂಚಿತರಾಗಬಾರದೆಂಬ ನಿರ್ಧಾರದಿಂದ 2018ರಲ್ಲಿ 'ಬಡಾದೀದಿ ಯೂನಿಯನ್' (ದೊಡ್ಡಕ್ಕನ ಸಂಘಟನೆ) ಸ್ಥಾಪಿಸಿದರು. ಹದಿಹರೆಯದ ಹೆಣ್ಣುಮಕ್ಕಳ ಮಾನಸಿಕ, ದೈಹಿಕ ತೊಂದರೆಗಳು, ಮುಟ್ಟಿನ ದಿನಗಳಲ್ಲಿ ವಹಿಸಬೇಕಾದ ಸ್ವಚ್ಛತಾ ಕ್ರಮಗಳ ಕುರಿತ ತರಬೇತಿ, ಹದಿಹರೆಯದಲ್ಲೇ ತಾಯ್ತನದ ಸಮಸ್ಯೆಗೆ ಸಂಬಂಧಿಸಿದಂತೆಯೂ ಈ ಸಂಘಟನೆ ಕೆಲಸ ಮಾಡುತ್ತದೆ.

'ಬುಡಕಟ್ಟು ವಿದ್ಯಾರ್ಥಿನಿಯರ ವಸತಿ ಶಾಲೆಗಳಲ್ಲಿ ಚಿಕ್ಕ ವಯಸ್ಸಿಗೇ ಗರ್ಭ ಧರಿಸುತ್ತಿದ್ದ ಅನೇಕ ಪ್ರಕರಣಗಳನ್ನು ನಾನು ನೋಡಿದ್ದೆ. ಅದನ್ನು ತಡೆಯಲೆಂದೇ ಬಡಾದೀದಿ ಸಂಘಟನೆ ಸ್ಥಾಪಿಸಿದ್ದೇನೆ' ಎಂದು ಹೆಮ್ಮೆಯಿಂದ ಹೇಳುವ ಜಯಂತಿ, ಮಲಕನಗಿರಿ ಜಿಲ್ಲೆಯ ಎಲ್ಲ ಆಶ್ರಮ ಶಾಲೆಗಳ ವಿದ್ಯಾರ್ಥಿನಿಯರಿಗೂ ನೆರವಾಗುತ್ತಿದ್ದಾರೆ. ಬುಡಕಟ್ಟು ಯುವತಿಯರೇ ಇರುವ ಸಂಘಟನೆಯು ವಿದ್ಯಾರ್ಥಿನಿಯರ ಸಮಗ್ರ ಬೆಳವಣಿಗೆಗೆ ಏನೇನು ಅನುಕೂಲ ಬೇಕೊ ಅದನ್ನೆಲ್ಲ ಸರ್ಕಾರ ಮತ್ತು ಖಾಸಗಿಯವರ ಸಹಾಯ ಪಡೆದು ಕಲ್ಪಿಸುತ್ತಿದೆ.

ಅಷ್ಟಾದರೂ ಬುಡಕಟ್ಟು ಮಹಿಳೆಯರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳದಿರುವುದನ್ನು ಕಂಡ ಜಯಂತಿ 2022ರಲ್ಲಿ 'ಜಂಗಲ್‌ರಾಣಿ' ಎಂಬ ಸಾಮಾಜಿಕ ಜಾಲತಾಣದ ಸುದ್ದಿಮಾಧ್ಯಮ ಪ್ರಾರಂಭಿಸಿದರು. ಅದರ ಅಡಿಬರಹ 'ಅಮ ಕಹಾನಿ, ಅಮ ದ್ವಾರಾ, ಅಮಪೇನ್' ಅಂದರೆ 'ನಮ್ಮ ಕತೆ, ನಮ್ಮ ನೋವಿನ ಮೂಲಕ' ಎಂದು. ಮಲಕನಗಿರಿ ಜಿಲ್ಲೆಯ ಸಮಸ್ತ ಚಟುವಟಿಕೆಗಳನ್ನು ಜಂಗಲ್‌ರಾಣಿ ವೇದಿಕೆಯ 50 ಮಂದಿ ಬುಡಕಟ್ಟಿನ ಮಹಿಳೆಯರೇ ನೋಡಿಕೊಳ್ಳುತ್ತಾರೆ. ಇವರೆಲ್ಲರಿಗೂ ಪತ್ರಿಕೋದ್ಯಮದ ತರಬೇತಿ ನೀಡಿರುವ ಹೈದರಾಬಾದ್‌ನ ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್‌ನ ಸದಸ್ಯರು, ವರದಿಗಾರಿಕೆ, ವಿಡಿಯೊ ಚಿತ್ರೀಕರಣ, ಕತೆ ರಚನೆ ಮತ್ತು ಕ್ಷೇತ್ರ ಕಾರ್ಯ ವರದಿ ಹೇಗೆ ಬರೆಯಬೇಕು ಎಂಬುದರ ಬಗ್ಗೆ 15 ದಿನಗಳ ತರಬೇತಿ ನೀಡಿದ್ದಾರೆ. ಇದು, ಮೊಬೈಲ್ ಫೋನ್ ಆಧಾರಿತ ತರಬೇತಿ.

ಸದಸ್ಯರು ತಮ್ಮಲ್ಲಿರುವ ಮೊಬೈಲ್ ಫೋನ್ ಬಳಸಿ, ಪ್ರಮುಖವಾಗಿ 2006ರ ಅರಣ್ಯ ಹಕ್ಕು ಕಾಯ್ದೆ ಬಗೆಗಿನ ತಿಳಿವಳಿಕೆ, ಜೀವಿವೈವಿಧ್ಯ ರಕ್ಷಣೆ, ಅರಣ್ಯ ಪಾಲನೆ, ಸಂರಕ್ಷಣೆಯೂ ಸೇರಿದಂತೆ ಬುಡಕಟ್ಟಿನ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ, ವಿಶೇಷವೆನ್ನಿಸುವ ಅಡುಗೆ, ಕಸೂತಿ, ಟೈಲರಿಂಗ್, ಬುಟ್ಟಿ ಹೆಣೆಯುವುದು, ಸುತ್ತಲೂ ಜರುಗುವ ವಿದ್ಯಮಾನಗಳ ವಿಡಿಯೊ ರೆಕಾರ್ಡ್ ಮಾಡಿ ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡುವುದನ್ನು ಕಲಿತಿದ್ದಾರೆ.

ಬುಡಕಟ್ಟು ಜನರ ಜೀವನ ಹೇಗೆ ಅರಣ್ಯಗಳನ್ನು ಅವಲಂಬಿಸಿದೆ ಮತ್ತು ಅವರು ಹೇಗೆ ಅದನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ ಎಂಬುದರ ಕುರಿತು ಕಿರುಚಿತ್ರಗಳನ್ನು ನಿರ್ಮಿಸಿರುವ ಲಕ್ಷ್ಮಿ ಕಿಸಾನಿ ಎಂಬ ಯುವತಿ, ರೈತರು ಬೆಳೆಗಾಗಿ ಹೇಗೆ ತಮ್ಮ ಗದ್ದೆ, ಹೊಲಗಳನ್ನು ಸಿದ್ಧಪಡಿಸುತ್ತಾರೆ ಎಂಬುದನ್ನು ದೃಶ್ಯಗಳಲ್ಲಿ ಅದ್ಭುತವಾಗಿ ಸೆರೆ ಹಿಡಿದಿದ್ದಾಳೆ.

ಮಲಕನಗಿರಿಯ ಯಶಸ್ಸಿನಿಂದ ಉತ್ತೇಜಿತರಾಗಿರುವ ಜಯಂತಿ, 'ಜಂಗಲ್‌ರಾಣಿ' ಮಾದರಿಯನ್ನು ಬುಡಕಟ್ಟು ಜನರೇ ಹೆಚ್ಚಾಗಿರುವ ಬಲಂಗಿರ್ ಮತ್ತು ಮಯೂರ್‌ಭಾಂಜ್ ಜಿಲ್ಲೆಗಳಿಗೂ ವಿಸ್ತರಿಸುವ ಯೋಜನೆ ಹಾಕಿಕೊಂಡಿದ್ದಾರೆ.

ವಾಚಕರ ವಾಣಿ

ವಿಚಾರಣೆಗೆ ಹಾಜರಾಗದಿರುವುದು ತರವಲ್ಲ

ಅಬಕಾರಿ ನೀತಿ ಹಗರಣದ ಜತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಗೆ ಹಾಜರಾಗಲು ದೆಹಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ.) ಸಮನ್ಸ್ ಜಾರಿ ಮಾಡುತ್ತಲೇ ಬಂದಿದ್ದರೂ ಅವರು ಸತತವಾಗಿ ಎಂಟನೇ ಬಾರಿಯೂ ಹಾಜರಾಗಿಲ್ಲ. ಇದರಿಂದ ಹಗರಣದಲ್ಲಿ ಹುರುಳಿರಬಹುದು ಎಂಬ ಅನುಮಾನ ಜನಸಾಮಾನ್ಯರಲ್ಲಿ ಮೂಡುತ್ತದೆ. ಕೇಜ್ರಿವಾಲ್ ತಪ್ಪಿತಸ್ಥರಲ್ಲದಿದ್ದರೆ ಇಲಾಖೆಯ ಅಧಿಕಾರಿಗಳ ಮುಂದೆ ಹಾಜರಾಗಿ ಉತ್ತರಿಸಬೇಕು. ಹಾಜರಾಗದೇ ಇರುವುದರಿಂದ ಅನುಮಾನ ಹೆಚ್ಚುತ್ತದೆ ಅಷ್ಟೇ. ಅವರು ಸಹ ಇಲಾಖೆಯೊಂದರಲ್ಲಿ ದೊಡ್ಡ ಹುದ್ದೆಯಲ್ಲಿದ್ದವರು ಎಂಬುದನ್ನು ಮರೆಯಬಾರದು.

ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಈ ರೀತಿ ನಡೆದುಕೊಳ್ಳುವುದರಿಂದ ಜನರಿಗೆ ಯಾವ ರೀತಿಯ ಸಂದೇಶ ನೀಡಿದಂತೆ ಆಗುತ್ತದೆ? ಇಲಾಖೆಗಳ ನೋಟಿಸ್‌ಗೆ ಗೌರವ ನೀಡಬೇಕಾದುದು ಪ್ರಧಾನ ಮಂತ್ರಿಯಿಂದ ಜನಸಾಮಾನ್ಯರವರೆಗೂ ಆದ್ಯ ಕರ್ತವ್ಯ ಆಗಬೇಕು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸಮಾಜದ ಧೋರಣೆ ಬದಲಾಗಬೇಕು

ಮಹಿಳೆ ಇಂದು ಎಲ್ಲ ಕ್ಷೇತ್ರಗಳಲ್ಲೂ ತನ್ನ ಛಾಪು ಮೂಡಿಸಿದ್ದಾಳೆ. ಮನೆ ಮತ್ತು ಕಚೇರಿ ಈ ಎರಡನ್ನೂ ಸಮರ್ಥವಾಗಿ ನಿಭಾಯಿಸಬಲ್ಲೆ ಎಂದು ತೋರಿಸಿದ್ದಾಳೆ. ಕುಟುಂಬ ನಿರ್ವಹಣೆ ಮತ್ತು ಮಕ್ಕಳ ಪಾಲನೆಯಲ್ಲಿ ಮಹಿಳೆಯ ಪಾತ್ರ ಹಿರಿದು. ಹೆಣ್ಣಿನ ಬಹುಮುಖಿ ಸಾಮರ್ಥ್ಯ ಸಾಬೀತಾಗಿದ್ದರೂ ಮಹಿಳೆಯ ಬಗೆಗಿನ ನಮ್ಮ ಪುರುಷಪ್ರಧಾನ ಸಮಾಜದ ದೃಷ್ಟಿಕೋನ ಸಕಾರಾತ್ಮಕ ನೆಲೆಯಲ್ಲಿ, ನಿರೀಕ್ಷಿತ ಮಟ್ಟದಲ್ಲಿ ಇನ್ನೂ ಪೂರ್ತಿ ಬದಲಾಗಿಲ್ಲ ಎಂಬುದು ದುಃಖದ ಸಂಗತಿ.

ಹೆಣ್ಣುಮಕ್ಕಳನ್ನು ಘನತೆ-ಗೌರವದಿಂದ ನಡೆಸಿಕೊಳ್ಳಬೇಕು ಎಂಬ ಮಾತು ಭಾಷಣಗಳಲ್ಲಿ ಕೇಳುತ್ತಲೇ ಇರುತ್ತದೆ. ಆದರೆ, ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕಡಿಮೆಯಾಗುವ ಬದಲು ದಿನೇ ದಿನೇ ಹೆಚ್ಚುತ್ತಲೇ ಇರುವುದು ದುರದೃಷ್ಟದ ಸಂಗತಿ. ವರದಕ್ಷಿಣೆ ಹಾವಳಿ ಕಡಿಮೆ ಆಗಿಲ್ಲ. ಲೈಂಗಿಕ ಕಿರುಕುಳ ಪ್ರಕರಣಗಳು ಅಗಿಂದಾಗ್ಗೆ ವರದಿಯಾಗುತ್ತಲೇ ಇರುತ್ತವೆ. ಹೆಣ್ಣನ್ನು ಕಾಣುವ ರೀತಿ ಸಂಪೂರ್ಣವಾಗಿ ಬದಲಾಗಬೇಕಾಗಿರುವುದನ್ನು ಈ ವಿದ್ಯಮಾನಗಳು ಸಾರುತ್ತವೆ. ಮನೆಯಿಂದ ಹೊರಗೆ ದುಡಿಯುವ ಮಹಿಳೆಗೆ ಸುರಕ್ಷಿತ ಮತ್ತು ಸೌಹಾರ್ದ ವಾತಾವರಣ ಖಾತರಿಪಡಿಸಬೇಕು.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ಚಿರತೆ ಸಂಖ್ಯೆ ಹೆಚ್ಚಳ ಸಂತಸ: ಉಪಟಳ...?

ರಾಜ್ಯದಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಾಗಿರುವುದು ಸಂತೋಷದ ಸಂಗತಿ. ಹೆಚ್ಚಿನ ಆನೆಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದಿದೆ, ಹುಲಿ ಗಣತಿಯಲ್ಲಿ ದ್ವಿತೀಯ ಸ್ಥಾನದಲ್ಲಿದೆ. ಇದೀಗ ಹೆಚ್ಚು ಚಿರತೆಗಳನ್ನು ಹೊಂದಿರುವ ರಾಜ್ಯಗಳಲ್ಲಿ ನಾವು ಮೂರನೇ ಸ್ಥಾನದಲ್ಲಿ ಇದ್ದೇವೆ. ಈ ಮೂಲಕ ನಮ್ಮ ರಾಜ್ಯ ವನ್ಯಜೀವಿಗಳ ಆವಾಸಸ್ಥಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

2022ರಲ್ಲಿ ನಡೆಸಿದ ಗಣತಿ ಪ್ರಕಾರ ದೇಶದಲ್ಲಿ ಸುಮಾರು 13,874 ಚಿರತೆಗಳಿವೆ ಎಂದು ಕೇಂದ್ರ ಪರಿಸರ ಸಚಿವಾಲಯದ ವರದಿ ತಿಳಿಸಿದೆ. ನಮ್ಮ ರಾಜ್ಯದಲ್ಲಿ ಒಟ್ಟಾರೆ 1,879 ಚಿರತೆಗಳಿವೆ. ಮಧ್ಯಪ್ರದೇಶವು 3,907 ಚಿರತೆಗಳೊಂದಿಗೆ ಮೊದಲ ಸ್ಥಾನದಲ್ಲಿದೆ. 1,985 ಚಿರತೆಗಳೊಂದಿಗೆ ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ. ಚಿರತೆಗಳ ಸಂಖ್ಯೆ ಹೆಚ್ಚಳದ ಜೊತೆ ಮೈಸೂರು ಭಾಗದಲ್ಲಿ ಮಾನವ- ವನ್ಯಜೀವಿ ಸಂಘರ್ಷವೂ ಹೆಚ್ಚುತ್ತಿದೆ. 2023ರ ಫೆಬ್ರುವರಿ 1ರಂದು ರಾಜ್ಯ ಸರ್ಕಾರವು ಚಿರತೆ ಕಾರ್ಯಪಡೆ ರಚಿಸಿದ ಬಳಿಕದ ಒಂದು ವರ್ಷದಲ್ಲಿ ಮೈಸೂರು-ಮಂಡ್ಯ ಭಾಗದಲ್ಲಿ 69 ಚಿರತೆಗಳನ್ನು ಸೆರೆಹಿಡಿಯಲಾಗಿದೆ. ಚಿರತೆಗಳು ಕಾಡಿನಿಂದ ನಾಡಿಗೆ ಬಂದು ಜನರಲ್ಲಿ ಭಯ ಮತ್ತು ಆತಂಕವನ್ನು ಸೃಷ್ಟಿಸುತ್ತಿವೆ. ಚಿರತೆಗಳ ದಾಳಿಯಿಂದ ಕಾಡಂಚಿನ ಗ್ರಾಮಗಳ ಕೆಲವರು ಪ್ರಾಣ ಕಳೆದುಕೊಂಡಿದ್ದಾರೆ. ಕಾಡಿನಲ್ಲಿ ಅವುಗಳಿಗೆ ಆಹಾರ ದೊರಕದಿರುವುದೇ ಇದಕ್ಕೆ ಪ್ರಮುಖ ಕಾರಣ ಇದ್ದಿರಬಹುದು. ದೇಶದ ಶೇಕಡ 59ರಷ್ಟು ಚಿರತೆಗಳು ಸಂರಕ್ಷಿತ ಪ್ರದೇಶಗಳಿಂದ ಹೊರಗಿವೆ ಎಂದು ವರದಿಗಳು ಹೇಳುತ್ತವೆ. ಇದು, ತೀವ್ರ ಆತಂಕಕಾರಿ ವಿಚಾರ. ಚಿರತೆಗಳ ಉಪಟಳವನ್ನು ನಿವಾರಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.

ಕೆ.ವಿ.ವಾಸು, ಮೈಸೂರು

ಮಳೆನೀರು ಸಂಗ್ರಹ: ಕಠಿಣ ಕ್ರಮ ಅಗತ್ಯ

ನೀರಿನ ಕೊರತೆ ಇದ್ದರೂ ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳಲು ಬೆಂಗಳೂರಿನ ನಿವಾಸಿಗಳು ಹೆಚ್ಚಿನ ಆಸಕ್ತಿ ತೋರದಿರುವುದು ಸರಿಯಲ್ಲ. ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳದ ಕಾರಣಕ್ಕೆ ಕಳೆದ ತಿಂಗಳ ಅಂತ್ಯದವರೆಗೆ 39,291 ವಸತಿ ಘಟಕಗಳು ಪ್ರತಿ ತಿಂಗಳು ಒಟ್ಟು ₹ 1.94 ಕೋಟಿ ದಂಡ ಪಾವತಿಸಿರುವುದು ಈ ನಿರಾಸಕ್ತಿಯನ್ನು ತೋರುತ್ತದೆ.

ದಂಡ ವಿಧಿಸುವುದು ಅಥವಾ ಪಾವತಿಸುವುದು ನೀರಿನ ಕೊರತೆ ನೀಗಲು ಪರಿಹಾರ ಆಗಲಾರದು. ಮತ್ತಷ್ಟು ಕಠಿಣ ಕ್ರಮಗಳ ಮೂಲಕ, ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಕೆ ನೀತಿಯು ಪರಿಣಾಮಕಾರಿಯಾಗಿ ಜಾರಿಯಾಗುವಂತೆ ನೋಡಿಕೊಳ್ಳಬೇಕು. ನೀರು ಮತ್ತು ವಿದ್ಯುತ್ ಪೂರೈಕೆ ಕಡಿತದಂತಹ ಕ್ರಮಗಳ ಬಗೆಗೂ ಸರ್ಕಾರ ಯೋಚಿಸಬೇಕು.

ಎಚ್.ಆರ್. ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

ಭಾವೈಕ್ಯದ ಪ್ರತೀಕ: ಹೀಗೇ ಮುಂದುವರಿಯಲಿ

ಗದಗ ಜಿಲ್ಲೆಯ ನರಗುಂದದ ಐತಿಹಾಸಿಕ ಪಂಚಗ್ರಹ ಗುಡ್ಡದ ಹಿರೇಮಠದ ಸಿದ್ದೇಶ್ವರ ಜಾತ್ರೆಗೆ ಇಮಾಮ್ ಸಾಹೇಬ ಮಹ್ಮದಸಾಬ ಶರಣರ ಸೇವಾ ಟ್ರಸ್ಟ್ ಸದಸ್ಯರು ₹ 30 ಲಕ್ಷ ವೆಚ್ಚದಲ್ಲಿ ನೂತನ ತೇರು ನಿರ್ಮಿಸಿಕೊಟ್ಟಿರುವ ಸುದ್ದಿ (ಪ್ರ.ವಾ., ಮಾರ್ಚ್ 6) ಓದಿ ಅತೀವ ಸಂತೋಷವಾಯಿತು.

ಗ್ರಾಮೀಣ ಪ್ರದೇಶಗಳಲ್ಲಿ ಈಗಲೂ ಎಲ್ಲ ಹಬ್ಬ-ಹರಿದಿನಗಳನ್ನು ಹಿಂದೂ- ಮುಸ್ಲಿಂ ಎಂಬ ಭೇದ ಭಾವ ಇಲ್ಲದೆ ಭಾವೈಕ್ಯದಿಂದ ಆಚರಿಸಲಾಗುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಭೇದಭಾವವನ್ನು ಕೆಲವು ರಾಜಕಾರಣಿಗಳು ಹುಟ್ಟುಹಾಕುತ್ತಿದ್ದಾರೆ. ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಅವರು ಇಂತಹ ಹುನ್ನಾರಗಳಲ್ಲಿ ತೊಡಗಿದ್ದಾರೆ. ಜನಸಾಮಾನ್ಯರು ಇಂಥವರ ಮಾತುಗಳಿಗೆ ಕಿವಿಗೊಡಬಾರದು.

ಎಸ್. ನಾಗರಾಜ ನಾಗೂರ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.



ಅವಳಿಲ್ಲದ ಆರ್ಥಿಕತೆ... ಮತ್ತು ತೀವ್ರ ಬಡತನ

ತೀವ್ರ ಬಡತನದಿಂದ ಬಳಲುವ ಮಹಿಳೆಯರ ಪ್ರಮಾಣವು ಮುಂದಿನ ಆರು ವರ್ಷಗಳಲ್ಲಿ ಹೆಚ್ಚಾಗಲಿದೆ. 2030ರ ಹೊತ್ತಿಗೆ ಪ್ರತಿ 10 ಮಹಿಳೆಯರಲ್ಲಿ ಒಬ್ಬ ಮಹಿಳೆ ಬಡವಳಾಗುತ್ತಾಳೆ. ಅದೇ ವೇಳೆಗೆ ಜಗತ್ತಿನಾದ್ಯಂತ, ದಿನವೊಂದರಲ್ಲಿ ಕನಿಷ್ಠ 2.15 ಡಾಲರ್ (ಅಂದಾಜು ₹177.8) ವೆಚ್ಚ ಮಾಡಲಾಗದ ಮಹಿಳೆಯರ ಸಂಖ್ಯೆ 34.24 ಕೋಟಿಗೆ ಏರಿಕೆಯಾಗಲಿದೆ ಎಂದೂ ವಿಶ್ವ ಸಂಸ್ಥೆ ಅಂದಾಜಿಸಿದೆ. ಇಷ್ಟೇ ಅಲ್ಲ, ಪುರುಷರಿಗೆ ಹೋಲಿಸಿದರೆ ಮಹಿಳೆಯೇ ಬಡವಳು. 2030ರ ಹೊತ್ತಿಗೆ ತೀವ್ರ ಬಡತನಕ್ಕೆ ದೂಡಲ್ಪಡುವ ಮಹಿಳೆಯರ ಸಂಖ್ಯೆ ಪುರುಷರಿಗಿಂತ 1.2 ಪಟ್ಟು ಹೆಚ್ಚು ಎಂದಿದೆ ವಿಶ್ವ ಸಂಸ್ಥೆ. ಭಾರತದ ಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ

• ಸುಕೃತ ಎಸ್., ಜಯಸಿಂಹ ಆರ್.

ಮಾಡಲೊಂದು ಕೆಲಸ, ಅದರಿಂದ ಬರುವ ಸಂಬಳ – ಮಹಿಳೆಯೊಬ್ಬಳಿಗೆ ಇವುಗಳು ನೀಡುವಷ್ಟು ಆತ್ಮವಿಶ್ವಾಸ ಬೇರಾವುದರಿಂದಲೂ ಬರುವುದಿಲ್ಲ. ಆರ್ಥಿಕ ಬಲವು ಆಕೆಯನ್ನು ಹೆಚ್ಚು ಸಶಕ್ತ, ಸ್ವಾವಲಂಬಿ ಹಾಗೂ ಸ್ವತಂತ್ರ ವ್ಯಕ್ತಿಯನ್ನಾಗಿಸುತ್ತದೆ. ಮಹಿಳೆಯರು ಆರ್ಥಿಕವಾಗಿ ಹೆಚ್ಚು ಹೆಚ್ಚು ಚೇತನರಾಗುವ ಬದಲು, ಮುಂದಿನ ಆರು ವರ್ಷಗಳಲ್ಲಿ ತೀವ್ರ ಬಡತನಕ್ಕೆ ನೂಕಲ್ಪಡುತ್ತಾರೆ ಎನ್ನುವುದು ಯಾವುದೇ ಸಮಾಜಕ್ಕಾದರೂ ಸರಿ, ಒಳ್ಳೆಯ ಬೆಳವಣಿಗೆಯೇನಲ್ಲ. ಮಹಿಳೆಯ ಆರ್ಥಿಕ ಸದೃಢತೆಯ ಕುರಿತು ಭಾರತೀಯರ ಮನಃಸ್ಥಿತಿಯೂ ಇನ್ನು ಸಾಂಪ್ರದಾಯಿಕವಾಗಿಯೇ ಇದೆ.

ಮನೆಗೆಲಸ ಎನ್ನುವುದರಲ್ಲಿಯೇ 'ಕೆಲಸ' ಎಂಬುದಿದೆ. ಆದರೆ, ಈ ಕೆಲಸಕ್ಕೆ ಮಾತ್ರ ಸಂಬಳ ಇಲ್ಲ ಮತ್ತು ಇದನ್ನು ಯಾವುದೇ ಹೆಣ್ಣು ಮಾಡತಕ್ಕದ್ದು ಎಂಬ ನಿಯಮವಿದೆ. ನಗರ ಪ್ರದೇಶದ, ಮಧ್ಯಮ ವರ್ಗದ ಅಥವಾ ಅದಕ್ಕಿಂತ ಮೇಲಿನ ವರ್ಗದ ಕುಟುಂಬವು ತಮ್ಮ ಮಗನಿಗೆ ಹೆಣ್ಣು ಹುಡುಕುವಾಗ ಹಾಕುವ ಮೊದಲ ಷರತ್ತು- 'ಮದುವೆ ಆದ ಮೇಲೆ ಆಕೆ ಕೆಲಸಕ್ಕೆ ಹೋಗುವುದು ಬೇಡ' ಎನ್ನುವುದೇ ಆಗಿರುತ್ತದೆ. 'ಮನೆಗೆಲಸ' ನೋಡಿಕೊಂಡರೆ ಸಾಕು ಎನ್ನುವುದು ಅಂಥ ಕುಟುಂಬಗಳ ಅಭಿಪ್ರಾಯ. ಶಿಕ್ಷಣ ಮುಗಿಸಿ, ಉದ್ಯೋಗಕ್ಕೆ ಸೇರಿಕೊಂಡ 2–3 ವರ್ಷಗಳಲ್ಲಿಯೇ ಹೆಣ್ಣುಮಕ್ಕಳ ಮದುವೆ ತಯಾರಿಗೆ ಪೋಷಕರ ಶುರುವಿಡುತ್ತಾರೆ. ಕೆಲಸಕ್ಕೆ ಹೋಗುವ ಸಾಮರ್ಥ್ಯವಿದ್ದರೂ, ಕೆಲಸಕ್ಕೆ ಹೋಗುವ ಮನಸ್ಸಿದ್ದರೂ, ಮನೆಗೆಲಸಕ್ಕೆ ಮಾತ್ರ ಸೀಮಿತವಾಗುವ ಪರಿಸ್ಥಿತಿ ಹೆಣ್ಣುಮಕ್ಕಳದ್ದು.

ಸಂಬಳ ಕೊಡದ ಅಥವಾ ಸಂಬಳ ನೀಡದ ಕೆಲಸಗಳನ್ನೇ ಮಹಿಳೆಯರು ಹೆಚ್ಚು ಮಾಡುತ್ತಾರೆ. ಇದು ಹೀಗೆ ಮುಂದುವರಿದರೆ ಹೆಣ್ಣೊಬ್ಬಳು ದಿನವೊಂದಕ್ಕೆ ಈಗ ವೇತನವಿಲ್ಲದೇ ದುಡಿಯುತ್ತಿರುವುದಕ್ಕಿಂತಲೂ (ಸರಾಸರಿ 7 ಗಂಟೆ) ಹೆಚ್ಚುವರಿಯಾಗಿ 2.3 ಗಂಟೆಗಳನ್ನು ವಿನಿಯೋಗಿಸಬೇಕಾಗುತ್ತದೆ. ಒಂದು ವೇಳೆ ಕೆಲವು ದೇಶಗಳಲ್ಲಿ ಇಂಥ ಕೆಲಸಕ್ಕೆ ಹೆಣ್ಣೊಬ್ಬಳಿಗೆ ಸಂಬಳ ನೀಡಲು ಆರಂಭಿಸಿದರೆ, ಆ ದೇಶಗಳ ಜಿಡಿಪಿಯಲ್ಲಿ ಶೇ 40ರಷ್ಟು ಪಾಲು ಈ ಸಂಬಳದಿಂದಲೇ ಬರುತ್ತದೆ ಎನ್ನುತ್ತದೆ ವಿಶ್ವ ಸಂಸ್ಥೆ.

ಬ್ಯಾಂಕ್ ಖಾತೆ ಎಂಬುದು ಮಹಿಳೆಯನ್ನು ಬ್ಯಾಂಕಿಂಗ್ ವ್ಯವಸ್ಥೆ ಒಳಗೊಳ್ಳುವ ಪ್ರಮುಖ ಹೆಜ್ಜೆ. ವಿಶ್ವದಲ್ಲಿ ಬ್ಯಾಂಕ್ ಖಾತೆ ಹೊಂದಿರುವ ಮಹಿಳೆಯರ ಪ್ರಮಾಣ ಶೇ 74ರಷ್ಟಿದೆ. ಭಾರತದಲ್ಲಿ ಈ ಸ್ಥಿತಿ ಉತ್ತಮವಾಗಿದೆ. ವಿಧವಾ ವಿವಾಹ, ಸಂಧ್ಯಾ ಸುರಕ್ಷಾ, ಗೃಹಲಕ್ಷ್ಮಿ ಸೇರಿದಂತೆ ಹಲವು ಯೋಜನೆಗಳ ಭಾಗವಾಗಿ ಹೆಣ್ಣುಮಕ್ಕಳ ಬ್ಯಾಂಕ್ ಖಾತೆಗಳನ್ನು ತೆರೆದರು. ನರೇಗಾ ಯೋಜನೆಯಂತೂ ಗ್ರಾಮೀಣ ಹೆಣ್ಣುಮಕ್ಕಳ ಬ್ಯಾಂಕ್ ಖಾತೆ ಸಂಖ್ಯೆಯನ್ನು ದ್ವಿಗುಣಗೊಳಿಸಿತು. ಸ್ವ-ಸಹಾಯ ಸಂಘಗಳ ಪ್ರಗತಿ ಹೀಗೆ ಹಲವು ಕಾರಣಗಳಿಂದಾಗಿ ಮಹಿಳೆಯರು ತೆರೆಯುವ ಬ್ಯಾಂಕ್ ಖಾತೆಗಳ ಸಂಖ್ಯೆ ಹೆಚ್ಚಾಯಿತು.

ಮುಂದಿನ ದಿನಗಳಲ್ಲಿ ಮಹಿಳೆಯರು ಬಡತನಕ್ಕೆ ಬೀಳದಂತೆ ವಿಶ್ವ ಸಂಸ್ಥೆ ಹಾಕಿಕೊಟ್ಟಿರುವ ಗುರಿಗಳನ್ನು ಎಲ್ಲಾ ದೇಶಗಳು ಸಾಧಿಸಬೇಕಿದೆ. ದೇಶದ ಆರ್ಥಿಕತೆಯಲ್ಲಿ ಮಹಿಳೆಯನ್ನು ಪರಿಣಾಮಕಾರಿಯಾಗಿ ಒಳಗೊಳ್ಳಬೇಕಿರುವ ಈ ಅಂಶಗಳತ್ತ ಗಮಹರಿಸಬೇಕಿದೆ. ಹಾಗಾದಾಗ ಮಾತ್ರ, ವಿಶ್ವದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರೂ ಗೌರವಯುತವಾಗಿ ಬದುಕು ನಡೆಸಲು ಸಾಧ್ಯವಾಗುತ್ತದೆ.

ಬ್ಯಾಂಕಿಂಗ್ ಸೇವೆ ಲಭ್ಯತೆ ಮಹಿಳೆಯರಿಗೆ ಇನ್ನೂ ದೂರ



ದೇಶದ ಒಟ್ಟು ಮಹಿಳೆಯರಲ್ಲಿ ಬ್ಯಾಂಕ್ ಖಾತೆ ಹೊಂದಿರುವವರ ಪ್ರಮಾಣ ಶೇ 78ರಷ್ಟಿದೆ. ಬ್ಯಾಂಕ್ ಖಾತೆ ಹೊಂದಿರುವುದು ಮಹಿಳೆಯರ ಸಬಲೀಕರಣಕ್ಕೆ ಒಂದು ಸಾಧನವಾಗಲಿದೆ ಎಂದು ಪರಿಗಣಿಸಲಾಗುತ್ತದೆ. ಬ್ಯಾಂಕ್ ಖಾತೆ ಹೊಂದಿರುವುದು ಮತ್ತು ಅದನ್ನು ಮಹಿಳೆಯರು ತಾವೇ ನಿರ್ವಹಣೆ ಮಾಡುವಂತಹ ಸ್ಥಿತಿ ಇದ್ದರೆ, ಅವರು ಮನೆಕೆಲಸದ ವಿಚಾರಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ನೆರವಾಗುತ್ತದೆ. ಹೀಗಾಗಿ ಬ್ಯಾಂಕಿಂಗ್ ವ್ಯವಸ್ಥೆಯು ಮಹಿಳೆಯರನ್ನು ಒಳಗೊಳ್ಳಬೇಕು ಎಂದು ವಿಶ್ವ ಸಂಸ್ಥೆ ಹೇಳಿದೆ.

ಭಾರತದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಮಹಿಳೆಯರನ್ನು ಒಳಗೊಳ್ಳುತ್ತದೆಯಾದರೂ, ಮಹಿಳೆಯರು ಹಣಕಾಸು ವ್ಯವಹಾರದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವ ಪ್ರಮಾಣ ಕಡಿಮೆ ಇದೆ. ದೇಶದಲ್ಲಿ 10 ಕೋಟಿಗೂ ಹೆಚ್ಚು ಜನಧನ ಖಾತೆಗಳು ನಿಷ್ಕ್ರಿಯವಾಗಿವೆ. ಅಂತಹ ಖಾತೆಗಳಲ್ಲಿ ಮಹಿಳೆಯರ ಖಾತೆಗಳದ್ದೇ ಸಿಂಹಪಾಲು ಎಂದು ಇತ್ತೀಚೆಗೆ ಹಣಕಾಸು ಸಚಿವಾಲಯವು ಸಂಸತ್ತಿಗೆ ಮಾಹಿತಿ ನೀಡಿತ್ತು.

ವೇತನವಿಲ್ಲದ ದುಡಿಮೆ: ಜಿಡಿಪಿಯಲ್ಲಿ ಮಹಿಳೆಯರ ಪಾಲು ದೊಡ್ಡದು

ದೇಶದಾದ್ಯಂತ ಶೇ 70ಕ್ಕೂ ಹೆಚ್ಚು ಮಹಿಳೆಯರು ವೇತನವಿಲ್ಲದೇ ದುಡಿಯುತ್ತಿದ್ದಾರೆ. ಅಂತಹ ದುಡಿಮೆಗಳಲ್ಲಿ ಪ್ರಮುಖವಾದುದು ಮನೆಗೆಲಸ. ಅಡುಗೆ, ಮನೆ ಸ್ವಚ್ಛತೆ, ಬಟ್ಟೆ ತೊಳೆಯುವುದು, ಕುಟುಂಬದ ನಿರ್ವಹಣೆ ಮತ್ತಿತರ ಕೆಲಸಗಳಿಗಾಗಿ ಮಹಿಳೆಯರು ಪ್ರತಿದಿನ ಏಳು ಗಂಟೆಗೂ ಹೆಚ್ಚು ಸಮಯ ನೀಡಬೇಕಾಗುತ್ತದೆ. ಆದರೆ ಈ ರೀತಿಯ ದುಡಿಮೆಗೆ ಯಾವುದೇ ವೇತನ ಇಲ್ಲ. ಮಹಿಳೆಯರು ಹೀಗೆ ದುಡಿಯುವುದಕ್ಕೆ ಕನಿಷ್ಠ ವೇತನವನ್ನು ನೀಡಿದರೂ, ವಾರ್ಷಿಕವಾಗಿ ದೇಶದ ಎಲ್ಲಾ ಮಹಿಳೆಯರ ದುಡಿಮೆಯ ಮೊತ್ತ ₹23 ಲಕ್ಷ ಕೋಟಿಯಷ್ಟಾಗುತ್ತದೆ. ಇದು ನಮ್ಮ ಜಿಡಿಪಿಯ ಶೇ 7.5ರಷ್ಟಾಗುತ್ತದೆ ಎಂದು ಎಸ್‌ಬಿಐ ತನ್ನ 'ಎಕೊವ್ರ್ಯಾಪ್ ವರದಿ-2023' ಅಲ್ಲಿ ಹೇಳಿತ್ತು.



ದೇಶದ ಒಟ್ಟು ಮಹಿಳೆಯರಲ್ಲಿ ವೇತನಸಹಿತ ದುಡಿಮೆಯಲ್ಲಿ ಪಾಲ್ಗೊಳ್ಳುತ್ತಿರುವ ಮಹಿಳೆಯರ ಪ್ರಮಾಣ ತೀರಾ ಕಡಿಮೆ ಇದೆ. ವೇತನ ಪಡೆಯದ ಮಹಿಳೆಯರ ಪ್ರಮಾಣ ಶೇ 75ರ ಆಸುಪಾಸಿನಲ್ಲಿ ಇದೆ. ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶದಲ್ಲಿ ಈ ಪ್ರಮಾಣದಲ್ಲಿ ತೀರಾ ಅಂತರವೇನೂ ಇಲ್ಲ. ಮಹಿಳೆಯರನ್ನು ವೇತನಸಹಿತ ದುಡಿಮೆಯ ವ್ಯಾಪ್ತಿಗೆ ತರಲು ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಕುಟುಂಬದ ಉದ್ದಿಮೆಗಳಲ್ಲಿ, ಕುಟುಂಬದ ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾಗುವ ಮಹಿಳೆಯರಿಗೆ ಅವರ ದುಡಿಮೆಗೆ ವೇತನ ದೊರೆಯುವಂತೆ ಮಾಡುವ ಕೆಲಸವನ್ನು ಸರ್ಕಾರ ಮಾಡಬೇಕಿದೆ

ದುಡಿಮೆಯಿಂದ ದೂರ

ದೇಶದ ಆರ್ಥಿಕತೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆಯಲ್ಲಿ ಮಹಿಳೆಯರ ಪಾಲು ಶೇ 37ರಷ್ಟು ಮಾತ್ರ. ಅಂದರೆ ದೇಶದ ಒಟ್ಟು ಮಹಿಳೆಯರಲ್ಲಿ ದುಡಿಯುವ ಸಾಮರ್ಥ್ಯ, ದುಡಿಯುವ ವಯಸ್ಸು ಮತ್ತು ದುಡಿಯುವ ಅರ್ಹತೆ ಇದ್ದೂ ಯಾವುದೇ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಭಾಗವಹಿಸದೇ ಇರುವ ಮಹಿಳೆಯರ ಪ್ರಮಾಣ ಶೇ 63ರಷ್ಟಿದೆ ಎನ್ನುತ್ತದೆ 'ಲೇಬರ್ ಫೋರ್ಸ್ ಪಾರ್ಟಿಸಿಪೇಶನ್ ರೇಟ್ ವರದಿ-2023'.

ಅಂದರೆ ಮಹಿಳೆಯರಿಗೆ ಅಗತ್ಯ ಉದ್ಯೋಗಾವಕಾಶಗಳು ಇಲ್ಲದೇ ಇರುವುದನ್ನು ಮತ್ತು ಉದ್ಯೋಗಾವಕಾಶಗಳು ಇದ್ದರೂ, ಕೆಲಸ ಮಾಡುವಂತಹ ವಾತಾವರಣ ಇಲ್ಲದೇ ಇರುವಂತಹ ಸ್ಥಿತಿಯನ್ನು ಈ ದತ್ತಾಂಶಗಳು ವಿವರಿಸುತ್ತವೆ. ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮತ್ತು ಉದ್ಯೋಗದ ಸ್ಥಳದಲ್ಲಿ ವಾತಾವರಣ ಸುಧಾರಿಸುವಂತಹ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ.

ವೃದ್ಧ ಬಡವೆಯರು

55ರಿಂದ 59 ವಯೋಮಾನದ ಮಹಿಳೆಯರು ಪ್ರಸ್ತುತ ತೀವ್ರ ಬಡತನವನ್ನು ಎದುರಿಸುತ್ತಿದ್ದಾರೆ ಎನ್ನುತ್ತದೆ ವಿಶ್ವಸಂಸ್ಥೆ. ಹಿರಿಯ ವಯೋಮಾನದ ಪುರುಷರಿಗೆ ಹೋಲಿಸಿಕೊಂಡರೆ, ಹಿರಿಯ ವಯೋಮಾನದ ಮಹಿಳೆಯರು ಎಲ್ಲ ಆಯಾಮದಲ್ಲೂ ಹೆಚ್ಚು ಅಶಕ್ತರಾಗಿರುತ್ತಾರೆ. ಹೆಚ್ಚು ವಯಸ್ಸಾಗಿರುವ ಮಹಿಳೆಯರಲ್ಲಿ ವಿಧವೆಯರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಜೊತೆಗೆ ಇವರ್‍ಯಾರೂ ಮರುಮದುವೆ ಆಗುವುದಿಲ್ಲ ಮತ್ತು ಒಂಟಿಯಾಗಿಯೇ ಜೀವನ ನಡೆಸಲು ಇಚ್ಛಿಸುತ್ತಾರೆ. ಇವೇ ಕಾರಣಗಳಿಂದ ಹಿರಿಯ ವಯಸ್ಸಿನ ಮಹಿಳೆಯರು ಹೆಚ್ಚು ಸಂಕಷ್ಟ ಅನುಭವಿಸುತ್ತಾರೆ. ಮಕ್ಕಳಿಂದ ದೂರ ಇರುವುದು, ಪಿಂಚಣಿ ಬರದೇ ಇರುವುದು, ಉಳಿತಾಯ ಹಣ ಇಲ್ಲದೆ ಇರುವುದು... ಹೀಗೆ ಅನೇಕ ಕಾರಣಗಳಿಂದಾಗಿ ವೃದ್ಧ ಮಹಿಳೆಯರು ತೀವ್ರ ಬಡತನ ಎದುರಿಸುತ್ತಿದ್ದಾರೆ.

ಆಧಾರ: ವಿಶ್ವ ಸಂಸ್ಥೆಯ 'ಆರ್ಥಿಕತೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ: ಸತ್ಯ ಮತ್ತು ದತ್ತಾಂಶಗಳು' ವರದಿ, ಕೇಂದ್ರ ಸರ್ಕಾರದ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 ವರದಿ, ಕೇಂದ್ರ ಕಾರ್ಮಿಕ ಸಚಿವಾಲಯದ ಲೇಬರ್ ಫೋರ್ಸ್ ಪಾರ್ಟಿಸಿಪೇಷನ್ ರೇಟ್ ವರದಿ–2023, ಎಸ್‌ಬಿಐನ ಎಕೊವ್ರ್ಯಾಪ್–2023 ವರದಿ,

ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ

ಒಬ್ಬನೇ ಶಿವ... ಒಬ್ಬನೇ ಯುವ...

ಯುವ ರಾಜ್‌ಕುಮಾರ್ ಅಭಿನಯದ ಚೊಚ್ಚಲ ಸಿನಿಮಾ 'ಯುವ' ಮಾರ್ಚ್ 29ರಂದು ಬಿಡುಗಡೆಯಾಗುತ್ತಿದ್ದು, ಚಿತ್ರದ ಮೊದಲ ಹಾಡು 'ಒಬ್ಬನೇ ಶಿವ... ಒಬ್ಬನೇ ಯುವ' ಇತ್ತೀಚೆಗೆ ಚಾಮರಾಜನಗರದಲ್ಲಿ ಬಿಡುಗಡೆಯಾಯಿತು.

ಅಪ್ಪು ಜನ್ಮದಿನಕ್ಕೆ ಹಾಡು: 'ಚಂದನವನದಲ್ಲಿ ನಾನು 10 ವರ್ಷಗಳನ್ನು ಪೂರೈಸಿದ್ದು, ಈ ಪೈಕಿ ಏಳು ವರ್ಷಗಳನ್ನು ಅಪ್ಪು ಅವರ ಜೊತೆ ಕಳೆದಿದ್ದೇನೆ. ಇದರಲ್ಲೇ ಏಳು ಜನ್ಮಕ್ಕಾಗುವಷ್ಟು ನೆನಪುಗಳನ್ನು ಕಟ್ಟಿಕೊಂಡಿದ್ದೇನೆ. ಯುವ ರಾಜ್‌ಕುಮಾರ್ ಅವರ ಜೊತೆ ಸಿನಿಮಾ ಮಾಡುವ ಸುಸಂದರ್ಭವನ್ನು ಸೃಷ್ಟಿಸಿದ್ದೇ ಪವರ್‌ಸ್ಟಾರ್. ಮಾರ್ಚ್‌ನಲ್ಲೇ ಮುಹೂರ್ತವಾಗಿದ್ದ ಈ ಸಿನಿಮಾ ಮಾರ್ಚ್‌ನಲ್ಲೇ ತೆರೆಕಾಣುತ್ತಿದೆ. ಯುವ ರಾಜ್‌ಕುಮಾರ್ ಅವರ ಚೊಚ್ಚಲ ಸಿನಿಮಾ ಇದಾಗಿದ್ದು, ಅಭಿಮಾನಿಗಳು ನಿಮ್ಮ ಮನೆ ಮಗನೆಂದು ಅವರನ್ನು ಕೈಹಿಡಿದು ಮುನ್ನಡೆಸಿ. ಎಲ್ಲರೂ ಹೆಮ್ಮೆಪಡುವ ಸಿನಿಮಾ ಇದಾಗಲಿದೆ ಎನ್ನುವ ಭರವಸೆ ನನಗಿದೆ. ಅದ್ದೂರಿಯಾಗಿ ಈ ಸಿನಿಮಾ ಮೂಡಿಬಂದಿದ್ದು, ಅಪ್ಪು ಅವರ ಜನ್ಮದಿನಕ್ಕೆ(ಮಾರ್ಚ್ 17) ಹಾಡೊಂದನ್ನು ಬಿಡುಗಡೆ ಮಾಡಲಿದ್ದೇವೆ. ಮಾರ್ಚ್ ಮೂರನೇ ವಾರದಲ್ಲಿ ಸಿನಿಮಾದ ಟ್ರೇಲರ್ ಬಿಡುಗಡೆಯಾಗಲಿದೆ' ಎಂದು ನಿರ್ದೇಶಕ ಸಂತೋಷ್ ಆನಂದರಾಮ್ ಹೇಳಿದರು.

'ಚಾಮರಾಜನಗರ, ನಮ್ಮ ಕುಟುಂಬವು ಕಲಾಕ್ಷೇತ್ರಕ್ಕೆ ಬಂದ ಮಣ್ಣಿದು. ನನ್ನ ಮೊದಲನೇ ಹೆಜ್ಜೆಯೂ ಇದೇ ಮಣ್ಣಿನಿಂದ ಆರಂಭವಾಗಿದೆ. ಅಭಿಮಾನಿಗಳ ಪ್ರೀತಿ, ಆಶೀರ್ವಾದಕ್ಕೋಸ್ಕರ ಚಿತ್ರರಂಗದಲ್ಲಿ ನಾನು ಕಷ್ಟಪಡುತ್ತಲೇ ಮುಂದುವರಿಯುತ್ತೇನೆ. ಜನರ ಪ್ರೀತಿಗೆ ನಾನು ಋಣಿ. ಪ್ರತಿ ಕಾರ್ಯಕ್ರಮದಲ್ಲೂ 'ಅಪ್ಪು...ಅಪ್ಪು...' ಎನ್ನುವ ಅಭಿಮಾನಿಗಳ ಕೂಗಾಟ ಒಂದು ರೀತಿ ಹೃದಯ ಬಡಿತದಂತೆ ನಿರಂತರವಾಗಿದೆ. ಕನ್ನಡ ಸಿನಿಮಾ ನೋಡಿ, ಕನ್ನಡದ ಪ್ರತಿಯೊಬ್ಬರನ್ನೂ ಹರಸಿ' ಎಂದ ಯುವ ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಅವರ ಹಾಡೊಂದಕ್ಕೆ ಹೆಜ್ಜೆ ಹಾಕಿದರು. ❖

ರೋಜಿಯಲ್ಲಿ 'ಸ್ವಾಮಿ ಅಣ್ಣ'ನಾದ ಪ್ರಶಾಂತ್

'ಲೂಸ್ ಮಾದ' ಯೋಗಿ ಅಭಿನಯದ 50ನೇ ಚಿತ್ರ 'ರೋಜಿ'. ಸಿನಿಮಾದಲ್ಲಿ ಶ್ರೀನಗರ ಕಿಟ್ಟಿ ಹಾಗೂ 'ಲಿಯೋ' ಚಿತ್ರದ ಸ್ಯಾಂಡಿ ಕುಮಾರ್ ಪ್ರಮುಖಪಾತ್ರಗಳಲ್ಲಿ ನಟಿಸುತ್ತಿದ್ದು, ಇವರ ಪಾತ್ರಗಳನ್ನು ಈಗಾಗಲೇ ಚಿತ್ರತಂಡ ಪರಿಚಯಿಸಿತ್ತು.

ಇದೀಗ ನಟ ಒರಟ ಪ್ರಶಾಂತ್ ಚಿತ್ರತಂಡವನ್ನು ಸೇರಿಕೊಂಡಿದ್ದಾರೆ. 'ಸ್ವಾಮಿ ಅಣ್ಣ' ಎಂಬ ಪಾತ್ರವನ್ನು ಅವರು ನಿರ್ವಹಿಸುತ್ತಿದ್ದು, ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಒಂದನ್ನು ಚಿತ್ರತಂಡ ಬಿಡುಗಡೆಗೊಳಿಸಿದೆ.

'ರೋಜಿ ಸ್ಟೈಲಿಶ್ ಗ್ಯಾಂಗ್‌ಸ್ಟರ್ ಡ್ರಾಮಾ' ಎಂದು ಮಾತು ಆರಂಭಿಸಿದ ನಿರ್ದೇಶಕ ಶೂನ್ಯ, 'ಪ್ರಶಾಂತ್ ಅವರ ಸಿನಿಮಾಗಳಿಗೆ ನಾವು ಅಭಿಮಾನಿಗಳಾಗಿದ್ದೆವು. ಅವರಲ್ಲಿರುವ ಸಾಮರ್ಥ್ಯದ ಬಗ್ಗೆ ನಮಗೆ ಅರಿವಿದೆ. ಹೀಗಾಗಿ ನಾವು ಅವರನ್ನು ಸಂಪರ್ಕಿಸಿದ್ದೆವು. ನಮ್ಮ ಸಿನಿಮಾ ಮೂಲಕ ಅವರು ಕಂಬ್ಯಾಕ್ ಮಾಡುತ್ತಿದ್ದು, ಈಗಾಗಲೇ ಅವರ ಪಾತ್ರದ ಒಂದು ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ಸಿನಿಮಾದ ಶೇ 50–55 ಚಿತ್ರೀಕರಣ ಮುಗಿದಿದ್ದು, ಇನ್ನೆರಡು ಪಾತ್ರಗಳ ಪರಿಚಯ ಮಾಡಲಿದ್ದೇವೆ. ಯೋಗಿ ಅವರು ಲೀಡ್ ಪಾತ್ರದಲ್ಲಿದ್ದು, ಉಳಿದ ಪಾತ್ರಗಳೂ ಸಿನಿಮಾದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಹೊಂದಿವೆ' ಎಂದರು. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಈವತ್ತು ಶಿವರಾತ್ರಿ. ಶಿವನ ಬಗ್ಗೆ ಒಂದಿಷ್ಟು ಮಾತಾಡೋಣ

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಒಬ್ಬ ರಾಕ್ಷಸ ಶಿವನನ್ನು ಕುರಿತು ಘೋರವಾದ ತಪಸ್ಸು ಮಾಡಿದ. ಈ ರಾಕ್ಷಸರಿಗೆ ತಪಸ್ಸು ಘೋರವಾಗಿದ್ದರೆ ಮಾತ್ರ ಅದು ಒಳ್ಳೆಯ ತಪಸ್ಸು, ಇರಲಿ. ಆ ರಾಕ್ಷಸನ ಆ ಘೋರ ತಪಸ್ಸನ್ನು ಮೆಚ್ಚಿ ಶಿವ ಪ್ರತ್ಯಕ್ಷನಾಗಿ 'ಭಕ್ತಾ, ನಿನಗೇನು ವರ ಬೇಕು ಕೇಳು, ಕೊಡುತ್ತೇನೆ' ಅಂದ. ಘೋರ ತಪಸ್ಸು ಮಾಡಿದವನು ಘೋರವಾದ ವರವನ್ನೇ ಕೇಳಬೇಕಲ್ಲವೆ? ಕೇಳಿದ. 'ನಾನು ಯಾರ ತಲೆಯ ಮೇಲೆ ಕೈ ಇಡುತ್ತೇನೋ ಅವರು ಅಲ್ಲೇ ಭಸ್ಮವಾಗಬೇಕು' ಹಿಂದು ಮುಂದು ಯೋಚಿಸಲಿಲ್ಲ ಶಿವ. ಥಟ್ಟಂತ ವರ ಕೊಟ್ಟೇ ಬಿಟ್ಟ. ಹಾಗಾದರೆ ವರ-ಪರೀಕ್ಷೆ ಆಗಲೇಬೇಕಲ್ಲವೆ? (ವರಪರೀಕ್ಷೆ ಅಂದರೆ ಅದಲ್ಲ, ಇದು ಬೇರೆ - ವರ ಕೆಲಸ ಮಾಡುವುದೋ ಇಲ್ಲವೋ ಎಂಬ ಪರೀಕ್ಷೆ) ಶಿವನ ತಲೆಯ ಮೇಲೇ ಕೈ ಇಟ್ಟು ಪರೀಕ್ಷಿಸಲು ಅವನನ್ನೇ ಅಟ್ಟಿಸಿಕೊಂಡು ಹೋದ ಆ ರಾಕ್ಷಸ - ಭಸ್ಮಾಸುರ. ಮುಂದಿನ ಕತೆ ನಿಮಗೂ ಗೊತ್ತು. ವಿಷ್ಣು ಮೋಹಿನಿಯಾಗಿ ಬಂದ(ಳು). ರಾಕ್ಷಸ ಅವಳ ಮೋಹಕ್ಕೆ ಬಿದ್ದ. ಅವರಿಬ್ಬರೂ ಆನಂದವಾಗಿ ನರ್ತಿಸುವಾಗ ಭಸ್ಮಾಸುರ ಮೈ ಮರೆತ. ತನ್ನ ತಲೆಯ ಮೇಲೇ ತನ್ನ ಹಸ್ತವನ್ನಿಟ್ಟುಕೊಂಡು ಭಸ್ಮವಾಗಿ ಹೋದ.

ಹೀಗೆ ಹಿಂದು ಮುಂದು ಯೋಚಿಸದೆ ವರ ಕೊಟ್ಟುಬಿಡುವುದರಲ್ಲಿ ಶಿವ ಅಗ್ರಗಣ್ಯ. ಆದ್ದರಿಂದಲೇ ಶಿವನನ್ನು ಭೋಳೇ ಶಂಕರ ಅಂತ ಕರೆಯುತ್ತಾರೆ ಭಕ್ತರು. (ಉತ್ತರ ಭಾರತದಲ್ಲಿ ಭೋಲೇನಾಥ್ ಅನ್ನುತ್ತಾರೆ.) ಈ ಭೋಳೆ ಅಥವಾ ಭೋಲೆ ಅಂದರೇನು ಗೊತ್ತೆ? ನಮ್ಮಲ್ಲಿ ಭೋಳೆ ಸ್ವಭಾವ ಅನ್ನುತ್ತೀವಲ್ಲ, ಅಂದರೆ, ಮುಗ್ಧ, ಹಿಂದು ಮುಂದು ತಿಳಿಯದವನು, ಯಾರದೋ ಮಾತಿಗೆ ಸುಲಭವಾಗಿ ಮರುಳಾಗುವವನು, ಅಷ್ಟೇನೂ ಬುದ್ಧಿವಂತನಲ್ಲದವನು, ಮರೆವಿನ ಸ್ವಭಾವದವನು, ಇತ್ಯಾದಿ.

ಅರೆರೆ, ನಾವು ಪೂಜಿಸುವ ಶಿವನನ್ನು ಹೀಗೆಲ್ಲಾ ಕರೆಯುವುದು ತಪ್ಪಲ್ಲವೆ? ಅಂದರೆ- ಅಲ್ಲ. ಇವೆಲ್ಲವೂ ಸದ್ಗುಣಗಳೇ. ಮುಗ್ಧತೆ ಕೂಡಾ ಸದ್ಗುಣವಲ್ಲದಿದ್ದರೆ ನಮ್ಮ ದೇವರನ್ನು ನಾವು ಹೀಗೆ ಕರೆಯುತ್ತಿರಲಿಲ್ಲ. ಬುದ್ಧಿಯ ಪ್ರಪಂಚದಲ್ಲಿ ಬುದ್ಧಿಯೊಂದೇ ಶ್ರೇಷ್ಠ ಎಂಬ ಅಭಿಪ್ರಾಯವಿರುವ ನಮಗೆ ಮುಗ್ಧತೆ ಎಂಥಾ ದೈವೀಗುಣ ಎಂಬುದು ತಿಳಿಯುವುದಿಲ್ಲ.

ಮಕ್ಕಳು ದೇವರಂತೆ ಎಂದು ಭಾವಿಸುವುದು ಕೂಡಾ ಈ ಮುಗ್ಧತೆ ಎಂಬ ದೈವೀಗುಣಕ್ಕಾಗಿಯೇ. ಯಾರನ್ನು ಪ್ರೀತಿಸಿದರೆ, ಅಥವಾ ದ್ವೇಷಿಸಿದರೆ, ಯಾರಿಗೆ ಏನು ಕೊಟ್ಟರೆ ಅಥವಾ ಕೊಡದಿದ್ದರೆ ನಮಗೇನು ಲಾಭ ಎಂದು ಯೋಚಿಸುವ ಬುದ್ಧಿವಂತರಿಗೆ ಈ ಮುಗ್ಧತೆ ಎನ್ನುವುದು ಮೂರ್ಖತನ ಎಂದಷ್ಟೇ ಕಾಣಿಸುತ್ತದೆ.

ನಮ್ಮ ಶಿವ ಎಷ್ಟು ಭೋಳೆ ಅಂದರೆ ನಮ್ಮ ಭಕ್ತಿ ಎಷ್ಟು ನಿಜ ಅಥವಾ ಮೋಸ ಎಂಬುದು ಕೂಡಾ ಅವನಿಗೆ ತಿಳಿಯುವುದಿಲ್ಲ.

ನಾವು ಬಿಡಿ ಮೋಸ ಹೋಗುವವರು ಸಿಕ್ಕರೆ ಅವನು ಭಗವಂತನಾದರೇನು? ಸಂತೋಷವಾಗಿ ಮೋಸ ಮಾಡಿ ಫಲ ಪಡೆಯುತ್ತೇವೆ. ಹೌದಾ? ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಮಾರ್ಚ್ 8, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ತ್ರಯೋದಶಿ ಗಂ. 21-58 ನಕ್ಷತ್ರ: ಶ್ರವಣ ಗಂ. 10-41 ಯೋಗ: ಶಿವ ಗಂ. 24-46 ಕರಣ: ಗರ ಗಂ. 11-42, ಕುಂಭ ಮಾಸದ 24 ನೇ ದಿನ, ಮಳೆನಕ್ಷತ್ರ: ಪೂರ್ವಾಭಾದ್ರ 2.

ರಾಹುಕಾಲ : ಬೆಳಿಗ್ಗೆ 10-30 – 12-00

ಸೂರ್ಯೋದಯ : 06-45 ಸೂರ್ಯಾಸ್ತ : 06-37

ಮುಸ್ಲಿಂ ದಿನಾಂಕ : 26 ಶಬನ್

ಡಿನ ವಿಶೇಷ : ಮಹಾ ಶಿವರಾತ್ರಿ, ಅದೃಷ್ಟ ಸಂಖ್ಯೆ : 3, 5

ಮೇಷ : ಸರ್ಕಾರಿ ನೌಕರರಿಗೆ ಏಳಿಗೆ ಪ್ರಾಪ್ತಿಯಾಗುವುದು. ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲ ಪಡೆದುಕೊಳ್ಳುವಿರಿ. ಬಡಗಿ ಕೆಲಸ ಮಾಡುವವರಿಗೆ ಸುಯೋಗವಿದೆ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ.

ವೃಷಭ: ಅತಿ ಕೆಲಸದ ಒತ್ತಡದ ಹಿನ್ನೆಲೆಯಲ್ಲಿ ನೆಮ್ಮದಿಯನ್ನು ಸಂಪಾದಿಸಬೇಕಾಗುತ್ತದೆ. ಆಹಾರದಿಂದ ಆರೋಗ್ಯ ಹದಗೆಡುವ ಲಕ್ಷಣಗಳಿವೆ. ಹಾಗಾಗಿ ಜಾಗ್ರತರಾಗಿರಿ. ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಜಯವಾಗುವುದು.

ಮಿಥುನ: ಸಂದಿಗ್ಧ ಪರಿಸ್ಥಿತಿಯನ್ನು ನಿಧಾನವಾಗಿ ಎಚ್ಚರಿಕೆಯಿಂದ ಹಾಗೂ ಮಾರ್ಗದರ್ಶಕರ ಮಾತಿನಂತೆ ಬಗೆಹರಿಸಿಕೊಳ್ಳುವುದು ಉತ್ತಮ. ಋಣದ ಬಾಧೆಯಿಂದ ಮುಕ್ತರಾಗಲು ಹೆಚ್ಚಿನ ಗಮನನೀಡಿ.

ಕರ್ಕಾಟಕ : ಗೃಹ ನಿರ್ಮಾಣದಂಥ ವಿಚಾರವನ್ನು ಅವಲೋಕಿಸಲು ಇದು ಒಳ್ಳೆಯ ದಿನ. ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಲಾಭ-ನಷ್ಟದ ಎರಡೂ ಪರಿಚಯವಾಗಲಿದೆ. ಕುಟುಂಬದಲ್ಲಿ ಸೌಖ್ಯ ನೆಮ್ಮದಿ ಇರುವುದು.

ಸಿಂಹ: ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂತಸದ ಸುದ್ದಿಯನ್ನು ಕೇಳಲಿದ್ದೀರಿ. ಮನೆಯಲ್ಲಿ ಸಂತಸದ ವಾತವರಣ ಸೃಷ್ಟಿಯಾಗಲಿದೆ. ಕಾನೂನು ವಿಷಯದ ಅಧ್ಯಯನದಲ್ಲಿ ತೊಡಗಿರುವವರಿಗೆ ಶುಭವಾಗುವುದು.

ಕನ್ಯಾ: ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ತೀರ್ಮಾನವಿರಲಿ. ಬಂಡವಾಳ ಹೂಡಿಕೆ ಹಾಗೂ ಷೇರು ಖರೀದಿಯ ವಿಚಾರಗಳತ್ತ ಆಸಕ್ತಿಯು ಹೆಚ್ಚಲಿದೆ. ಪುತ್ರರ ಮುಖಾಂತರ ಹೆಚ್ಚುವರಿ ಆದಾಯ ಸಿಗಲಿದೆ.

ತುಲಾ: ವಹಿಸಿರುವ ಕೆಲಸಗಳನ್ನು ನಕಾರಾತ್ಮಕ ಧೋರಣೆಯಿಂದ ನೋಡದೆ ಸಕಾರಾತ್ಮಕವಾಗಿ ಸ್ವೀಕರಿಸಿ. ದಲ್ಲಾಳಿಗಳಿಗೆ ಮತ್ತು ವೃತ್ತಿ ವ್ಯಾಪಾರಗಳಲ್ಲಿ ಮುನ್ನುಗ್ಗಿ ಕೆಲಸ ಮಾಡುವವರಿಗೆ ಕನಸುಗಳು ನನಸಾಗಲಿದೆ.

ವೃಶ್ಚಿಕ: ಸರಕು ಸಾಗಾಣಿದಾರರಿಗೆ ಹಾಗೂ ಭಾರಿ ವಾಹನ ತಯಾರಕರಿಗೆ ಲಾಭ ಇರುವುದು. ದೈನಂದಿನ ಬದುಕಿನ ವಿಳಂಬ ನೀತಿಯಿಂದ ಬೇಸರವಾಗಲಿದೆ. ಆರಕ್ಷಕ ಅಧಿಕಾರಿಗಳಿಗೆ ಕೆಲಸದಲ್ಲಿ ಒತ್ತಡ ನಿವಾರಣೆಯಾಗಲಿದೆ.

ಧನು: ಲೆಕ್ಕ ಪರಿಶೋಧಕರಿಗೆ ಹಾಗೂ ನ್ಯಾಯವಾದಿಗಳಿಗೆ ಉತ್ತಮ ಅವಕಾಶಗಳು ಬರುವುವು. ಮರದ ವ್ಯಾಪಾರಿಗಳಿಗೆ ಅವಕಾಶಗಳೊಂದಿಗೆ ಉತ್ತಮ ಲಾಭ ಇರುವುದು. ಪೂಜಾ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಮನಸ್ಸಾಗಲಿದೆ.

ಮಕರ: ವಿಮಾ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ತೋರಿದ್ದಕ್ಕೆ ನಿಮಗೆ ಸಂಸ್ಥೆಯವರಿಂದ ಪುರಸ್ಕಾರಗಳು ದೊರೆಯಲಿದೆ. ವೃತ್ತಿ ಜೀವನಕ್ಕೆ ಸಹಾಯ ಮಾಡಬಲ್ಲಂತಹ ವ್ಯಕ್ತಿಗಳೊಂದಿಗೆ ಸ್ನೇಹ ಸಂಬಂಧ ಪ್ರಾರಂಭವಾಗುತ್ತದೆ.

ಕುಂಭ: ವ್ಯಾಪಾರ ವೃತ್ತಿಯಲ್ಲಿ ಆರೋಗ್ಯಕರ ಪೈಪೋಟಿ ಕಂಡುಬಂದರೂ ಸಮಾಧಾನಕರ ಲಾಭ ಇರುವುದು. ವಿದೇಶೀಯ ವಸ್ತುಗಳ ಅಥವಾ ಭೋಗದ ವಸ್ತುಗಳ ಖರೀದಿಗಾಗಿ ಧನ ವ್ಯಯ ಮಾಡುವಿರಿ.

ಮೀನ: ಇತರರಿಗೆ ಅನುಮಾನಕ್ಕೆ ಎಡೆಮಾಡಿಕೊಡುವಂಥ ವಿಷಯಗಳು ನಿಮ್ಮಿಂದ ನಡೆಯಲಿದೆ. ರಾಜಕೀಯ ವ್ಯಕ್ತಿಗಳಿಗೆ ಸಂಘದಲ್ಲಿ ಸ್ಥಾನಮಾನದ ಅರಿವು ನಿಮಗಾಗುವುದು. ವ್ಯಾಪಾರಿಗಳಿಗೆ ಸ್ವಲ್ಪ ಮಟ್ಟಿನ ಬಿಡುವು ಸಿಗಲಿದೆ.

ಪದಬಂಧ 5614

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಕಸ್ತೂರಿಯನ್ನು ಕೊಡುವ ಒಂದು ಬಗೆಯ ಜಿಂಕೆ (5)
5.ದರವಿದ್ದಾಗ ಕಾಣಿಸಿದ ಮಡಿಕೆ (3)
6.ಬೆಳ್ಳಿ ಇಲ್ಲಿದೆ (3)
8.ಧಾನ್ಯ ಒಕ್ಕುವ ಸ್ಥಳ ಉಲ್ಟಾ ಆಗಿದೆ (2)
11.ಲಾಸಾಗುತ್ತಿದ್ದರೂ ತೋರುತ್ತಿರುವ ಬೆಡಗು! (3)
12.ಹಸುವಿನ ಮರಿ ತಿರುಗಿದೆ (2)
14.ಪಾಂಡವರಲ್ಲೊಬ್ಬ ಹಿಡಿದಿರುವ ಮುಂಗುಸಿ! (3)
17.ವಿದ್ರುಮವಿಲ್ಲಿ ತಿರುವುಮುರುವಾಗಿದೆ (3)
18.ಈತ ಅರಣ್ಯ ರಕ್ಷಕ (5)

ಮೇಲಿಂದ ಕೆಳಕ್ಕೆ

1.ನಡುವೆ ಕರವನ್ನಿಟ್ಟಾಗಿನ ಘಟನೆ (4)
2.ಜ್ಞಾನ ಹೀಗೆ ಬಂದಿದೆ (3)
3.ನವಿಲಿನ ಕುಣಿತ (3)
5.ವಿದ್ಯಾರ್ಹತೆಯ ಪ್ರಶಸ್ತಿಯನ್ನು ಕೊಡುವುದು (5)
7.ಶಿರೋನಾಮೆ ಇಲ್ಲಿದೆ (5)
9.ಕವಿ ಬರೆದ ಪದ್ಯ (3)
10.ಹೆಪ್ಪಾದ ಹಾಲು (3)
13.ಆಸ್ಥೆಗೊಂದು ಪರ್ಯಾಯ ಪದ (4)
15.ರಾಮನ ಮಗ ಹಿಡಿದಿರುವ ಉಪ್ಪು (3)
16.ಪಾಸು ಎಂದಿದ್ದರೂ ಇದು ಫೇಲು! (3)



5613ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ತರ 3.ವಿಧಾತ
5.ಸಮರ 7.ರಸಭಂಗ
9.ಸಲುಗೆ 10.ಸಲ್ಲಾಪ
11.ರಣರಂಗ 13.ಜಲಧಿ
15.ನಜರು 16.ಕುಕ್ಕೆ

ಮೇಲಿಂದ ಕೆಳಕ್ಕೆ
2.ರಕ್ಕಸ 3.ವಿವರ
4.ತಸ್ಕರ 6.ಮಜ್ಜಿಗೆ
8.ಗಣಪ 9.ಸತ್ಕಾರ
10.ಸತ್ಕುಲ 12.ಗಗನ
13.ಜರೂರು 14.ಧಿಮಾಕು

ಸುಡೊಕು 5999

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

5998 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

'ಇಂಡಿಯಾ ಎಐ ಮಿಷನ್' ಕೇಂದ್ರ ಸಂಪುಟ ಅಸ್ತು

ನವದೆಹಲಿ (ಪಿಟಿಐ): ದೇಶದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಕ್ಷೇತ್ರಕ್ಕೆ ಉತ್ತೇಜನ ನೀಡುವ ಸಂಬಂಧ ₹10,372 ಕೋಟಿ ಯೋಜನಾಗಾತ್ರದ 'ಇಂಡಿಯಾ ಎಐ ಮಿಷನ್'ಗೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ.

ಡಿಜಿಟಲ್ ಇಂಡಿಯಾ ಕಾರ್ಪೊರೇಷನ್‌ನ(ಡಿಐಸಿ) ಅಂಗ-ಸಂಸ್ಥೆಯಾಗಿರುವ 'ಇಂಡಿಯಾ ಎಐ ಇಂಡಿಪೆಂಡೆಂಟ್ ಡಿಜಿಜನ್' (ಐಬಿಡಿ) ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.

ಸಚಿವ ಸಂಪುಟ ಸಭೆ ಬಳಿಕ ಈ ವಿಷಯ ತಿಳಿಸಿದ ಕೇಂದ್ರ ಸಚಿವ ಪೀಯೂಷ್ ಗೋಯಲ್, 'ಐದು ವರ್ಷಗಳ ಅವಧಿಯ ಈ ಯೋಜನೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವ ವಿಧಾನದಲ್ಲಿ ಅನುಷ್ಠಾನಗೊಳಿಸಲಾಗುವುದು. ದೇಶದಲ್ಲಿ ಉತ್ಕೃಷ್ಟ 'ಕೃತಕ ಬುದ್ಧಿಮತ್ತೆ ವ್ಯವಸ್ಥೆ' ನಿರ್ಮಿಸಲಾಗುವುದು ಎಂದರು.

'ಪ್ರಸ್ತುತ ದಿನಗಳಲ್ಲಿ ಜಿಪಿಯು(ಗ್ರಾಫಿಕ್ಸ್ ಪ್ರೊಸೆಸಿಂಗ್ ಯುನಿಟ್) ಆಧರಿತ ಸರ್ವರ್‌ಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಸದ್ಯ ಬಳಕೆಯಲ್ಲಿರುವ ಸಿಪಿಯು ಆಧರಿತ ಸರ್ವರ್‌ಗಳಿಗಿಂತ ಜಿಪಿಯು ಆಧರಿತ ಸರ್ವರ್‌ಗಳು ಅಧಿಕ ವೇಗದಲ್ಲಿ ದತ್ತಾಂಶ ಪ್ರೊಸೆಸಿಂಗ್ ಕಾರ್ಯ ನೆರವೇರಿಸುತ್ತಿರುವುದು ಇದಕ್ಕೆ ಕಾರಣ. ಹೀಗಾಗಿ, ಕೃತಕ ಬುದ್ಧಿಮತ್ತೆ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವ ಎಲ್ಲ ಭಾಗೀದಾರರಿಗೆ 10 ಸಾವಿರ ಜಿಪಿಯುಗಳನ್ನು (ಗ್ರಾಫಿಕ್ಸ್ ಪ್ರೊಸೆಸಿಂಗ್ ಯುನಿಟ್) ಒಳಗೊಂಡ ಸೂಪರ್ ಕಂಪ್ಯೂಟಿಂಗ್ ಸಾಮರ್ಥ್ಯ ಲಭ್ಯವಾಗುವಂತೆ ಮಾಡಲಾಗುವುದು' ಎಂದು ವಿವರಿಸಿದರು.

'ಕೃತಕಬುದ್ಧಿಮತ್ತೆ ಸೂಪರ್ ಕಂಪ್ಯೂಟಿಂಗ್ ಮೂಲಸೌಕರ್ಯವನ್ನು ದೇಶದ ಸ್ಟಾರ್ಟ್‌ಅಪ್‌ಗಳಿಗೆ, ಶೈಕ್ಷಣಿಕ ಕ್ಷೇತ್ರದಲ್ಲಿರುವವರಿಗೆ ಹಾಗೂ ಸಂಶೋಧಕರಿಗೂ ಒದಗಿಸಲಾಗುವುದು. ಈ ಯೋಜನೆಯಡಿ 'ಇಂಡಿಯಾ ಎಐ ಇನ್ನೋವೇಷನ್ ಸೆಂಟರ್(ಐಎಐಸಿ), ನ್ಯಾಷನಲ್ ಡೇಟಾ ಮ್ಯಾನೇಜ್‌ಮೆಂಟ್ ಆಫೀಸ್ ಸ್ಥಾಪಿಸಲಾಗುವುದು' ಎಂದರು.

ಸಚಿವ ರಾಜೀವ್ ಚಂದ್ರಶೇಖರ್ ಪೋಸ್ಟ್: ಈ ಯೋಜನೆ ಕುರಿತು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದ್ದು, 'ಭಾರತದ ಡಿಜಿಟಲ್ ಆರ್ಥಿಕತೆಗೆ ಕೃತಕಬುದ್ಧಿಮತ್ತೆ ಮತ್ತಷ್ಟು ವೇಗ ನೀಡಲಿದೆ' ಎಂದಿದ್ದಾರೆ.

ಕೇಂದ್ರ ನೌಕರರ ಡಿ.ಎ: ಶೇ 4ರಷ್ಟು ಹೆಚ್ಚಳ

ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆ (ಡಿಎ) ಹಾಗೂ ತುಟ್ಟಿ ಪರಿಹಾರವನ್ನು (ಡಿಆರ್) ಕೇಂದ್ರ ಸರ್ಕಾರ ಶೇ 4ರಷ್ಟು ಹೆಚ್ಚಿಸಿದೆ. ಇದರಿಂದ, ಈ ಮೊದಲು ಮೂಲ ವೇತನದ ಶೇ 46ರಷ್ಟಿದ್ದ ತುಟ್ಟಿ ಭತ್ಯೆ ಶೇ 50ಕ್ಕೆ ಏರಿದಂತಾಗುತ್ತದೆ.

ಈ ವರ್ಷದ ಜ.1ರಿಂದಲೇ ಇದು ಅನ್ವಯವಾಗಲಿವೆ. ಕೇಂದ್ರದ ಈ ನಿರ್ಧಾರದಿಂದಾಗಿ ಲೋಕಸಭಾ ಚುನಾವಣೆಗೂ ಮುನ್ನ 49.15 ಲಕ್ಷ ಕೇಂದ್ರ ಸರ್ಕಾರಿ ನೌಕರರು ಹಾಗೂ 67.95 ಲಕ್ಷ ಪಿಂಚಣಿದಾರರಿಗೆ ಪ್ರಯೋಜನವಾಗಲಿದೆ ಎಂದು ಸಂಪುಟ ಸಭೆಯ ಬಳಿಕ ಕೇಂದ್ರ ಸಚಿವ ಪೀಯೂಷ್ ಗೋಯಲ್ ಮಾಹಿತಿ ನೀಡಿದರು. ಡಿಎ ಹೆಚ್ಚಳದೊಂದಿಗೆ ಸಾರಿಗೆ, ಕ್ಯಾಂಟಿನ್, ನಿಯೋಜಿತ ಭತ್ಯೆಗಳನ್ನು ಶೇ 25ರಷ್ಟು ಹೆಚ್ಚಿಸಲಾಗಿದೆ. ಮನೆ ಬಾಡಿಗೆ ಭತ್ಯೆಯನ್ನು ಮೂಲ ವೇತನದ ಶೇ 27, ಶೇ 19 ಮತ್ತು ಶೇ 9ರಿಂದ ಕ್ರಮವಾಗಿ ಶೇ 30, ಶೇ 20 ಮತ್ತು ಶೇ 10ಕ್ಕೆ ಏರಿಸಲಾಗಿದೆ.

ಶಿವಪ್ರಜ್ಞೆಯ ಮಹಾರಾತ್ರಿ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಶಿವರಾತ್ರಿ

ಬಹಳ ಹಿಂದೊಮ್ಮೆ ಜಗತ್ತಿನ ಕಲ್ಯಾಣಕ್ಕಾಗಿ ದೇವತೆಗಳೂ ಅಸುರರೂ ಸಮುದ್ರಮಥನದಲ್ಲಿ ತೊಡಗಿದರು. ಆಗ ಇದ್ದಕ್ಕಿದ್ದಂತೆ ದೊಡ್ಡ ಅನಾಹುತವೊಂದು ಕಾಣಿಸಿಕೊಂಡಿತು. ಹಾಲಾಹಲ, ಎಂದರೆ ಭಯಂಕರ ವಿಷವೊಂದು, ತೋರಿಕೊಂಡಿತು. ಅದೇನೂ ತೋರಿಕೊಂಡು ಸುಮ್ಮನಾಗುವಂಥದ್ದಲ್ಲ; ಅದು ಇಡಿಯ ಸೃಷ್ಟಿಯನ್ನೇ ನಾಶ ಮಾಡಬಲ್ಲಂಥದ್ದು. ಹುಟ್ಟಿದ ವಸ್ತುವಿಗೆ ನೆಲೆಯೊಂದನ್ನು ಕಾಣಿಸಬೇಕಷ್ಟೆ. ಈ ವಿಷಕ್ಕೂ ನೆಲೆಯೊಂದನ್ನು ಒದಗಿಸಬೇಕು. ಆದರೆ ಅದು ನೆಲೆನಿಂತಮೇಲೆ ಅದರಿಂದ ಯಾರಿಗೂ ತೊಂದರೆ ಆಗಕೂಡದು. ಹೀಗೆ ವಿಷಕ್ಕೂ ನೆಲೆಯಾಗಬೇಕು, ವಿಶ್ವಕ್ಕೂ ತೊಂದರೆ ಆಗಕೂಡದು. ಅಂಥದೊಂದು ನೆಲೆಯನ್ನು ಸೃಷ್ಟಿಯಲ್ಲಿ ಎಲ್ಲಿ ಕಾಣುವುದು? ಆಗ ಈ ಪ್ರಶ್ನೆಗೆ ಉತ್ತರವಾಗಿ ಎಲ್ಲರಿಗೂ ಹೊಳೆದವನೇ 'ಶಿವ'. ಇಷ್ಟಕ್ಕೂ 'ಶಿವ' ಎನ್ನುವುದು 'ಒಳಿತು' ಎಂಬುದರ ಇನ್ನೊಂದು ಹೆಸರೇ ಹೌದಲ್ಲವೆ?

ಶಿವ ಮತ್ತು ಅವನ ಶಕ್ತಿ ಜಗತ್ತಿನ ಆದಿದಂಪತಿಗಳು ತಾನೆ? ಜಗತ್ತಿಗೆ ಒದಗಿದ ವಿಪತ್ತು ಎಂದರೆ ಮಕ್ಕಳಿಗೆ ಒದಗಿದ ಆಪತ್ತೇ. ಮಕ್ಕಳಿಗೆ ಒದಗುವ ತೊಂದರೆಗಳನ್ನು ನೋಡಿಕೊಂಡು ಯಾವ ತಂದೆ–ತಾಯಿ ತಾನೆ ಸುಮ್ಮನಿದ್ದಾರು? ಆರ್ತರ ಪ್ರಾರ್ಥನೆಗೆ ಶಿವ ಸ್ಪಂದಿಸಿದ. ಜಗತ್ತು ಉಂಟಾದುದ್ದೇ ಅವನ ಡಮರುಗದ ನಾದದ ಸ್ಪಂದನದಿಂದಲೆ ಅಲ್ಲವೆ? ಆ ವಿಷವನ್ನು ಶಿವ ಕುಡಿದ. ಹೀಗೆಂದು ಅದನ್ನು ಜೀರ್ಣಮಾಡಿ ಬಿಡಲಿಲ್ಲ; ನೆಲೆಯೊಂದನ್ನು ಒದಗಿಸಿದನಷ್ಟೆ. ವಿಷವನ್ನೂ ನಾಶಮಾಡಲಾರದಷ್ಟು ಕರುಣಾಮಯಿ ಶಿವ! ಅದನ್ನು ತನ್ನ ಕಂಠದಲ್ಲಿಯೇ ನಿಲ್ಲಿಸಿಕೊಂಡ; ಅವನ ಕೊರಳಿನಲ್ಲಿಯೇ ಆ ವಿಷ ಮಣಿಯಿತು; ಮಣಿಯಂತೆ ಅಲ್ಲಿ ಹೊಳೆಯಿತು. ಅಂದಿನಿಂದ ಅವನು ನೀಲಕಂಠನಾದ. ಇತರರಿಗೆ ಅಪಾಯವಾಗಬಹುದಾಗಿದ್ದ ವಸ್ತು, ಶಿವನ ಪಾಲಿಗೆ ಆಭರಣವಾಯಿತೆನ್ನಿ! ಶಿವನ ಶಕ್ತಿಗೂ ಕಾರುಣ್ಯಕ್ಕೂ ಇದೊಂದು ಸಣ್ಣ ಉದಾಹರಣೆಯಷ್ಟೆ.

ಶಿವ ಸದಾ ತಪಸ್ಸಿನಲ್ಲಿ ನಿರತನಾಗಿರುವವನು. ಎಲ್ಲರ ತಪಸ್ಸುಗಳಿಗೂ ಫಲವೇ ಅವನು. ಹೀಗಿದ್ದರೂ ಏಕಾದರೂ ಅವನ ಈ ಮಹಾತಪಸ್ಸು? ಅವನು ತಪಸ್ಸು ಮಾಡುವುದೇ ಲೋಕದ ಒಳಿತಿಗಾಗಿ; ಎಲ್ಲರ ಸಂಕಷ್ಟಗಳನ್ನು ಪರಿಹರಿಸುವುದಕ್ಕಾಗಿ. ಲೋಕವನ್ನು ಸಂಕಷ್ಟಗಳೇ ಇಲ್ಲದಂತೆ ಸೃಷ್ಟಿಸಬಹುದಿತ್ತಲ್ಲವೆ? ಸೃಷ್ಟಿ ಅವನಿಗೊಂದು ಲೀಲಾವಿನೋದ. ಅವನ ಲೀಲೆಯಲ್ಲಿ ಎಲ್ಲರೂ ಅವನವರೇ, ಎಲ್ಲವೂ ಅವನವೇ. ಹೀಗಾಗಿಯೇ ಅವನಿಗೆ ಎಲ್ಲರ ಬಗ್ಗೆಯೂ ಕರುಣೆ. ಅವನ ಈ ಕರುಣೆಯ ವ್ಯಾಪ್ತಿಯ ಹರಹನ್ನು ವೇದದಲ್ಲಿ ಚೆನ್ನಾಗಿ ವರ್ಣಿಸಲಾಗಿದೆ. 'ರುದ್ರಪ್ರಶ್ನೆ'ಯಲ್ಲಿ ಶಿವತತ್ತ್ವದ ಈ ವೈಶಾಲ್ಯವನ್ನು ಕಾಣಬಹುದಾಗಿದೆ.

ಇಂಥ ಲೋಕಮಂಗಳಕರವಾದ ತತ್ತ್ವವನ್ನು ಆರಾಧಿಸುವ ಪರ್ವದಿನವೇ ಶಿವರಾತ್ರಿ. ಇಡಿಯ ಶಿವರಾತ್ರಿ ಹಲವು ಸಂಕೇತಗಳಿಂದ ಸಮೃದ್ಧವಾಗಿದೆ. ರಾತ್ರಿಯ ಕತ್ತಲೆಯಲ್ಲಿ ಶಿವನನ್ನು ಸ್ಮರಿಸಿಕೊಳ್ಳಬೇಕು, ಶಿವನನ್ನು ಕಾಣಬೇಕು ಎಂಬ ಆಶಯ ಈ ಆಚರಣೆಯ ಪ್ರಧಾನ ಉದ್ದೇಶ. ನಿದ್ರೆಗೆ ಜಾರದೆ ಶಿವನ ಅನುಸಂಧಾನದಲ್ಲಿರಬೇಕು. ಎಂದರೆ ಎಚ್ಚರ ತಪ್ಪದ ಸ್ಥಿತಿ. ಕತ್ತಲೆಯನ್ನು, ಎಂದರೆ ಕೇಡನ್ನು ಕಂಡಾಗ ಒಳಿತಿನ ಅನುಸಂಧಾನ; ಕೇಡಿಗೆ ಮಣಿಯದ ಎಚ್ಚರ. ಶಿವರಾತ್ರಿಯ ಈ ಸಂದೇಶವನ್ನು ಜಾನಪದಗೀತೆಯೊಂದು ಸೊಗಸಾಗಿ ಕಟ್ಟಿಕೊಟ್ಟಿದೆ, ಹೀಗೆ:

'ಎದ್ದೂನೆ ನಿಮ ಗ್ಯಾನ ಏಳುತಲೆ ನಿಮಗ್ಯಾನ
ಸಿದ್ಧರ ಗ್ಯಾನ ಶಿವಗ್ಯಾನ ಮಾಶಿವನೆ
ನಿದ್ದೆಗಣ್ಣಿನಲಿ ನಿಮ ಗ್ಯಾನ' ||

ಇಂದು ಜಗತ್ತು ಹಲವು ಸಂಕಷ್ಟಗಳಿಂದ ನರಳುತ್ತಿದೆ. ಈ ಎಲ್ಲ ವಿಧದ ಹಾಲಾಹಲಗಳಿಂದ ನಮ್ಮನ್ನು ಪಾರುಮಾಡಬಲ್ಲಂಥ ಶಿವಶಕ್ತಿಯೊಂದು ನಮಗೆ ಬೇಕಾಗಿದೆ. ಅದಕ್ಕೂ ಮೊದಲು ನಮಗೆ ಒಳಿತು ಎಂದರೆ ಏನು ಎಂಬುದೂ ಸ್ಪಷ್ಟವಾಗಬೇಕಿದೆ. ಅಂಥ ಶಿವಪ್ರಜ್ಞೆಯ ಕಾಣ್ಕೆಗೆ ಶಿವರಾತ್ರಿಯ ಆಚರಣೆ ಬೆಳಕಾಗಿ ಒದಗಲಿ. ❖

ಅತ್ಯಾಚಾರ: ಪರೀಕ್ಷೆ ಬರೆಯಲಾಗದ ಸಂತ್ರಸ್ತ ಬಾಲಕಿ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಬಳಿ ಮಾರ್ಚ್ 4ರಂದು ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿದ್ದ ಬಾಲಕಿ ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಬೇಕಿತ್ತು.

ಈ ಅಮಾನವೀಯ ಕೃತ್ಯ ನಡೆದು ಐದು ದಿನವಾಗಿದ್ದು, ಬಾಲಕಿ ಪರೀಕ್ಷೆಯಿಂದ ವಂಚಿತಳಾಗಿ, ಆಸ್ಪತ್ರೆಯಲ್ಲಿ ನರಳುವಂತಾಗಿದೆ. ತೀವ್ರ ರಕ್ತಸ್ರಾವದಿಂದ ಬಳಲಿದ ಬಾಲಕಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಮಠದ ಜಾತ್ರೆಗೆ ತೆರಳಿದ್ದ ವಿದ್ಯಾರ್ಥಿನಿ ಮೇಲೆ ಇಬ್ಬರು ಅತ್ಯಾಚಾರ ಎಸಗಿದ್ದರು. ಈ ಸಂಬಂಧ ಅಮೋಘ (22), ಹನುಮಂತ (20), ಪ್ರತಾಪ್ (23) ಎಂಬುವರನ್ನು ಬಂಧಿಸಲಾಗಿದೆ. 'ಪೋಕ್ಸೊ' ಅಡಿ ಪ್ರಕರಣ ದಾಖಲಾಗಿದೆ.

ಮಠದಲ್ಲಿದ್ದ ಆರೋಪಿಗಳು: ಕ್ಯಾಟರಿಂಗ್ ಮಾಡಿಕೊಂಡು ಮಠದಲ್ಲಿ ವಾಸವಿದ್ದ ಆರೋಪಿಗಳು, ಬಂಡೆಪಾಳ್ಯದ ಬಳಿ ಬಾಡಿಗೆ ರೂಮ್ ಮಾಡಿದ್ದರು. ತನ್ನ ಸ್ನೇಹಿತನ ಜೊತೆಗೆ ಮಠದ ಜಾತ್ರೆಗೆ ಹೋಗುತ್ತಿದ್ದು ಬಾಲಕಿ, ಮಾರ್ಗಮಧ್ಯೆ ಮರದ ಕೆಳಗಡೆ ಕೂತಿದ್ದರು. ಆರೋಪಿಗಳು ಇದನ್ನು ಗಮನಿಸಿ ವಿಡಿಯೊ ಮಾಡಿಕೊಂಡಿದ್ದಾರೆ. ಈ ವಿಡಿಯೊವನ್ನು ಸಾಮಾಜಿಕ ಜಾಲ ತಾಣದಲ್ಲಿ ಹರಿ ಬಿಡುವುದಾಗಿ ಬಾಲಕಿ ಮತ್ತು ಆಕೆಯ ಸ್ನೇಹಿತನಿಗೆ ಬೆದರಿಕೆ ಹಾಕಿದ್ದಾರೆ.

ನಂತರ ಆರೋಪಿಗಳು ಬಾಲಕಿಯನ್ನು ಬೈಕ್ ಮೇಲೆ ಬಂಡೆಪಾಳ್ಯದ ಬಳಿಯ ರೂಮಿಗೆ ಕರೆದೊಯ್ದು ಕೃತ್ಯ ಎಸಗಿದ್ದರು. ಬಾಲಕಿ ಸ್ನೇಹಿತ ಆಕೆಯನ್ನು ಆಸ್ಪತ್ರೆಗೆ ಸೇರಿಸಿದ್ದ.

ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ ಗುರುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದಿಂದ ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

'ಮುಂದಿನ ವರ್ಷ ವಚನ ಸಾಹಿತ್ಯ ವಿ.ವಿ ಸ್ಥಾಪನೆ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಮುಂದಿನ ವರ್ಷದಿಂದ ವಚನ ಸಾಹಿತ್ಯ ವಿಶ್ವವಿದ್ಯಾಲಯ ಸ್ಥಾಪನೆಗೆ ಎಲ್ಲ ರೀತಿಯ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಭರವಸೆ ನೀಡಿದರು.

ಎಸ್ ಒ 461(ಇ): ಅದಾಗ್ಯೂ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ಭಾರತ ಸರಕಾರ, 1991(ಇ) ದಿನಾಂಕ 01.05.2023 ರಂದು ಭಾರತದ ರಾಜ್ಯಪತ್ರದ ಅಸಾಧಾರಣ ಭಾಗ 2, ವಿಭಾಗ 3, ಉಪ ವಿಭಾಗ (ii) ಹೆದ್ದಾರಿ ಕಾಯಿದೆಯ ಸೆಕ್ಷನ್ 3 ಎ ಉಪವಿಭಾಗ (1) ರ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ 1956 (1956 ರ 48) ಹೊರಡಿಸಲಾದ (ಇನ್ನು ಮುಂದೆ ಕಾಯಿದೆ ಎಂದು ಉಲ್ಲೇಖಿಸಲಾಗುತ್ತದೆ) ಕೇಂದ್ರ ಸರ್ಕಾರವು ಅದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬಳಸಲಾಗುತ್ತದೆ ಎಂದು ತೃಪ್ತಿಗೊಂಡ ನಂತರ, ನಿರ್ಮಾಣಕ್ಕೆ ಅಗತ್ಯವಿರುವುದರಿಂದ (ಅಗಲಗೊಳಿಸುವುದು / ಎರಡು ಪಥ ಫೇವ್ಡ್ ಶೋಲ್ಡರ್ ರೊಂದಿಗೆ / ನಾಲ್ಕು ಪಥ ಇತ್ಯಾದಿ) ಸಂರಕ್ಷಣೆ, ನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 69 (ಹಳೆ ರಾ ಹೆ 206) ರಲ್ಲಿ ಬರುವ ಕಿ ಮೀ 220.00 ರಿಂದ (ಹೊಸ ಚೈನೇಜ್ ಕಿ ಮೀ 119.637) ಕಿ ಮೀ 238.100 ರ ವರೆಗೆ (ಹೊಸ ಚೈನೇಜ್ ಕಿ ಮೀ 148.088) ಬರುವ ಭೂಮಿಯನ್ನು (ಹೊನ್ನಾವರ – ಚಿತ್ತೂರು ವಿಭಾಗ) ಕೆಳಗಿನ ಅನುಸೂಚಿನಲ್ಲಿ ವಿವರಿಸಿದಂತೆ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಘೋಷಿಸಿರುತ್ತದೆ.

ಅದಾಗ್ಯೂ ಕಾಯ್ದೆ ಸೆಕ್ಷನ್ 3ಎ ಇದರ ಸಬ್ ಸೆಕ್ಷನ್ 3 ರಡಿಯಲ್ಲಿ ಅಧಿಸೂಚನೆಯನ್ನು "ಡೆಕ್ಕನ್ ಹೆರಾಲ್ಡ್" ಮತ್ತು "ಹೊಸದಿಗಂತ" ಈ ಎರಡೂ ದಿನಪತ್ರಿಕೆಗಳಲ್ಲಿ ದಿನಾಂಕ : 19.07.2023 ರಂದು ಪ್ರಕಟಿಸಲಾಗಿರುತ್ತದೆ.

ಆದಾಗ್ಯೂ ಸಕ್ಷಮ ಪ್ರಾಧಿಕಾರವು ಸೆಕ್ಷನ್ 3 ಸಿ ಅಡಿಯಲ್ಲಿ ಸಲ್ಲಿಸಿದ ಆಕ್ಷೇಪಣೆಗಳನ್ನು ಸ್ವೀಕರಿಸಿ, ಅದನ್ನು ಪರಿಗಣಿಸಿ ಸೂಕ್ತವಾಗಿ ಇತ್ಯರ್ಥಪಡಿಸಿದೆ.

ಆದಾಗ್ಯೂ ಈ ಕಾಯಿದೆಯ ಸೆಕ್ಷನ್ 3 ಡಿ ಯ ಉಪವಿಭಾಗ 1 ರ ಅನುಸಾರವಾಗಿ, ಸಕ್ಷಮ ಪ್ರಾಧಿಕಾರವು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ.

ಆದ್ದರಿಂದ, ಸಕ್ಷಮ ಪ್ರಾಧಿಕಾರದ ವರದಿಯನ್ನು ಸ್ವೀಕರಿಸಿದ ನಂತರ ಮತ್ತು ಈ ಕಾಯಿದೆಯ ಸೆಕ್ಷನ್ 3ಡಿ ಯ ಉಪವಿಭಾಗ 1 ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸೂಚಿನಲ್ಲಿ ವಿವರಿಸಿರುವ ಜಮೀನುಗಳನ್ನು ಕೇಂದ್ರ ಸರ್ಕಾರವು ಅಧಿಸೂಚನೆಯಲ್ಲಿ ಹೇಳಲಾದ ಉದ್ದೇಶಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಬೇಕು ಎಂದು ಈ ಮೂಲಕ ಘೋಷಿಸಿರುತ್ತದೆ.

ಮತ್ತು ಈ ಕಾಯಿದೆಯ ಸೆಕ್ಷನ್ 3ಡಿ ಯ ಉಪವಿಭಾಗ 2 ರ ಅನುಸಾರವಾಗಿ, ಅಧಿಕೃತ ಗಜೆಟ್ ನಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಅನ್ವಯವಾಗುವಂತೆ, ಭೂ ಸ್ವಾಧೀನಕ್ಕೆ ಒಳಪಟ್ಟಿರುವ ಜಮೀನುಗಳು ಎಲ್ಲ ಋಣಭಾರಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರದಲ್ಲಿ ವಿಹಿತವಾಗಿದ್ದು, ಸಂಪೂರ್ಣ ಕೇಂದ್ರ ಸರಕಾರದ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಘೋಷಿಸಲಾಗಿದೆ.

ಅನುಸೂಚಿ : ಶಿವಮೊಗ್ಗ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 69 (ಹಳೆ ರಾ ಹೆ 206) ರಲ್ಲಿ ಬರುವ ಕಿ ಮೀ 220.00 ರಿಂದ (ಹೊಸ ಚೈನೇಜ್ ಕಿ ಮೀ 119.637) ಕಿ ಮೀ 238.100 ರ ವರೆಗೆ (ಹೊಸ ಚೈನೇಜ್ ಕಿ ಮೀ 148.088) ಬರುವ ಭೂಮಿಯನ್ನು (ಹೊನ್ನಾವರ – ಚಿತ್ತೂರು ವಿಭಾಗ), ಕಟ್ಟಡ ಸಹಿತ/ಕಟ್ಟಡ ರಹಿತ ವಾಗಿರುವ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ			ಜಿಲ್ಲೆ : ಶಿವಮೊಗ್ಗ		
ಕ್ರಮ ಸಂಖ್ಯೆ	ಸರ್ವೇ/ ಪ್ಲಾಟ್ ನಂ.	ಜಮೀನಿನ ವಿಧ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟರ್ ಗಳಲ್ಲಿ)	ಭೂಮಿಯ ಮಾಲಿಕರು /ಆಸಕ್ತಿ ಹೊಂದಿದವರ ಹೆಸರು
1	2	3	4	5	6
ತಾಲೂಕು : ಶಿವಮೊಗ್ಗ					
ಗ್ರಾಮ : ಕೊನೆಹೊಸೂರು					
1	26	ಸರಕಾರಿ	ಖುಷ್ಕಿ	1.909672	ದನಗಳಿಗೆ ಮಾಫತ್ತು, ಹಿಂದೂ ಜನಾಂಗದವರ ಸಮಾಧಿ ಭೂಮಿ,
2	28	ಸರಕಾರಿ	ಖುಷ್ಕಿ	0.0923125	ಸರಕಾರಿ ಫಾಡ
3	34	ಖಾಸಗಿ	ತರಿ	0.0668532	ಕುಮಾರಸ್ವಾಮಿ ಬಿನ್ ಲಿಂಗಪ್ಪ ಗೌಡ, ಕೆ ಎಸ್ ಶಶಿಕುಮಾರ್ 34/1
4	35	ಖಾಸಗಿ	ತರಿ	0.0859451	ಯೋಗೇಂದ್ರಪ್ಪ, ವಿಜಯಕುಮಾರಿ ಕೋಂ 35/1
5	36	ಖಾಸಗಿ	ತರಿ	0.2490806	ತುಂಗಮ್ಮ, ಕುಮಾರಸ್ವಾಮಿ, ಗೌರಮ್ಮ ಕೋಂ ಮಂಜಪ್ಪ, ಲಿಂಗಪ್ಪ ಗೌಡ ಬಿನ್ ನಾಗಲಿಂಗಪ್ಪ ಗೌಡ,
6	41	ಖಾಸಗಿ	ತರಿ	0.003205	ರುದ್ರಮ್ಮ ಕೋಂ ಶಿದ್ದಯ್ಯ
7	43	ಖಾಸಗಿ	ತರಿ	1.246222	ಜೆ ಎನ್ ಷಣ್ಮುಗಪ್ಪ ಗೌಡ ಬಿನ್ ಲೇಟ್ ನಾಗಪ್ಪ ಗೌಡ, ಜೆ ಎಸ್ ದುಷ್ಯಂತಪ್ಪ ಬಿನ್ ಜೆ ಎನ್ ಷಣ್ಮುಗಪ್ಪ ಗೌಡ, ತೇಜಸ್ವಿನಿ ಜೆ
8	44	ಖಾಸಗಿ	ತರಿ	0.4094177	ಜೆ ಎಸ್ ದುಷ್ಯಂತಪ್ಪ ಬಿನ್ ಜೆ ಎನ್ ಷಣ್ಮುಗಪ್ಪ ಗೌಡ,
9	45	ಖಾಸಗಿ	ತರಿ	0.5546085	ಎ ಓ ಲಿಂಗಪ್ಪ ಗೌಡ ಬಿನ್ ನಾಗಲಿಂಗಪ್ಪ ಗೌಡ, ತುಳಸಮ್ಮ ಕೋಂ ಭೀಮಪ್ಪ, ನಾಗಪ್ಪ ಬಿನ್ ಭೀಮಪ್ಪ, ಎ ನಾಗೇಂದ್ರಪ್ಪ ಬಿನ್ ಕಣ್ಣಪ್ಪ
10	46	ಖಾಸಗಿ	ತರಿ	0.066055	ಶಾಕುಂತಲ ಜೆ ಬಿ, ನಂದಕುಮಾರ್ ಜೆ ಬಿ, ಚಂದನ ಜೆ ಬಿ, ಜೆ ಎನ್ ನಾಗರತ್ನಮ್ಮ
ಗ್ರಾಮ : ತುಪ್ಪೂರು					
11	20	ಖಾಸಗಿ	ತರಿ	0.007	ಚೌಡಪ್ಪ ಬಿನ್ ಕಣ್ಣಪ್ಪ
12	21	ಸರಕಾರಿ	ಖುಷ್ಕಿ	0.3309438	ಹುಲ್ಲುಬನಿ ಹರಾಜ್
13	22	ಖಾಸಗಿ	ತರಿ	0.4769983	ಕಮಲಮ್ಮ ಕೋಂ ಮುರಿಗಪ್ಪಾ, ಲೋಹಿತಾಕ್ಷಪ್ಪ, 22/1,22/2
14	25	ಖಾಸಗಿ	ತರಿ	0.1895443	ಮುರಿಗಪ್ಪಾ – ಪರ್ವತಪ್ಪ ಗೌಡ
15	26	ಖಾಸಗಿ	ತರಿ	0.013473	ಡಿ ಟಿ ದಾಣೇಶಪ್ಪ
16	43	ಖಾಸಗಿ	ತರಿ	0.0123255	ಶಾರದಮ್ಮ
17	46	ಖಾಸಗಿ	ತರಿ	0.001461	ರಾಮಚಂದ್ರಪ್ಪ, ದಾನಪ್ಪ 46/1, 46/2,46/3
18	47	ಖಾಸಗಿ	ತರಿ	0.0170506	ಬಂಗಾರಮ್ಮ ಕೋಂ ರಾಮನಾಯಕ್, ಗೋಪಾಲಪ್ಪ ಬಿನ್ ರಾಮನಾಯಕ್, ಹಾಲಪ್ಪ ಬಿನ್ ರಾಮನಾಯಕ್
19	57	ಖಾಸಗಿ	ತರಿ	0.336889	ಮಂಜುಳಾ ಕೆ ಕೆ ಕೋಂ ಕೆ ಎಸ್ ಕಿರಣ್
20	58	ಖಾಸಗಿ	ತರಿ	0.1409624	ಆಕಾಶ್ ಕೆ ಕುಡುಪಾಲಿ, ಕೆ ಎಸ್ ಕಿರಣ್ ಬಿನ್ ಕೆ ಬಿ ಸದಾನಂದ, 58/1, 58/2
21	68	ಖಾಸಗಿ	ತರಿ	0.0013743	ನಾಗೇಶ್ ಬಿ 68/2a3
22	69	ಖಾಸಗಿ	ತರಿ	0.0278376	ಸುಂಕಟ್ಟಿ ಕಣ್ಣಪ್ಪ ಬಿನ್ ಮೈಲನಾಯಕ್
23	70	ಖಾಸಗಿ	ತರಿ	0.003521	ಓಂಕಮ್ಮ
24	71	ಖಾಸಗಿ	ತರಿ	0.014459	ಜಿ ಕೆ ಮೋಹನ್, ಶೇಖರಪ್ಪ ಬಿನ್ ಲೇಟ್ ಪುಟ್ಟಸ್ವಾಮಿ, ಹುಚ್ಚಪ್ಪ ಬಿನ್ ಲೇಟ್ ಪುಟ್ಟಸ್ವಾಮಿ, ಸರಕಾರಿ ಫಾಡ 71/1,71/2,71/3
25	72	ಖಾಸಗಿ	ತರಿ	0.001461	ಕೆ ಕಣ್ಣಪ್ಪ 72/2
26	ರಸ್ತೆ	ಸರಕಾರಿ	ಖುಷ್ಕಿ	0.63111	ರಸ್ತೆ,
27	SETTLE-MENT	ಸರಕಾರಿ		0.5497291	ಗ್ರಾಮಠಾಣ
ಗ್ರಾಮ : ಚೋರಾಡಿ,					
28	102	ಸರಕಾರಿ	ಖುಷ್ಕಿ	0.1070853	ಹಿಂದೂ ಜನಾಂಗದವರಿಗೆ ಬನ್ನಿ ಮುಡಿಯುವ ಮತ್ತು ಗ್ರಾಮ ಬಡಾವಣೆಗೆ, ಮುಸ್ಲಿಂ ಜನಾಂಗದವರಿಗೆ ಎಡ್ಗ ಉದ್ದೇಶಕ್ಕೆ

ರಾಜ್ಯ : ಕರ್ನಾಟಕ			ಜಿಲ್ಲೆ : ಶಿವಮೊಗ್ಗ		
ಕ್ರಮ ಸಂಖ್ಯೆ	ಸರ್ವೇ / ಪ್ಲಾಟ್ ನಂ.	ಜಮೀನಿನ ವಿಧ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟರ್ ಗಳಲ್ಲಿ)	ಭೂಮಿಯ ಮಾಲಿಕರು /ಆಸಕ್ತಿ ಹೊಂದಿದವರ ಹೆಸರು
29	103	ಖಾಸಗಿ	ತರಿ	0.0293823	ದನಗಳಿಗೆ ಮಾಫತ್ತು, ಶೌಕತ್ ಆಲಿ ರುಖ್ಸಾನ ಬಾನು, ನೌಶಾದ್ ಅಹ್ಮದ್, ಜಂಶೀದ್ ಅಹ್ಮದ್
30	104	ಸರಕಾರಿ	ಖುಷ್ಕಿ	0.0013639	ಸರಕಾರಿ 104/1
31	117	ಖಾಸಗಿ	ತರಿ	0.577045	ನಾರಾಯಣಶೆಟ್ಟಿ, ಚಂದ್ರಿ ಬಾಯಿ, ಕರದಪ್ಪ ಬಿನ್ ಎಂ ಸೀತಾರಾಮ ಮೂರ್ತಿ, ಸರಕಾರಿ, ಮಂಜಮ್ಮ ಕೋಂ ಎ ಕೆ ಶೀನಪ್ಪ ಶೆಟ್ಟಿ, ಮಂಜಮ್ಮ, ಚೋರ್ಡಿ ಕಿರು ಅರಣ್ಯ, ಬೈರಮ್ಮ, ರುದ್ರಪ್ಪ, ಈಶ್ವರಪ್ಪ
32	211	ಖಾಸಗಿ	ತರಿ	0.013417	ಎಸ್ ರವೀಂದ್ರ ಬಿನ್ ಎಚ್ ಶೇಖರಪ್ಪ (211/2)
33	214	ಖಾಸಗಿ	ತರಿ	0.1257386	ಸಣ್ಣಹನುಮಂತಪ್ಪ
34	98	ಸರಕಾರಿ	ಖುಷ್ಕಿ	0.407015	ಕೆರೆ
35	SETTLE-MENT	ಸರಕಾರಿ	ಖುಷ್ಕಿ	0.1447215	ಗ್ರಾಮಠಾಣ
ಗ್ರಾಮ : ಕುಂಶಿ					
36	100	ಖಾಸಗಿ	ತರಿ	0.091537	ಪದ್ಮನಾಭ ದುಬೆ ಬಿನ್ ಮಂಜುನಾಥ್ ದುಬೆ
37	105	ಖಾಸಗಿ	ತರಿ	0.1022338	ಮರಡಿ ಹನುಮಂತಪ್ಪ ಬಿನ್ ದುರ್ಗಣ್ಣ, ಸರಕಾರಿ
38	106	ಖಾಸಗಿ	ತರಿ	0.078454	ಶ್ರೀಮತಿ ಸೌಭಾಗ್ಯ ಕೋಂ ಲೇಟ್ ಗುಡದಪ್ಪ 106/1
39	107	ಖಾಸಗಿ	ತರಿ	0.013784	ಎಚ್ ಮಂಜಪ್ಪ ಬಿನ್ ದುರ್ಗಪ್ಪ, ಸತ್ಯನಾರಾಯಣ ಬಿನ್ ಯಲ್ಲಪ್ಪ
40	108	ಖಾಸಗಿ	ತರಿ	0.023777	ಮಂಜುನಾಥ್ ಬಿನ್ ಯಲ್ಲಪ್ಪ, ಎಚ್ ಮಂಜಪ್ಪ ಬಿನ್ ದುರ್ಗಪ್ಪ
41	109	ಖಾಸಗಿ	ತರಿ	0.0808264	ಭಾಗಮ್ಮ ಕೋಂ ಲೇಟ್ ರಾಮಜೆಟ್ಟಿ , ಭಾಗಮ್ಮ ಕೋಂ ಲೇಟ್ ರಾಮಜೆಟ್ಟಿ 109/1
42	110	ಖಾಸಗಿ	ತರಿ	0.0094145	ಬಿ ಈರಪ್ಪ ಬಿನ್ ಗುತ್ಯಪ್ಪ
43	46	ಖಾಸಗಿ	ತರಿ	0.0016041	ಸಿ ಸಿ ತ್ರಿವೇಣಿ ಕೋಂ ಆರ್ ರಾಮಚಂದ್ರ
44	47	ಖಾಸಗಿ	ತರಿ	0.0090051	ಸಿ ಸಿ ತ್ರಿವೇಣಿ ಕೋಂ ಆರ್ ರಾಮಚಂದ್ರ ಸಿ ಸಿ ತ್ರಿವೇಣಿ ಕೋಂ ಆರ್ ರಾಮಚಂದ್ರ 47/3
45	48	ಖಾಸಗಿ	ತರಿ	0.201426	ಚೆನ್ನಮ್ಮ ಕೋಂ ಲೇಟ್ ಕೆ ಪಿ ಶೇಖರಪ್ಪ, ಎಸ್ ಎನ್ ಗಿರಿಜಮ್ಮ ಕೋಂ ಲೇಟ್ ಕೆ ಪಿ ಮುರುಗೇಶಪ್ಪ, ಕಮಲಮ್ಮ ಬಿನ್ ಲೇಟ್ ಪ್ರಭಾಪ್ಪ, ರಾಜೇಶ್ವರಿ ಕೋಂ ಲೇಟ್ ಕೆ ಪಿ ಮಂಜುನಾಥ್.
46	49	ಖಾಸಗಿ	ತರಿ	0.1750025	ಮಂಜಪ್ಪ ಬಿನ್ ಲೇಟ್ ದೊಡ್ಡಹಾಳದಪ್ಪ , ಎಚ್ ಎಸ್ ಪ್ರಕಾಶ್ ಬಿನ್ ಲೇಟ್ ಸಣ್ಣಹಾಳದಪ್ಪ 49/1
47	50	ಖಾಸಗಿ	ತರಿ	0.1728564	ಪುಟ್ಟಮ್ಮ ಕೋಂ ವೆಂಕಟರಮಣ ಜೆಟ್ಟಿ, ರುಕ್ಮಾಂಗದ ಜೆಟ್ಟಿ ಬಿನ್ ವೆಂಕಟರಮಣ ಜೆಟ್ಟಿ
48	54	ಖಾಸಗಿ	ತರಿ	0.0993081	ವನಜಾಕ್ಷಮ್ಮ ಕೋಂ ಲೇಟ್ ವಿಜಯೇಂದ್ರಪ್ಪ, ಜಾಹಿರಾಬಿ ಕೋಂ ಅಬ್ದುಲ್ ಅಜೀಜ್ ಸಾಬ್ 54/2
49	55	ಖಾಸಗಿ	ತರಿ	0.621627	ವನಜಾಕ್ಷಮ್ಮ ಕೋಂ ಲೇಟ್ ವಿಜಯೇಂದ್ರಪ್ಪ, ಚೌಡಪ್ಪ ಬಿನ್ ಲೇಟ್ ಕೆಂಚಪ್ಪ ಯಾನೆ ಕೆಂಚಣ್ಣ , ಕಮಲಮ್ಮ ಬಿನ್ ಲೇಟ್ ಕೆಂಚಪ್ಪ ಯಾನೆ ಕೆಂಚಣ್ಣ , ಶಶಿಕುಮಾರ್ ಬಿನ್ ಲೇಟ್ ಕೆಂಚಪ್ಪ ಯಾನೆ ಕೆಂಚಣ್ಣ , ಚಂದ್ರಪ್ಪ ಕೆಂಚಪ್ಪ ಯಾನೆ ಕೆಂಚಣ್ಣ , ಸುಲೋಚನಾ ಬಿನ್ ಲೇಟ್ ಹಳದಪ್ಪ ಯಾನೆ ಕೆಂಚಣ್ಣ
50	56	ಖಾಸಗಿ	ತರಿ	0.0158812	ಕೋಟೆ ಭೀಮಣ್ಣ ಬಿನ್ ಹುಚ್ಚಮ್ಮ
51	57	ಖಾಸಗಿ	ತರಿ	0.0428902	ಗಣೇಶಪ್ಪ ಬಿನ್ ನಾಗಪ್ಪ, ಶ್ರೀ ಎಚ್ ಶಿವಾನಂದಪ್ಪ ಬಿನ್ ಹಾಳದಪ್ಪ, ಎಚ್ ಶಿವಾನಂದಪ್ಪ ಬಿನ್ ಹಾಳದಪ್ಪ 57/1
52	58	ಖಾಸಗಿ	ತರಿ	0.1187559	ರುದ್ರಪ್ಪ ಬಿನ್ ಮಂಜಪ್ಪ
53	61	ಖಾಸಗಿ	ತರಿ	0.112583	ಹೊಂಬಾಳೆ ಸುರೇಶ ಬಿನ್ ಹೊಂಬಾಳೆ ಈಶ್ವರಪ್ಪ, ರಾಮಣ್ಣ ಬಿನ್ ಜೋಗಪ್ಪ ಹಾರ್ನಳ್ಳಿ 61/1
54	69	ಖಾಸಗಿ	ತರಿ	0.105256	ಬಿ ಆರ್ ಪ್ರಶಾಂತ್ ಬಿನ್ ರಾಮಚಂದ್ರಪ್ಪ ಬಿ
55	71	ಖಾಸಗಿ	ತರಿ	0.0520468	ಎಚ್ ಆರ್ ನಾರಾಯಣ ಬಿನ್ ಎಚ್ ರಾಮಪ್ಪ, ಗೀತಾ ಕೋಂ ಲೇಟ್ ಎಚ್ ಆರ್ ಕಾಕೇಶ್, 71/2
56	72	ಖಾಸಗಿ	ತರಿ	0.013108	ಧರ್ಮಪ್ಪ ಬಿನ್ ಲೇಟ್ ಹುಲುಗಪ್ಪ
57	73	ಖಾಸಗಿ	ತರಿ	0.056983	ಧರ್ಮಪ್ಪ ಬಿನ್ ಲೇಟ್ ಹುಲುಗಪ್ಪ
58	74	ಖಾಸಗಿ	ತರಿ	0.1517565	ಹುಚ್ಚಣ್ಣ ಬಿನ್ ಹಾಳದನ್ನ, ಬಾಬು ಹುಚ್ಚಣ್ಣ ಬಿನ್ ಹಾಳದಪ್ಪ, ಹುಲ್ಲಣ್ಣ ಬಿನ್ ಹಾಳದಪ್ಪ
59	75	ಖಾಸಗಿ	ತರಿ	0.1311833	ಪ್ರದೀಪ್ ಎಚ್ ಬಿನ್ ಹುಲುಗಪ್ಪ ಆರ್
60	76	ಸರಕಾರಿ	ತರಿ	0.1973911	ಸರಕಾರಿ
61	77	ಖಾಸಗಿ	ತರಿ	0.000694	ಹಾಳದಮ್ಮ ಬಿನ್ ಲೇಟ್ ತಿಮ್ಮಪ್ಪ, ಹಾಳದಮ್ಮ ಬಿನ್ ಲೇಟ್ ತಿಮ್ಮಪ್ಪ 77/1,77/2
62	78	ಖಾಸಗಿ	ತರಿ	0.083604	ಬಿ ಎನ್ ಮರಿಯಪ್ಪ ಗೌಡ ಬಿನ್ ಲೇಟ್ ನಂಜಯ್ಯ
63	79	ಖಾಸಗಿ	ತರಿ	0.015649	ಕೆ ವಿ ಲಕ್ಷ್ಮೀನಾರಾಯಣ ಜೇತಪ್ಪ ಬಿನ್ ವೆಂಕಟರಮಣ ಜೆಟ್ಟಿ.
64	85	ಖಾಸಗಿ	ತರಿ	0.1597662	ಶ್ರೀಮತಿ ಕೆ ಸುಭದ್ರ ಬಿನ್ ಲೇಟ್ ಕೋಟೆ ಯೆಲ್ಲಪ್ಪ
65	86	ಖಾಸಗಿ	ತರಿ	0.2386406	ಗೌರಮ್ಮ ಕೋಂ ಬೆನಕಪ್ಪ, ಶಾರದಮ್ಮ ಕೋಂ ರೇಣುಕಪ್ಪ
66	88	ಖಾಸಗಿ	ತರಿ	0.069104	ಬಿ ಮರಿಯಪ್ಪ ಬಿನ್ ಬೊಮ್ಮನಕಟ್ಟೆ ಗುತ್ಯಪ್ಪ
67	89	ಖಾಸಗಿ	ತರಿ	0.1127564	ಎನ್ ರವಿಕುಮಾರ್ ಬಿನ್ ನಾಗರಾಜ್ ಜೆಟ್ಟಿ , ಎನ್ ರವಿಕುಮಾರ್ ಬಿನ್ ನಾಗರಾಜ್ ಜೆಟ್ಟಿ, 89/2, 89/3
68	92	ಖಾಸಗಿ	ತರಿ	0.1129987	ಕೆ ಜಯಲಕ್ಷ್ಮಿ ಕೋಂ ಜಯಲಕ್ಷ್ಮಿ, ವಿ ಎನ್ ರಂಗನಾಥ್ ಬಿನ್ ನರಸಿಂಹಪ್ಪ 92/1, 92/2
69	93	ಖಾಸಗಿ	ತರಿ	0.0062223	ಬಾಬುಪಾಂಡೆ ಎಸ್ ಬಿನ್ ರಘುನಾಥ್ ಪ್ರಸಾದ್ ಪಾಂಡೆ, ದೇಶಪಾಂಡೆ ಎಸ್ ಬಿನ್ ರಘುನಾಥ್ ಪ್ರಸಾದ್ ಪಾಂಡೆ. 93/1, 93/2
70	94	ಖಾಸಗಿ	ತರಿ	0.2093578	ಕೆ ಎಚ್ ಚೆನ್ನಪ್ಪ ಬಿನ್ ಹುಚ್ಚಪ್ಪ 94/2
71	95	ಖಾಸಗಿ	ತರಿ	0.1344359	ಡಿ ಎಸ್ ಹನುಮಂತರಾಜ್ ಬಿನ್ ಸತ್ಯನಾರಾಯಣ ಡಿ, ಇಕ್ಬಾಲ್ ಭಾಷಾ ಬಿನ್ ಅಮೀರ್ ಸಾಬ್, ಇಂದಿರಮ್ಮ ಬಿನ್ ಹುಚ್ಚಪ್ಪ, 95/1,95/2, 95/3

Continued....

ಸುನಂದಮ್ಮಗೆ ‘ಅತ್ಯುತ್ತಮ ಕಾದಂಬರಿ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ ನೀಡುವ 2023ನೇ ಸಾಲಿನ ‘ಅತ್ಯುತ್ತಮ ಕಾದಂಬರಿ ಪ್ರಶಸ್ತಿ’ಗೆ ಲೇಖಕಿ ಆರ್. ಸುನಂದಮ್ಮ ಅವರ ‘ಭರತಕಲ್ಪ’ ಕಾದಂಬರಿ ಆಯ್ಕೆ ಆಗಿದೆ.

ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ. ಕಾದಂಬರಿಕಾರ ಕಾ.ತ. ಚಿಕ್ಕಣ್ಣ, ಕಾದಂಬರಿಗಾರ್ತಿ ಲತಾಗುತ್ತಿ ಅವರು ಈ ಆಯ್ಕೆ ಮಾಡಿದ್ದಾರೆ.

ಸ್ಪರ್ಧೆಗೆ 48 ಕಾದಂಬರಿಗಳು ಬಂದಿದ್ದವು. ಅವುಗಳಲ್ಲಿ ಅಂತಿಮ ಮೂರರಲ್ಲಿ ಸುನಂದಮ್ಮ ಅವರ ಕಾದಂಬರಿ ಜತೆಗೆ ಚೀಮನಹಳ್ಳಿ ರಮೇಶ್ ಬಾಬು ಅವರ ‘ಮಂಪರು’ ಕಾದಂಬರಿ ಹಾಗೂ ಗಂಗಪ್ಪ ತಳವಾರ್ ಅವರ ‘ಧಾವತಿ’ ಕಾದಂಬರಿಗಳು ಸ್ಥಾನ ಪಡೆದಿದ್ದವು.

ದ್ವಾರನಕುಂಟೆ ಪಾತಣ್ಣ ಅವರ ಜನ್ಮದಿನವಾದ ಇದೇ 14ರಂದು ಸಂಜೆ 5.30ಕ್ಕೆ ಶೇಷಾದ್ರಿಪುರಂ ಕಾಲೇಜು ದತ್ತಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ಅವರು ಮಾಹಿತಿ ನೀಡಿದ್ದಾರೆ.

ರಾಜ್ಯ : ಕರ್ನಾಟಕ			ಜಿಲ್ಲೆ : ಶಿವಮೊಗ್ಗ		
ಕ್ರಮ ಸಂಖ್ಯೆ	ಸರ್ವೆ/ ಪ್ಲಾಟ್ ನಂ.	ಜಮೀನಿನ ವಿಧ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟರ್ ಗಳಲ್ಲಿ)	ಭೂಮಿಯ ಮಾಲಿಕರು /ಆಸಕ್ತಿ ಹೊಂದಿದವರ ಹೆಸರು
72	96	ಖಾಸಗಿ	ತರಿ	0.0436983	ಇಕ್ಬಾಲ್ ಬಾಷಾ ಬಿನ್ ಅಮೀರ್ ಸಾಬ್, ಇಂದಿರಮ್ಮ ಬಿನ್ ಹುಚ್ಚಪ್ಪ 96/2, 96/3
73	97	ಖಾಸಗಿ	ತರಿ	0.148005	ನಾಗಮ್ಮ ಕೋಂ ವೆಂಕಟರಮಣ, ಭೀಮಪ್ಪ ಬಿನ್ ಮಿನ್ನಿ ಮಂಜಪ್ಪ
74	99	ಖಾಸಗಿ	ತರಿ	0.0877433	ಸೀತಾರಾಮ್ ಬಿನ್ ರಂಗನಾಥ, ರುಕ್ಮಿಣಿಯಮ್ಮ ಕೋಂ ಲೇಟ್ ಕೃಷ್ಣಪ್ಪ, ಧರ್ಮಪ್ಪ ಬಿನ್ ಲೇಟ್ ಚೌಡಪ್ಪ
ಗ್ರಾಮ : ಹೊಸಕೋಟೆ,					
75	66	ಖಾಸಗಿ	ತರಿ	0.0022211	ರಾಮಣ್ಣ – ಹುಲುಗಪ್ಪ
76	67	ಖಾಸಗಿ	ತರಿ	0.0130067	ಜಯಣ್ಣ 67/1
77	73	ಖಾಸಗಿ	ತರಿ	0.0296616	ಕೆ ಸತ್ಯನಾರಾಯಣ ಬಿನ್ ಕೆ ಕೆಂಚಪ್ಪ 73/1
78	74	ಖಾಸಗಿ	ತರಿ	0.0305117	ನಾರಾಯಣಪ್ಪ ಬಿನ್ ತಿಮ್ಮಣ್ಣ, ಶಾರದಮ್ಮ ಕೋಂ ಯಲ್ಲಪ್ಪ 74/1, 74/2
79	75	ಖಾಸಗಿ	ತರಿ	0.006992	ಹನುಮಣ್ಣ, ಬೈರಮಂಜಪ್ಪ, ಬೈರತಿಮ್ಮಪ್ಪ, ಮಂಜುನಾಥ್, ನಾಗರಾಜ್ ಬಿ ಅಣ್ಣಪ್ಪ, ಮಹೇಶ್ವರಪ್ಪ ಬಿ, ಶ್ರೀನಿವಾಸ್
ಗ್ರಾಮ : ಆಯನೂರು					
80	123	ಖಾಸಗಿ	ತರಿ	0.0388352	ಹುಲ್ಲು ಬನ್ನಿ ಹರಾಜು ಗುಡ್ಡ ಆಯನೂರ್ ಸ್ಮಶಾನಕ್ಕೆ,, ಸರಕಾರಿ ಬಸ್ ಸ್ಟಾಪ್, ದೇವಳನಾಯಕ್ ಲಕ್ಷ್ಮಮ್ಮ, ತಾಲೂಕು ಲೆವೆಲ್ ಸ್ಟೇಡಿಯಂ, ಸರಕಾರಿ ಗೆಸ್ಟ್ ಹೌಸ್, ಖಾಸಗಿ ಬಸ್ ಸ್ಟಾಪ್,
81	129	ಸರಕಾರಿ	ಖುಷ್ಕಿ	0.7923248	ದನಗಳಿಗೆ ಮೊಫತ್ತು, ಸೈನಿಕ ತರಬೇತಿ ಶಾಲೆ, ಸಾಯಿ ಸ್ಟೇಡಿಯಂ, ಎಸ್ ಸಿ ಮತ್ತು ಎಸ್ ಟಿ ಹಾಸ್ಟೆಲ್, ಮಾದರಿ ಶಾಲೆ, ವಿಜ್ಞಾನ ಕೇಂದ್ರ, ಅಗಸ್ತ್ಯ ಫೌಂಡೇಶನ್, ರಂಗಪ್ಪ ಬಿನ್ ಹೊಟ್ಟೆಗಪ್ಪ, ಗುತ್ಯಪ್ಪ ಬಿನ್ ಹೊಟ್ಟೆಗಪ್ಪ, ಪರಮೇಶ್ವರಪ್ಪ ಬಿನ್ ಕ–ರಿಯಪ್ಪ, ಲಕ್ಷ್ಮಪ್ಪ ಬಿನ್ ಕರಿಯಪ್ಪ
ಗ್ರಾಮ : ದೊಡ್ಡದಾನವಂಧ					
82	2	ಖಾಸಗಿ	ತರಿ	0.0040851	ಪುಟ್ಟಪ್ಪ ಬಿನ್ ರಾಮಣ್ಣ 2/1
83	3	ಖಾಸಗಿ	ತರಿ	0.161068	ಸೆಲ್ವರಾಜ್ ಬಿನ್ ಗೋವಿಂದಸ್ವಾಮಿ, ದುರ್ಗಪ್ಪ, ತೀರ್ಥಮ್ಮ, ಜನಾರ್ಧನ ಬಿನ್ ಕೃಷ್ಣಮೂರ್ತಿ, ಕರಿಯಮ್ಮ, ಮಲ್ಲಿಕಾರ್ಜುನ, ಸೌಭಾಗ್ಯ, ಕೆ ಶ್ರೀಧರ, ಸಾರ್ವಜನಿಕ ಶವಾಗಾರಕ್ಕೆ ಮೀಸಲಿರಿಸಿದ್ದು,
84	30	ಖಾಸಗಿ	ತರಿ	0.017061	ವಿನಯ್ ಎ ಎಸ್ ಬಿನ್ ಎಂ ಶಿವರುದ್ರಪ್ಪ 30/2
ಗ್ರಾಮ : ಕೋಹಳ್ಳಿ					
85	6	ಸರಕಾರಿ	ಖುಷ್ಕಿ	0.0546675	ಚಂದ್ರಮ್ಮ ಕೋಂ ಬಸವರಾಜು ಟಿ – ಎಚ್ ಸೆಕ್ಷನ್ ರಾ ಹೆ-206
86	63	ಖಾಸಗಿ	ತರಿ	0.00885	ರಾಮಿಜಾಬಿ ಕೋಂ ಅಕ್ಬರ್ ಸಾಬ್ ಟಿ – ಎಚ್ ಸೆಕ್ಷನ್ ರಾ ಹೆ -206
87	64	ಖಾಸಗಿ	ತರಿ	0.013734	ಕೃಷಿಯೇತರ ಕರಾಬ್, ಶಹನವಾಜ್ ಖಾನಂ ಕೋಂ ಹೈದರಾಲಿ ಖಾನ್ 64/3A
88	65	ಸರಕಾರಿ	ಖುಷ್ಕಿ	0.135567	ಕೋಹಳ್ಳಿ ಮಧ್ಯಮ ಶಾಲೆ ಟಿ ಎಚ್ ಸೆಕ್ಷನ್ ರಾ ಹೆ – 206
89	66	ಖಾಸಗಿ	ತರಿ	0.0305478	ಎ ಎಸ್ ರತ್ನ
90	67	ಖಾಸಗಿ	ತರಿ	0.0048536	ಡಿ ಸುಂದ್ರಕುಮಾರ್ ಭೂಪ 67/2
91	87	ಖಾಸಗಿ	ತರಿ	0.070789	ಎಸ್ ಕೆ ನಾಗಪ್ಪ (87/1) ಟಿ ಎಚ್ ಸೆಕ್ಷನ್ ರಾ ಹೆ -206 87/1
92	88	ಸರಕಾರಿ	ಖುಷ್ಕಿ	0.047652	ಸರಕಾರಿ ಕೆರೆ
93	89	ಖಾಸಗಿ	ತರಿ	0.0070908	ಅರುಣ್ ಕುಮಾರ್, ರಾಮಣ್ಣ 89/2B
94	90	ಖಾಸಗಿ	ತರಿ	0.007008	ಸತ್ಯನಾರಾಯಣ ಬಿನ್ ಶ್ರೀರಂಗಶೆಟ್ಟಿ / ಅರುಣ್ ಕುಮಾರ್/ ರಾಮಣ್ಣ 90/1
95	ರಸ್ತೆ	ಸರಕಾರಿ	ಖುಷ್ಕಿ	0.0376792	ಗ್ರಾಮಠಾಣ
ಗ್ರಾಮ : ಎಲವಳ್ಳಿ					
96	24	ಖಾಸಗಿ	ತರಿ	0.031584	ಗೌರಿಬಾಯಿ ಬಿನ್ ದೂಡಿಯ ನಾಯಕ್/ ತಿಮ್ಮ ನಾಯಕ್ ಬಿನ್ ರೇವ್ಯನಾಯಕ್ 24/1, 24/2
97	25	ಖಾಸಗಿ	ತರಿ	0.043771	ಎಂ ರಮೇಶ್ ಎಂ, ವಿಜಯಕುಮಾರ್ 25/1, 25/2
98	27	ಖಾಸಗಿ	ತರಿ	0.103886	ಅನಂತ್ ನಾಯಕ್ ಬಿನ್ ರೇವ್ಯನಾಯಕ್
99	51	ಖಾಸಗಿ	ತರಿ	0.145213	ನೇಹಾ ಎಸ್ ನಾಯಕ್, ಹರ್ಷಿತ ಎಸ್
100	53	ಖಾಸಗಿ	ತರಿ	0.057256	ಕೆ ಮಂಜಮ್ಮ, ಚೆನ್ನವೀರಪ್ಪ, 53/1, 53/2
ಗ್ರಾಮ : ವೀರಗರಣ ಬೈರಕೊಪ್ಪ					
101	13	ಖಾಸಗಿ	ತರಿ	0.159325	ರುಕ್ಮಿಣಿಬಾಯಿ ಕೋಂ ಲೇಟ್ ರಾಮನಾಯಕ್ ಟಿ ಎಚ್ ಸೆಕ್ಷನ್ ರಾ ಹೆ-206 13/1,2
102	21	ಸರಕಾರಿ	ಖುಷ್ಕಿ	0.050733	ಸರಕಾರಿ ಕೆರೆ
103	22	ಖಾಸಗಿ	ತರಿ	0.0339254	ಸಾಬಿಯಬಿ ಬಿನ್ ಲೇಟ್ ಅಬ್ದುಲ್ ರಹೀಮ್, ಗೌಸಿಯಾಬಿ ಬಿನ್ ಲೇಟ್ ಅಬ್ದುಲ್ ರಹೀಮ್, ಫಾತಿಮಉನ್ನಿಸಾ ಬಿನ್ ಲೇಟ್ ಅಬ್ದುಲ್ ರಹೀಮ್, ಮಕ್ಬಲ್ ಜಾನ್ ಬಿನ್ ಯಾಕ್ಬಾಲ್ ಭಾಷಾ 22/1, 22/2
104	32	ಸರಕಾರಿ	ಖುಷ್ಕಿ	0.091492	ಅನೇಸರ ಮುನ್ನ ಜಂಗಲಿ, ಟಿ ಎಚ್ ಸೆಕ್ಷನ್ ರಾ ಹೆ -206
105	33	ಸರಕಾರಿ	ಖುಷ್ಕಿ	1.333745	ದನಗಕ್ಕೆ ಮುಫತ್ತು, ಅನೇಸರ ಮನ್ನಾ ಜಂಗ್ಲಿ ಟಿ ಎಚ್ ಸೆಕ್ಷನ್ ರಾ ಹೆ -206
106	45	ಖಾಸಗಿ	ತರಿ	0.062385	ದನಪತಿ ನಾಯಕ್ ಬಿನ್ ಎ ಎಸ್ ದೂಡಿಯ ನಾಯಕ್ 45/1
107	48	ಖಾಸಗಿ	ತರಿ	0.06033	ದನಪತಿ ನಾಯಕ್ ಬಿನ್ ಎ ಎಸ್ ದೂಡಿಯ ನಾಯಕ್ 15/1
ಗ್ರಾಮ : ತೇವರಕೊಪ್ಪ					
108	50	ಸರಕಾರಿ	ಖುಷ್ಕಿ	0.00018	ಸರಕಾರಿ ಮೊಫತ್ತು
			ಒಟ್ಟು	16.634678	

[F. No. RW/KNT-NH-206/km220to259/3D1]
ABHAY JAIN, Dy. Secy.

ವಿಮೋವೆ ಪ್ರತಿಷ್ಠಾನದಿಂದ 100 ಶಾಲಾ–ಕಾಲೇಜುಗಳಲ್ಲಿ ಇ–ಶಾಲೆ ಯೋಜನೆ ಅನುಷ್ಠಾನ

ಬದಲಾಗಲಿದೆ ಶಾಲಾ ‘ಕಲಿಕಾ ಸ್ವರೂಪ’

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಗ್ರಾಮೀಣ ಸರ್ಕಾರಿ ಶಾಲೆಗಳ ಕಲಿಕಾ ಸ್ವರೂಪ ಬದಲಾಯಿಸಿ, ವಿದ್ಯಾರ್ಥಿಗಳನ್ನು ಆಧುನಿಕ ತಂತ್ರಜ್ಞಾನಕ್ಕೆ ಸಜ್ಜುಗೊಳಿಸಲು ‘ವಿಮೋವೆ’ ಪ್ರತಿಷ್ಠಾನ ನಿರ್ಧರಿಸಿದ್ದು, ಮೊದಲ ಹಂತದಲ್ಲಿ 100 ಶಾಲಾ–ಕಾಲೇಜುಗಳಲ್ಲಿ ‘ಇ–ಶಾಲೆ’ ಯೋಜನೆ ಅನುಷ್ಠಾನಗೊಳಿಸುತ್ತಿದೆ.

ಆಯ್ಕೆ ಮಾಡಿಕೊಂಡ ಪ್ರತಿ ಶಾಲೆಯ ಒಂದು ಕೊಠಡಿಯನ್ನು ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ ‘ಸ್ಮಾರ್ಟ್ ಕ್ಲಾಸ್ ರೂಂ’ ಆಗಿ ಪರಿವರ್ತಿಸುತ್ತಿದೆ. ಕಪ್ಪುಹಲಗೆಯ ಜಾಗದಲ್ಲಿ ₹2 ಲಕ್ಷ ವೆಚ್ಚದಲ್ಲಿ ವಿಂಡೊ ಹಾಗೂ ಆ್ಯಂಡ್ರಾಯ್ಡ್ ತಂತ್ರಜ್ಞಾನ ಒಳಗೊಂಡ ಐಎಫ್‌ಬಿ (ಇಂಟರ್‍ಯಾಕ್ಟಿವ್ ಫ್ಲ್ಯಾಟ್ ಬೋರ್ಡ್) ಅಳವಡಿಸಲಾಗುತ್ತಿದೆ. ಇದರಿಂದ ಸ್ಮಾರ್ಟ್ ಫೋನ್ ಅಥವಾ ಲ್ಯಾಪ್‌ಟಾಪ್‌ನಲ್ಲಿನ ದತ್ತಾಂಶಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಡಿಜಿಟಲ್ ಶಿಕ್ಷಣ ನೀಡಲಾಗುತ್ತದೆ.

ಭವಿಷ್ಯದಲ್ಲಿ ಸಂಸ್ಥೆಯಿಂದಲೇ ಪಠ್ಯಕ್ಕೆ ಹೊರತಾದ ಇತರೆ ತಂತ್ರಜ್ಞಾನದ ಬೋಧನೆಗೆ ನಿರುದ್ಯೋಗಿ ಪದವೀಧರರನ್ನು ನೇಮಿಸಲಾಗುವುದು

ವಿನಯ್ ಸಿಂಧೆ
ಸಂಸ್ಥಾಪಕ, ವಿಮೋವೆ ಪ್ರತಿಷ್ಠಾನ.

ಕೊಠಡಿಯ ಉಳಿದ ಮೂರು ಗೋಡೆಗಳನ್ನೂ ವಿದ್ಯಾರ್ಥಿಗಳ ಕಲಿಕೆ ಉತ್ತೇಜಿಸುವ ವಿವರಗಳಿಗೆ ಮೀಸಲಿಡಲಾಗುತ್ತದೆ. 21ನೇ ಶತಮಾನಕ್ಕೆ ಬೇಕಾಗುವ ಕೌಶಲಗಳು, ಹಸಿರು ಪರಿಸರದ ಪ್ರಯೋಜನ, ಹೊಸ ತಲೆಮಾರಿನ ತಂತ್ರಜ್ಞಾನದ ವಿವರಗಳು ಗೋಡೆಯ ಮೇಲಿರುತ್ತವೆ.

‘ಆಯಾ ವರ್ಷದ ಪಠ್ಯಕ್ರಮದ ಜತೆಗೆ ಪ್ರಸಕ್ತ ಕಾಲಘಟ್ಟದ ಅತ್ಯಂತ ಬೇಡಿಕೆಯ ಕೃತಕ ಬುದ್ಧಿಮತ್ತೆ, ಯಂತ್ರ ತಂತ್ರಜ್ಞಾನ, ಕೌಶಲಾಧಾರಿತ ಶಿಕ್ಷಣ, ವ್ಯಕ್ತಿತ್ವ ವಿಕಸನ, ಹಣಕಾಸು ನಿರ್ವಹಣೆಗಳ ಕಲಿಕೆಗೂ ಅವಕಾಶ ಮಾಡಿಕೊಡಲಾಗಿದೆ. ಇಂತಹ ಅವಕಾಶಗಳಿಂದಾಗಿ ಸರ್ಕಾರಿ ಶಾಲೆಯ ಮಕ್ಕಳು ಭವಿಷ್ಯದಲ್ಲಿ ತ್ವರಿತವಾಗಿ ಉದ್ಯೋಗಾವಕಾಶ ಪಡೆಯಲು, ದೇಶ–ವಿದೇಶಗಳಲ್ಲಿ ಉನ್ನತ ಶಿಕ್ಷಣಕ್ಕೆ ತೆರಳಲು ದಾರಿ ಮಾಡಿಕೊಡಲಿದೆ’ ಎನ್ನುತ್ತಾರೆ ವಿಮೋವೆ ಸಂಸ್ಥಾಪಕ ವಿನಯ್ ಸಿಂಧೆ.

ಶಾಲಾ ಶಿಕ್ಷಕರಿಗೆ ತರಬೇತಿ: ಸಂಸ್ಥೆ ‘ಸ್ಮಾರ್ಟ್ ಕ್ಲಾಸ್ ರೂಂ’ ಸೌಲಭ್ಯ ನೀಡಿದ ನಂತರ ಅದಕ್ಕೆ ಅಗತ್ಯವಾದ ದತ್ತಾಂಶಗಳನ್ನು ಪೂರೈಸುತ್ತವೆ. ಆದರೆ, ಹೊರಗಿನಿಂದ ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸುವುದಿಲ್ಲ. ಬದಲಿಗೆ ಆಯಾ ಶಾಲೆಯ ಶಿಕ್ಷಕರಿಗೆ ತಂತ್ರಜ್ಞಾನ ಬಳಕೆಯ ತರಬೇತಿ ನೀಡಿ, ಅವರನ್ನೇ ಸಜ್ಜುಗೊಳಿಸಲಾಗುತ್ತದೆ.

ಪ್ರಾಯೋಗಿಕ ಅನುಷ್ಠಾನ ಯಶಸ್ವಿ

ಬೆಂಗಳೂರಿನ ಜಕ್ಕೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಪ್ರಾಯೋಗಿಕವಾಗಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. 300ರಿಂದ 500 ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಶಿಕ್ಷಣ ಪಡೆಯುತ್ತಿದ್ದಾರೆ. ಪ್ರತಿ ಕೊಠಡಿಗೂ ತಲಾ ₹ 4 ಲಕ್ಷ ವಿನಿಯೋಗಿಸಲಾಗುತ್ತಿದೆ. ಅಗತ್ಯ ಮೊತ್ತಕ್ಕಾಗಿ ಕಾರ್ಪೊರೇಟ್ ಕಂಪನಿಗಳ ಸಿಎಸ್‌ಆರ್ ನಿಧಿಯ ನೆರವು ಪಡೆದಿದ್ದಾರೆ. ಹಲವು ಕಂಪನಿಗಳು ಅವರ ಕಾರ್ಯಕ್ಕೆ ಕೈಜೋಡಿಸಿವೆ.

ಸಾಮಾಜಿಕ ಸೇವೆಯ ಬದ್ಧತೆ

ವಿಮೋವೆ ಪ್ರತಿಷ್ಠಾನದ ಸಂಸ್ಥಾಪಕ ವಿನಯ್ ಸಿಂಧೆ ಹುಬ್ಬಳ್ಳಿಯವರು. ವೃತ್ತಿಯಲ್ಲಿ ಎಂಜಿನಿಯರ್. ವಿಪ್ರೊ ಸೇರಿದಂತೆ ಹಲವು ಜಾಗತಿಕ ಕಂಪನಿಗಳಲ್ಲಿ ಎರಡು ದಶಕ ಕೆಲಸ ಮಾಡಿದ್ದಾರೆ. ಸಾಮಾಜಿಕ ಸೇವೆಗಾಗಿ ವಿಮೋವೆ ಪ್ರತಿಷ್ಠಾನ ಸ್ಥಾಪಿಸಿದ್ದಾರೆ. ಆರಂಭದಲ್ಲಿ ಗ್ರಾಮ ಉಜ್ವಲ್ ಯೋಜನೆ ಮೂಲಕ ರಾಜ್ಯದ 212 ಹಳ್ಳಿಗಳಲ್ಲಿ ಸೋಲಾರ್ ದೀಪ ಅಳವಡಿಕೆಗೆ ಶ್ರಮಿಸಿದ್ದಾರೆ. ಹಲವು ಶಾಲೆಗಳನ್ನು ಹಸಿರು ಹಾಗೂ ಪ್ರಗತಿ ಶಾಲೆಗಳಾಗಿ ರೂಪಿಸಿದ್ದಾರೆ. ಈಗ ‘ಇ–ಶಾಲೆ’ ಯೋಜನೆ ಕೈಗೆತ್ತಿಕೊಂಡಿದ್ದಾರೆ.

ಬಾಂಬ್ ಸ್ಫೋಟ: ಶಂಕಿತ ವಶಕ್ಕೆ

ಒಂದನೇ ಪುಟದಿಂದ...

‘ಐಎಸ್ ವಿವಿಧ ಘಟಕಗಳ ಮುಖ್ಯಸ್ಥರ ಜೊತೆ ಸಂಪರ್ಕ ಸಾಧಿಸಿದ್ದ ಈತ, ದೇಶದಲ್ಲಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದ. ಇದಕ್ಕಾಗಿ ಕೆಲ ವಿದೇಶಿಯರಿಂದ ಹಣವನ್ನೂ ಪಡೆಯುತ್ತಿದ್ದ. ದೇಶದ ವಿವಿಧ ರಾಜ್ಯಗಳ ಮುಸ್ಲಿಂ ಸಮುದಾಯದ ಯುವಕರನ್ನು ಮೊಬೈಲ್ ಆ್ಯಪ್ ಮೂಲಕ ಸಂಪರ್ಕಿಸುತ್ತಿದ್ದ. ಧರ್ಮದ ಹೆಸರಿನಲ್ಲಿ ಯುವಕರನ್ನು ಭಯೋತ್ಪಾದನಾ ಕೃತ್ಯಕ್ಕೆ ಪ್ರಚೋದಿಸುತ್ತಿದ್ದ. ಇವರಲ್ಲಿ ಹೆಚ್ಚಿನವರು ಯುವಕರು, ಕಾಲೇಜು ವಿದ್ಯಾರ್ಥಿಗಳು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ದಾಳಿಯಲ್ಲಿ ಸಿಕ್ಕಿದ್ದ ಐಇಡಿ ಸಾಮಗ್ರಿ: ‘ಮಿನಾಜ್ ಹಾಗೂ ಸಹಚರರ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಎನ್‌ಐಎ ಅಧಿಕಾರಿಗಳು, ಕರ್ನಾಟಕ, ಮಹಾರಾಷ್ಟ್ರ, ಜಾರ್ಖಂಡ್ ಹಾಗೂ ದೆಹಲಿಯ 19 ಸ್ಥಳಗಳ ಮೇಲೆ 2023ರ ಡಿಸೆಂಬರ್ 18ರಂದು ದಾಳಿ ಮಾಡಿದ್ದರು. ಮಿನಾಜ್ ಸೇರಿ 8 ಶಂಕಿತ ಉಗ್ರರನ್ನು ಬಂಧಿಸಿದ್ದರು’ ಎಂದು ತನಿಖಾ ಸಂಸ್ಥೆ ಮೂಲಗಳು ತಿಳಿಸಿವೆ.

‘ಕಚ್ಚಾ ಬಾಂಬ್ (ಐಇಡಿ) ತಯಾರಿಸಲು ಶಂಕಿತರು ಸಂಗ್ರಹಿಸಿಟ್ಟುಕೊಂಡಿದ್ದ ಸಲ್ಫರ್, ಪೊಟ್ಯಾಶಿಯಂ ನೈಟ್ರೇಟ್, ಗನ್ ಪೌಡರ್, ಇದ್ದಿಲು, ಎಥೆನಾಲ್, ಚೂಪಾದ ಆಯುಧಗಳು, ಎಲೆಕ್ಟ್ರಾನಿಕ್ ಉಪಕರಣಗಳು, ಸ್ಮಾರ್ಟ್ ವಾಚ್‌ಗಳು, ನಗದು ಹಾಗೂ ಕೆಲ ದಾಖಲೆಗಳನ್ನೂ ಎನ್‌ಐಎ ಅಧಿಕಾರಿಗಳು ಜಪ್ತಿ ಮಾಡಿದ್ದರು. ಇದೇ ರೀತಿಯ ಸಾಮಗ್ರಿಗಳನ್ನು ಬಳಸಿ ಬಾಂಬ್ ಸಿದ್ಧಪಡಿಸಿ, ರಾಮೇಶ್ವರಂ ಕೆಫೆಯಲ್ಲಿ ಇರಿಸಿರುವ ಶಂಕೆ ಇದೆ’ ಎಂದು ಹೇಳಿವೆ.

‘ಮಿನಾಜ್ ಜೊತೆಯಲ್ಲೇ ಬಳ್ಳಾರಿಯ ಸೈಯದ್ ಸಮೀರ್, ಬೆಂಗಳೂರಿನ ಮೊಹಮ್ಮದ್ ಮುನಿರುದ್ದೀನ್, ಸೈಯದ್ ಸಮೀವುಲ್ಲಾ, ಮೊಹಮ್ಮದ್ ಮುಜಮಿಲ್, ಮುಂಬೈನ ಅನಸ್ ಇಕ್ಬಾಲ್ ಶೇಖ್, ದೆಹಲಿಯ ಶಿಯಾನ್ ರಹಮಾನ್ ಅಲಿಯಾಸ್ ಹುಸೇನ್, ಜಾರ್ಖಂಡ್‌ನ ಮೊಹಮ್ಮದ್ ಶಹಬಾಜ್ ಅಲಿಯಾಸ್ ಜುಲ್ಫಿಕರ್ ಅಲಿಯಾಸ್ ಗುಡ್ಡುನನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದರು. ಇದರಲ್ಲಿ ಕೆಲವರು ಎಂಜಿನಿಯರಿಂಗ್ ಹಾಗೂ ಕಾನೂನು ವಿದ್ಯಾರ್ಥಿಗಳು’ ಎಂದು ಮೂಲಗಳು ತಿಳಿಸಿವೆ.

‘ಕ್ಯಾಪ್’ ಮೇಲೆ ‘10’: ಏನಿದು ಸುಳಿವು’

‘ಬಾಂಬ್ ಸ್ಫೋಟ ಪ್ರಕರಣದ ಶಂಕಿತ, ಸಂಖ್ಯೆ ‘10’ ಎಂಬುದಾಗಿ ಬರೆದಿದ್ದ ಕ್ಯಾಪ್ ಧರಿಸಿದ್ದ. ‘10’ ಸಂಖ್ಯೆ ಸುಳಿವು ಏನು ಎಂಬುದನ್ನು ತನಿಖಾ ಸಂಸ್ಥೆಗಳು ಪತ್ತೆ ಮಾಡುತ್ತಿವೆ’ ಎಂದು ಮೂಲಗಳು ಹೇಳಿವೆ.

‘ಬಹುತೇಕ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಶಂಕಿತ ಧರಿಸಿದ್ದ ಕ್ಯಾಪ್ ಎದ್ದು ಕಾಣುತ್ತಿದೆ. ಶಂಕಿತ ಉದ್ದೇಶಪೂರ್ವಕವಾಗಿಯೇ ಸಂಖ್ಯೆ ‘10’ ಬರೆದಿದ್ದ ಕ್ಯಾಪ್ ಧರಿಸಿರುವ ಅನುಮಾನವಿದೆ. ‘10’ ಸಂಖ್ಯೆ ಅರ್ಥವೇನು? ಹಾಗೂ ಇದು ಮುಂದಿನ ಘಟನೆಯ ಸುಳಿವಾ? ಎಂಬ ಬಗ್ಗೆಯೂ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ’ ಎಂದು ಮೂಲಗಳು ತಿಳಿಸಿವೆ.

‘ಯುವಕರಿಗೆ ಐಇಡಿ ತರಬೇತಿ’

‘ಶಂಕಿತ ಮಿನಾಜ್, ಐಎಸ್ ಬಳ್ಳಾರಿ ಘಟಕದ ಮುಖ್ಯಸ್ಥ ಜವಾಬ್ದಾರಿ ವಹಿಸಿಕೊಂಡಿದ್ದ. ಈತ ಹಾಗೂ ಇತರರು, ಕಚ್ಚಾ ಬಾಂಬ್ (ಐಇಡಿ) ತಯಾರಿಸುವ ಬಗ್ಗೆ ತರಬೇತಿ ಪಡೆದಿದ್ದರು. ಜೊತೆಗೆ, ಭಯೋತ್ಪಾದನಾ ಕೃತ್ಯ ಎಸಗಲು ಪ್ರಚೋದನೆಗೊಂಡ ಯುವಕರಿಗೂ ತರಬೇತಿ ಕೊಡಿಸುತ್ತಿದ್ದರೆಂಬ ಮಾಹಿತಿ ಇದೆ’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

ಸಿಇಟಿ: ಅರ್ಜಿ ಸಲ್ಲಿಕೆಗೆ 15ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗೆ (ಸಿಇಟಿ) ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮಾರ್ಚ್ 15ರವರೆಗೆ ಅವಕಾಶ ನೀಡಿದೆ.

ಮಾರ್ಚ್ 12ರಿಂದ 15ರವರೆಗೆ ಅರ್ಜಿ ಸಲ್ಲಿಸಬಹುದು. ಶುಲ್ಕ ಪಾವತಿಸಲು 16ರ ಸಂಜೆ 5.30ರವರೆಗೆ ಸಮಯ ಇರುತ್ತದೆ. ಅರ್ಜಿ ಸಲ್ಲಿಸದಿರುವವರು ಹಾಗೂ ಅರ್ಜಿಗಳನ್ನು ಪೂರ್ಣಗೊಳಿಸದಿರುವವರು ಈ ಅವಕಾಶ ಪಡೆದುಕೊಳ್ಳಬಹುದು. ವೈದ್ಯಕೀಯ ಕೋರ್ಸ್‌ಗಳ ಪ್ರವೇಶ ಬಯಸುವವರೂ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸಬಹುದು ಎಂದು ಅವರು ವಿವರಿಸಿದ್ದಾರೆ.

ಜೀವಮಾನ ಸಾಧನೆ

ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಗುರುವಾರ ನಡೆದ 15ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ಚಲನಚಿತ್ರ ನಿರ್ದೇಶಕ ಎಂ.ಎಸ್.ಸತ್ಯು ಅವರಿಗೆ ‘ಜೀವಮಾನ ಸಾಧನೆ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಚಿತ್ರೋತ್ಸವ ಸಮಿತಿ ಅಧ್ಯಕ್ಷ ಕೆ.ವಿ. ತ್ರಿಲೋಕ್ ಚಂದ್ರ, ನಟಿ ಉಮಾಶ್ರೀ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧುಕೋಕಿಲ, ವಾರ್ತಾ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಚಿತ್ರೋತ್ಸವದ ರಾಯಭಾರಿ ಡಾಲಿ ಧನಂಜಯ, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ಎನ್. ಸುರೇಶ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬೋರ್ಡ್ ಪರೀಕ್ಷೆ ನಡೆಸಲು ಅಸ್ತು

ಒಂದನೇ ಪುಟದಿಂದ...

ಈ ದಿಸೆಯಲ್ಲಿ ಸರ್ಕಾರ ಮತ್ತು ಸಕ್ಷಮ ಪ್ರಾಧಿಕಾರಗಳು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿವೆ. ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ ಏಕಸದಸ್ಯ ನ್ಯಾಯಪೀಠವು ಯಾವುದೇ ಮಧ್ಯಂತರ ಆದೇಶ ನೀಡಿರಲಿಲ್ಲ. ಹೀಗಾಗಿ, ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ತಡೆ ನೀಡದೇ ಹೋದರೆ ಅನಿಶ್ಚಿತ ಸನ್ನಿವೇಶವನ್ನು ಮುಂದುವರಿಸಿದಂತಾಗುತ್ತದೆ’ ಎಂದು ವಿಭಾಗೀಯ ನ್ಯಾಯಪೀಠವು ಅಭಿಪ್ರಾಯಪಟ್ಟಿದೆ.

‘ಪರೀಕ್ಷಾ ಮುನ್ನಾದಿನ ಇಂತಹ ಸನ್ನಿವೇಶ ಸೃಷ್ಟಿಯಾಗುವುದು ವಿದ್ಯಾರ್ಥಿ ಸಮುದಾಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬ ಸರ್ಕಾರದ ವಾದ ಸೂಕ್ತವಾಗಿಯೇ ಇದೆ. ಹಾಗಾಗಿ, ಈ ಮೇಲ್ಮನವಿ ಕುರಿತಂತೆ ಮುಂದಿನ ಆದೇಶ ಬರುವವರೆಗೆ ಅಥವಾ ವಿಲೇವಾರಿ ಆಗುವತನಕ ತಡೆ ಆದೇಶ ಜಾರಿಯಲ್ಲಿರುತ್ತದೆ’ ಎಂದು ವಿಭಾಗೀಯ ನ್ಯಾಯಪೀಠ ಸ್ಪಷ್ಟಪಡಿಸಿದೆ.

ಎಸ್‌ಎಲ್‌ಪಿ: ‘ವಿಭಾಗೀಯ ನ್ಯಾಯಪೀಠದ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ (ಎಸ್‌ಎಲ್‌ಪಿ) ಸಲ್ಲಿಸಲು ನಿರ್ಧರಿಸಲಾಗಿದೆ’ ಎಂದು ರುಪ್ಸಾ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಪ್ರತಿಕ್ರಿಯಿಸಿದ್ದಾರೆ.

ಪ್ರಕರಣವೇನು?: ಬೋರ್ಡ್ ಪರೀಕ್ಷೆಯ ಎರಡು ಪ್ರತ್ಯೇಕ ಅಧಿಸೂಚನೆಗಳನ್ನು ಪ್ರಶ್ನಿಸಿ ರುಪ್ಸಾ ಹಾಗೂ ‘ಅನುದಾನರಹಿತ ಮಾನ್ಯತೆ ಹೊಂದಿದ ಶಾಲೆಗಳ ಸಂಘಟನೆ’ (ಅವರ್ ಸ್ಕೂಲ್ಸ್) ಸಲ್ಲಿಸಿದ್ದ ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ರವಿ ವಿ.ಹೊಸಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ತಡೆ ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಪ್ರತಿವಾದಿಗಳಾದ ರುಪ್ಸಾ ಮತ್ತು ಅವರ್ ಸ್ಕೂಲ್ ಪರ ಸುಪ್ರೀಂ ಕೋರ್ಟ್ ವಕೀಲ ಕೆ.ವಿ.ಧನಂಜಯ ಅವರು ವಾದ ಮಂಡಿಸಿದರು.

ಸರ್ಕಾರದ ನಿಲುವಿನ ಸಮರ್ಥನೆ

ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಮ್ ಹುಯಿಲಗೋಳ ಅವರು, ‘ಇದೇ 11ರ ಮಧ್ಯಾಹ್ನ 2.30ಕ್ಕೆ 5, 8 ಮತ್ತು 9ನೇ ತರಗತಿ ಪಬ್ಲಿಕ್ ಪರೀಕ್ಷೆಗಳು ಆರಂಭವಾಗಲಿವೆ. ಮಕ್ಕಳ ಹಿತದೃಷ್ಟಿಯಿಂದ ಬೋರ್ಡ್ ಪರೀಕ್ಷೆ ನಡೆಸಲಾಗುತ್ತಿದೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ಲೋಪಗಳಿದ್ದು, ಅದನ್ನು ಸರಿಪಡಿಸುವುದಕ್ಕಾಗಿ ಬೋರ್ಡ್ ಪರೀಕ್ಷೆ ನಡೆಸಲಾಗುತ್ತಿದೆ’ ಎಂದು ಬಲವಾಗಿ ಸಮರ್ಥಿಸಿಕೊಂಡರು.

‘ರಾಜ್ಯದಲ್ಲಿ 5-8ನೇ ತರಗತಿಯ 46 ಸಾವಿರ ಶಾಲೆಗಳಿದ್ದು, ಪ್ರತಿ ಬ್ಯಾಚಿನ ಸುಮಾರು 9 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಾರೆ. ಒಟ್ಟಾರೆ 5, 8 ಮತ್ತು 9ನೇ ತರಗತಿಯ 25 ಲಕ್ಷ ವಿದ್ಯಾರ್ಥಿಗಳಿದ್ದಾರೆ. ರುಪ್ಸಾ ಅತ್ಯಂತ ಕಡಿಮೆ ಶಾಲೆಗಳನ್ನು ಪ್ರತಿನಿಧಿಸುತ್ತದೆ. ಈ ಪೈಕಿ ಖಾಸಗಿ ಅನುದಾನರಹಿತ ಶಾಲೆಯ ಮಕ್ಕಳು ಸುಮಾರು 8 ಲಕ್ಷ ಮಾತ್ರ. ಉಳಿದ 5, 8 ಮತ್ತು 9ನೇ ತರಗತಿಯ 20 ಲಕ್ಷ ವಿದ್ಯಾರ್ಥಿಗಳು ಇದೇ 11ರಂದು ಪರೀಕ್ಷೆ ಬರೆಯಲು ಸಿದ್ಧರಾಗಿದ್ದಾರೆ’ ಎಂದು ವಿಕ್ರಮ್ ಹುಯಿಲಗೋಳ ವಿವರಿಸಿದರು.

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001. ಫೋನ್: 080–29701510, ಇ–ಮೇಲ್: dce.tender2017@gmail.com

ಸಂಖ್ಯೆ: DCE/ITS/PUR/5/2024-INFO- (Computer No. 1335421) ದಿನಾಂಕ: 07.03.2024

ಇ–ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಸಾಮಗ್ರಿಗಳನ್ನು ಪೂರೈಸುವ ಸಂಬಂಧ ಆಸಕ್ತ ಬಿಡ್‌ದಾರರಿಂದ ಇ–ಸಂಗ್ರಹಣೆ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ.

1)"ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಡೆಸ್ಕ್‌ಟಾಪ್, ಪ್ರಿಂಟರ್ಸ್ ಮತ್ತು ಯು.ಪಿ.ಎಸ್ ಸರಬರಾಜು, ಅನುಸ್ಥಾಪನೆ ಮತ್ತು ನಿರ್ವಹಣೆ ಮಾಡುವ ಬಗ್ಗೆ" (ಟೆಂಡರ್ ಸಂಖ್ಯೆ: ಡಿಸಿಇ/2023–24/ಐಎನ್‌ಡಿ 0011 ದಿನಾಂಕ :07/03/2024)

2)"ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ವೆಬ್ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ಉಪಕರಣಗಳನ್ನು ಸರಬರಾಜು, ಅನುಸ್ಥಾಪನೆ ಮತ್ತು ನಿರ್ವಹಣೆ ಮಾಡುವ ಬಗ್ಗೆ "(ಟೆಂಡರ್ ಸಂಖ್ಯೆ: ಡಿಸಿಇ/2023–24/ಐಎನ್‌ಡಿ0012 ದಿನಾಂಕ : 07/03/2024)

3)"ಉನ್ನತ ಶಿಕ್ಷಣ ಇಲಾಖೆಯ UUCMS ನ ಪ್ರಾಜೆಕ್ಟ್ ಮಾನಿಟರಿಂಗ್ ಯೂನಿಟ್‌ಗಾಗಿ (PMU) ಆಪರೇಷನ್ಸ್ ಮ್ಯಾನೇಜರ್, ಡೇಟಾಬೇಸ್ ಅಡ್ಮಿನಿಸ್ಟ್ರೇಟರ್, ಸಪೋರ್ಟ್ ಇಂಜಿನಿಯರ್, ಅಕೌಂಟ್ಸ್ ಅಸಿಸ್ಟೆಂಟ್ ಮತ್ತು ಡಿ ಗ್ರೂಪ್ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ"(ಟೆಂಡರ್ ಸಂಖ್ಯೆ: ಡಿಸಿಇ/2023–24/ಎಸ್‌ಇ0002 ದಿನಾಂಕ : 07/03/2024)

ಟೆಂಡರ್ ದಸ್ತಾವೇಜು ಮತ್ತು ಇತರ ವಿವರಗಳಿಗಾಗಿ https://eproc.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ
1	ಟೆಂಡರ್ ಸಂಖ್ಯೆ: ಡಿಸಿಇ/2023–24/ಐಎನ್‌ಡಿ 0011 ದಿನಾಂಕ :07/03/2024 "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪದವಿ ಕಾಲೇಜುಗಳಿಗೆ ಡೆಸ್ಕ್‌ಟಾಪ್, ಪ್ರಿಂಟರ್ಸ್ ಮತ್ತು ಯು.ಪಿ.ಎಸ್ ಸರಬರಾಜು, ಅನುಸ್ಥಾಪನೆ ಮತ್ತು ನಿರ್ವಹಣೆ ಮಾಡುವ ಬಗ್ಗೆ "	07/03/2024	11/03/2024 ಬೆಳಿಗ್ಗೆ 11.00 ಗಂಟೆಗೆ	15/03/2024 ಸಂಜೆ 5.30 ಗಂಟೆಗೆ	18/03/2024 ಬೆಳಿಗ್ಗೆ 10:00 ಗಂಟೆಗೆ
2	ಟೆಂಡರ್ ಸಂಖ್ಯೆ: ಡಿಸಿಇ/2023–24/ಐಎನ್‌ಡಿ0012 ದಿನಾಂಕ :07/03/2024 "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪದವಿ ಕಾಲೇಜುಗಳಿಗೆ ವೆಬ್ ಆಧಾರಿತ ಬಯೋಮೆಟ್ರಿಕ್ ಉಪಕರಣಗಳನ್ನು ಸರಬರಾಜು, ಅನುಸ್ಥಾಪನೆ ಮತ್ತು ನಿರ್ವಹಣೆ ಮಾಡುವ ಬಗ್ಗೆ "	07/03/2024	11/03/2024 ಮಧ್ಯಾಹ್ನ 12.00 ಗಂಟೆಗೆ	15/03/2024 ಸಂಜೆ 5.30 ಗಂಟೆಗೆ	18/03/2024 ಬೆಳಿಗ್ಗೆ 10:00 ಗಂಟೆಗೆ
3	ಟೆಂಡರ್ ಸಂಖ್ಯೆ: ಡಿಸಿಇ/2021–22/ಎಸ್ ಇ 0002 ದಿನಾಂಕ :07/03/2024 ಉನ್ನತ ಶಿಕ್ಷಣ ಇಲಾಖೆಯ UUCMS ನ ಪ್ರಾಜೆಕ್ಟ್ ಮಾನಿಟರಿಂಗ್ ಯೂನಿಟ್‌ಗಾಗಿ (PMU) ಆಪರೇಷನ್ ಮ್ಯಾನೇಜರ್, ಡೇಟಾಬೇಸ್ ಅಡ್ಮಿನಿಸ್ಟ್ರೇಟರ್, ಸಪೋರ್ಟ್ ಇಂಜಿನಿಯರ್, ಅಕೌಂಟ್ಸ್ ಅಸಿಸ್ಟೆಂಟ್ ಮತ್ತು ಡಿ ಗ್ರೂಪ್ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ	07/03/2024	11/03/2024 ಮಧ್ಯಾಹ್ನ 1.00 ಗಂಟೆಗೆ	15/03/2024 ಸಂಜೆ 5.30 ಗಂಟೆಗೆ	18/03/2024 ಬೆಳಿಗ್ಗೆ 10:00 ಗಂಟೆಗೆ

ಸಹಿ/–
ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು

DIPR/DDU/Zen/R.O:4175/2023-24

ಸಂಕ್ಷಿಪ್ತ ಸುದ್ದಿ

ನಿಗಮ- ಮಂಡಳಿ: ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು: ಕಿಯೋನಿಕ್ಸ್ ಸೇರಿದಂತೆ ವಿವಿಧ ನಿಗಮಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗೆ ನಡೆದಿದ್ದ ಪರೀಕ್ಷೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಮೈಸೂರು ಸೇಲ್ಸ್ ಇಂಟರ್ ನ್ಯಾಶನಲ್ ಲಿಮಿಟೆಡ್, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮಗಳ 670 ಖಾಲಿ ಹುದ್ದೆಗಳಿಗೆ ಪರೀಕ್ಷೆಗಳನ್ನು ನಡೆಸಲಾಗಿತ್ತು

ಅಭ್ಯರ್ಥಿಗಳು ಕೆಇಎ ಜಾಲತಾಣ http://kea.kar.nic.in ಲಿಂಕ್ ಮೂಲಕ ತಮ್ಮ ಅರ್ಜಿ ಸಂಖ್ಯೆ ಮತ್ತು ಜನ್ಮ ದಿನಾಂಕ ನಮೂದಿಸಿ ಫಲಿತಾಂಶದ ವಿವರಗಳನ್ನು ಪಡೆಯಬಹುದು.

‘ಆ್ಯಸಿಡ್ ನಿಷೇಧಕ್ಕೆ ಶೀಘ್ರ ಕ್ರಮ’

ಬೆಂಗಳೂರು: ‘ಆ್ಯಸಿಡ್ ನಿಷೇಧದ ಕುರಿತು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯಲಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಆ್ಯಸಿಡ್ ದುರ್ಬಳಕೆ ಆಗುತ್ತಿದೆ. ಇದರಿಂದ ಮಹಿಳೆಯರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಎಲ್ಲರ ಕೈಗೂ ಸುಲಭವಾಗಿ ಆ್ಯಸಿಡ್ ಸಿಗಬಾರದು. ಈ ಸಂಬಂಧ ಡಿಜಿ ಮತ್ತು ಐಜಿಪಿ ಅಲೋಕ್ ಮೋಹನ್ ಕ್ರಮ ತೆಗೆದುಕೊಳ್ಳಲಿದ್ದಾರೆ’ ಎಂದರು.

ಯುವ ಮತದಾರರ ಸೆಳೆಯಲು ತಂತ್ರ • ಉದ್ಯೋಗ, ಶಿಷ್ಯವೇತನದ ಭರವಸೆ ನೀಡಿದ ರಾಹುಲ್

ಕಾಂಗ್ರೆಸ್‌ನಿಂದ ಪಂಚ ಗ್ಯಾರಂಟಿ ಘೋಷಣೆ

ಪ್ರಜಾವಾಣಿ ವಾರ್ತೆ

ಜೈಪುರ: ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ 30 ಲಕ್ಷ ಹುದ್ದೆಗಳ ಭರ್ತಿ, ಪ್ರಶ್ನೆಪತ್ರಿಕೆ ಸೋರಿಕೆ ತಡೆಗೆ ಕಾನೂನು, ಡಿಪ್ಲೊಮಾ-ಪದವೀಧರರಿಗೆ ಶಿಷ್ಯವೇತನ ಸಹಿತ ಅಪ್ರೆಂಟಿಸ್‌ಷಿಪ್, ಗಿಗ್ ಕಾರ್ಮಿಕರ ಭದ್ರತೆಗೆ ಕಾನೂನು ಸೇರಿದಂತೆ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಘೋಷಿಸಿದರು.

ರಾಜಸ್ಥಾನದ ಬನ್ಸ್‌ವಾರಾದಲ್ಲಿ 'ಭಾರತ ಜೋಡೊ ನ್ಯಾಯ ಯಾತ್ರೆ'ಯ ಭಾಗವಾಗಿ ನಡೆದ ರ್‍ಯಾಲಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದರು —ಪಿಟಿಐ ಚಿತ್ರ

ಲೋಕಸಭಾ ಚುನಾವಣೆಗೂ ಮುನ್ನ ಯುವ ಮತದಾರರನ್ನು ಸೆಳೆಯುವ ನಿಟ್ಟಿನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಈ ಭರವಸೆಗಳನ್ನು ನೀಡಿದರು. ರಾಜಸ್ಥಾನದ ಬಾನ್ಸ್‌ವಾಢದಲ್ಲಿ ಗುರುವಾರ 'ಭಾರತ ಜೋಡೊ ನ್ಯಾಯ ಯಾತ್ರೆ'ಯ ಭಾಗವಾಗಿ ನಡೆದ ರ್‍ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಈ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೂ ಜತೆಯಲ್ಲಿದ್ದರು.

ಹುದ್ದೆಗಳ ಭರ್ತಿಗೆ ಭರವಸೆ: 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆದ್ಯತೆ ಮೇರೆಗೆ ಯುವ ಜನರಿಗೆ 30 ಲಕ್ಷ ಉದ್ಯೋಗಾವಕಾಶಗಳನ್ನು ಒದಗಿಸಲಾಗುವುದು. ಇದು ನಮ್ಮ 'ಭರ್ತಿ ಭರವಸೆ'. ನೇಮಕಾತಿ ಸಲುವಾಗಿ ವಾರ್ಷಿಕ ವೇಳಾಪಟ್ಟಿ ಪ್ರಕಟಿಸಲಾಗುವುದು. ಖಾಲಿ ಹುದ್ದೆಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು ಎಂದು ಅವರು ಹೇಳಿದರು. ದೇಶದಲ್ಲಿ ಸರ್ಕಾರಿ ವಲಯದಲ್ಲಿ 30 ಲಕ್ಷ ಹುದ್ದೆಗಳು ಖಾಲಿಯಿದ್ದು, ಅವುಗಳ ಭರ್ತಿಗೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ರಾಹುಲ್ ತಿಳಿಸಿದರು.

ಅಪ್ರೆಂಟಿಸ್‌ಷಿಪ್ ಭರವಸೆ: 'ಡಿಪ್ಲೊಮಾ ಮತ್ತು ಪದವೀಧರರಿಗೆ ತಾವು ಉತ್ತೀರ್ಣರಾದ ಮೊದಲ ವರ್ಷದಲ್ಲಿ ಸರ್ಕಾರಿ ಅಥವಾ ಖಾಸಗಿ ವಲಯಗಳಲ್ಲಿ ಕನಿಷ್ಠ ಒಂದು ವರ್ಷ ಅಪ್ರೆಂಟಿಸ್‌ಷಿಪ್‌ಗೆ ಅವಕಾಶ ಒದಗಿಸುವ ಭರವಸೆಯನ್ನು ಕಾಂಗ್ರೆಸ್ ನೀಡುತ್ತಿದೆ. ಈ ಮೂಲಕ 25 ವರ್ಷದೊಳಗಿನವರು ತಿಂಗಳಿಗೆ ₹ 8,500 ಅಥವಾ ವಾರ್ಷಿಕವಾಗಿ ಒಂದು ಲಕ್ಷ ರೂಪಾಯಿ ಆದಾಯಗಳಿಸಲು ಸಾಧ್ಯವಾಗುತ್ತದೆ' ಎಂದು ಹೇಳಿದರು. ಈ ಗ್ಯಾರಂಟಿಯನ್ನು ಅವರು 'ಪೆಹ್ಲಿ ನೌಕ್ರಿ ಪಕ್ಕಿ' ಎಂದು ಕರೆದರು. ಅಪ್ರೆಂಟಿಸ್‌ಷಿಪ್ ಅವಕಾಶವನ್ನು ಖಚಿತಪಡಿಸಲು 'ನರೇಗಾ' ಮಾದರಿಯಲ್ಲಿ ಕಾನೂನು ತರುವುದಾಗಿಯೂ ಭರವಸೆ ನೀಡಿದರು.

ಪ್ರಶ್ನೆಪತ್ರಿಕೆ ಸೋರಿಕೆ ತಡೆಗೆ ಕ್ರಮ: ಪ್ರಶ್ನೆಪತ್ರಿಕೆಗಳ ಸೋರಿಕೆ ವಿರುದ್ಧ ಕಠಿಣ ಕಾನೂನನ್ನು ತರುವುದಾಗಿ ಕಾಂಗ್ರೆಸ್ ಘೋಷಿಸಿದೆ. ಸೋರಿಕೆಗೆ ಅವಕಾಶ ನೀಡದಂತೆ ಪರೀಕ್ಷೆಗಳನ್ನು ನಡೆಸಲಾಗುವುದು ಮತ್ತು ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆಗೆ ನೀಡದಂತೆ ಕ್ರಮ ತೆಗೆದುಕೊಳ್ಳಲಾಗುವುದು. ಇವುಗಳ ಹೊರತಾಗಿಯೂ ಪ್ರಶ್ನೆಪತ್ರಿಕೆ ಸೋರಿಕೆಯಾದರೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಮಾಡಲಾಗುವುದು ಎಂದು ಅವರು ತಿಳಿಸಿದರು.

ಗಿಗ್ ಕಾರ್ಮಿಕರಿಗೆ ಭದ್ರತೆಯ ಗ್ಯಾರಂಟಿ: ಲಕ್ಷಾಂತರ ಯುವ ಜನರು ಗಿಗ್ ಕೆಲಸಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆರ್ಥಿಕತೆ ಬೆಳವಣಿಗೆಯ ಭಾಗವಾಗಿರುವ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಉತ್ತಮ ಕೆಲಸದ ವಾತಾವರಣ ನಿರ್ಮಿಸುವ ಸಲುವಾಗಿ ಕಾನೂನು ಜಾರಿಗೊಳಿಸಲಾಗುವುದು ಎಂದು ಅವರು ಭರವಸೆ ನೀಡಿದರು.

₹ 5,000 ಕೋಟಿ 'ಕಾರ್ಪಸ್' ನಿಧಿ': 'ಸ್ಟಾರ್ಟ್‌ಅಪ್'ಗಳಲ್ಲಿ ತೊಡಗಿಸಿಕೊಳ್ಳಲು ಬಯಸುವವರಿಗಾಗಿ ₹ 5,000 ಕೋಟಿ 'ಕಾರ್ಪಸ್ ನಿಧಿ' ಇಡಲಾಗುವುದು ಎಂದು ರಾಹುಲ್ ಆಶ್ವಾಸನೆ ನೀಡಿದರು. ಐದು ವರ್ಷಗಳವರೆಗೆ ದೇಶದ ಎಲ್ಲ ಜಿಲ್ಲೆಗಳ ಯುವಜನರು ಇದರ ಸದುಪಯೋಗ ಪಡೆದುಕೊಳ್ಳಬಹುದು. 40 ವರ್ಷದೊಳಗಿನವರು ಯಾವುದೇ ಕ್ಷೇತ್ರದಲ್ಲಿ ತಮ್ಮ ವ್ಯಾಪಾರ, ಉದ್ಯಮಗಳಿಗಾಗಿ 'ಸ್ಟಾರ್ಟ್‌ಅಪ್' ನಿಧಿಯನ್ನು ಪಡೆಯಲು ಅನುಕೂಲ ಕಲ್ಪಿಸಲಾಗುವುದು ಎಂದು ಹೇಳಿದರು.

ಚುನಾವಣಾ ಆಯೋಗದ ಪ್ರಕಾರ, ದೇಶದಲ್ಲಿನ 96.88 ಕೋಟಿ ಮತದಾರರ ಪೈಕಿ ಎರಡು ಕೋಟಿ ಮತದಾರರು 18–29 ವರ್ಷದೊಳಗಿನವರಾಗಿದ್ದಾರೆ. ಈ ಗ್ಯಾರಂಟಿಗಳ ಮೂಲಕ ಯುವ ಮತದಾರರನ್ನು ಸೆಳೆಯುವುದು ಕಾಂಗ್ರೆಸ್‌ನ ಯತ್ನವಾಗಿದೆ.

ಮುಖ್ಯಾಂಶಗಳು

- 25 ವರ್ಷದೊಳಗಿನವರಿಗೆ ಅಪ್ರೆಂಟಿಸ್‌ಷಿಪ್
- 40 ವರ್ಷದೊಳಗಿನವರ 'ಸ್ಟಾರ್ಟ್‌ಅಪ್'ಗೆ ಪ್ರೋತ್ಸಾಹ
- ಗಿಗ್ ಕಾರ್ಮಿಕರಿಗೆ ಉತ್ತಮ ಕೆಲಸದ ವಾತಾವರಣ

ಯುವಕರಿಗೆ ನೈಪುಣ್ಯ, ಘನತೆ ಮತ್ತು ಉದ್ಯೋಗಾವಕಾಶಗಳನ್ನು ಹಕ್ಕನ್ನಾಗಿಸಲಾಗುವುದು. ಶಿಷ್ಯವೇತನ ಕಡ್ಡಾಯಗೊಳಿಸಲಾಗುವುದು

ಪ್ರವೀಣ್ ಚಕ್ರವರ್ತಿ, ಪ್ರಣಾಳಿಕೆ ಸಮಿತಿ ಸದಸ್ಯ

'ವ್ಯಾಪಕ ಸಮಾಲೋಚನೆ'

'ಅಪ್ರೆಂಟಿಸ್‌ಷಿಪ್ ಹಕ್ಕು ಕಾಯ್ದೆ' ಜಾರಿ ಕುರಿತು ಗ್ಯಾರಂಟಿ ನೀಡಿರುವ ಕಾಂಗ್ರೆಸ್, ಈ ಕುರಿತು ಎಂಎಸ್‌ಎಂಇ ವಲಯದ ತಜ್ಞರು, ಆರ್ಥಿಕ ತಜ್ಞರು, ನೀತಿ ನಿರೂಪಕರು ಮತ್ತು ಉದ್ಯಮಿಗಳೊಂದಿಗೆ ವ್ಯಾಪಕ ಸಮಾಲೋಚನೆ ನಡೆಸಿದೆ ಎಂದು ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಸದಸ್ಯ ಪ್ರವೀಣ್ ಚಕ್ರವರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಅಪ್ರೆಂಟಿಸ್‌ಷಿಪ್ ಹಕ್ಕು ಕಾಯ್ದೆಯು ಬಹುತೇಕ ಕೌಶಲ ಮತ್ತು ಉದ್ಯೋಗದ ಹಕ್ಕಿನಂತೆಯೇ ಇರುತ್ತದೆ. ಇದನ್ನು ಕಾನೂನುಬದ್ಧವಾಗಿ ಖಾತರಿಪಡಿಸುವ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ಒಬ್ಬರು ಮಾತನಾಡಿದ್ದಾರೆ. ಇದು ನಿರುದ್ಯೋಗ ಭತ್ಯೆಯಂತಲ್ಲ. ಬದಲಿಗೆ ಕೌಶಲ, ಘನತೆ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ್ದಾಗಿದೆ' ಎಂದು ಅವರು ವಿವರಿಸಿದರು.

ಇಲ್ಲಿ ಯುವ ಜನರಿಗೆ ಕೌಶಲ, ಉದ್ಯೋಗದ ಜತೆಗೆ ಶಿಷ್ಯವೇತನ ದೊರೆಯುತ್ತದೆ. ಇದನ್ನು ಉದ್ಯೋಗದಾತರು ಮತ್ತು ಸರ್ಕಾರ ಹಂಚಿಕೊಳ್ಳುತ್ತದೆ ಎಂದು ಅವರು ಹೇಳಿದರು.

ಇಂದು ಬಿಜೆಪಿ ಪಟ್ಟಿ ಬಿಡುಗಡೆ ಸಂಭವ • ನಾಲ್ಕೈದು ದಿನಗಳಲ್ಲಿ ಕಾಂಗ್ರೆಸ್ ಮೊದಲ ಪಟ್ಟಿ ಪ್ರಕಟ ಸಾಧ್ಯತೆ

ಅಭ್ಯರ್ಥಿಗಳ ಆಖೈರಿಗೆ ಕೈ–ಕಮಲ ಕಸರತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ 28 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಖೈರುಗೊಳಿಸಲು ಕಾಂಗ್ರೆಸ್ ಹಾಗೂ ಬಿಜೆಪಿಯ ಉನ್ನತ ನಾಯಕರು ರಾಷ್ಟ್ರ ರಾಜಧಾನಿಯಲ್ಲಿ ಗುರುವಾರ ಕಸರತ್ತು ನಡೆಸಿದರು.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಜೆಪಿಯ ರಾಜ್ಯ ನಾಯಕರೊಂದಿಗೆ ಬುಧವಾರ ರಾತ್ರಿ ಸುಮಾರು 4 ಗಂಟೆವರೆಗೆ ಸುದೀರ್ಘ ಸಮಾಲೋಚನೆ ನಡೆಸಿ ಆಕಾಂಕ್ಷಿಗಳ, ಕ್ಷೇತ್ರಗಳ ಜಾತಿವಾರು ಲೆಕ್ಕಾಚಾರ ಮತ್ತಿತರ ವಿಷಯಗಳ ಮಾಹಿತಿ ಪಡೆದರು. ವರಿಷ್ಠರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರೊಂದಿಗೆ ಪ್ರತ್ಯೇಕವಾಗಿ ಚರ್ಚಿಸಿದರು. ರಾಜ್ಯ ನಾಯಕರ ಜತೆಗಿನ ಸಭೆಯಲ್ಲಿ ಹಾಲಿ ಸಂಸದರ ಬಗ್ಗೆ ಕೇಂದ್ರ ನಾಯಕರು ಮಾಹಿತಿ ಪಡೆದರು. ಪ್ರತಿ ಕ್ಷೇತ್ರದಲ್ಲಿನ ಸಕಾರಾತ್ಮಕ ಮತ್ತು ನಕಾರಾತ್ಮಕ ವಿಷಯಗಳ ಬಗ್ಗೆ ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.

ಕರಾವಳಿ ಕರ್ನಾಟಕದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ–ಚಿಕ್ಕಮಗಳೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಸಂಘ ಪರಿವಾರದ ನಾಯಕರ ಅಭಿಪ್ರಾಯವನ್ನು ವರಿಷ್ಠರು ಕೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಕರ್ನಾಟಕ ಸೇರಿದಂತೆ 10 ರಾಜ್ಯಗಳ ಅಭ್ಯರ್ಥಿಗಳ ಕುರಿತು ಚರ್ಚಿಸಲಾಯಿತು. ಈ ಸಭೆಯಲ್ಲಿ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತಿತರ ನಾಯಕರು ಭಾಗಿಯಾದರು. ಮುಂದಿನ ಸಭೆ ಇದೇ 11ರಂದು ನಡೆಯಲಿದೆ.

ಜಗದೀಶ ಶೆಟ್ಟರ್, ಬೊಮ್ಮಾಯಿ ಕಣಕ್ಕೆ– ಸೋತವರಿಗಿಲ್ಲ ಅವಕಾಶ?

2023ರ ವಿಧಾನಸಭಾ ಚುನಾವಣೆಯಲ್ಲಿ ಸೋತಿರುವ ಮಾಜಿ ಶಾಸಕರು ಹಾಗೂ ಸಚಿವರಿಗೆ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ನೀಡುವುದಕ್ಕೆ ಬಿಜೆಪಿ ವರಿಷ್ಠರು ಒಲವು ಹೊಂದಿಲ್ಲ. ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಜಗದೀಶ ಶೆಟ್ಟರ್ ಅವರು ಕಣಕ್ಕಿಳಿಯುವ ಸಾಧ್ಯತೆ ದಟ್ಟವಾಗಿದೆ.

ವರಿಷ್ಠರ ಸೂಚನೆಯ ಮೇರೆಗೆ ವಿಧಾನಸಭಾ ಚುನಾವಣೆಯಲ್ಲಿ ಎರಡು ಕಡೆಗಳಲ್ಲಿ ಸ್ಪರ್ಧಿಸಿದ್ದ ಮಾಜಿ ಸಚಿವ ವಿ.ಸೋಮಣ್ಣ ಅವರದ್ದು 'ವಿಶೇಷ ಪ್ರಕರಣ'ವೆಂದು ಪರಿಗಣಿಸಿ ಅವಕಾಶ ನೀಡುವ ಸಾಧ್ಯತೆ ದಟ್ಟವಾಗಿದೆ. ತುಮಕೂರು ಕ್ಷೇತ್ರದಿಂದ ಸೋಮಣ್ಣ ಅಭ್ಯರ್ಥಿಯಾಗುವುದು ಬಹುತೇಕ ಖಚಿತ ಎಂದು ಮೂಲಗಳು ತಿಳಿಸಿವೆ.

ವಿಧಾನಸಭಾ ಚುನಾವಣೆಯಲ್ಲಿ ಸೋತಿರುವ ಡಾ.ಕೆ. ಸುಧಾಕರ್ (ಚಿಕ್ಕಬಳ್ಳಾಪುರ), ಎಂ.ಪಿ.ರೇಣುಕಾಚಾರ್ಯ (ದಾವಣಗೆರೆ), ಬಿ.ಶ್ರೀರಾಮುಲು (ಬಳ್ಳಾರಿ), ಸಿ.ಟಿ.ರವಿ (ಚಿಕ್ಕಮಗಳೂರು), ಡಾ. ಹರ್ಷವರ್ಧನ್ (ಚಾಮರಾಜನಗರ), ರಾಜೂಗೌಡ (ರಾಯಚೂರು), ಜೆ.ಸಿ.ಮಾಧುಸ್ವಾಮಿ (ತುಮಕೂರು) ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಉತ್ಸುಕರಾಗಿದ್ದಾರೆ. ಈ ಪೈಕಿ, ಹಲವರ ಹೆಸರನ್ನು ರಾಜ್ಯ ಘಟಕವು ಶಿಫಾರಸು ಮಾಡಿದೆ. ಸೋತವರಿಗೆ ಟಿಕೆಟ್ ನೀಡಿದರೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂಬುದು ವರಿಷ್ಠರು ಸ್ಪಷ್ಟಪಡಿಸಿದ್ದಾರೆ ಎಂದು ಗೊತ್ತಾಗಿದೆ.

'ನಮ್ಮ ನಿರ್ದೇಶನದ ಮೇರೆಗೆ ಸೋಮಣ್ಣ ಅವರು ಸಿದ್ದರಾಮಯ್ಯ ವಿರುದ್ಧ ಸ್ಪರ್ಧಿಸಿದರು. ಪಕ್ಷದಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೇವೆ ಎಂದು ಸೋಮಣ್ಣ ಅವರಿಗೆ ವಾಗ್ದಾನ ಮಾಡಿದ್ದೇವೆ. ಜತೆಗೆ, ಎರಡು ಬಾರಿ ಭೇಟಿ ಮಾಡಿ ನೋವು ಹೇಳಿಕೊಂಡಿದ್ದಾರೆ. ಜತೆಗೆ, ಲಿಂಗಾಯತ ಸಮುದಾಯದ ಪ್ರಭಾವಿ ನಾಯಕ. ಹೀಗಾಗಿ, ಅವರಿಗೆ ಲೋಕಸಭಾ ಚುನಾವಣೆಯಲ್ಲಿ ಅವಕಾಶ ಕೊಡಬೇಕಾಗುತ್ತದೆ' ಎಂದು ವರಿಷ್ಠರು ಸ್ಪಷ್ಟಪಡಿಸಿದ್ದಾರೆ.

ಸಿ.ಟಿ. ರವಿ ಅವರು ಉಡುಪಿ– ಚಿಕ್ಕಮಗಳೂರು ಹಾಗೂ ಬೆಂಗಳೂರು ಉತ್ತರ ಕ್ಷೇತ್ರದ ಟಿಕೆಟ್ ಆಕಾಂಕ್ಷಿ. ಉಡುಪಿ– ಚಿಕ್ಕಮಗಳೂರಿನಿಂದ ಶೋಭಾ ಕರಂದ್ಲಾಜೆ ಅವರೇ ಅಭ್ಯರ್ಥಿ ಯಾಗುವ ಸಾಧ್ಯತೆ ಇದೆ. ಬೆಂಗಳೂರು ಉತ್ತರದಿಂದ ರವಿ ಸ್ಪರ್ಧೆಗೆ ರಾಜಧಾನಿಯ ಬಿಜೆಪಿ ಶಾಸಕರ ವಿರೋಧ ಇದೆ. ಬೆಂಗಳೂರು ಉತ್ತರದಿಂದ ಹೃದ್ರೋಗ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆಗಳು ನಡೆದಿವೆ. ಬೆಂಗಳೂರು ಗ್ರಾಮಾಂತರದಿಂದ ಸ್ಪರ್ಧಿಸಲು ಮಂಜುನಾಥ್ ಉತ್ಸುಕರಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಉತ್ತರ ಕನ್ನಡ ಕ್ಷೇತ್ರದಿಂದ ಅನಂತಕುಮಾರ್ ಹೆಗಡೆ ಅವರನ್ನು ಮತ್ತೆ ಕಣಕ್ಕಿಳಿಸಲು ವರಿಷ್ಠರು ಒಲವು ತೋರಿದ್ದಾರೆ. '2019ರ ಚುನಾವಣೆಯಲ್ಲಿ ಅವರು 4.79 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದರು. ಹೊಸಬರನ್ನು ಹುರಿಯಾಳುವನ್ನಾಗಿ ಮಾಡಿದರೆ ಹಿನ್ನಡೆಯಾಗುವ ಸಂಭವ ಇದೆ. ಜತೆಗೆ, ಕಳೆದ ಕೆಲವು ತಿಂಗಳುಗಳಿಂದ ಸಕ್ರಿಯರಾಗಿದ್ದಾರೆ. ಅವರನ್ನೇ ಕಣಕ್ಕಿಳಿಸಿದರೆ ಗೆಲುವು ಸುಲಭ' ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಹಾವೇರಿ ಕ್ಷೇತ್ರದಿಂದ ಬಸವರಾಜ ಬೊಮ್ಮಾಯಿ ಅಭ್ಯರ್ಥಿಯಾಗುವುದು ಬಹುತೇಕ ಖಚಿತ. ಹಾವೇರಿ ಕ್ಷೇತ್ರದ ಸಂಭಾವ್ಯರ ಪಟ್ಟಿಯಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಹೆಸರೂ ಇದೆ. ಹುಬ್ಬಳ್ಳಿ–ಧಾರವಾಡ ಕ್ಷೇತ್ರಕ್ಕೆ ಅಭ್ಯರ್ಥಿಯನ್ನಾಗಿ ಮಾಡಬೇಕು ಎಂದು ಶೆಟ್ಟರ್ ಬೇಡಿಕೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಟಿಕೆಟ್ ನಿರಾಕರಿಸಿ ಶೆಟ್ಟರ್ ಅವರಿಗೆ ಅವಕಾಶ ನೀಡುವ ಸಾಧ್ಯತೆ ಕಡಿಮೆ. ಬೆಳಗಾವಿ ಕ್ಷೇತ್ರದಿಂದ ಶೆಟ್ಟರ್ ಅವರನ್ನು ಅಭ್ಯರ್ಥಿ ಯನ್ನಾಗಿ ಮಾಡುವ ಕುರಿತು ಚರ್ಚೆಗಳು ನಡೆದಿವೆ. ಬೆಳಗಾವಿಯಿಂದ ಸ್ಪರ್ಧಿಸಲು ಶೆಟ್ಟರ್ ಉತ್ಸುಕರಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಕೋಲಾರ ಕ್ಷೇತ್ರದಿಂದ ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರನ್ನು ಅಭ್ಯರ್ಥಿಯನ್ನಾಗಿ ಮಾಡುವ ಬಗ್ಗೆ ಚರ್ಚೆಗಳು ನಡೆದಿವೆ.

ಜೆಡಿಎಸ್‌ಗೆ ಮೂರು ಕ್ಷೇತ್ರ: ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಪಕ್ಷದ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, 'ಬೊಮ್ಮಾಯಿ ಮತ್ತು ಶೆಟ್ಟರ್ ಸೇರಿದಂತೆ ರಾಜ್ಯದ ಎಲ್ಲ 28 ಕ್ಷೇತ್ರಗಳ ಬಗ್ಗೆ ಚರ್ಚೆ ನಡೆದಿದೆ. ಯಾರಿಗೆ ಟಿಕೆಟ್ ನೀಡಬೇಕು ಎಂಬುದು ಇನ್ನೂ ಅಂತಿಮವಾಗಿಲ್ಲ' ಎಂದರು.

2–3 ದಿನಗಳಲ್ಲಿ ಅಭ್ಯರ್ಥಿಗಳ ಕುರಿತು ಸ್ಪಷ್ಟತೆ ಸಿಗಬಹುದು ಎಂದರು. ಜೆಡಿಎಸ್‌ಗೆ ಮೂರು ಕ್ಷೇತ್ರಗಳನ್ನು ಬಿಟ್ಟುಕೊಡುವ ಸುಳಿವನ್ನು ಯಡಿಯೂರಪ್ಪ ನೀಡಿದರು.

13ರ ನಂತರ ಬಿಜೆಪಿ ಚುನಾವಣಾ ಸಮಿತಿ ಸಭೆ

ಬಿಜೆಪಿ ಕೇಂದ್ರ ಚುನಾವಣಾ ಸಮಿತಿಯ ಸಭೆ ಇದೇ 13ರ ನಂತರ ನಡೆಯಲಿದೆ. ಬಿಜೆಪಿಯು 195 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. ಇದೇ 8ರಂದು ಸಮಿತಿ ಸಭೆ ನಡೆಸಲು ಯೋಜಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಗಳ ಪ್ರವಾಸದಲ್ಲಿದ್ದಾರೆ. ಹಾಗಾಗಿ, 8ರ ಸಭೆಯನ್ನು ಮುಂದೂಡಲಾಗಿದೆ. ಈ ಸಭೆ 13ರಂದು ನಡೆಯಬಹುದು ಅಥವಾ ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟವಾದ ಬಳಿಕ ನಡೆಯಬಹುದು. ಈ ಸಭೆಯಲ್ಲಿ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

11 ಕ್ಷೇತ್ರ: 'ಕೈ' ಅಭ್ಯರ್ಥಿಗಳು ಅಂತಿಮ

ನವದೆಹಲಿ: ಕರ್ನಾಟಕದ 11 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಅಂತಿಮಗೊಳಿಸಿದೆ. ಶುಕ್ರವಾರ ಅಥವಾ ಶನಿವಾರ ಮೊದಲ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಗುರುವಾರ ಇಲ್ಲಿ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಈ ಬಗ್ಗೆ ಅನುಮೋದನೆ ನೀಡಲಾಯಿತು.

ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನಲ್ಲಿ ಸಭೆ ನಡೆಸಿ 13ರಿಂದ 14 ಕ್ಷೇತ್ರಗಳಿಗೆ ಸಂಭಾವ್ಯರ ಹೆಸರನ್ನು ಅಂತಿಮಗೊಳಿಸಿದ್ದರು. ದೆಹಲಿಯಲ್ಲಿ ಗುರುವಾರ ನಡೆದ ಚುನಾವಣಾ ಸಮಿತಿ ಸಭೆಯಲ್ಲಿ 11 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲಾಯಿತು. ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಹಾಲಿ ಸಂಸದ ಡಿ.ಕೆ. ಸುರೇಶ್ ಕಣಕ್ಕಿಳಿಯಲಿದ್ದಾರೆ.

ಸುದ್ದಿಗಾರರ ಜತೆಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, '28 ಕ್ಷೇತ್ರಗಳಿಗೂ ಒಂದೇ ಹಂತದಲ್ಲಿ ಪಟ್ಟಿ ಬಿಡುಗಡೆ ಮಾಡಲು ಆಗುವುದಿಲ್ಲ. 14 ಕ್ಷೇತ್ರಗಳ ಅಭ್ಯರ್ಥಿಗಳ ಕುರಿತು ಚರ್ಚೆಯಾಗಿದೆ' ಎಂದರು.

'ಪಕ್ಷಕ್ಕೆ ಇತ್ತೀಚೆಗೆ ಸೇರ್ಪಡೆಯಾದವರಿಗೆ ಟಿಕೆಟ್ ನೀಡುತ್ತೀರಾ, ಸಚಿವರು ಕೂಡ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಾರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ರಾಜಕೀಯದಲ್ಲಿ ಎಲ್ಲ ಸಾಧ್ಯತೆಗಳೂ ಇರುತ್ತವೆ' ಎಂದರು.

ಕೇಂದ್ರ ಚುನಾವಣಾ ಸಮಿತಿಯ ಸದಸ್ಯರೂ ಆಗಿರುವ ಇಂಧನ ಸಚಿವ ಕೆ.ಜೆ.ಜಾರ್ಜ್, 'ಸಭೆಯಲ್ಲಿ 28 ಕ್ಷೇತ್ರಗಳ ಬಗ್ಗೆಯೂ ಚರ್ಚೆ ಆಗಿದೆ. ಇನ್ನೆರಡು ದಿನಗಳಲ್ಲಿ ಪಟ್ಟಿ ಬಿಡುಗಡೆಯಾಗಲಿದೆ' ಎಂದರು.

ಸುದ್ದಿ 2 ನಿಮಿಷ

ಬಿಜೆಪಿ ಸೇರಿದ ಕರುಣಾಕರನ್ ಪುತ್ರಿ ಪದ್ಮಜಾ ವೇಣುಗೋಪಾಲ್

ನವದೆಹಲಿ (ಪಿಟಿಐ): ಕೇರಳದ ಮಾಜಿ ಮುಖ್ಯಮಂತ್ರಿ ಕೆ.ಕರುಣಾಕರನ್ ಅವರ ಪುತ್ರಿ, ಕಾಂಗ್ರೆಸ್ ನಾಯಕಿ ಪದ್ಮಜಾ ವೇಣುಗೋಪಾಲ್ ಅವರು ಗುರುವಾರ ಬಿಜೆಪಿಗೆ ಸೇರಿದ್ದಾರೆ.

ಕೇಂದ್ರದ ಮಾಜಿ ಸಚಿವ ಪ್ರಕಾಶ್ ಜಾವಡೇಕರ್ ಸೇರಿದಂತೆ ಪಕ್ಷದ ಹಿರಿಯ ನಾಯಕರ ಸಮ್ಮುಖದಲ್ಲಿ ಪದ್ಮಜಾ ಅವರು ಕಮಲ ಪಾಳಯಕ್ಕೆ ಸೇರ್ಪಡೆಯಾದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪದ್ಮಜಾ ಅವರು, 'ಬಿಜೆಪಿ ಸೇರಿದ್ದಕ್ಕೆ ತುಂಬಾ ಸಂತೋಷವಾಗುತ್ತಿದೆ, ಅದರೊಂದಿಗೆ ಸ್ವಲ್ಪ ಆತಂಕವು ಇದೆ. ಹಲವು ವರ್ಷಗಳಿಂದ ಕಾಂಗ್ರೆಸ್‌ನಲ್ಲಿದ್ದ ನಾನು ಸಂತೋಷವಾಗಿರಲಿಲ್ಲ, ಅದರಲ್ಲೂ ಕಳೆದ ವಿಧಾನಸಭೆ ಚುನಾವಣೆಯ ಬಳಿಕ ತೀವ್ರ ಅಸಮಾಧಾನ ಉಂಟಾಗಿತ್ತು. ಈ ಕಾರಣಕ್ಕೆ ಪಕ್ಷವನ್ನು ತ್ಯಜಿಸಲು ನಿರ್ಧರಿಸಿದೆ' ಎಂದರು

'ಸಮಸ್ಯೆಗಳ ಬಗ್ಗೆ ಮಾತುಕತೆ ನಡೆಸುವ ಉದ್ದೇಶದಿಂದ ಹಲವು ಬಾರಿ ಕಾಂಗ್ರೆಸ್‌ನ ಉನ್ನತ ನಾಯಕರೊಂದಿಗೆ ಮಾತುಕತೆ ನಡೆಸಲು ಪ್ರಯತ್ನಿಸಿದ್ದೆ, ಆದರೆ ಅವರು ಅವಕಾಶ ನೀಡಲಿಲ್ಲ. ಎಲ್ಲ ಪಕ್ಷಗಳಲ್ಲಿ ಸಮರ್ಥ ನಾಯಕತ್ವ ಇದೆ. ಆದರೆ, ಕಾಂಗ್ರೆಸ್‌ನಲ್ಲಿ ನಾಯಕತ್ವ ಇಲ್ಲ. ಸೋನಿಯಾ ಗಾಂಧಿಯವರ ಬಗ್ಗೆ ಗೌರವವಿದೆ. ಅವರು ಭೇಟಿಯಾಗುವ ಅವಕಾಶವನ್ನೆ ನೀಡಲಿಲ್ಲ' ಎಂದರು.

ಕಲ್ಕತ್ತ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಬಿಜೆಪಿಗೆ

ಕೋಲ್ಕತ್ತ (ಪಿಟಿಐ): ಕಲ್ಕತ್ತ ಹೈಕೋರ್ಟ್‌ನ ನ್ಯಾಯಮೂರ್ತಿ ಹುದ್ದೆಗೆ ಮಂಗಳವಾರ ರಾಜೀನಾಮೆ ನೀಡಿದ್ದ ಅಭಿಜಿತ್ ಗಂಗೋಪಾಧ್ಯಾಯ ಅವರು ಗುರುವಾರ ಇಲ್ಲಿ ಬಿಜೆಪಿ ಸೇರಿದರು.

'ಇಂದು ನಾನು ಹೊಸ ಕ್ಷೇತ್ರಕ್ಕೆ ಸೇರ್ಪಡೆಗೊಂಡಿದ್ದೇನೆ. ಬಿಜೆಪಿಗೆ ಸೇರಿರುವುದು ಖುಷಿ ತಂದಿದೆ. ಭ್ರಷ್ಟ ಟಿಎಂಸಿ ಪಕ್ಷದ ಆಡಳಿತವನ್ನು ರಾಜ್ಯದಿಂದ ತೊಡೆದು ಹಾಕುವುದು ನಮ್ಮ ಗುರಿ' ಎಂದು ಅವರು ತಿಳಿಸಿದರು.

ಪಶ್ಚಿಮ ಬಂಗಾಳದ ಬಿಜೆಪಿ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಅವರು ಪಕ್ಷದ ಧ್ವಜ ನೀಡುವ ಮೂಲಕ ಅಭಿಜಿತ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು.

ಪಶ್ಚಿಮ ಬಂಗಾಳದ ರಾಜಕೀಯಕ್ಕೆ ಅಭಿಜಿತ್ ಅವರಂತಹ ವ್ಯಕ್ತಿಯ ಅಗತ್ಯವಿದೆ ಎಂದು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಹೇಳಿದರು.

ತ್ರಿಪುರಾ: ಬಿಜೆಪಿ ಸರ್ಕಾರ ಸೇರಿದ ಟಿಪ್ರಾ ಮೋಥಾ

ಅಗರ್ತಲಾ (ಪಿಟಿಐ): ತ್ರಿಪುರಾದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವನ್ನು ಟಿಪ್ರಾ ಮೋಥಾ ಪಕ್ಷವು ಸೇರಿದ್ದು, ಪಕ್ಷದ ನಾಯಕ ಅನಿಮೇಶ್ ದೆಬ್ಬರ್ಮಾ, ಶಾಸಕ ಬ್ರಿಶಕೇತು ದೆಬ್ಬರ್ಮಾ ಗುರುವಾರ ಸಚಿವರಾಗಿ ಪ್ರಮಾಣ ಸ್ವೀಕರಿಸಿದರು.

ಇದೇ ವೇಳೆ ತ್ರಿಪುರಾ ಬುಡಕಟ್ಟು ವಲಯದ ಸ್ವಾಯತ್ತ ಜಿಲ್ಲಾ ಮಂಡಳಿ (ಟಿಟಿಎಎಡಿಸಿ) ವ್ಯಾಪ್ತಿಯ ಪ್ರದೇಶಗಳನ್ನು ಸೇರಿಸಿ ಪ್ರತ್ಯೇಕ ರಾಜ್ಯ ಸ್ಥಾಪಿಸಬೇಕು ಎಂಬ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದೂ ಪಕ್ಷ ಸ್ಪಷ್ಟಪಡಿಸಿದೆ.

ಟಿಪ್ರಾ ಮೋಥಾ, ತ್ರಿಪುರಾ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ನವದೆಹಲಿಯಲ್ಲಿ ನಡೆದ ತ್ರಿಪಕ್ಷೀಯ ಒಪ್ಪಂದದ ಹಿಂದೆಯೇ ಈ ರಾಜಕೀಯ ಬೆಳವಣಿಗೆ ನಡೆದಿದೆ.

ಮಾರ್ಚ್ 2ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಉಪಸ್ಥಿತಿಯಲ್ಲಿ ಒಪ್ಪಂದವಾಗಿತ್ತು. ಇದರ ಪ್ರಕಾರ, ತ್ರಿಪುರಾದ ಬುಡಕಟ್ಟು ಜನರ ಇತಿಹಾಸ, ಭೂಮಿ, ರಾಜಕೀಯ ಹಕ್ಕುಗಳು, ಆರ್ಥಿಕ ಪ್ರಗತಿ, ಭಾಷೆ ರಕ್ಷಣೆ ಕುರಿತ ಬೇಡಿಕೆಗಳಿಗೆ ಸೌಹಾರ್ದಯುತ ಪರಿಹಾರ ಕಂಡುಕೊಳ್ಳುವುದು ಇದರ ಉದ್ದೇಶವಾಗಿತ್ತು.

ಸಚಿವರಾಗಿ ಪ್ರಮಾಣ ಸ್ವೀಕರಿಸಿದ ಬಳಿಕ ಮಾತನಾಡಿದ ಅನಿಮೇಶ್ ದೆಬ್ಬರ್ಮಾ ಅವರು, ಪಕ್ಷ ತನ್ನ ಗುರಿ ಸಾಧನೆಗೆ ಒತ್ತು ನೀಡಲಿದೆ. ಪ್ರತ್ಯೇಕ ರಾಜ್ಯ ಕುರಿತ ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದರು.

'ಬಿಜೆಪಿಯು ಭ್ರಷ್ಟರನ್ನು 'ಶುದ್ಧ' ಮಾಡುವ 'ವಾಷಿಂಗ್ ಮಷಿನ್'

ಪುಣೆ (ಪಿಟಿಐ): ಬಿಜೆಪಿಯು 'ವಾಷಿಂಗ್ ಮಷಿನ್' ಆಗಿ ಮಾರ್ಪಟ್ಟಿದ್ದು, ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವವರು ಆ ಪಕ್ಷ ಸೇರಿದರೆ 'ಶುದ್ಧ'ರಾಗುತ್ತಾರೆ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ವ್ಯಂಗ್ಯವಾಡಿದರು.

ಜಾರ್ಖಂಡ್‌ನ ಹೇಮಂತ್ ಸೊರೇನ್ ಮತ್ತು ದೆಹಲಿಯ ಅರವಿಂದ ಕೇಜ್ರಿವಾಲ್ ಸೇರಿದಂತೆ ಬಿಜೆಪಿಯೇತರ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕೇಂದ್ರ ಸರ್ಕಾರವು ಗುರಿಯಾಗಿಸುತ್ತಿದೆ ಎಂದು ಅವರು ಟೀಕಿಸಿದರು.

ಪುಣೆ ಜಿಲ್ಲೆಯ ಲೋನಾವಾಲಾದಲ್ಲಿ ನಡೆದ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಶರದ್‌ಚಂದ್ರ ಪವಾರ್) ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

'ಸರ್ಕಾರ ಸಂಸತ್ತಿನಲ್ಲಿ ನೀಡಿದ ಕಿರು ಪುಸ್ತಕದಲ್ಲಿ ಆದರ್ಶ ಹಗರಣದಲ್ಲಿ ಅಶೋಕ ಚವಾಣ್ ಭಾಗಿಯಾಗಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು. ಅದಾದ ಏಳನೇ ದಿನದಲ್ಲಿ ಅವರು ಬಿಜೆಪಿ ಸೇರಿ, ಬಳಿಕ ರಾಜ್ಯಸಭಾ ಸದಸ್ಯರೂ ಆದರು' ಎಂದು ಲೇವಡಿ ಮಾಡಿದರು.

'ಅಂತೆಯೇ, ಮಹಾರಾಷ್ಟ್ರದಲ್ಲಿ 70 ಸಾವಿರ ಕೋಟಿ ರೂಪಾಯಿಗಳ ನೀರಾವರಿ ಹಗರಣದ ಆರೋಪವನ್ನು ಪ್ರಧಾನಿ ಮೋದಿ ಮಾಡಿದ್ದರು. ಅಲ್ಲದೆ ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್‌ನಲ್ಲಿನ ಅಕ್ರಮಗಳ ಬಗ್ಗೆಯೂ ಮಾತನಾಡಿದ್ದರು. ಈ ಕುರಿತು ತನಿಖೆ ನಡೆಸುವಂತೆ ನಾನು ಧೈರ್ಯವಾಗಿ ಹೇಳಿದ್ದೆ. ಆದರೆ, ಈ ಹಗರಣದಲ್ಲಿ ಯಾರ ವಿರುದ್ಧ ಆರೋಪ ಮಾಡಲಾಗಿತ್ತೋ ಅವರು ಇಂದು ಎಲ್ಲಿದ್ದಾರೆ ನೋಡಿ' ಎಂದು ಅವರು ಉಪಮುಖ್ಯಮಂತ್ರಿ ಅಜಿತ್ ಪವಾರ್ ಹೆಸರನ್ನು ಉಲ್ಲೇಖಿಸದೇ ಹೇಳಿದರು.

ಸಂಕ್ಷಿಪ್ತ ಸುದ್ದಿ

ಎಸ್‌ಪಿಎಂ, ಸೋಮಣ್ಣ ನಡುವೆ ಸ್ಪರ್ಧೆ

ತುಮಕೂರು: ತುಮಕೂರು ಲೋಕಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಎಸ್.ಪಿ.ಮುದ್ದಹನುಮೇಗೌಡ ಮತ್ತು ಬಿಜೆಪಿಯ ವಿ.ಸೋಮಣ್ಣ ನಡುವೆ ಸ್ಪರ್ಧೆ ಸಾಧ್ಯತೆ ಇದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಸುಳಿವು ನೀಡಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ನನಗಿರುವ ಮಾಹಿತಿ ಪ್ರಕಾರ ಸೋಮಣ್ಣ ಅವರಿಗೆ ಬಿಜೆಪಿ ಟಿಕೆಟ್ ನೀಡಲಿದೆ. ಎಸ್.ಪಿ. ಮುದ್ದಹನುಮೇಗೌಡ ಅವರಿಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ಸಿಗಲಿದೆ' ಎಂದರು.

'ನೋವುಗಳಿವೆ, ಚುನಾವಣೆ ನಂತರ ಹೇಳ್ತೇನೆ'

ಚಿಕ್ಕಮಗಳೂರು: 'ಮನಸ್ಸಿನಲ್ಲಿ ಬಹಳ ನೋವುಗಳಿವೆ. ರಾಷ್ಟ್ರದ ಹಿತಕ್ಕಾಗಿ ಎಲ್ಲವನ್ನು ನುಂಗಿಕೊಂಡಿದ್ದೇನೆ. ಲೋಕಸಭೆ ಚುನಾವಣೆ ಬಳಿಕ ಎಲ್ಲವನ್ನೂ ಜನರ ಮುಂದಿಡುತ್ತೇನೆ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಹೇಳಿದರು.

ಸಿ.ಟಿ.ರವಿ

'ವಿಧಾನಸಭೆ ಚುನಾವಣೆಯಲ್ಲಿ ಯಾರು ಹೇಗೆ ನಡೆದುಕೊಂಡರು ಎಂದು ಗೊತ್ತಿದೆ. ಹೆಚ್ಚು ದಿನ ಮನಸ್ಸಿನಲ್ಲೇ ಇಟ್ಟು ಕೊಳ್ಳಲಾಗದು ಅವುಗಳನ್ನು ಹೇಳಲೇಬೇಕು. ವೈಯಕ್ತಿಕ ನೆಲೆಯಲ್ಲಿ ಲೋಕಸಭೆ ಚುನಾವಣೆ ನಂತರ ಮಾಡುತ್ತೇನೆ' ಎಂದು ಯಾರ ಹೆಸರನ್ನೂ ಹೇಳದೆ ಸ್ವಪಕ್ಷದವರ ವಿರುದ್ಧ ಸುದ್ದಿಗಾರರ ಬಳಿ ಅಸಮಾಧಾನ ವ್ಯಕ್ತಪಡಿಸಿದರು.

'ಸದ್ಯಕ್ಕೆ ರಾಷ್ಟ್ರದ ಹಿತ ಮುಖ್ಯ, ನರೇಂದ್ರ ಮೋದಿ ಅವರು 3ನೇ ಬಾರಿಗೆ ಪ್ರಧಾನಿ ಆಗಬೇಕು. ಅದಷ್ಟೇ ನಮ್ಮ ಮುಂದಿನ ಗುರಿ. ಸಮಯ ಬಂದಾಗ ಬೇರೆ ವಿಷಯಗಳನ್ನು ಹೇಳುತ್ತೇನೆ' ಎಂದರು.

ಕೇಜ್ರಿವಾಲ್‌ಗೆ ನ್ಯಾಯಾಲಯದ ಸಮನ್ಸ್

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ದೆಹಲಿಯ ನ್ಯಾಯಾಲಯವೊಂದು ಗುರುವಾರ ಸಮನ್ಸ್ ಜಾರಿ ಮಾಡಿದೆ. ಮಾರ್ಚ್ 16ರಂದು ನ್ಯಾಯಾಲಯಕ್ಕೆ ಹಾಜರಾಗುವಂತೆ ಅವರಿಗೆ ನಿರ್ದೇಶಿಸಿದೆ.

ಅರವಿಂದ ಕೇಜ್ರಿವಾಲ್

ಸಂಖ್ಯೆ 4ರಿಂದ 8ರ ವರೆಗಿನ ಸಮನ್ಸ್‌ಗಳಿಗೆ ಪ್ರತಿಯಾಗಿ ಅರವಿಂದ ಕೇಜ್ರಿವಾಲ್ ಅವರು ವಿಚಾರಣೆಗೆ ಹಾಜರಾಗಿಲ್ಲ. ಅವರ ವಿರುದ್ಧ ಕ್ರಮ ಜರುಗಿಸಿ ಎಂದು ಇ.ಡಿ ನ್ಯಾಯಾಲಯಕ್ಕೆ ದೂರು ಸಲ್ಲಿಸಿದ ಮರುದಿನವೇ ನ್ಯಾಯಾಲಯ ಈ ಸಮನ್ಸ್ ನೀಡಿದೆ.

ಡಿಕೆಶಿ ಹೇಳಿಕೆಗೆ ಪೂರಕವಾಗಿ ರಾಜಕೀಯ ವಲಯದಲ್ಲಿ ಗುಸುಗುಸು

'ಕೈ' ಹಿಡಿದು ಟಿಕೆಟ್ ಗಿಟ್ಟಿಸಲು ಜಿಗಿತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ಹೊಸ್ತಿಲಲ್ಲಿರುವಂತೆ ಕಾಂಗ್ರೆಸ್ ಮತ್ತು ಬಿಜೆಪಿ– ಜೆಡಿಎಸ್ ಮೈತ್ರಿಕೂಟ ರಾಜ್ಯದ 28 ಕ್ಷೇತ್ರಗಳಿಗೆ ಟಿಕೆಟ್ ಹಂಚಿಕೆಯ ಕಸರತ್ತು ಚುರುಕುಗೊಳಿಸಿವೆ. ಈ ನಡುವೆ, ಪಕ್ಷದಿಂದ ಪಕ್ಷಕ್ಕೆ ಜಿಗಿಯಲು ಕೆಲವರು ಮುಂದಾಗಿರುವ ಗುಸುಗುಸು ಕೂಡ ಜೋರಾಗಿದೆ.

'ಬಿಜೆಪಿಯಿಂದ ಅನೇಕ ಜನ ನಮ್ಮ ಸಂಪರ್ಕದಲ್ಲಿದ್ದು, ಸೂಕ್ತ ಸಮಯದಲ್ಲಿ ಕಾಂಗ್ರೆಸ್ ಸೇರ್ಪಡೆಗೊಳ್ಳಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿರುವ ಮಾತು ತೆರೆಮರೆಯಲ್ಲಿ ನಡೆಯುತ್ತಿರುವ 'ಪಕ್ಷಾಂತರ' ಸಿದ್ಧತೆಗೆ ಪುಷ್ಟಿ ನೀಡಿದೆ.

ರಾಜ್ಯದಲ್ಲಿ ಕನಿಷ್ಠ 20 ಕ್ಷೇತ್ರಗಳನ್ನು ಗೆಲ್ಲಲೇಬೇಕೆಂಬ ಗುರಿ ಇಟ್ಟುಕೊಂಡಿರುವ ಕಾಂಗ್ರೆಸ್ ನಾಯಕರು, ಗೆಲ್ಲುವ ಅಭ್ಯರ್ಥಿಗಳ ಹುಡುಕಾಟದಲ್ಲಿದ್ದಾರೆ. ಸಚಿವರು ಕಣಕ್ಕಿಳಿಯಲು ನಿರಾಕರಿಸುತ್ತಿರುವುದು ಈ ನಾಯಕರ ತಲೆನೋವು ಹೆಚ್ಚಿಸಿದೆ. ಹೀಗಾಗಿ, ಬಿಜೆಪಿಯಿಂದ ಜಿಗಿಯಬಹುದಾದ ಕಲಿಗಳ ಮೇಲೆ ಈ ನಾಯಕರ ದೃಷ್ಟಿ ಬಿದ್ದಿದೆ.

ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಟಿಕೆಟ್ ನಿರೀಕ್ಷೆಯಲ್ಲಿರುವ ಮಾಜಿ ಸಚಿವ ಡಾ.ಕೆ. ಸುಧಾಕರ್, ಬೆಂಗಳೂರು ಉತ್ತರ ಕ್ಷೇತ್ರದಿಂದ ಟಿಕೆಟ್ ಖಚಿತವಾದರೆ ಬಿಜೆಪಿ ತ್ಯಜಿಸಿ 'ಕೈ' ಹಿಡಿಯಲು ಮುಂದಾಗಿದ್ದಾರೆ ಎನ್ನಲಾಗುತ್ತಿದೆ. ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದ ಈ ಸಚಿವರ ಮಾತೃಪಕ್ಷ ಸೇರ್ಪಡೆಯ ಇಂಗಿತಕ್ಕೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಈಗಾಗಲೇ ಹಸಿರು ನಿಶಾನೆ ತೋರಿಸಿದ್ದಾರೆ ಎಂಬ ಮಾತು ಕಾಂಗ್ರೆಸ್ ವಲಯದಲ್ಲಿ ದಟ್ಟವಾಗಿದೆ. ಬೆಂಗಳೂರು ಉತ್ತರದಲ್ಲಿ ಒಕ್ಕಲಿಗರದ್ದೇ ಪ್ರಾಬಲ್ಯ. ಮಾಜಿ ಸಚಿವ ಪಕ್ಷಕ್ಕೆ ಮರಳಿದರೆ ಬಿಜೆಪಿಯ ಈ ಭದ್ರ ನೆಲೆಯನ್ನು ಅಲುಗಾಡಿಸಬಹುದೆಂಬ ಲೆಕ್ಕಾಚಾರ ಕಾಂಗ್ರೆಸ್ ನಾಯಕರದ್ದು.

ಇನ್ನು, ಇದೇ ಜೂನ್ 17ಕ್ಕೆ ವಿಧಾನ ಪರಿಷತ್ ಸದಸ್ಯತ್ವ ಅವಧಿ ಮುಗಿಯಲಿರುವ ಬಿಜೆಪಿಯ ತೇಜಸ್ವಿನಿ ಗೌಡ ಅವರು 'ಕೈ' ಟಿಕೆಟ್ ಸಿಕ್ಕಿದರೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಅಖಾಡಕ್ಕಿಳಿಯಲು ಮನಸ್ಸು ಮಾಡಿದ್ದಾರೆ. ಹಾಲಿ ಸಂಸದ ಪ್ರತಾಪ್ ಸಿಂಹ ಅವರಿಗೆ ಈ ಬಾರಿ ಟಿಕೆಟ್ ಕೈತಪ್ಪಲಿದೆ ಎನ್ನುವುದು ಬಿಜೆಪಿಯ ಆಂತರಿಕ ವಲಯದಲ್ಲಿ ನಡೆಯುತ್ತಿರುವ ಚರ್ಚೆ. ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನಿರಾಕರಿಸುವುದಾದರೆ ತಮ್ಮನ್ನು ಪರಿಗಣಿಸುವಂತೆ ತೇಜಸ್ವಿನಿ ಗೌಡ ಈಗಾಗಲೇ ಪಕ್ಷದ ಹಿರಿಯ ನಾಯಕರಿಗೆ ಮನವಿ ಮಾಡಿದ್ದಾರೆ. ಆದರೆ, ಅವರ ಬಯಕೆಗೆ ನಾಯಕರಿಂದ ಸಕಾರಾತ್ಮಕ ಸ್ಪಂದನ ಸಿಕ್ಕಿಲ್ಲ. ಹೀಗಾಗಿ, ಟಿಕೆಟ್ ನೀಡಿದರೆ ಕಣಕ್ಕಿಳಿಯಲು ಸಿದ್ಧವೆಂದು ಕಾಂಗ್ರೆಸ್ ನಾಯಕರಿಗೆ ತೇಜಸ್ವಿನಿ ಹೇಳಿದ್ದಾರೆ. ಇನ್ನು, ಬಿಜೆಪಿಯ ಕೆ. ಜಯಪ್ರಕಾಶ ಹೆಗ್ಡೆ ಅವರಿಗೆ ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್ ನೀಡಲು ಕಾಂಗ್ರೆಸ್ ಮುಂದಾಗಿದೆ. ಈ ಟಿಕೆಟ್‌ಗೆ ವಕೀಲ ಸುಧೀರ್ ಮುರೊಳ್ಳಿ ಅವರು ತೀವ್ರ ಪೈಪೋಟಿ ನಡೆಸುತ್ತಿದ್ದಾರೆ. ಆದರೆ, 'ಕಮಲ' ಪಕ್ಷ ಬಿಟ್ಟು ಬಂದರೆ ಹೆಗ್ಡೆ ಅವರ 'ಕೈ' ಮೇಲಾಗುವ ಸಾಧ್ಯತೆಯೇ ಹೆಚ್ಚು ಎನ್ನುತ್ತವೆ ಕಾಂಗ್ರೆಸ್ ಮೂಲಗಳು.

ಸಚಿವ ಎಚ್.ಸಿ. ಮಹದೇವಪ್ಪ ಮುನಿಸು?

ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ವಿಚಾರದಲ್ಲಿ ಸಚಿವ ಎಚ್.ಸಿ. ಮಹದೇವಪ್ಪ ಮುನಿಸಿಕೊಂಡಿದ್ದಾರೆ. ಈ ಕಾರಣಕ್ಕೆ ಅವರು ಮತ್ತೆ 'ದಲಿತ ಮುಖ್ಯಮಂತ್ರಿ' ವಿಚಾರವನ್ನು ಮುನ್ನೆಲೆಗೆ ತಂದಿದ್ದಾರೆ ಎನ್ನಲಾಗಿದೆ.

ಚಾಮರಾಜನಗರ ಕ್ಷೇತ್ರದಿಂದ ಪುತ್ರ ಸುನೀಲ್ ಬೋಸ್‌ಗೆ ಟಿಕೆಟ್ ನೀಡುವಂತೆ ಪಕ್ಷದ ವೇದಿಕೆಯಲ್ಲಿ ಮಹದೇವಪ್ಪ ಒತ್ತಾಯಿಸಿದ್ದರು. ಪುತ್ರನ ಬದಲು ಮಹದೇವಪ್ಪ ಅವರಿಗೇ ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರಿಗೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ ಎನ್ನಲಾಗಿದೆ. ತಮ್ಮನ್ನು ಕಣಕ್ಕಿಳಿಸಿ ಸಚಿವ ಸ್ಥಾನ ತಪ್ಪಿಸಲು ಷಡ್ಯಂತ್ರ ನಡೆಯುತ್ತಿದೆ ಎಂದು ಮಹದೇವಪ್ಪ ಕೋಪಿಸಿಕೊಂಡಿದ್ದು, ಈ ಬಗ್ಗೆ ಆಪ್ತರ ಬಳಿಯೂ ಹೇಳಿಕೊಂಡಿದ್ದಾರೆ ಎನ್ನಲಾಗಿದೆ.

'ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ' ಎನ್ನುತ್ತಿದ್ದ ಮಹದೇವಪ್ಪ, ಈಗ, 'ದಲಿತರು ಮುಖ್ಯಮಂತ್ರಿ ಯಾಕಾಗಬಾರದು?' ಎಂದು ಪ್ರಶ್ನಿಸುವ ಮೂಲಕ ಸಿದ್ದರಾಮಯ್ಯ ವಿರುದ್ಧ 'ದಲಿತ ಮುಖ್ಯಮಂತ್ರಿ' ಅಸ್ತ್ರ ಪ್ರಯೋಗಿಸಿದರೇ? ಎಂಬ ಚರ್ಚೆಯೂ ನಡೆದಿದೆ.

ಮರ ಕಡಿತದಿಂದ 'ಕಾರ್ಬೆಟ್'ಗೆ ಹಾನಿ ಸರಿಪಡಿಸಲು 'ಸುಪ್ರೀಂ' ಆದೇಶ

ನವದೆಹಲಿ(ಪಿಟಿಐ): ಅಕ್ರಮ ನಿರ್ಮಾಣ ಚಟುವಟಿಕೆಗಳು ಹಾಗೂ ಮರಗಳ ಹನನದಿಂದಾಗಿ ಕಾರ್ಬೆಟ್ ಹುಲಿ ಮೀಸಲು ಅರಣ್ಯಕ್ಕೆ ಆಗಿರುವ ಹಾನಿ ಕುರಿತು ಅಧ್ಯಯನ ನಡೆಸಿ, ಪರಿಹಾರ ಸೂಚಿಸುವುದಕ್ಕೆ ಸಂಬಂಧಿಸಿ ಸಮಿತಿ ರಚಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

'ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯ ಈ ಸಮಿತಿ ರಚಿಸಬೇಕು. ಈ ಅರಣ್ಯ ಪ್ರದೇಶದ ಪರಿಸರಕ್ಕೆ ಆಗಿರುವ ಹಾನಿಯ ಅಂದಾಜು ಮಾಡುವ ಜೊತೆಗೆ, ಮರುಸ್ಥಾಪನೆಗೆ ತಗಲುವ ವೆಚ್ಚ ಕುರಿತು ವರದಿ ನೀಡಬೇಕು' ಎಂದೂ ಸೂಚಿಸಿದೆ.

ಪರಿಸರ ಹೋರಾಟಗಾರ ಹಾಗೂ ವಕೀಲ ಗೌರವ್ ಬನ್ಸಾಲ್ ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಕೆ.ಮಿಶ್ರಾ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ನ್ಯಾಯಪೀಠ, ಈ ಆದೇಶ ನೀಡಿದೆ.

'ಈ ಮೀಸಲು ಅರಣ್ಯದ ಬಫರ್ ಅಥವಾ ಅಂಚಿನ ಪ್ರದೇಶದಲ್ಲಿ ಹುಲಿ ಸಫಾರಿಗೆ ಅನುಮತಿ ನೀಡಬಹುದೇ? ಒಂದು ವೇಳೆ, ಅನುಮತಿ ನೀಡಬೇಕು ಎಂದಾದಲ್ಲಿ ಯಾವ ಮಾರ್ಗಸೂಚಿಗಳನ್ನು ಅನುಸರಿಸಬೇಕು ಎಂಬ ಪ್ರಶ್ನೆಗಳನ್ನು ಕೂಡ ಸಮಿತಿ ಅಧ್ಯಯನ ವೇಳೆ ಪರಿಗಣಿಸಬೇಕು' ಎಂದು ಹೇಳಿದೆ.

'ಈ ಮೀಸಲು ಅರಣ್ಯದಲ್ಲಿನ ಹಾನಿಗೆ ಕಾರಣರಾದ ವ್ಯಕ್ತಿಗಳು/ಅಧಿಕಾರಿಗಳನ್ನು ಗುರುತಿಸಬೇಕು. ಈ ಹಾನಿಗೆ ಸಂಬಂಧಿಸಿ ನಿಗದಿ ಮಾಡಲಾದ ಮೊತ್ತವನ್ನು ಆ ವ್ಯಕ್ತಿಗಳು/ಕರ್ತವ್ಯಲೋಪ ಎಸಗಿರುವ ಅಧಿಕಾರಿಗಳಿಂದ ವಸೂಲಿ ಮಾಡಬೇಕು. ಈ ರೀತಿ ವಸೂಲಿ ಮಾಡಲಾದ ಮೊತ್ತವನ್ನು ಪರಿಸರ ಮರುಸ್ಥಾಪನೆಗಾಗಿಯೆ ಬಳಸಿಕೊಳ್ಳಬೇಕು' ಎಂದು ನ್ಯಾಯಪೀಠ ಹೇಳಿದೆ.

'ಸುಪ್ರೀಂ' ಆದೇಶದಲ್ಲಿನ ಪ್ರಮುಖ ಅಂಶಗಳು

- ಸಮಿತಿಯು ರಾಷ್ಟ್ರೀಯ ಹುಲಿ ಸಂರಕ್ಷಣೆ ಪ್ರಾಧಿಕಾರ, ಭಾರತೀಯ ವನ್ಯಜೀವಿ ಸಂಸ್ಥೆ, ಕೇಂದ್ರೀಯ ಉನ್ನತಾಧಿಕಾರ ಸಮಿತಿಯಿಂದ ತಲಾ ಒಬ್ಬ ಪ್ರತಿನಿಧಿಯನ್ನು ಒಳಗೊಂಡಿರಬೇಕು. ಪರಿಸರ ಸಚಿವಾಲಯ ಸೂಚಿಸುವ, ಜಂಟಿ ಕಾರ್ಯದರ್ಶಿಗಿಂತ ಕಡಿಮೆ ಇರದ ಶ್ರೇಣಿಯ ಅಧಿಕಾರಿಯು ಸದಸ್ಯ ಕಾರ್ಯದರ್ಶಿಯಾಗಿರಬೇಕು
- ಕಾರ್ಬೆಟ್ ಹುಲಿ ಮೀಸಲು ಅರಣ್ಯದ ಬಫರ್ ಮತ್ತು ಅಂಚಿನ ಪ್ರದೇಶಗಳಲ್ಲಿ ಯಾವ ಬಗೆಯ ಚಟುವಟಿಕೆಗಳಿಗೆ ಅವಕಾಶ ನೀಡಬೇಕು ಹಾಗೂ ನಿಷೇಧ ಹೇರಬೇಕು ಎಂಬ ಬಗ್ಗೆ ಸಮಿತಿ ಶಿಫಾರಸು ಮಾಡಬೇಕು
- ಒಂದುವೇಳೆ, ಈ ಮೀಸಲು ಅರಣ್ಯದಲ್ಲಿ ಪ್ರವಾಸೋದ್ಯಮಕ್ಕೆ ಅವಕಾಶ ನೀಡಬೇಕು ಎಂದಾದಲ್ಲಿ, ಅದು ಪರಿಸರ ಪ್ರವಾಸವೇ ಆಗಿರತಕ್ಕದ್ದು
- ಈ ಮೀಸಲು ಅರಣ್ಯ ಪ್ರದೇಶದಲ್ಲಿ ಶಬ್ದ ಮಾಲಿನ್ಯ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡಬೇಕು
- ಹುಲಿ ಮೀಸಲು ಅರಣ್ಯಗಳ ಸಂರಕ್ಷಣೆ ಹಾಗೂ ನಿರ್ವಹಣೆ ಕುರಿತು ಉದ್ದೇಶಿತ ಸಮಿತಿಯ ಶಿಫಾರಸಿನಂತೆ ಕೈಗೊಳ್ಳುವ ಕ್ರಮಗಳು ದೇಶದಾದ್ಯಂತ ಅನ್ವಯವಾಗುವಂತೆ ಇರಬೇಕು

ರಾಷ್ಟ್ರೀಯ ಪಕ್ಷಗಳಿಗೆ ಅನಾಮಧೇಯ ಮೂಲಗಳಿಂದ ಹರಿದುಬಂದ ದೇಣಿಗೆ

ಚುನಾವಣಾ ಬಾಂಡ್ ಪಾಲು ಶೇ 82

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು

- ಎಡಿಆರ್ ಸಂಸ್ಥೆಯಿಂದ ಅಧ್ಯಯನ
- ಆರು ರಾಷ್ಟ್ರೀಯ ಪಕ್ಷಗಳ ಮಾಹಿತಿ ಸಂಗ್ರಹ
- ಬಿಜೆಪಿಗೆ ಅತ್ಯಧಿಕ ದೇಣಿಗೆ

ಅಂಕಿ ಅಂಶಗಳು

₹1,832 ಕೋಟಿ ರಾಷ್ಟ್ರೀಯ ಪಕ್ಷಗಳು 2022-23ರಲ್ಲಿ ಅನಾಮಧೇಯ ಮೂಲಗಳಿಂದ ಸಂಗ್ರಹಿಸಿರುವ ಮೊತ್ತ

₹1,400 ಕೋಟಿ ಬಿಜೆಪಿ ಸಂಗ್ರಹಿಸಿದ ಹಣ

₹315.11 ಕೋಟಿ ಕಾಂಗ್ರೆಸ್ ಸಂಗ್ರಹಿಸಿದ ಹಣ

₹19,083 ಕೋಟಿ ರಾಷ್ಟ್ರೀಯ ಪಕ್ಷಗಳು 2004–05 ರಿಂದ 2022–23ರ ವರೆಗಿನ ಅವಧಿಯಲ್ಲಿ ಅನಾಮಧೇಯ ಮೂಲಗಳಿಂದ ಗಳಿಸಿರುವ ಮೊತ್ತ

ನವದೆಹಲಿ: ರಾಜಕೀಯ ಪಕ್ಷಗಳು 2022-23ರಲ್ಲಿ ಅನಾಮಧೇಯ ಮೂಲಗಳಿಂದ ಪಡೆದ ದೇಣಿಗೆಯಲ್ಲಿ ಶೇ 82.42 ರಷ್ಟು ಕೂಡಾ ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ್ದಾಗಿವೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆ ತಿಳಿಸಿದೆ.

ರಾಷ್ಟ್ರೀಯ ಪಕ್ಷಗಳ ಲೆಕ್ಕಪರಿಶೋಧನೆ ವರದಿಗಳು ಮತ್ತು ದೇಣಿಗೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಮಾಹಿತಿಯನ್ನು ವಿಶ್ಲೇಷಿಸಿದಾಗ ಈ ಅಂಶ ಬಹಿರಂಗವಾಗಿದೆ ಎಂದು ಹೇಳಿದೆ.

2022–23ರಲ್ಲಿ ರಾಷ್ಟ್ರೀಯ ಪಕ್ಷಗಳು ಒಟ್ಟು ₹1,832.88 ಕೋಟಿ ದೇಣಿಗೆಯನ್ನು ಅನಾಮಧೇಯ ಮೂಲಗಳಿಂದ ಪಡೆದಿವೆ. ಅದರಲ್ಲಿ ₹1,510 ಕೋಟಿ ಅಂದರೆ ಶೇ 82.42 ರಷ್ಟು ಮೊತ್ತ, ಚುನಾವಣಾ ಬಾಂಡ್‌ಗಳಿಂದ ಬಂದಿವೆ.

ಆರು ರಾಷ್ಟ್ರೀಯ ಪಕ್ಷಗಳಾದ – ಬಿಜೆಪಿ, ಕಾಂಗ್ರೆಸ್, ಸಿಪಿಎಂ, ಬಹುಜನ ಸಮಾಜ ಪಾರ್ಟಿ (ಬಿಎಸ್‌ಪಿ), ಎಎಪಿ ಮತ್ತು ನ್ಯಾಷನಲ್ ಪೀಪಲ್ಸ್ ಪಾರ್ಟಿಯನ್ನು (ಎನ್‌ಪಿಇಪಿ), ಎಡಿಆರ್ ಈ ಅಧ್ಯಯನಕ್ಕೆ ಬಳಸಿಕೊಂಡಿದೆ. ಈ ಆರು ಪಕ್ಷಗಳು 2022–23ರ ಹಣಕಾಸು ವರ್ಷದಲ್ಲಿ ಒಟ್ಟು ₹3,076 ಕೋಟಿ ಮೊತ್ತ ಸಂಗ್ರಹಿಸಿದೆ.

ಕೂಪನ್‌ಗಳ ಮಾರಾಟದಿಂದ ₹136.79 ಕೋಟಿ ಮೊತ್ತ ಸಂಗ್ರಹಿಸಿರುವುದಾಗಿ ಕಾಂಗ್ರೆಸ್ ಮತ್ತು ಸಿಪಿಎಂ ಜಂಟಿಯಾಗಿ ಘೋಷಿಸಿವೆ. ಅನಾಮಧೇಯ ಮೂಲಗಳಿಂದ ಬಂದ ಮೊತ್ತದಲ್ಲಿ ಇದರ ಪಾಲು ಶೇ 7.46 ಆಗಿದೆ.

ಅನಾಮಧೇಯ ಮೂಲಗಳಿಂದ ಯಾವುದೇ ದೇಣಿಗೆ ಸಂಗ್ರಹಿಸಿಲ್ಲ ಎಂದು ಬಿಎಸ್‌ಪಿ ಹೇಳಿದೆ. 2022–23ರಲ್ಲಿ ಒಟ್ಟು ₹ 29.27 ಕೋಟಿ ಸಂಗ್ರಹಿಸಿರುವುದಾಗಿ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿದೆ. ಇದರಲ್ಲಿ ಬಹುಪಾಲು ಮೊತ್ತ ಬ್ಯಾಂಕ್ ಬಡ್ಡಿ (₹ 15.05 ಕೋಟಿ) ಮತ್ತು ಸದಸ್ಯತ್ವ ಶುಲ್ಕದಿಂದ (₹ 13.73 ಕೋಟಿ) ಬಂದಿದೆ.

ರಾಜಕೀಯ ಪಕ್ಷಗಳು ವ್ಯಕ್ತಿ ಅಥವಾ ಸಂಸ್ಥೆಯಿಂದ ₹ 20,000 ಕ್ಕಿಂತ ಕಡಿಮೆ ಪ್ರಮಾಣದ ದೇಣಿಗೆಯನ್ನು ಸಂಗ್ರಹಿಸಿದರೆ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡುವ ಅವಶ್ಯಕತೆ ಇಲ್ಲ. ರಾಷ್ಟ್ರೀಯ ಪಕ್ಷಗಳು ಈ ರೀತಿ ಒಟ್ಟು ₹ 183.28 ಕೋಟಿ ದೇಣಿಗೆ ಪಡೆದಿವೆ. ಅನಾಮಧೇಯ ಮೂಲಗಳಿಂದ ಬಂದ ಮೊತ್ತದಲ್ಲಿ ಇದರ ಪಾಲು ಶೇ 10 ಆಗಿದೆ.

ಎಸ್‌ಬಿಐ ವಿರುದ್ಧ ನ್ಯಾಯಾಂಗ ನಿಂದನೆ ಅರ್ಜಿ

ನವದೆಹಲಿ: ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಲು ಮತ್ತಷ್ಟು ಸಮಯ ಕೇಳಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ವಿರುದ್ಧ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆ ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದೆ.

ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಸಲ್ಲಿಸಲು ನಿಗದಿ ಮಾಡಲಾಗಿರುವ ಗಡುವನ್ನು ಎಸ್‌ಬಿಐ ಉದ್ದೇಶಪೂರ್ವಕವಾಗಿ ಉಲ್ಲಂಘನೆ ಮಾಡುತ್ತಿದೆ ಎಂದು ಹಿರಿಯ ವಕೀಲ ಪ್ರಶಾಂತ್ ಭೂಷಣ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ಎಡಿಆರ್ ಹೇಳಿದೆ.

'ಎಡಿಆರ್ ಸಲ್ಲಿಸಿರುವ ಅರ್ಜಿ ಕುರಿತು ಇ–ಮೇಲ್ ಕಳುಹಿಸಿ. ಈ ಅರ್ಜಿಯನ್ನು ವಿಚಾರಣಾ ಪಟ್ಟಿಗೆ ಸೇರಿಸಲಾಗುವುದು' ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ವಕೀಲ ಪ್ರಶಾಂತ್ ಭೂಷಣ್ ಅವರಿಗೆ ತಿಳಿಸಿದೆ.

ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಸಲ್ಲಿಸಲು ಜೂನ್ 30ರವರೆಗೆ ಸಮಯ ನೀಡುವಂತೆ ಕೋರಿ ಎಸ್‌ಬಿಐ ಸೋಮವಾರವಷ್ಟೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಎಡಿಆರ್ ವಾದವೇನು?

'ಚುನಾವಣಾ ಬಾಂಡ್‌ಗಳ ಖರೀದಿ ಮತ್ತು ನಗದೀಕರಣಕ್ಕೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ಒದಗಿಸಲು ಮಾರ್ಚ್ 6ರ ಗಡುವನ್ನು ನೀಡಲಾಗಿತ್ತು. ಆದರೆ, ಗಡುವು ಮುಗಿಯಲು ಎರಡು ದಿನಗಳು ಬಾಕಿ ಇರುವಾಗ ಜೂನ್ 30ರವರೆಗೆ ಸಮಯಾವಕಾಶ ನೀಡುವಂತೆ ಕೋರಿ ಎಸ್‌ಬಿಐ ಉದ್ದೇಶಪೂರ್ವಕವಾಗಿ ಅರ್ಜಿ ಸಲ್ಲಿಸಿದೆ' ಎಂದು ಎಡಿಆರ್ ದೂರಿದೆ.

'ದಾನಿಗಳ ಹಾಗೂ ದೇಣಿಗೆ ಮೊತ್ತ ಕುರಿತ ವಿವರಗಳು ಮುಂಬರುವ ಲೋಕಸಭಾ ಚುನಾವಣೆಗೆ ಮುನ್ನ ಬಹಿರಂಗಗೊಳ್ಳದಂತೆ ನೋಡಿಕೊಳ್ಳುವ ಉದ್ದೇಶದಿಂದ ಎಸ್‌ಬಿಐ ಈ ಅರ್ಜಿ ಸಲ್ಲಿಸಿದೆ' ಎಂದೂ ಎಡಿಆರ್ ಆರೋಪಿಸಿದೆ.

'ರಾಜಕೀಯ ಪಕ್ಷಗಳು ಕಾರ್ಪೊರೇಟ್ ಸಂಸ್ಥೆಗಳು ಹಾಗೂ ಚುನಾವಣಾ ಬಾಂಡ್‌ಗಳ ಮೂಲಕ ಬೃಹತ್ ಮೊತ್ತದ ಹಣವನ್ನು ಸ್ವೀಕರಿಸಿವೆ. ಈ ಕುರಿತ ವಿವರಗಳನ್ನು ಪಡೆಯುವ ಹಕ್ಕನ್ನು ನಾಗರಿಕರು ಹೊಂದಿದ್ದಾರೆ. ಆದರೆ, ವಿವರಗಳನ್ನು ಬಹಿರಂಗಪಡಿಸಲು ಎಸ್‌ಬಿಐ ನಿರಾಕರಿಸುತ್ತಿದೆ. ಎಸ್‌ಬಿಐನ ಇಂತಹ ಪಾರದರ್ಶಕವಲ್ಲದ ಹಾಗೂ ಉತ್ತರದಾಯಿತ್ವರಹಿತ ನಡೆ ಖಂಡನೀಯ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

'ಈ ವಿಚಾರವಾಗಿ ಜನರ ದನಿಯನ್ನು ಹತ್ತಿಕ್ಕುವ ಉದ್ದೇಶವಿರುವುದು ಸ್ಪಷ್ಟವಾಗುತ್ತದೆ. ಅಲ್ಲದೇ, ರಾಜಕೀಯ ಪಕ್ಷಗಳು ಪಡೆಯುವ ದೇಣಿಗೆಗಳ ಕುರಿತು ಲೆಕ್ಕಪರಿಶೋಧನೆ ನಡೆಸುವ ಜನರ ಹಕ್ಕನ್ನು ದಮನ ಮಾಡಿದಂತಾಗುತ್ತದೆ. ಹಾಗಾಗಿ, ಈ ವಿಷಯವನ್ನು ಗಂಭೀರವಾದ ನ್ಯಾಯಾಂಗ ನಿಂದನೆ ಎಂದು ಪರಿಗಣಿಸಬೇಕು' ಎಂದೂ ಎಡಿಆರ್ ಹೇಳಿದೆ.

ಚುನಾವಣಾ ಬಾಂಡ್ ಯೋಜನೆ ಅಸಾಂವಿಧಾನಿಕ ಎಂಬುದಾಗಿ ಫೆ.15ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಅಲ್ಲದೇ, ದಾನಿಗಳ ಹಾಗೂ ಚುನಾವಣಾ ಬಾಂಡ್‌ಗಳ ಮೂಲಕ ಹಣ ಪಡೆದ ರಾಜಕೀಯ ಪಕ್ಷಗಳ ವಿವರಗಳನ್ನು ಮಾರ್ಚ್ 6ರ ಒಳಗಾಗಿ ಚುನಾವಣಾ ಆಯೋಗಕ್ಕೆ ಸಲ್ಲಿಸುವಂತೆ ಎಸ್‌ಬಿಐಗೆ ನಿರ್ದೇಶನ ನೀಡಿತ್ತು.

ಕೇರಳ: ಹುದ್ದೆ ತ್ಯಜಿಸಲು ಕುಲಪತಿಗಳಿಗೆ ನೋಟಿಸ್

ತಿರುವನಂತಪುರ (ಪಿಟಿಐ): ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾಲಯ ಮತ್ತು ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳು ಹುದ್ದೆ ತೊರೆಯುವಂತೆ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಸೂಚಿಸಿದ್ದಾರೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳನ್ನು ಉಲ್ಲಂಘಿಸಿ ಈ ಇಬ್ಬರು ಕುಲಪತಿಗಳ ನೇಮಕ ಆಗಿರುವ ಕಾರಣ, ಅವರಿಗೆ ಹುದ್ದೆ ತೊರೆಯುವಂತೆ ಸೂಚನೆ ನೀಡಲಾಗಿದೆ ಎಂದು ಗುರುವಾರ ಮೂಲಗಳು ತಿಳಿಸಿವೆ.

ಕುಲಪತಿಗಳ ನೇಮಕಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪನ್ನು ಉಲ್ಲೇಖಿಸಿ ಈ ಇಬ್ಬರು ಕುಲಪತಿಗಳ ನೇಮಕಾತಿಗಳನ್ನು ಅನೂರ್ಜಿತ ಎಂದು ಪರಿಗಣಿಸಲಾಗಿದೆ. ಆದರೆ, ಕೇರಳ ಹೈಕೋರ್ಟ್ ನಿರ್ದೇಶನದಿಂದಾಗಿ ರಾಜ್ಯಪಾಲರ ಆದೇಶವನ್ನು ಇನ್ನೂ 10 ದಿನಗಳವರೆಗೆ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಮೂಲಗಳು ತಿಳಿಸಿವೆ.

ಯುಜಿಸಿ ನಿಯಮಾವಳಿಗೆ ವಿರುದ್ಧವಾಗಿದೆ ಎಂದು ಎಪಿಜೆ ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ನೇಮಕವನ್ನು ಸುಪ್ರೀಂ ಕೋರ್ಟ್ 2022ರ ಅಕ್ಟೋಬರ್‌ನಲ್ಲಿ ರದ್ದುಗೊಳಿಸಿತ್ತು. ಈ ತೀರ್ಪಿನ ಬಳಿಕ ರಾಜ್ಯಪಾಲರು ವಿವಿಧ ಕುಲಪತಿಗಳಿಗೆ ಶೋಕಾಸ್ ನೋಟಿಸ್ ನೀಡಿದ್ದರು. ಅದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್ ಮೊರೆ ಹೋಗಿದ್ದರು. ಈ ಕುರಿತು ಆರು ವಾರಗಳಲ್ಲಿ ಕುಲಪತಿಗಳ ವಿಚಾರಣೆ ನಡೆಸುವಂತೆ ಕುಲಾಧಿಪತಿಯಾದ ರಾಜ್ಯಪಾಲರಿಗೆ ಕೇರಳ ಹೈಕೋರ್ಟ್ ಈ ವರ್ಷದ ಜನವರಿಯಲ್ಲಿ ತಿಳಿಸಿತ್ತು.

'ಮಹಿಳೆಯರಿಗೆ ಬಂಗಾಳ ಸುರಕ್ಷಿತ'

ಪ್ರಧಾನಿ ಮೋದಿ ಅವರಿಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಿರುಗೇಟು

ಕೋಲ್ಕತ್ತ (ಪಿಟಿಐ): 'ಪಶ್ಚಿಮ ಬಂಗಾಳವು ಮಹಿಳೆಯರಿಗೆ ದೇಶದಲ್ಲೇ ಅತ್ಯಂತ ಸುರಕ್ಷಿತ ರಾಜ್ಯ' ಎಂದು ಹೇಳಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಸಂದೇಶ್‌ಖಾಲಿಯಲ್ಲಿ ನಡೆದ ಘಟನಾವಳಿಗಳ ಕುರಿತು ಬಿಜೆಪಿ ಸುಳ್ಳುಸುದ್ದಿ ಹರಡುತ್ತಿದೆ ಎಂದು ಆರೋಪಿಸಿದರು.

ಕೋಲ್ಕತ್ತದಲ್ಲಿ ನಡೆದ ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಸಂದೇಶ್‌ಖಾಲಿ ಕುರಿತು ತಪ್ಪು ಸಂದೇಶಗಳನ್ನು ಹರಿಬಿಡಲಾಗುತ್ತಿದೆ. ಘಟನೆಗಳನ್ನು ತಿರುಚಲಾಗಿದೆ. ಅಲ್ಲಿ ನಡೆದಿದೆ ಎನ್ನಲಾದ ಘಟನೆಗಳು ನಮ್ಮನ್ನು ತಲುಪಲಿಲ್ಲ. ಆದರೆ ಅವುಗಳ ಕುರಿತು ನಮಗೆ ಮಾಹಿತಿ ದೊರಕುತ್ತಿದ್ದಂತೆ ಕ್ರಮ ಕೈಗೊಂಡಿದ್ದೇವೆ. ಟಿಎಂಸಿ ಕಾರ್ಯಕರ್ತರು ತಪ್ಪು ಮಾಡಿದರೆ ಅವರನ್ನು ಬಂಧಿಸಲು ನಾನು ಹಿಂಜರಿಯುವುದಿಲ್ಲ' ಎಂದರು.

ಇದೇ ವೇಳೆ, ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಉಲ್ಲೇಖಿಸದೇ ವಾಗ್ದಾಳಿ ನಡೆಸಿದ ಅವರು, 'ಬುಧವಾರ ರಾಜ್ಯಕ್ಕೆ ಬಂದಿದ್ದ ನೀವು ಮಹಿಳೆಯರ ಸುರಕ್ಷತೆ ಕುರಿತು ನಮ್ಮ ಸರ್ಕಾರಕ್ಕೆ ಪಾಠ ಹೇಳಿದ್ದೀರಿ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿ, ಅವರನ್ನು ದಹಿಸಲಾಗಿದೆ. ಈ ಕುರಿತು ಬಿಜೆಪಿ ನಾಚಿಕೆಪಡಬೇಕು' ಎಂದರು.

ಪಶ್ಚಿಮ ಬಂಗಾಳಕ್ಕೆ ಆಗಮಿಸಿದ್ದ ಮೋದಿ ಅವರು 'ಸಂದೇಶ್‌ಖಾಲಿಯ ಬಿರುಗಾಳಿ ರಾಜ್ಯದಾದ್ಯಂತ ಬೀಸಲಿದೆ. ನಾರಿ ಶಕ್ತಿಯು ಟಿಎಂಸಿ ಮಣಿಸಲಿದೆ' ಎಂದಿದ್ದರು.

'ರಾಜ್ಯದಲ್ಲಿ ವಿಭಜಕ ರಾಜಕೀಯ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಬಿಜೆಪಿಗೆ ಟಿಎಂಸಿ ಮೇಲೆ ಸಿಟ್ಟು. ರಾಜ್ಯಕ್ಕೆ ಅವರು ಭದ್ರತಾ ಪಡೆಯ 400 ತಂಡಗಳನ್ನು ಕಳಿಸಿದ್ದರು. ಆದರೆ ಮಣಿಪುರ ಹೊತ್ತಿ ಉರಿದರೂ ಒಂದೂ ತಂಡವನ್ನು ಕಳಿಸಲಿಲ್ಲ' ಎಂದು ಕಿಡಿಕಾರಿದರು.

ಟಿಎಂಸಿ ರಾಷ್ಟ್ರೀಯ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರೂ ರ‍್ಯಾಲಿಯಲ್ಲಿ ಭಾಗಿಯಾಗಿದ್ದರು.

ಟಿಎಂಸಿ ಸೇರಿದ ಬಿಜೆಪಿ ಶಾಸಕ: ರಾಣಾಘಾಟ್ ದಕ್ಷಿಣ ಕ್ಷೇತ್ರದ ಬಿಜೆಪಿ ಶಾಸಕ ಮುಕುಟ್ ಮಣಿ ಅಧಿಕಾರಿ ಅವರು ಬಿಜೆಪಿ ತೊರೆದು ಟಿಎಂಸಿಯನ್ನು ಗುರುವಾರ ಸೇರಿದರು. ಈ ರ‍್ಯಾಲಿಯಲ್ಲಿ ಅವರೂ ಭಾಗವಹಿಸಿದ್ದರು. 'ಜನರಿಗಾಗಿ ಕೆಲಸ ಮಾಡಲು ಟಿಎಂಸಿ ಮಾತ್ರವೇ ವೇದಿಕೆ ಒದಗಿಸುತ್ತದೆ. ಹೀಗಾಗಿ ನಾನು ಟಿಎಂಸಿ ಸೇರಿದೆ' ಎಂದರು.

ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ಗುರುವಾರ ನಡೆದ ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದ ರ‍್ಯಾಲಿಯಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಹಿಳೆಯರಿಗೆ ವಂದಿಸಿದರು –ಎಎಫ್‌ಪಿ ಚಿತ್ರ

ನ್ಯಾ. ಗಂಗೋಪಾಧ್ಯಾಯ ಸೋಲು ಖಚಿತ: ಮಮತಾ

ಗುರುವಾರವಷ್ಟೇ ಬಿಜೆಪಿ ಸೇರ್ಪಡೆಯಾಗಿರುವ ಕಲ್ಕತ್ತ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರ ವಿರುದ್ಧವೂ ಮಮತಾ ಬ್ಯಾನರ್ಜಿ ಟೀಕಾಪ್ರಹಾರ ನಡೆಸಿದರು. ತಮ್ಮ ತೀರ್ಪಿನ ಮೂಲಕ ರಾಜ್ಯದ ಸಾವಿರಾರು ಯುವಜನರ ಉದ್ಯೋಗಗಳನ್ನು ಗಂಗೋಪಾಧ್ಯಾಯ ಅವರು ಕಸಿದರು ಎಂದು ಆರೋಪಿಸಿದ ಅವರು, 'ಯುವಜನರು ನಿಮ್ಮನ್ನು ಕ್ಷಮಿಸುವುದಿಲ್ಲ. ನಿಮ್ಮ ಎಲ್ಲಾ ತೀರ್ಪುಗಳು ಪ್ರಶ್ನಾರ್ಥಕವಾಗಿವೆ. ನಿಮ್ಮ ಸೋಲು ಖಚಿತ' ಎಂದರು.

'ಲೋಕಸಭೆ ಚುನಾವಣೆಯಲ್ಲಿ ನೀವು ಯಾವುದೇ ಕ್ಷೇತ್ರದಿಂದ ಸ್ಪರ್ಧಿಸಿದರೂ ನಿಮ್ಮನ್ನು ಸೋಲಿಸುತ್ತೇವೆ' ಎಂದರು.

'ಎಲ್‌ಇಟಿಯ ಖಾಸಿಂ ಗುಜ್ಜರ್ ಭಯೋತ್ಪಾದಕ'

ನವದೆಹಲಿ (ಪಿಟಿಐ): ದೇಶದಲ್ಲಿ ನಡೆದ ಹಲವು ಭಯೋತ್ಪಾದಕ ದಾಳಿಗಳ ಪ್ರಮುಖ ಸೂತ್ರಧಾರಿ, ಎಲ್‌ಇಟಿ ಸಂಘಟನೆ ಸದಸ್ಯ ಮೊಹಮ್ಮದ್ ಖಾಸಿಂ ಗುಜ್ಜರ್ 'ಭಯೋತ್ಪಾದಕ' ಎಂದು ಕೇಂದ್ರ ಸರ್ಕಾರ ಗುರುವಾರ ಘೋಷಿಸಿದೆ.

ಕೇಂದ್ರ ಸರ್ಕಾರದ ಈ ನಿರ್ಧಾರವನ್ನು ಪ್ರಕಟಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಎಲ್‌ಇಟಿ ಸದಸ್ಯ, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನೆಲೆಸಿರುವ ಗುಜ್ಜರ್, ಭಾರತದ ವಿರುದ್ಧ ಯುದ್ಧ ಸಾರಲು ಯೋಜಿಸಿದ್ದ. ಆತ ಭಯೋತ್ಪಾದಕ ದಾಳಿಗಳ ಮೂಲಕ ಹಲವು ಮಂದಿಯ ಸಾವು–ನೋವುಗಳಿಗೆ ಕಾರಣವಾಗಿದ್ದಾನೆ' ಎಂದು ಹೇಳಿದ್ದಾರೆ.

ಜೈಲಿನಿಂದ ಹೊರಬಂದ ಪ್ರೊ. ಸಾಯಿಬಾಬಾ

ನಾಗ್ಪುರ (ಪಿಟಿಐ): ದೆಹಲಿ ವಿಶ್ವವಿದ್ಯಾಲಯದ ಮಾಜಿ ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾ ಅವರು ನಾಗ್ಪುರದ ಕೇಂದ್ರ ಕಾರಾಗೃಹದಿಂದ ಗುರುವಾರ ಬಿಡುಗಡೆಯಾದರು. ಮಾವೋವಾದಿಗಳ ಜೊತೆಗೆ ನಂಟು ಹೊಂದಿದ್ದ ಆರೋಪ ಎದುರಿಸುತ್ತಿದ್ದ ಅವರನ್ನು ಬಾಂಬೆ ಹೈಕೋರ್ಟ್ ದೋಷಮುಕ್ತಗೊಳಿಸಿದ ಎರಡು ದಿನಗಳ ಬಳಿಕ ಬಿಡುಗಡೆ ಮಾಡಲಾಯಿತು.

ಸಾಯಿಬಾಬಾ

ಮಹಾರಾಷ್ಟ್ರದ ಗಢಚಿರೋಲಿ ಜಿಲ್ಲೆಯ ವಿಚಾರಣಾ ನ್ಯಾಯಾಲಯವು ಅವರ ಮೇಲಿದ್ದ ಆರೋಪ ಸಾಬೀತುಪಡಿಸಿ 2017ರಲ್ಲಿ ಆದೇಶ ಹೊರಡಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಅವರು ನಾಗ್ಪುರ ಕಾರಾಗೃಹದಲ್ಲಿ ಬಂಧನದಲ್ಲಿದ್ದರು.

ಕಾರಾಗೃಹದಿಂದ ಅವರು ವೀಲ್‌ಚೇರ್‌ನಲ್ಲಿ ಹೊರಬಂದರು. ಅವರನ್ನು ಬರಮಾಡಿಕೊಳ್ಳಲು ಕುಟುಂಬ ಸದಸ್ಯರೊಬ್ಬರು ಕಾರಾಗೃಹದ ಎದುರು ಕಾದಿದ್ದರು.

ಸಾಯಿಬಾಬಾ ಸೇರಿ ಐವರ ವಿರುದ್ಧ ಆರೋಪ ಸಾಬೀತುಪಡಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದಿದ್ದ ಹೈಕೋರ್ಟ್, ಅವರಿಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ರದ್ದುಗೊಳಿಸಿತ್ತು.

ವಿಶೇಷ ಸ್ಥಾನಮಾನ ರದ್ದಾದ ನಂತರ ಜಮ್ಮು–ಕಾಶ್ಮೀರಕ್ಕೆ ಮೊದಲ ಭೇಟಿ

ಹೃದಯ ಗೆಲ್ಲಲು ಬಂದಿರುವೆ: ಮೋದಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಸಂವಿಧಾನದ 370ನೇ ವಿಧಿ ಅಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದು ಮಾಡಿದ ನಂತರ ಜಮ್ಮು–ಕಾಶ್ಮೀರಕ್ಕೆ ಇದೇ ಮೊದಲ ಬಾರಿಗೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ, 'ನಿಮ್ಮೆಲ್ಲರ ಹೃದಯ ಗೆಲ್ಲುವುದಕ್ಕಾಗಿ ನಾನು ಇಲ್ಲಿಗೆ ಬಂದಿರುವೆ' ಎಂದು ಗುರುವಾರ ಹೇಳಿದರು.

'ವಿಕಸಿತ ಭಾರತ, ವಿಕಸಿತ ಜಮ್ಮು– ಕಾಶ್ಮೀರ' ಕಾರ್ಯಕ್ರಮ ಅಂಗವಾಗಿ ಇಲ್ಲಿನ ಬಕ್ಷಿ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಹೃದಯ ಗೆಲ್ಲುವುದು ಮಾತ್ರ ನನ್ನ ಈ ಭೇಟಿಯ ಉದ್ದೇಶವಲ್ಲ; ಕಾಶ್ಮೀರ ಜನರ ಆಶೋತ್ತರಗಳು ಹಾಗೂ ಕನಸುಗಳನ್ನು ತಿಳಿಯಲು ಇಲ್ಲಿಗೆ ಬಂದಿದ್ದೇನೆ' ಎಂದು ಹೇಳಿದರು.

'2014ರ ನಂತರ ಜಮ್ಮು–ಕಾಶ್ಮೀರಕ್ಕೆ ಬಂದಾಗಲೆಲ್ಲ, ನಾನು ನಿಮ್ಮ ಹೃದಯ ಗೆಲ್ಲುವುದಕ್ಕೆ ಎಲ್ಲ ಪ್ರಯತ್ನ ಮಾಡುವೆ ಎಂದು ಹೇಳುತ್ತಿದ್ದೆ. ಇಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದನ್ನು ನೋಡಿದರೆ ನಿಮ್ಮ ಹೃದಯ ಗೆಲ್ಲುವಲ್ಲಿ ಯಶಸ್ಸು ಕಂಡಿದ್ದೇನೆ ಎಂಬುದು ಮನದಟ್ಟಾಗುತ್ತಿದೆ' ಎಂದರು.

ಶ್ರೀನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ವಿಕಸಿತ ಭಾರತ, ವಿಕಸಿತ ಜಮ್ಮು–ಕಾಶ್ಮೀರ' ಕಾರ್ಯಕ್ರಮ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವ್ಯಾಪಾರಿಯೊಬ್ಬರ ಜೊತೆ ಮಾತನಾಡಿದರು –ಪಿಟಿಐ ಚಿತ್ರ

'ಶೀಘ್ರವೇ ರಂಜಾನ್ ಆರಂಭವಾಗಲಿದೆ. ಜಮ್ಮು–ಕಾಶ್ಮೀರದ ಪರಿಶುದ್ಧವಾದ ಈ ನೆಲದಿಂದ ನಾನು ಪ್ರತಿಯೊಬ್ಬರಿಗೂ ಶುಭಾಶಯ ಕೋರುತ್ತೇನೆ. ಮುಂದಿನ ಐದು ವರ್ಷಗಳ ಅವಧಿಯಲ್ಲಿ ಜಮ್ಮು–ಕಾಶ್ಮೀರ ಭಾರಿ ಅಭಿವೃದ್ಧಿ ಕಾಣಲಿದೆ. ಜಮ್ಮು–ಕಾಶ್ಮೀರದ ಯಶಸ್ಸು, ಶಾಂತಿ ಮತ್ತು ಅಭಿವೃದ್ಧಿಯನ್ನು ಯಾರೂ ತಡೆಯಲಾರರು' ಎಂದು ಮೋದಿ ಹೇಳಿದರು.

ನೇಮಕಾತಿ ಪತ್ರ ವಿತರಣೆ: ಇದೇ ಸಂದರ್ಭದಲ್ಲಿ ಮೋದಿ ಅವರು ನೂತನವಾಗಿ ನೇಮಕಗೊಂಡಿರುವ ಸಾವಿರದಷ್ಟು ಸರ್ಕಾರಿ ಉದ್ಯೋಗಿಗಳಿಗೆ ನೇಮಕಾತಿ ಪತ್ರ ವಿತರಿಸಿದರು.

ಮಹಿಳಾ ಸಾಧಕಿಯರು, ರೈತರು, ಉದ್ಯಮಶೀಲರು ಹಾಗೂ ಕೇಂದ್ರದ ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು.

₹6,400 ಕೋಟಿ ಅಧಿಕ ವೆಚ್ಚದ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದರು.

ಷೇರುಪೇಟೆ ವಹಿವಾಟು

33



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,474
ಇಂದಿನ ಅಂತ್ಯ	22,493
▲	19
ದಿನದ ಗರಿಷ್ಠ	22,525

ವಿನಿಮಯ ದರ

$ ಡಾಲರ್	82.67
£ ಪೌಂಡ್	105.58
€ ಯುರೊ	90.28
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1500)
ಸೋಯಾ (ರಿಫೈನ್ಡ್)	₹940 (930)
ಸೂರ್ಯಕಾಂತಿ (ರಿಫೈನ್ಡ್)	₹940 (925)
ಪಾಮೋಲಿನ್	₹900 (902)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹322-441
ದ್ವಿತಳಿ (ಬಿ.ವಿ)	₹301-552

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹164.50
ಆರ್‌ಎಸ್‌ಎಸ್-5	₹159.50
ಗುಡ್ ಲಾಟ್	₹147.50

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13900
ಎಸಿ	₹7950
ಆರ್‌ಪಿ	₹14000
ಆರ್‌ಸಿ	₹7965

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-34000
ಹಳತು	34000-40500
ಚಿತ್ರದುರ್ಗ	
ಅಪಿ	47139-47569
ಬೆಟ್ಟೆ	33619-34059
ಕೆಂಪುಗೋಟು	27609-28010
ರಾಶಿ	46629-47089
ಕುಮಟ	
ಚಿಪ್ಪು	20569-28628
ಕೋಕ	11229-25789
ಹಳೆಚಾಲಿ	33279-35500
ಹೊಸಚಾಲಿ	30688-34188
ಪುತ್ತೂರು	
ಹೊಸತು	26500-34000
ಕಾರ್ಕಳ	
ಹೊಸತು	25000-34500
ಹಳತು	30000-43500
ಸಾಗರ	
ಬಿಳಿಗೋಟು	14099-25729
ಚಾಲಿ	28699-34000
ಕೋಕ	12290-28099
ಕೆಂಪುಗೋಟು	15290-33899
ರಾಶಿ	31699-48199
ಸಿಪ್ಪೆಗೋಟು	8152-17599
ಶಿವಮೊಗ್ಗ	
ಬೆಟ್ಟೆ	43700-54259
ಗೊರಬಲು	16539-34259
ರಾಶಿ	23009-48500
ಸರಕು	48800-81040
ಸಿದ್ದಾಪುರ	
ಬಿಳಿಗೋಟು	24309-28309
ಚಾಲಿ	34899-36099
ಕೋಕ	23699-27099
ಹೊಸಚಾಲಿ	29509-33599
ಕೆಂಪುಗೋಟು	31609-34309
ರಾಶಿ	43109-46699
ತಟ್ಟಿಬೆಟ್ಟೆ	37039-45099
ಶಿರಸಿ	
ಬೆಟ್ಟೆ	37418-44561
ಬಿಳಿಗೋಟು	20111-29699
ಚಾಲಿ	30899-34899
ಕೆಂಪುಗೋಟು	21305-33611
ರಾಶಿ	42699-46989
ಯಲ್ಲಾಪುರ	
ಅಪಿ	54169-62509
ಬಿಳಿಗೋಟು	22899-32869
ಚಾಲಿ	32999-37370
ಕೋಕ	16899-30569
ಕೆಂಪುಗೋಟು	26899-37869
ರಾಶಿ	44369-53399
ತಟ್ಟಿಬೆಟ್ಟೆ	35999-44099

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನವೀಕೃತ ಪಲ್ಸರ್ ಎನ್‌ಎಸ್ ಸರಣಿ ಬೈಕ್‌ಗಳ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ದ್ವಿಚಕ್ರ ವಾಹನ ತಯಾರಿಕಾ ಕಂಪನಿಯಾದ ಬಜಾಜ್ ಆಟೊ, ಪಲ್ಸರ್ ಎನ್‌ಎಸ್ ಸರಣಿಯ ಮೋಟಾರ್‌ಸೈಕಲ್‌ಗಳನ್ನು ಮಾರುಕಟ್ಟೆಗೆ ಮರು ಬಿಡುಗಡೆ ಮಾಡಿದೆ.

ನವೀಕೃತ ಎನ್‌ಎಸ್200 ಹಾಗೂ ಎನ್‌ಎಸ್160 ಬೈಕ್‌ಗಳು ಹಳೆಯ ಮಾದರಿಗಳಿಗೆ ಹೋಲಿಸಿದರೆ ಸಾಕಷ್ಟು ಅಪ್‌ಗ್ರೇಡ್ ಆಗಿವೆ. ಇವುಗಳಲ್ಲಿ ಎಲ್‌ಇಡಿ ಹೆಡ್‌ಲ್ಯಾಂಪ್, ಇಂಡಿಕೇಟರ್‌ಗಳನ್ನು ಅಳವಡಿಸಲಾಗಿದೆ. ಬ್ಲೂಟೂತ್ ಸಂಪರ್ಕದ ಸವಲತ್ತನ್ನು ನೀಡಲಾಗಿದೆ. ಬೈಕ್‌ನ ಡಿಸ್‌ಪ್ಲೇನಲ್ಲಿಯೇ ಮೊಬೈಲ್ ಸಂದೇಶ ಸ್ವೀಕಾರ, ಕರೆ ಅನುಮತಿಸಲು ಹಾಗೂ ನಿರಾಕರಣೆಗೆ ಅವಕಾಶವಿದೆ.

ಎನ್‌ಎಸ್125 ಬೈಕ್ ಕೂಡ ಹೊಸ ಡಿಜಿಟಲ್ ಇನ್‌ಸ್ಟ್ರುಮೆಂಟ್ ಕ್ಲಸ್ಟರ್ ಹಾಗೂ ಎಲ್‌ಇಡಿ ಲೈಟಿಂಗ್ ವ್ಯವಸ್ಥೆ ಹೊಂದಿದೆ.

ಪಲ್ಸರ್ ಎನ್‌ಎಸ್ ಸರಣಿ ಬೈಕ್

ಈ ಬೈಕ್‌ಗಳು ಸವಾರರು ನಿರೀಕ್ಷಿಸುವ ಸಾಮರ್ಥ್ಯ ಹೊಂದಿವೆ. ಹೊಸ ವೈಶಿಷ್ಟ್ಯ ಒಳಗೊಂಡಿದ್ದು, ಉತ್ತಮ ಸವಾರಿಯ ಅನುಭವವನ್ನು ನೀಡುತ್ತವೆ. ಗ್ರಾಹಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ನವೀಕರಿಸಲಾಗಿದೆ. ನವೀನ ತಂತ್ರಜ್ಞಾನದ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಎನ್‌ಎಸ್200 ಬೈಕ್‌ನ ಎಕ್ಸ್ ಷೋರೂಂ ಬೆಲೆ ₹1,57,427, ಎನ್‌ಎಸ್160 ಬೆಲೆ ₹1,45,792 ಹಾಗೂ ಎನ್‌ಎಸ್125 ಬೆಲೆಯು ₹1,04,922 ಆಗಿದೆ.

ಫಸಲು ಕೈಗೆ ಸಿಗುವ ಮುನ್ನವೇ ಬೆಳೆಗಾರರಿಗೆ ನಿರಾಸೆ

ಕಾಳುಮೆಣಸು ಬೆಲೆ ಕುಸಿತ

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು ಜಿಲ್ಲೆ): ಕಳೆದ ತಿಂಗಳು ಪ್ರತಿ ಕೆ.ಜಿಗೆ ₹600 ತಲುಪಿದ್ದ ಕಾಳುಮೆಣಸು ದರವು ಈಗ ₹480ಕ್ಕೆ ಇಳಿಕೆಯಾಗಿದೆ. ಧಾರಣೆ ಕುಸಿತದಿಂದಾಗಿ ಫಸಲು ಕೈಗೆ ಬರುವ ಮುನ್ನವೇ ಬೆಳೆಗಾರರಲ್ಲಿ ನಿರಾಸೆ ಮನೆ ಮಾಡಿದೆ.

ಮಳೆಯ ಕೊರತೆ ಹಾಗೂ ಕಡಿಮೆಯಾದ ಮಣ್ಣಿನ ತೇವಾಂಶದಿಂದ ಈ ಬಾರಿ ಕಾಳುಮೆಣಸಿನ ಇಳುವರಿ ತಕ್ಕಮಟ್ಟಿಗೆ ಉತ್ತಮವಾಗಿದೆ. ಆದರೆ, ಹವಾಮಾನ ವೈಪರೀತ್ಯದಿಂದ ಮೆಣಸು ಸರಿಯಾಗಿ ಹಣ್ಣಾಗಿಲ್ಲ. ಕಾರ್ಮಿಕರು ಸಿಗದೆ ಕೊಯ್ಲು ಮಂದಗತಿಯಲ್ಲಿ ಸಾಗಿದೆ. ಕೊಯ್ಲು ಮಾಡಿದ ಮೆಣಸನ್ನು ಒಣಗಿಸಿ ಮಾರುಕಟ್ಟೆಗೆ ಕೊಂಡೊಯ್ಯುವ ಮುನ್ನವೇ ಧಾರಣೆ ಕುಸಿದಿದೆ.

ಕೇರಳದ ವಯನಾಡ್ ಮತ್ತು ಇಡುಕ್ಕಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮೆಣಸಿನ ಉತ್ಪಾದನೆಯಾಗುತ್ತದೆ.

ಕಾಳುಮೆಣಸು ಒಣಗಿಸುತ್ತಿದ್ದ ದೃಶ್ಯ

ಕರ್ನಾಟಕದಲ್ಲೂ ಉತ್ತಮ ಫಸಲು ಬಂದಿದೆ. ಈ ಬಾರಿ ತಮಿಳುನಾಡಿನಲ್ಲಿಯೂ ಅಧಿಕ ಫಸಲು ಬಂದಿದೆ. ಹಾಗಾಗಿ, ಕಾಳುಮೆಣಸಿನ ಪ್ರಮುಖ ಮಾರುಕಟ್ಟೆಯಾದ ಕೊಚ್ಚಿಯಲ್ಲಿ ದಿನೇ ದಿನೇ ಧಾರಣೆ ಕುಸಿಯುತ್ತಿದೆ ಎನ್ನುತ್ತಾರೆ ವ್ಯಾಪಾರಸ್ಥರು.

'ಭಾರತದಲ್ಲಿ ಉತ್ಪಾದನೆಯಾಗುವ ಕಾಳುಮೆಣಸು ದೇಸಿ ಬಳಕೆಗೆ ಸಾಕಾಗುತ್ತಿಲ್ಲ. ಹಾಗೆ ನೋಡಿದರೆ ದರ ಕುಸಿಯುವ ಪ್ರಮೇಯವೇ ಇರಲಿಲ್ಲ. ಆದರೆ, ಕಾಳುಮೆಣಸಿನ ಆಮದು ಹೆಚ್ಚುತ್ತಿರುವುದರಿಂದ ಧಾರಣೆಯು ಕುಸಿತದ ಹಾದಿ ಹಿಡಿದಿದೆ' ಎಂದು ಹೇಳುತ್ತಾರೆ.

ಎಲ್ಲಿಂದ ಆಮದು?: ವಿಯೆಟ್ನಾಂ ಮತ್ತು ಮಡಗಾಸ್ಕರ್‌ನಿಂದ ಭಾರತಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಕಾಳುಮೆಣಸು ಆಮದಾಗುತ್ತಿದೆ.

ಭಾರತದ ಕಾಳುಮೆಣಸಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಟನ್‌ಗೆ 7,500 ಡಾಲರ್‌ಗಿಂತ ಹೆಚ್ಚಿನ ಬೆಲೆ ಇದೆ. ಆದರೆ, ಕಡಿಮೆ ಗುಣಮಟ್ಟದ ವಿಯೆಟ್ನಾಂ ಮತ್ತು ಮಡಗಾಸ್ಕರ್ ಮೆಣಸಿಗೆ ಇದರ ಅರ್ಧದಷ್ಟು ಬೆಲೆ ಇದೆ. ಆದ್ದರಿಂದ ಆಮದು ಹೆಚ್ಚಿದೆ' ಎಂಬುದು ಬೆಳೆಗಾರರ ಸಂಘಟನೆಗಳ ಒತ್ತಾಯ.

ಹಣದ ಅಗತ್ಯ ಇರುವ ಬೆಳೆಗಾರರು ಬೆಲೆ ಕುಸಿದಿದ್ದರೂ ಮಾರಾಟ ಆರಂಭಿಸಿದ್ದಾರೆ. ಅನುಕೂಲಸ್ಥ ಬೆಳೆಗಾರರು ಮೆಣಸನ್ನು ಕೆಲಕಾಲ ಸಂಗ್ರಹಿಸಿ ಬೆಲೆ ಏರಿಕೆಯಾದಾಗ ಮಾರಾಟ ಮಾಡುವ ಯೋಚನೆ ಹೊಂದಿದ್ದಾರೆ.

> ಕಾಳುಮೆಣಸಿನ ದರ ಕುಸಿತದಿಂದ ಬೆಳೆಗಾರರು ಕಂಗಾಲಾಗಿದ್ದಾರೆ. ಮತ್ತೊಂದೆಡೆ ಅಕ್ರಮವಾಗಿ ಆಮದು ಹೆಚ್ಚುತ್ತಿದೆ. ಇದಕ್ಕೆ ಸರ್ಕಾರ ಕಡಿವಾಣ ಹಾಕಬೇಕಾಗಿದೆ
> **ಚಂದ್ರಶೇಖರ ಲಿಂಬೆಕೊಂಡ,** ಬೆಳೆಗಾರ

ಟಾಟಾ ವಾಣಿಜ್ಯ ವಾಹನ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಅತಿದೊಡ್ಡ ವಾಣಿಜ್ಯ ವಾಹನಗಳ ತಯಾರಿಕಾ ಕಂಪನಿಯಾದ ಟಾಟಾ ಮೋಟರ್ಸ್ ತನ್ನ ವಾಣಿಜ್ಯ ವಾಹನಗಳ ಬೆಲೆಯನ್ನು ಶೇ 2ರಷ್ಟು ಏರಿಕೆ ಮಾಡಿದೆ.

ಏಪ್ರಿಲ್ 1ರಿಂದ ಈ ಪರಿಷ್ಕೃತ ದರಗಳು ಜಾರಿಗೆ ಬರಲಿವೆ. ತಯಾರಿಕಾ ವೆಚ್ಚದಲ್ಲಿ ಹೆಚ್ಚಳವಾಗಿದೆ. ಹಾಗಾಗಿ, ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ದರ ಪರಿಷ್ಕರಣೆಯು ವಾಹನಗಳ ಒಂದೊಂದು ಮಾದರಿ ಮತ್ತು ಆವೃತ್ತಿಗಳಿಗೆ ಪ್ರತ್ಯೇಕವಾಗಿರುತ್ತದೆ. ಎಲ್ಲಾ ಶ್ರೇಣಿಯ ವಾಣಿಜ್ಯ ವಾಹನಗಳಿಗೆ ಅನ್ವಯವಾಗುತ್ತದೆ ಎಂದು ಕಂಪನಿ ತಿಳಿಸಿದೆ.

ಮಿಲ್ಲಿಂಗ್ ಕೊಬ್ಬರಿ ಖರೀದಿಗೆ ಒಪ್ಪಿಗೆ

2,999 ಟನ್ ಮಿತಿ ನಿಗದಿ • ಪ್ರತಿ ಕ್ವಿಂಟಲ್‌ಗೆ ₹11,160 ಬೆಂಬಲ ಬೆಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆಯಡಿ (ಎಂಎಸ್‌ಪಿ) ಮಿಲ್ಲಿಂಗ್ ಕೊಬ್ಬರಿ (ಹೋಳು ಕೊಬ್ಬರಿ) ಖರೀದಿಸಲು ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ.



ಪ್ರಸಕ್ತ ಋತುವಿನಡಿ ರಾಜ್ಯದಲ್ಲಿ ಮಿಲ್ಲಿಂಗ್ ಕೊಬ್ಬರಿಯ ಇಳುವರಿ 11,995 ಟನ್ ಆಗಿದೆ. ಈ ಪೈಕಿ 2,999 ಟನ್ ಖರೀದಿಗೆ ಮಿತಿ ನಿಗದಿಪಡಿಸಲಾಗಿದೆ. ಕರಾವಳಿ ಭಾಗದಲ್ಲಿ ಈ ಕೊಬ್ಬರಿ ಉತ್ಪಾದನೆಯು ಹೆಚ್ಚಿದ್ದು, ಎಣ್ಣೆ ತಯಾರಿಕೆಗೆ ಹೆಚ್ಚಾಗಿ ಬಳಕೆಯಾಗುತ್ತದೆ. ಪ್ರತಿ ಕ್ವಿಂಟಲ್‌ಗೆ ₹11,160 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

'ರಾಜ್ಯ ಸರ್ಕಾರ ಸತತವಾಗಿ ಕೇಂದ್ರದ ಜೊತೆ ಪತ್ರ ವ್ಯವಹಾರ ನಡೆಸಿ ಒತ್ತಡ ಹೇರಿತ್ತು. ಈ ಪ್ರಯತ್ನಕ್ಕೆ ಫಲ ಸಿಕ್ಕಿದ್ದು, ಇದೇ ಪ್ರಥಮ ಬಾರಿಗೆ ಮಿಲ್ಲಿಂಗ್ ಕೊಬ್ಬರಿ ಖರೀದಿಸಲು ಅನುಮತಿ ದೊರೆತಿದೆ. ವಿವಿಧ ಜಿಲ್ಲೆಗಳಲ್ಲಿ ಬೆಂಬಲ ಬೆಲೆಯಡಿ ಕೊಬ್ಬರಿ ಖರೀದಿಸಲಾಗುತ್ತದೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ ತಿಳಿಸಿದ್ದಾರೆ.

ಕೇಂದ್ರವು ರಾಜ್ಯದಲ್ಲಿನ ಇಳುವರಿ ಅಂದಾಜಿನ ಶೇ 25ರಷ್ಟು ಕೊಬ್ಬರಿಯನ್ನು ಖರೀದಿಸುತ್ತದೆ. ಶೀಘ್ರವೇ, ಖರೀದಿ ನೋಂದಣಿ ದಿನಾಂಕವನ್ನು ಪ್ರಕಟಿಸಲಾಗುವುದು ಎಂದು ಹೇಳಿದ್ದಾರೆ.

ರಾಜ್ಯದಲ್ಲಿ ಉಂಡೆ ಕೊಬ್ಬರಿ ಉತ್ಪಾದನೆಯು 25 ಲಕ್ಷ ಕ್ವಿಂಟಲ್ (2.5 ಲಕ್ಷ ಟನ್) ಇದೆ. ಈ ಮೊದಲು 6.25 ಲಕ್ಷ ಕ್ವಿಂಟಲ್ (62,500 ಟನ್) ಕೊಬ್ಬರಿ ಖರೀದಿಗೆ ಕೇಂದ್ರ ಅನುಮತಿ ನೀಡಿತ್ತು.

ಆದರೆ, ರಾಜ್ಯದಲ್ಲಿ ಇಳುವರಿ ಪ್ರಮಾಣ ಹೆಚ್ಚಿದೆ. ಹಾಗಾಗಿ, ನಿಗದಿಪಡಿಸಿರುವ ಖರೀದಿ ಪ್ರಮಾಣವನ್ನು ದ್ವಿಗುಣಗೊಳಿಸುವಂತೆ ಒತ್ತಡ ಹೇರಲಾಗಿತ್ತು. ಕೇಂದ್ರವು ಹೆಚ್ಚುವರಿಯಾಗಿ 6,750 ಟನ್ ಖರೀದಿಗೆ ಅನುಮತಿ ನೀಡಿತ್ತು ಎಂದು ತಿಳಿಸಿದ್ದಾರೆ.

ಹಾಸನ: ಖರೀದಿ ಮಿತಿ ನಿಗದಿ ಹೆಚ್ಚಳ

ಹಾಸನ: ಜಿಲ್ಲೆಯಲ್ಲಿ ಉಂಡೆ ಕೊಬ್ಬರಿ ಖರೀದಿ ಮಿತಿಯನ್ನು 17,500 ಟನ್‌ನಿಂದ 22 ಸಾವಿರ ಟನ್‌ಗೆ ಹೆಚ್ಚಿಸಲಾಗಿದೆ. ಆದರೆ, 'ನೋಂದಣಿ ಕೇಂದ್ರಕ್ಕೆ ಬರುತ್ತಿರುವ ರೈತರನ್ನು ನೋಡಿದರೆ, ಎಲ್ಲರಿಗೂ ನೋಂದಣಿ ಸಾಧ್ಯವಾಗದು' ಎಂಬ ಮಾತು ಕೇಳಿಬರುತ್ತಿದೆ.

ಗುರುವಾರದವರೆಗೆ ಜಿಲ್ಲೆಯಲ್ಲಿ 15,496 ರೈತರು ನೋಂದಣಿ ಮಾಡಿಸಿದ್ದಾರೆ. 18,291 ಟನ್ ಕೊಬ್ಬರಿ ಖರೀದಿಗೆ ನೋಂದಣಿ ಪೂರ್ಣಗೊಂಡಿದೆ. ಜಿಲ್ಲೆಯಲ್ಲಿ ಇನ್ನೂ 3,709 ಟನ್ ಖರೀದಿಗೆ ನೋಂದಣಿ ಬಾಕಿ ಉಳಿದಿದೆ.

ಜಿಲ್ಲೆಯ ಅರಸೀಕೆರೆ, ಹಿರೀಸಾವೆ, ನುಗ್ಗೇಹಳ್ಳಿ, ಚನ್ನರಾಯಪಟ್ಟಣ ಸೇರಿದಂತೆ ಹಲವು ಕೇಂದ್ರಗಳಲ್ಲಿ ಗುರುವಾರವೂ ಸದರಿ ಸಾಲಿನಲ್ಲಿ ಸಾವಿರಾರು ರೈತರು ನಿಂತಿದ್ದರು. ಎರಡು ದಿನಗಳಿಂದ ಹಗಲು-ರಾತ್ರಿ ಕಾಯುತ್ತಿದ್ದಾರೆ.

'ಖಾಸಗಿ ಮಾರುಕಟ್ಟೆ ಹಾಗೂ ನಾಫೆಡ್‌ನಲ್ಲಿ ಒಂದೇ ದರ ನಿಗದಿಪಡಿಸಿದರೆ, ರೈತರು ಹೀಗೆ ನೋಂದಣಿಗೆ ಮುಗಿಬೀಳುವುದು ತಪ್ಪುತ್ತದೆ. ವರ್ಷವಿಡೀ ಖರೀದಿಗೆ ಅನುವು ಮಾಡಿದರೆ ಅನುಕೂಲವಾಗುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಚಿಂತಿಸಬೇಕು' ಎಂದು ಹಿರೀಸಾವೆ ಹೋಬಳಿಯ ಮೆಳ್ಳಹಳ್ಳಿಯ ರೈತ ವಿಜಯಪ್ಪ ಆಗ್ರಹಿಸಿದರು.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8100-9400
ತಿಪಟೂರು	₹8200-10500

ಮುಂಬೈ ಧಾರಣೆ

ಶೇಂಗಾ

07-03-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1510)
ಒಂದು ವಾರದ ಡೆಲಿವರಿ	1495 (1505)
ಸೋಯಾ ಕಚ್ಚಾ	930 (925)
ಪಾಮ್ ವಾರದ ಡೆಲಿವರಿ	898 (900)
ಸೂರ್ಯಕಾಂತಿ ಎಣ್ಣೆ ಕಚ್ಚಾ	875 (865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹64,800 (64,300)

ಬೆಳ್ಳಿ ಕೆ.ಜಿ ₹72,350 (71,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

21ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಡಿ. ಶಾರದಮ್ಮ
ನಿಧನ: 08.03.2003
ಲೇಟ್ ಶ್ರೀ ಕೆ. ರಾಮಯ್ಯರವರ ಧರ್ಮಪತ್ನಿ
ಮಾಜಿ ನಗರಸಭಾ ಸದಸ್ಯರು, ಬಿ.ಬಿ.ಎಂ.ಪಿ.
ಸದ್ದುಗುಂಟೆಪಾಳ್ಯ, ಚಿಕ್ಕಆಡುಗೋಡಿ, ಬೆಂಗಳೂರು.
ಸಂಸ್ಥಾಪಕರು:
ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನ, ಚಿಕ್ಕಆಡುಗೋಡಿ, ಬೆಂಗಳೂರು
ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಮತ್ತು ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ ಸದಾ ನಿಮ್ಮ ನೆನಪಿನಲ್ಲಿರುವ....
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಮರಿಮಕ್ಕಳು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ರೆಲಿಗೇರ್ ಮುಖ್ಯಸ್ಥೆಯನ್ನು ಇಳಿಸಿದ ಏರ್ ಇಂಡಿಯಾ

ನವದೆಹಲಿ (ಪಿಟಿಐ): ಸಿಬ್ಬಂದಿ ಜೊತೆಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇರೆಗೆ ರೆಲಿಗೇರ್ ಎಂಟರ್‌ಪ್ರೈಸಸ್‌ನ ಮುಖ್ಯಸ್ಥೆ ರಶ್ಮಿ ಸಲೂಜಾ ಅವರನ್ನು ಏರ್ ಇಂಡಿಯಾ ವಿಮಾನದಿಂದ ಕೆಳಗಿಳಿಸಲಾಗಿದೆ ಎಂದು ಗುರುವಾರ ಮೂಲಗಳು ತಿಳಿಸಿವೆ.

ಮಾರ್ಚ್ 5ರಂದು ಲಂಡನ್‌ಗೆ ತೆರಳುತ್ತಿದ್ದ (ಎಐ 161) ವಿಮಾನದಲ್ಲಿ ಈ ಘಟನೆ ನಡೆದಿದೆ. ವಿಮಾನದ ಕ್ಯಾಪ್ಟನ್ ಕೈಗೊಂಡ ತೀರ್ಮಾನದಂತೆ ಈ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿವೆ.

ವಿಮಾನವು ನಿಗದಿತ ಸಮಯಕ್ಕೆ ಹೊರಡುವ ಮೊದಲೇ ರಶ್ಮಿ ಅವರು ಸಿಬ್ಬಂದಿ ಜೊತೆಗೆ ಅಸಭ್ಯವಾಗಿ ವಾಗ್ವಾದಕ್ಕೆ ಇಳಿದಿದ್ದರು ಎನ್ನಲಾಗಿದೆ. ಆದರೆ, ಅವರ ಹೆಸರನ್ನು ಏರ್ ಇಂಡಿಯಾವು ಅಧಿಕೃತವಾಗಿ ಬಹಿರಂಗಪಡಿಸಿಲ್ಲ. ಈ ಬಗ್ಗೆ ರೆಲಿಗೇರ್ ಎಂಟರ್‌ಪ್ರೈಸಸ್ ಕೂಡ ಪ್ರತಿಕ್ರಿಯೆ ನೀಡಿಲ್ಲ.

'ಈ ಘಟನೆಯಿಂದಾಗಿ ವಿಮಾನ ಹಾರಾಟವು ಒಂದು ಗಂಟೆ ವಿಳಂಬವಾಗಿದೆ. ಆದರೆ, ಪ್ರಮುಖ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ತೆರಳುತ್ತಿರುವ ಬಗ್ಗೆ ಅವರು ಲಿಖಿತ ಹೇಳಿಕೆ ನೀಡಿದ್ದರಿಂದ ಮತ್ತೊಂದು ವಿಮಾನದಲ್ಲಿ ಪ್ರಯಾಣಿಸಲು ಅವರಿಗೆ ಅವಕಾಶ ಕಲ್ಪಿಸಲಾಯಿತು' ಎಂದು ಏರ್ ಇಂಡಿಯಾದ ವಕ್ತಾರರು ತಿಳಿಸಿದ್ದಾರೆ.

ಸ್ಥಳೀಯ ಕರೆನ್ಸಿ ಬಳಕೆಗೆ ಭಾರತ–ಇಂಡೊನೇಷ್ಯಾ ಒಪ್ಪಂದ

ಮುಂಬೈ (ಪಿಟಿಐ): ಭಾರತ ಮತ್ತು ಇಂಡೊನೇಷ್ಯಾ ನಡುವಿನ ದ್ವಿಪಕ್ಷೀಯ ಒಪ್ಪಂದ ವ್ಯಾಪಾರದಲ್ಲಿ ಸ್ಥಳೀಯ ಕರೆನ್ಸಿಗಳ ಬಳಕೆಗೆ ಉತ್ತೇಜನ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಡೊನೇಷ್ಯಾ ಒಡಂಬಡಿಕೆಗೆ ಸಹಿ ಹಾಕಿವೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹಾಗೂ ಬ್ಯಾಂಕ್ ಇಂಡೊನೇಷ್ಯಾದ ಗವರ್ನರ್ ಪೆರ್ರಿ ವಾರ್ಜಿಯೊ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಭಾರತದ ರೂಪಾಯಿ ಹಾಗೂ ಇಂಡೊನೇಷ್ಯಾ ಕರೆನ್ಸಿ ರುಪಿಯಾಕ್ಕೆ ಉತ್ತೇಜನ ನೀಡಲು ಒಪ್ಪಂದವು ನೆರವಾಗಲಿದೆ. ಇದರಿಂದ ಎರಡೂ ಕರೆನ್ಸಿಗಳು ಬಲಗೊಳ್ಳಲಿವೆ. ರಫ್ತುದಾರರು ಮತ್ತು ಆಮದುದಾರರು ಇನ್‌ವಾಯ್ಸ್ ಸೃಷ್ಟಿಸಿ ಸ್ಥಳೀಯ ಕರೆನ್ಸಿಗಳಲ್ಲೇ ಪಾವತಿ ಮಾಡಬಹುದಾಗಿದೆ ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.

ಜೊತೆಗೆ, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವಹಿವಾಟುಗಳು ಸುಗಮವಾಗಿ ನಡೆಯುತ್ತವೆ. ಇದು ವ್ಯಾಪಾರ ಹಾಗೂ ವಿದೇಶಿ ವಿನಿಮಯ ಮಾರುಕಟ್ಟೆಯೂ ಬೆಳವಣಿಗೆ ಸಹಕಾರಿಯಾಗಲಿದೆ. ಎರಡು ದೇಶಗಳ ನಡುವೆ ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಸಂಬಂಧಗಳು ಗಟ್ಟಿಗೊಳ್ಳಲು ನೆರವಾಗುತ್ತದೆ ಎಂದು ಹೇಳಿದೆ.

ಶ್ರೀನಿವಾಸನ್ ಸ್ವಾಮಿಗೆ ಐಎಎ ಗೋಲ್ಡನ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಕೆ. ಸ್ವಾಮಿ ಲಿಮಿಟೆಡ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸನ್ ಸ್ವಾಮಿ ಅವರು, ಇಂಟರ್‌ನ್ಯಾಷನಲ್ ಅಡ್ವರ್ಟೈಸಿಂಗ್ ಅಸೋಸಿಯೇಷನ್ ಕೊಡಮಾಡುವ ಪ್ರತಿಷ್ಠಿತ 'ಐಎಎ ಗೋಲ್ಡನ್ ಕಂಪಾಸ್ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ಮಲೇಷ್ಯಾದ ಪೆನಾಂಗ್‌ನಲ್ಲಿ ನಡೆದ 45ನೇ ಐಎಎ ವರ್ಲ್ಡ್ ಕಾಂಗ್ರೆಸ್ ಅಧಿವೇಶನದಲ್ಲಿ ಪೆನಾಂಗ್‌ನ ಗವರ್ನರ್ ಥುನ್ ಅಹ್ಮದ್ ಫುಜಿ ಅಬ್ದುಲ್ ರಜಾಕ್ ಅವರು, ಈ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

ಜಾಗತಿಕ ಜಾಹೀರಾತು ಮಾರುಕಟ್ಟೆ ಹಾಗೂ ಮಾಧ್ಯಮ ವಲಯಕ್ಕೆ ಸಲ್ಲಿಸಿದ ಅನುಪಮ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತದೆ. ಭಾರತೀಯ ಕೈಗಾರಿಕಾ ವಲಯದ ಉದ್ಯಮಿಯೊಬ್ಬರಿಗೆ ಪ್ರಥಮ ಬಾರಿಗೆ ಈ ಪ್ರಶಸ್ತಿ ಲಭಿಸಿದೆ.

ಆರ್.ಕೆ. ಸ್ವಾಮಿ ಲಿಮಿಟೆಡ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸನ್ ಸ್ವಾಮಿ ಅವರು, ಪ್ರತಿಷ್ಠಿತ 'ಐಎಎ ಗೋಲ್ಡನ್ ಕಂಪಾಸ್ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ (ಬಲಬದಿ)

'ಸುಂದರ್ ಸ್ವಾಮಿ' ಎಂದೇ ಅವರು ಹೆಚ್ಚು ಚಿರಪರಿಚಿತರಾಗಿದ್ದಾರೆ. ಅವರ ಒಡೆತನದ ಕಂಪನಿಯು ಸಂಯೋಜಿತ ಮಾರುಕಟ್ಟೆ ಸೇವೆ ಒದಗಿಸುತ್ತಿದ್ದು, ಮುಂದಿನ ವಾರದ ಆರಂಭದಲ್ಲಿ ಷೇರುಪೇಟೆಯಲ್ಲಿ ನೋಂದಣಿಯಾಗಲಿದೆ.

ಪ್ರಸ್ತುತ ಏಷ್ಯನ್ ಫೆಡರೇಷನ್ ಆಫ್ ಅಡ್ವರ್ಟೈಸಿಂಗ್ ಅಸೋಸಿಯೇಷನ್ (ಎಎಫ್‌ಎಎ) ಹಾಗೂ ಆಡಿಟ್ ಬ್ಯೂರೊ ಆಫ್ ಸರ್ಕ್ಯೂಲೇಷನ್ಸ್‌ನ (ಎಬಿಸಿ) ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

'ನನ್ನ ಕಂಪನಿಯ ವೃತ್ತಿಪರರು ಹಾಗೂ ಉದ್ಯಮದ ಪರವಾಗಿ ಈ ಪ್ರಶಸ್ತಿ ಸ್ವೀಕರಿಸಲು ನನಗೆ ಖುಷಿಯಾಗುತ್ತಿದೆ. ಹಲವು ವರ್ಷಗಳಿಂದ ನಾನು ಕೈಗಾರಿಕಾ ವಲಯದಲ್ಲಿ ಆರಂಭಿಸಿದ ಯೋಜನೆಗಳಿಗೆ ಎಲ್ಲರೂ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸಿದ್ದಾರೆ. ಈ ಪ್ರಶಸ್ತಿಯನ್ನು ನನ್ನ ತಂದೆ ಆರ್.ಕೆ. ಸ್ವಾಮಿ ಅವರಿಗೆ ಅರ್ಪಿಸುತ್ತೇನೆ. ಉದ್ಯಮದ ಅಭಿವೃದ್ಧಿಗೆ ಮೀಸಲಿಟ್ಟ ಸಮಯವು ವ್ಯರ್ಥವಾಗುವುದಿಲ್ಲ. ಅದು ನಮ್ಮನ್ನು ಪೋಷಿಸುತ್ತದೆ ಎಂಬುದಕ್ಕೆ ಈ ಪ್ರಶಸ್ತಿಯೇ ಸಾಕ್ಷಿಯಾಗಿದೆ' ಎಂದು ಶ್ರೀನಿವಾಸನ್ ಸ್ವಾಮಿ ಹೇಳಿದರು.

ಸಂಕ್ಷಿಪ್ತ ಸುದ್ದಿ

ಪಾಕ್: ಮೀಸಲು ಅಭ್ಯರ್ಥಿಗಳ ಪ್ರಮಾಣ ವಚನಕ್ಕೆ ತಡೆ

ಪೇಶಾವರ (ಪಿಟಿಐ): ರಾಷ್ಟ್ರೀಯ ಅಸೆಂಬ್ಲಿಯಲ್ಲಿ ನಿಗದಿತ ಮೀಸಲು ಸ್ಥಾನಗಳ ಅಭ್ಯರ್ಥಿಗಳ ಪ್ರಮಾಣ ವಚನ ಸ್ವೀಕಾರಕ್ಕೆ ನೀಡಲಾಗಿರುವ ತಡೆಯಾಜ್ಞೆಯನ್ನು ಪಾಕಿಸ್ತಾನದ ಹೈಕೋರ್ಟ್ ಇದೇ 13ರವರೆಗೆ ವಿಸ್ತರಿಸಿ ಗುರುವಾರ ತೀರ್ಪು ನೀಡಿದೆ.

ಮಹಿಳೆಯರು ಮತ್ತು ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ ಮೀಸಲು ಸ್ಥಾನಗಳ ಹಂಚಿಕೆ ಕುರಿತು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್- ಎ- ಇನ್ಸಾಫ್ (ಪಿಟಿಐ) ಪಕ್ಷದ ಬೆಂಬಲಿತ ಸುನ್ನಿ ಇತ್ತೆಹಾದ್ ಕೌನ್ಸಿಲ್ (ಎಸ್‌ಐಸಿ) ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಪೇಶಾವರ ಹೈಕೋರ್ಟ್‌ನ ವಿಭಾಗೀಯ ಪೀಠ ತಡೆಯಾಜ್ಞೆಯನ್ನು ವಿಸ್ತರಿಸಿತು.

ಅಧ್ಯಕ್ಷೀಯ ಅಭ್ಯರ್ಥಿ ಚುನಾವಣೆ: ಕಣದಿಂದ ಹಿಂದೆ ಸರಿದ ನಿಕ್ಕಿ ಹ್ಯಾಲೆ

ನ್ಯೂಯಾರ್ಕ್ (ಎಪಿ): ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಅಂಗವಾಗಿ ದೇಶದ ವಿವಿಧೆಡೆ ನಡೆದ ರಿಪಬ್ಲಿಕನ್ ಪಕ್ಷದ ನಾಮನಿರ್ದೇಶನ ಸ್ಪರ್ಧೆಯಲ್ಲಿ ಸೋಲನುಭವಿಸಿದ ಬಳಿಕ ಭಾರತ ಮೂಲದ ಅಮೆರಿಕನ್ ಅಭ್ಯರ್ಥಿ ನಿಕ್ಕಿ ಹ್ಯಾಲೆ, ಕಣದಿಂದ ಹಿಂದೆ ಸರಿದಿದ್ದಾರೆ.

ಈ ಮೂಲಕ 2024ರ ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ನಾಮನಿರ್ದೇಶನ ಸ್ಪರ್ಧೆಯಲ್ಲಿ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಮುಖ ಅಭ್ಯರ್ಥಿಯಾಗಿ ಕಣದಲ್ಲಿ ಉಳಿದುಕೊಂಡರು. 'ನಮ್ಮ ಪಕ್ಷದವರ, ಹೊರಗಿನವರ ಮತ್ತು ಬೆಂಬಲ ನೀಡದವರ ಮತ ಪಡೆಯುವುದು ಈಗ ಟ್ರಂಪ್ ಅವರಿಗೆ ಬಿಟ್ಟ ವಿಚಾರ. ಅವರು ಅದನ್ನು ಸಾಧಿಸುತ್ತಾರೆ ಎಂಬ ವಿಶ್ವಾಸವಿದೆ' ಎಂದು ನಿಕ್ಕಿ ಹೇಳಿದ್ದಾರೆ.

'ಲಿಖಿತ ಒಪ್ಪಂದಕ್ಕೂ ಚೀನಾ ಬದ್ಧವಿಲ್ಲ'

ಟೋಕಿಯೊ (ಪಿಟಿಐ): 'ಭಾರತದ ಜೊತೆಗಿನ ಲಿಖಿತ ಒಪ್ಪಂದಗಳಿಗೆ ಚೀನಾ ಬದ್ಧವಾಗಿಲ್ಲ. ಉಭಯ ದೇಶಗಳ ಗಡಿಯಲ್ಲಿ 2020ರಲ್ಲಿ ಘಟಿಸಿದ ರಕ್ತಪಾತಕ್ಕೆ ನೆರೆ ರಾಷ್ಟ್ರವೇ ಹೊಣೆ' ಎಂದು ಭಾರತ ಗುರುವಾರ ಆರೋಪಿಸಿತು.

ಇಲ್ಲಿ ರೈಸಿನಾ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ವಿದೇಶಾಂಗ ಸಚಿವ ಎಸ್.ಜೈಶಂಕರ್, 'ಉಭಯ ದೇಶಗಳ ನಡುವೆ ಕಳೆದ 45 ವರ್ಷಗಳಲ್ಲಿ ಸಂಘರ್ಷ ಸಂಭವಿಸಿರಲಿಲ್ಲ. 2020ರಲ್ಲಿ ಸ್ಥಿತಿ ಬದಲಾಗಿತ್ತು' ಎಂದು ಉಲ್ಲೇಖಿಸಿದರು.

'ಹಲವು ವಿಷಯಗಳಲ್ಲಿ ಪರಸ್ಪರ ಸಹಮತ ಇಲ್ಲದೇ ಇರಬಹುದು. ಆದರೆ, ನೆರೆ ರಾಷ್ಟ್ರದ ಜೊತೆಗಿನ ಲಿಖಿತ ಒಪ್ಪಂದಕ್ಕೂ ಒಂದು ದೇಶ ಬದ್ಧವಾಗದೇ ಇದ್ದರೆ ಸಮಸ್ಯೆ ಎದುರಾಗುತ್ತದೆ. ಬಾಂಧವ್ಯದ ಸ್ಥಿರತೆ ಕುರಿತಂತೆ ಪ್ರಶ್ನಾರ್ಥಕ ಚಿಹ್ನೆ ಮೂಡಲಿದೆ. ಮುಖ್ಯವಾಗಿ ನೆರೆ ರಾಷ್ಟ್ರದ ಉದ್ದೇಶಗಳ ಕುರಿತೇ ಅನುಮಾನಗಳು ಮೂಡುತ್ತವೆ' ಎಂದು ಜೈಶಂಕರ್ ಹೇಳಿದರು.1993ರ ಗಡಿಯಲ್ಲಿ ಶಾಂತಿ ಮತ್ತು ಯಥಾಸ್ಥಿತಿ ಒಪ್ಪಂದ (ಬಿಪಿಟಿಎ), ವಾಸ್ತವ ಗಡಿರೇಖೆಯುದ್ದಕ್ಕೂ ಉಭಯ ದೇಶಗಳ ಸೇನೆ ನಡುವೆ ವಿಶ್ವಾಸ ಮೂಡಿಸುವ ಯತ್ನ ಕುರಿತ 1996ರ ಒಪ್ಪಂದಗಳನ್ನು ಜೈಶಂಕರ್ ಉಲ್ಲೇಖಿಸಿದರು.

ಬದಲಾದ ಜಾಗತಿಕ ಸ್ಥಿತಿಯಲ್ಲಿ ಹಿಂದೂ ಮಹಾಸಾಗರ ವಲಯದಲ್ಲಿ ಶಕ್ತಿ ಕೇಂದ್ರವು ಬದಲಾಗುತ್ತಿದೆ ಎಂಬುದು ವಾಸ್ತವ. ಸಾಮರ್ಥ್ಯ, ಪ್ರಭಾವ ಮತ್ತು ನಿರೀಕ್ಷೆಗಳಲ್ಲಿ ಮಹತ್ತರ ಬದಲಾವಣೆಗಳು ಇದ್ದಾಗ, ಅದಕ್ಕೆ ಪೂರಕವಾದ ಅಂಶಗಳಿಗೂ ಅನ್ವಯಿಸಿ ಕಾರ್ಯತಂತ್ರ ಪರಿಣಾಮಗಳು ಇರುತ್ತವೆ ಎಂದು ಜೈಶಂಕರ್ ವ್ಯಾಖ್ಯಾನಿಸಿದರು.

'ನಿಮಗೆ ಇಷ್ಟವಾಗಲಿ, ಬಿಡಲಿ ಅದು ವಾಸ್ತವ. ವಾಸ್ತವದ ನೆಲೆಗಟ್ಟಿನಲ್ಲೇ ಅದನ್ನು ಎದುರಿಸಲೇಬೇಕು. ಎಲ್ಲ ಹೇಳುವಂತೆ ಬದಲಾವಣೆ ಸಹಜ ಎಂದು ಭಾವಿಸೋಣ. ಆದರೆ, ಸಾಧ್ಯವಾದಷ್ಟು ಸ್ಥಿರವಾಗಿರಿಸಲು ಯತ್ನಿಸೋಣ' ಎಂದು ಹೇಳಿದರು.

ಉಭಯ ದೇಶಗಳ ಸೇನೆಗಳ ನಡುವೆ ಪೂರ್ವ ಲಡಾಖ್‌ನಲ್ಲಿ ಮೇ 5, 2020ರಲ್ಲಿ ಸಂಘರ್ಷ ಉಂಟಾಗಿತ್ತು. ಗಾಲ್ವಾನ್ ಕಣಿವೆಯಲ್ಲಿ ಸೇನೆಗಳ ನಡುವೆ ಘರ್ಷಣೆಯ ಬಳಿಕ ಬಾಂಧವ್ಯದ ಮೇಲೂ ಪ್ರತಿಕೂಲ ಪರಿಣಾಮವಾಗಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಶ್ರೀ ಎಸ್. ಸತ್ಯಮೂರ್ತಿ, ವಿಲ್ಲ ನಂ. 942, 17ನೇ ಅಡ್ಡರಸ್ತೆ, ಐವರಿ ಕ್ಲಾರ್ಕ್, ಎಕ್ಸಾಟಿಕ ರಿಸಾರ್ಟ್, ಸ್ವೀಸ್ ಟೌನ್, ಸಾದಹಳ್ಳಿ ಗೇಟ್, ಬೆಂಗಳೂರು–560119 ಹಾಗೂ ಶ್ರೀಮತಿ ವಂದನಾ ಶ್ರೀನಿವಾಸ್ ಹಾಗೂ ಶ್ರೀ ಎಸ್.ಕೆ. ಶ್ರೀನಿವಾಸ್ ಇವರುಗಳು ಇಲ್ಲಿ ವಾಸವಾಗಿರುವ:– ನಂ. 1631/4, 'ಶ್ರುತಿ', 1ನೇ ರಸ್ತೆ, ರಾಮಮೋಹನಪುರ, ವಾಗ್ದೇವಿ ಶೇಷಪ್ಪ ಹಾಲ್ ಎದುರುಗಡೆ, ದೇವಯ್ಯ ಪಾರ್ಕ್, ಬೆಂಗಳೂರು –560021, ಇವರುಗಳು ಈ ಮುಂದೆ ನಮೂದಿಸಿರುವ ಕೃಷಿ ಜಮೀನು ಖರೀದಿಸಲು ಇಚ್ಛಿಸಿದ್ದು, ಇದರ ವಿವರಗಳು ಇಂತಿವೆ:– ಪ್ರಸ್ತುತ ಮಾಲೀಕರು ಶ್ರೀ ಕುರಿಯನ್ ಜೆಕಬ್ ತಂದೆ ಲೇಟ್ ಶ್ರೀ ವಿ.ವಿ. ಜೆಕಬ್, ಈ ವಿಳಾಸದಲ್ಲಿ ವಾಸಿಸುತ್ತಿರುವ ವೆಲ್ಲುಕುನ್ನಲ್, ತಿಡಿನಾಡ್, ಕೊಟ್ಟಾಯಂ ಜಿಲ್ಲೆ, ಕೇರಳ–686123 ಅವರು ಮಾರಾಟ ಮಾಡಲು ಇಚ್ಛಿಸಿರುವ ಜಮೀನು ವಿವರ ಇಂತಿದೆ. ಡಿಮಂಡಲದಲ್ಲಿರುವ ಸರ್ವೇ ನಂ. 82, 2ಎಕರೆ ವಿಸ್ತೀರ್ಣವುಳ್ಳ ಸೋಮಸಾಗರ ಹಳ್ಳಿಗೆ ಸೇರಿದ, ತ್ಯಾಮಗುಂಡಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562132. ಇಲ್ಲಿ ನಮೂದಿಸಿರುವ ಚಕ್ಕುಬಂದಿ/ಶೆಡ್ಯೂಲ್: ಪೂರ್ವಕ್ಕೆ– ರಸ್ತೆ, ಪಶ್ಚಿಮಕ್ಕೆ– ಶ್ರೀ ತಿಮ್ಮಪ್ಪನವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ –ಶ್ರೀ ಸಿ. ಮಂಜುನಾಥನವರಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ – ಶ್ರೀ ಸಿ. ಮಂಜುನಾಥನವರಿಗೆ ಸೇರಿದ ಸ್ವತ್ತು. ಈ ಮೇಲೆ ನಮೂದಿಸಿದ ಕೃಷಿ ಜಮೀನು ಕ್ರಯ ಪತ್ರದ ಸಂಖ್ಯೆ: ಪಿ943/2006–07, ದಸ್ತಾವೇಜು 12 ಪುಟಗಳ ಪುಸ್ತಕ ಸಂಖ್ಯೆ 1, 2084/ 2006–07 ಹಾಗೂ 6239/2005–06 ಆಗಿದ್ದು, ದಿನಾಂಕ: 24–02–2006 ಪುಸ್ತಕದ ಸಂಖ್ಯೆ:1 ಮತ್ತು ಪುಟ 1 ರಿಂದ 9 ರವರೆಗೆ ಎಂ.ಆರ್. ನಂ. 16/2005–06ರಂದು ನೆಲಮಂಗಲ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿಯಾಗಿರುತ್ತದೆ.
ಯಾವುದೇ ವ್ಯಕ್ತಿ ಅಥವಾ ಹಕ್ಕುದಾರರು ಶ್ರೀ ಕುರಿಯನ್ ಜೆಕಬ್‌ರವರ ಸಂಬಂಧಿಕರು ಈ ಮೇಲ್ಕಂಡ ಜಮೀನಿಗೆ ಸಂಬಂಧಿಸಿದ ಯಾವುದೇ ತಂಟೆ ತಕರಾರು ಇದ್ದಲ್ಲಿ ದಯವಿಟ್ಟು ಈ ಮೇಲೆ ತಿಳಿಸಿರುವ ಖರೀದಿಸಲು ಇಚ್ಛಿಸಿರುವ ವ್ಯಕ್ತಿಗಳಿಗೆ ಈ ಕೆಳಕಂಡ ಫೋನ್ ನಂಬರ್ 8618044358 ಮೂಲಕ 20–03–2024ರ ಒಳಗೆ ಗಮನಕ್ಕೆ ತರಬೇಕಾಗಿ ಕೋರಿದ್ದೇವೆ.
ಶ್ರೀ ಎಸ್. ಸತ್ಯಮೂರ್ತಿ ಹಾಗೂ ಶ್ರೀಮತಿ ವಂದನಾ ಶ್ರೀನಿವಾಸ್
ದಿ:07–03–2024 ಬೆಂಗಳೂರು

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673
ಕಂಪನಿ ಆಫೀಸ್, ವರ್ಕ್ ಫ್ರಂ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000. ಮೊದಲು ಬಂದವರಿಗೆ ಆದ್ಯತೆ. 8861041526, 9945791526
Part-Time Jobs
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 6366430366
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.
Multiple Vacancy
REQUIRED, EXPERIENCED Telecaller, & Loan Recovery Supervisor For BankLoan collection. Salary 30,000+ Incentive. 9620206756.
ಭವಿಷ್ಯ
Astrology
★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ವಾಸ್ತುವಿದ್ಯಾಪೀಠ ಮಹಾಮಾಂತ್ರಿಕ ಜ್ಯೋತಿಷ್ಯ ವಿದ್ವಾನ್. ಶ್ರೀಗುರುದೇವಾನಂದನ್ ರವರಿಂದ 100008 ಅತೀಂದ್ರಿಯ 888 ಧಾರಣ,ಮಾರಣ, ಸಂಮೋಹನ,ಸ್ತಂಭನ,ಮನಇಚ್ಛಾ ವಶೀಕರಣ,ಉಚ್ಚಾಟನಗಳಿಂದ ನಿಮ್ಮ ಯಾವುದೇ ದೀರ್ಘಕಾಲದ ಪರಿಹಾರವಾಗದ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರಕ್ಕೆ ಇಂದೇ ಸಂಪರ್ಕಿಸಿ:9845005009
ಪ್ರವಾಸ
Travel
6 ದಿನಗಳ ಬಾಲಿ. 7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ. 18 ದಿನಗಳ ಗ್ರ್ಯಾಂಡ್ ಯು.ಕೆ ಮತ್ತು ಯುರೋಪ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯಾ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ,ಬೆಂಗಳೂರು.04. 9880079588 9900080793
ಕಾಶಿ ದೆಹಲಿ ಆಗ್ರಾ,ಮಥುರ ಅಲಹಾಬಾದ್ ಅಯೋಧ್ಯ,ಗಯಾ ಬುದ್ಧಗಯಾ 27.03.2024 10 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್, ಮಲ್ಲೇಶ್ವರಂ, ಬೆಂಗಳೂರು. 9448294477
8 ದಿನಗಳ ಸೌತ್ ಆಫ್ರಿಕಾ, 18 ದಿನಗಳ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, 7 ದಿನಗಳ ಜಪಾನ್, 8 ದಿನಗಳ ಭೂತಾನ್, 10 ದಿನಗಳ ವಿಯೆಟ್ನಾಂ, ಕಾಂಬೋಡಿಯಾ. ಭಟ್ ಟ್ರಾವೆಲ್ಸ್. 9844166555, 7975132507

EDUCATION CORNER
ಸ್ಪರ್ಧಾಮಿತ್ರ
IAS|KAS
Prelims & Mains
New Batches from March 11th
ಗ್ರಾಮ ಆಡಳಿತಾಧಿಕಾರಿ
VILLAGE ADMINISTRATIVE OFFICER
Ist & IInd Paper
ONLINE & OFFLINE BATCHES
Opp. Maruthi Medicals, Near Attiguppe Metro Station, Service Road, RPC Layout, Bengaluru - 40.
95351 11133/95351 11199

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸ್ಪಿನ್ ದಾಳಿಗೆ ಮುದುರಿದ ಇಂಗ್ಲೆಂಡ್

ಅಂತಿಮ ಟೆಸ್ಟ್: ಕುಲದೀಪ್‌ಗೆ ಐದು, ಅಶ್ವಿನ್‌ಗೆ ನಾಲ್ಕು ವಿಕೆಟ್ • ಜೈಸ್ವಾಲ್, ರೋಹಿತ್ ಅರ್ಧಶತಕ

ಪ್ರಜಾವಾಣಿ ವಾರ್ತೆ

ಧರ್ಮಶಾಲಾ: ನಿರೀಕ್ಷೆಗೆ ಮೀರಿ ಧರ್ಮಶಾಲಾದಲ್ಲಿ ಇಡೀ ದಿನ ಹದವಾದ ಬಿಸಿಲು ಇತ್ತು. ಇಂಗ್ಲೆಂಡ್ ತಂಡ ಬಯಸಿದ್ದ ಚಳಿ ಇರದೇ ಹವಾಮಾನವೂ ಭಾರತದ ಪರ ಇತ್ತು. ಗುರುವಾರ ಆರಂಭವಾದ ಐದನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್‌ನಲ್ಲಿ ಆರಂಭ ಆಟಗಾರರು ಭಾರತದ ವೇಗದ ದಾಳಿಯನ್ನು ನಿಭಾಯಿಸಿದರೂ, ಕುಲದೀಪ್ ಯಾದವ್ ನೇತೃತ್ವದಲ್ಲಿ ಸ್ಪಿನ್‌ತ್ರಯರು ದಾಳಿಗಿಳಿದ ನಂತರ ಇಂಗ್ಲೆಂಡ್ ಮುದುರಿತು.

ಈ ಪಂದ್ಯ ಮೂವರು ಆಟಗಾರರಿಗೆ ವಿಶೇಷವಾಗಿತ್ತು. ರವಿಚಂದ್ರನ್ ಅಶ್ವಿನ್ ಮತ್ತು ಜಾನಿ ಬೇಸ್ಟೊ 100ನೇ ಪಂದ್ಯದ ಸಂಭ್ರಮದಲ್ಲಿದ್ದರೆ, ಕನ್ನಡಿಗ ದೇವದತ್ತ ಪಡಿಕ್ಕಲ್ ಮೊದಲ ಟೆಸ್ಟ್ ಆಡಲು ಇಳಿದರು.

ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಹಿಂದಿನ ಪಂದ್ಯಗಳಿಗಿಂತ ಇಲ್ಲಿ ಹೆಚ್ಚು ಸ್ವಿಂಗ್ ಪಡೆದರು. ಹಲವು ಬಾರಿ ಚೆಂಡು ಬ್ಯಾಟಿನಂಚಿಗೆ ಮುತ್ತಿಕ್ಕಿದರೂ ಅವು ಕ್ಯಾಚಾಗಲಿಲ್ಲ. ಜಾಕ್ ಕ್ರಾಲಿ (79, 108 ಎಸೆತ) ಮತ್ತು ಬೆನ್ ಡಕೆಟ್ (27) ಜೋಡಿಯನ್ನು ಬೇರ್ಪಡಿಸಲು ವೇಗದ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಆದರೆ ಕುಲದೀಪ್ ಯಾದವ್ (72ಕ್ಕೆ5) ಅವರನ್ನು ದಾಳಿಗಿಳಿಸಿದ್ದು, ನಿರೀಕ್ಷಿತ ಫಲನೀಡಿತು; ಅದೂ ಮೊದಲ ಓವರ್‌ನಲ್ಲಿ.

64 ರನ್‌ಗಳ ಜೊತೆಯಾಟದ ಬಳಿಕ, ಎಡಗೈ ಆಟಗಾರ ಡಕೆಟ್, ಚಿಮ್ಮಿದ ಚೆಂಡನ್ನು ಲೆಗ್‌ಸೈಡ್‌ಗೆ ಬೀಸಿ ಹೊಡೆಯಲು ಹೋದರು. ಆದರೆ ಬ್ಯಾಟಿನಂಚಿಗೆ ತಾಗಿದ ಚೆಂಡನ್ನು ಕವರ್ಸ್‌ನಲ್ಲಿದ್ದ ಶುಭಮನ್ ಗಿಲ್ ಹಿಂದಕ್ಕೆ ಓಡಿ ಡೈವ್ ಮಾಡಿ ಅಮೋಘವಾಗಿ ಹಿಡಿದರು. ಇದೇ ಓವರ್‌ನಲ್ಲಿ ಡಕೆಟ್ ಎರಡು ಬೌಂಡರಿ ಬಾರಿಸಿದ್ದರು. ಇದು ಕುಲದೀಪ್ ಮೊದಲ ವಿಕೆಟ್. ಜೋ ರೂಟ್, ಜಡೇಜ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು. ನಂತರ ಅಶ್ವಿನ್ (51ಕ್ಕೆ4) ಕೊನೆಯ ನಾಲ್ಕು ವಿಕೆಟ್ ಬುಟ್ಟಿಗೆ ಹಾಕಿಕೊಂಡರು. ವಿಕೆಟ್ ಕಳೆದುಕೊಳ್ಳದೇ 64 ರನ್ ಗಳಿಸಿದ್ದ ಇಂಗ್ಲೆಂಡ್, ಚಹ ಬಳಿಕ 16ನಿಮಿಷಗಳಲ್ಲಿ 218 ರನ್ನಿಗೆ ಆಲೌಟಾಯಿತು.

ಯಶಸ್ವಿ ಜೈಸ್ವಾಲ್ (57, 58 ಎ) ಮತ್ತು ರೋಹಿತ್ ಶರ್ಮಾ (ಔಟಾಗದೇ 52) ಅವರು ಇಂಗ್ಲೆಂಡ್ ಬೌಲರ್‌ಗಳನ್ನು ವಿಶ್ವಾಸದಿಂದ ಎದುರಿಸಿದರು. ಭಾರತ 30 ಓವರುಗಳಲ್ಲಿ ಮೊತ್ತ 1 ವಿಕೆಟ್‌ಗೆ 135 ರನ್ ಗಳಿಸಿ ದಿನದಾಟ ಮುಗಿಸಿತು. ರೋಹಿತ್ ಜೊತೆ ಗಿಲ್ (ಔಟಾಗದೇ 26) 2ನೇ ದಿನ ಆಟ ಮುಂದುವರಿಸಲಿದ್ದಾರೆ.

ಹಿಮಾಲಯ ಮಡಿಲಿನ ಈ ರಮಣೀಯ ತಾಣ 29 ವರ್ಷದ ಕುಲದೀಪ್ ಪಾಲಿಗೆ ಸವಿನೆನಪುಗಳ ಬುತ್ತಿ. 2017ರಲ್ಲಿ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಕ್ರಿಕೆಟ್‌ಗೆ ನಾಂದಿ ಹಾಡಿದ್ದ ಕುಲದೀಪ್ ಮೊದಲ ದಿನವೇ 4 ವಿಕೆಟ್ ಪಡೆದು ಭಾರತದ ಗೆಲುವಿಗೆ ಮುನ್ನುಡಿ ಬರೆದಿದ್ದರು. ಈ ಸಲ ಇನ್ನೂ ಉತ್ತಮ ಪ್ರದರ್ಶನ ನೀಡಿದ್ದು, ಭಾರತಕ್ಕೆ 4–1 ಸರಣಿ ಜಯದ ಕನಸು ಬಿತ್ತಿದ್ದಾರೆ. ಈ ಪಂದ್ಯದಲ್ಲಿ ಅವರು 50 ವಿಕೆಟ್ ಪೂರೈಸಿದರು.

ಇಂಗ್ಲೆಂಡ್ ಒಂದು ವಿಕೆಟ್‌ಗೆ 100 ರನ್‌ಗಳೊಡನೆ ಲಂಚ್‌ಗೆ ಹೋಗುವಂತೆ ಕಂಡಿತ್ತು. ಆದರೆ ಓಲಿ ಪೋಪ್, ಕುಲದೀಪ್ ಬೌಲಿಂಗ್‌ನಲ್ಲಿ ಹೊಡೆತಕ್ಕೆ ಮುನ್ನುಗ್ಗಿ ಜುರೇಲ್ ಕೈಲಿ ಸ್ಟಂಪ್ಡ್ ಆದರು.

ಸರಣಿಯಲ್ಲಿ ಇಂಗ್ಲೆಂಡ್ ಪರ ಅತಿ ಹೆಚ್ಚು ರನ್ ಗಳಿಸಿರುವ ಕ್ರಾಲಿ, ಭೋಜನ ವಿರಾಮದ ನಂತರ ಹೆಚ್ಚುಕಾಲ ಉಳಿಯಲಿಲ್ಲ. ಕುಲದೀಪ್ ಎಸೆತದಲ್ಲಿ ಡ್ರೈವ್ ಮಾಡಲು ಯತ್ನಿಸಿದರು; ಆದರೆ ನಿರೀಕ್ಷೆ ಮೀರಿ ತಿರುಗಿದ ಚೆಂಡು ಬೇಲ್ಸ್ ಉರುಳಿಸಿತು. ಅಲ್ಪಾವಧಿಯಲ್ಲೇ ಆಕ್ರಮಣಕಾರಿ ಆಟವಾಡಿದ ಬೇಸ್ಟೊ(29, 1ಎ) ಇನ್ನೊಂದು ಗೂಗ್ಲಿಗೆ ವಿಕೆಟ್ ತೆರಬೇಕಾಯಿತು. ನಂತರ ಬಾಲಂಗೋಚಿಗಳ ವಿಕೆಟ್‌ಗಳು ಅಶ್ವಿನ್ ಪಾಲಾದವು.

ಐದು ವಿಕೆಟ್ ಪಡೆದ ಕುಲದೀಪ್ ಯಾದವ್ ಸಹ ಆಟಗಾರರೊಂದಿಗೆ ಸಂಭ್ರಮಿಸಿದರು —ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಇಂಗ್ಲೆಂಡ್: 218 (57.4 ಓವರುಗಳಲ್ಲಿ)

ಕ್ರಾಲಿ ಬಿ ಕುಲದೀಪ್ 79 (108ಎ, 4x11, 6x1)
ಡಕೆಟ್ ಸಿ ಗಿಲ್ ಬಿ ಕುಲದೀಪ್ 27 (58ಎ, 4x4)
ಪೋಪ್ ಸ್ಟಂ ಜುರೇಲ್ ಬಿ ಕುಲದೀಪ್ 11 (24ಎ)
ರೂಟ್ ಎಲ್‌ಬಿಡಬ್ಲ್ಯು ಬಿ ಜಡೇಜ 26 (56ಎ, 4x4)
ಬೇಸ್ಟೊ ಸಿ ಜುರೇಲ್ ಬಿ ಕುಲದೀಪ್ 29 (18ಎ, 4x2, 6x2)
ಸ್ಟೋಕ್ಸ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 0 (6ಎ)
ಫೋಕ್ಸ್ ಬಿ ಅಶ್ವಿನ್ 24 (42ಎ, 4x3)
ಹಾರ್ಟ್ಲಿ ಸಿ ಪಡಿಕ್ಕಲ್ ಬಿ ಅಶ್ವಿನ್ 6 (9ಎ, 4x1)
ವುಡ್ ಸಿ ಶರ್ಮಾ ಬಿ ಅಶ್ವಿನ್ 0 (2ಎ)
ಬಶೀರ್ ಔಟಾಗದೇ 11 (22ಎ, 4x2)
ಆ್ಯಂಡರ್ಸನ್ ಸಿ ಪಡಿಕ್ಕಲ್ ಬಿ ಅಶ್ವಿನ್ 0

ಇತರೆ: 5 (ಬೈ 2, ಲೆಗ್‌ಬೈ 1, ನೋಬಾಲ್ 2)

ವಿಕೆಟ್ ಪತನ: 1–64 (ಬೆನ್ ಡಕೆಟ್, 17.6), 2–100 (ಓಲಿ ಪೋಪ್, 25.3), 3–137 (ಜಾಕ್ ಕ್ರಾಲಿ, 37.2), 4–175 (ಜಾನಿ ಬೇಸ್ಟೊ, 43.4), 5–175 (ಜೋ ರೂಟ್, 44.2), 6–175 (ಬೆನ್ ಸ್ಟೋಕ್ಸ್, 45.4), 7–183 (ಟಾಮ್ ಹಾರ್ಟ್ಲಿ, 49.2), 8–183 (ಮಾರ್ಕ್ ವುಡ್, 49.4), 9–218 (ಬೆನ್ ಫೋಕ್ಸ್, 57.1), 10–218 (ಜೇಮ್ಸ್ ಆ್ಯಂಡರ್ಸನ್, 57.4).

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 13–2–51–0; ಮೊಹಮ್ಮದ್ ಸಿರಾಜ್ 8–1–24–0; ಆರ್. ಅಶ್ವಿನ್ 11.4–1–51–4; ಕುಲದೀಪ್ ಯಾದವ್ 15–1–72–5; ರವೀಂದ್ರ ಜಡೇಜ 10–2–17–1.

ಭಾರತ: 1ಕ್ಕೆ135 (30 ಓವರ್‌ಗಳಲ್ಲಿ)

ಜೈಸ್ವಾಲ್ ಸ್ಟಂ. ಫೋಕ್ಸ್ ಬಿ ಬಶೀರ್ 57 (58ಎ, 4x5, 6x3)
ರೋಹಿತ್ ಔಟಾಗದೇ 52 (83ಎ, 4x6, 6x2)
ಗಿಲ್ ಔಟಾಗದೇ 26 (39ಎ, 4x2, 6x2)

ವಿಕೆಟ್ ಪತನ: 1–104 (ಯಶಸ್ವಿ ಜೈಸ್ವಾಲ್, 20.4)

ಬೌಲಿಂಗ್: ಆ್ಯಂಡರ್ಸನ್ 4–1–4–0; ವುಡ್ 3–0–21–0; ಹಾರ್ಟ್ಲಿ 12–0–46–0, ಬಶೀರ್ 11–2–64–1

ಯಶಸ್ವಿ ಸಹಸ್ರ ರನ್

29 ರನ್ ಗಳಿಸಿದ್ದಾಗ ಯಶಸ್ವಿ ಜೈಸ್ವಾಲ್ ಟೆಸ್ಟ್‌ನಲ್ಲಿ ಸಾವಿರ ರನ್ ಪೂರೈಸಿದಂತಾಯಿತು. ಈ ಸಾಧನೆ ಮಾಡಿದ ಭಾರತದ ಅತಿ ಕಿರಿಯ (22 ವರ್ಷ, 72 ದಿನ) ಆಟಗಾರ ಎನಿಸಿದರು.

ಸರಣಿಯಲ್ಲಿ ಭಾರತ ಆಟಗಾರರ ಹೆಚ್ಚು ರನ್ (ಇಂಗ್ಲೆಂಡ್ ವಿರುದ್ಧ)

ಆಟಗಾರ	ವರ್ಷ	ರನ್
ಯಶಸ್ವಿ ಜೈಸ್ವಾಲ್	2024	712
ವಿರಾಟ್ ಕೊಹ್ಲಿ	2016/17	655
ರಾಹುಲ್ ದ್ರಾವಿಡ್	2002	602
ವಿರಾಟ್ ಕೊಹ್ಲಿ	2018	593
ವಿಜಯ್ ಮಾಂಜ್ರೇಕರ್	1961/62	586

ಯಶಸ್ವಿ ಜೈಸ್ವಾಲ್

ಟೆಸ್ಟ್ ಸರಣಿಯೊಂದರಲ್ಲಿ ಭಾರತ ಆಟಗಾರನ ಅಧಿಕ ರನ್

ಆಟಗಾರ	ವರ್ಷ	ವಿರುದ್ಧ	ರನ್
ಸುನಿಲ್ ಗಾವಸ್ಕರ್	1971	ವೆಸ್ಟ್ ಇಂಡೀಸ್	774
ಸುನಿಲ್ ಗಾವಸ್ಕರ್	1978/79	ವೆಸ್ಟ್ ಇಂಡೀಸ್	732
ಯಶಸ್ವಿ ಜೈಸ್ವಾಲ್	2024	ಇಂಗ್ಲೆಂಡ್	712
ವಿರಾಟ್ ಕೊಹ್ಲಿ	2014/15	ಆಸ್ಟ್ರೇಲಿಯಾ	692
ವಿರಾಟ್ ಕೊಹ್ಲಿ	2016	ಇಂಗ್ಲೆಂಡ್	655

ಪದಾರ್ಪಣೆ ಮಾಡಿದ ಕನ್ನಡಿಗ ದೇವದತ್ತ ಪಡಿಕ್ಕಲ್

ಧರ್ಮಶಾಲಾ: ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಭಾರತ ಟೆಸ್ಟ್ ತಂಡಕ್ಕೆ ಗುರುವಾರ ಪದಾರ್ಪಣೆ ಮಾಡಿದರು. ನೂರನೇ ಟೆಸ್ಟ್ ಮೈಲಿಗಲ್ಲು ತಲುಪಿದ ಆರ್. ಅಶ್ವಿನ್ ಅವರು ಕರ್ನಾಟಕದ ಆಟಗಾರನಿಗೆ 'ಟೆಸ್ಟ್ ಕ್ಯಾಪ್' ನೀಡಿದರು. ಅವರು ಟೆಸ್ಟ್‌ಗೆ ಕಾಲಿಟ್ಟ ಭಾರತದ 314ನೇ ಹಾಗೂ ಕರ್ನಾಟಕದ 25ನೇ ಕ್ರಿಕೆಟಿಗ.

ರಜತ್ ಪಾಟೀದಾರ್ ಪಾದದ ನೋವಿನಿಂದ ಅಲಭ್ಯರಾಗಿದ್ದಾರೆ ಎಂದು ಗುರುವಾರ ಬೆಳಿಗ್ಗೆ ಪ್ರಕಟಿಸಿದ ನಂತರ, ಪಡಿಕ್ಕಲ್‌ಗೆ ಅವಕಾಶ ದೊರೆಯಿತು. ಈ ಸರಣಿಯಲ್ಲಿ ಪದಾರ್ಪಣೆ ಮಾಡಿದ ಭಾರತದ ಐದನೇ ಆಟಗಾರ ಅವರಾದರು. ಪಾಟೀದಾರ್, ಆಕಾಶ್ ದೀಪ್, ಧ್ರುವ್ ಜುರೇಲ್, ಸರ್ಫರಾಜ್ ಖಾನ್ ಇತರ ನಾಲ್ವರು.

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಯಶಸ್ಸು ಗಳಿಸಿದ್ದ ಪಡಿಕ್ಕಲ್, ನಂತರ ಐಪಿಎಲ್‌ನಲ್ಲಿ ಆರ್‌ಸಿಬಿ ಮತ್ತು ರಾಜಸ್ತಾನ ರಾಯಲ್ಸ್ ಪರ ಆಡಿ ಸಾಮರ್ಥ್ಯ ತೋರಿದ್ದರು.

2022ರಲ್ಲಿ ಅನಾರೋಗ್ಯದ ಕಾರಣ ಅವರ ದೇಹ ತೂಕ ಇಳಿದು ಅಮೂಲ್ಯ ಒಂದು ವರ್ಷ ಆಡಲು ಆಗಲಿಲ್ಲ. ನಂತರ ಸತತ ತರಬೇತಿ, ಪರಿಶ್ರಮದ ಫಲವಾಗಿ ಮತ್ತೆ ರಾಜ್ಯ ತಂಡದಲ್ಲಿ ಅವಕಾಶ ಪಡೆದರು.

'ನಿಜ, ಅದು ಅತ್ಯಂತ ಕಠಿಣ ಅವಧಿಯಾಗಿತ್ತು' ಎಂದು ಪಡಿಕ್ಕಲ್ ತಂದೆ ಬಾಬುನು ಕುನ್ನತ್ ಗುರುವಾರ ಪುತ್ರನ ಟೆಸ್ಟ್ ಪದಾರ್ಪಣೆಯ ಕೆಲಹೊತ್ತಿನ ನಂತರ ಬೆಂಗಳೂರಿನಿಂದ 'ಪ್ರಜಾವಾಣಿ'ಗೆ ತಿಳಿಸಿದರು. 'ಅವನ ಮನಃಸ್ಥಿತಿ ಉತ್ತಮ ಮಟ್ಟದಲ್ಲಿರುವಂತೆ ಮತ್ತು ಆತ್ಮವಿಶ್ವಾಸ ಕುಂದದಂತೆ ನೋಡಿಕೊಳ್ಳುವುದು ನಮ್ಮ ಕೆಲಸವಾಗಿತ್ತು. ಅವನ ಛಲವೇ ಇಲ್ಲಿಯವರೆಗೆ ತಂದಿದೆ' ಎಂದರು.

ವಿಜಯ್ ಹಜಾರೆ ಟೂರ್ನಿಯಲ್ಲಿ ಐದು ಪಂದ್ಯಗಳಿಂದ 465 ರನ್ ಗಳಿಸಿದ್ದ ಅವರು, ರಣಜಿ ಟ್ರೋಫಿಯಲ್ಲೂ ಯಶಸ್ಸಿನ ಓಟ ಮುಂದುವರಿಸಿದ್ದ 92.66 ಸರಾಸರಿಯಲ್ಲಿ 556 ರನ್ ಗಳಿಸಿದ್ದರು. ಪಂಜಾಬ್ ವಿರುದ್ಧ ಮೊದಲ ಪಂದ್ಯದಲ್ಲೇ 193 ರನ್ ಹೊಡೆದಿದ್ದ ಅವರು ಮತ್ತೆ ಮೂರು ಶತಕಗಳನ್ನು (ಎರಡು ರಣಜಿಯಲ್ಲಿ, ಒಂದು ಭಾರತ 'ಎ' ತಂಡದ ಪರ ಇಂಗ್ಲೆಂಡ್ ಲಯನ್ಸ್ ವಿರುದ್ಧ) ಗಳಿಸಿದ್ದರು. ವಿಫಲರಾಗಿದ್ದ ಶ್ರೇಯಸ್ ಅಯ್ಯರ್ ಅವರನ್ನು ಕೈಬಿಟ್ಟ ನಂತರ ಪಡಿಕ್ಕಲ್ ಸಹಜವಾಗಿ ಅವಕಾಶ ಪಡೆದರು.



ಡಬ್ಲ್ಯುಪಿಎಲ್: ನಥಾಲಿಯಾ ಬ್ರಂಟ್ ಆಲ್‌ರೌಂಡ್ ಆಟ

ಮುಂಬೈಗೆ ಸುಲಭ ಜಯ

ನವದೆಹಲಿ (ಪಿಟಿಐ): ನಥಾಲಿಯಾ ಶಿವರ್ ಬ್ರಂಟ್ (45 ಮತ್ತು 14ಕ್ಕೆ2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡ ಗುರುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಯುಪಿ ವಾರಿಯರ್ಸ್ ವಿರುದ್ಧ 42 ರನ್‌ಗಳ ಸುಲಭ ಜಯಪಡೆಯಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 6 ವಿಕೆಟ್‌ಗೆ 160 ರನ್‌ಗಳ ಸವಾಲಿನ ಮೊತ್ತ ಗಳಿಸಿತು. ನಂತರ ಶಿಸ್ತುಬದ್ಧ ದಾಳಿಯ ಮೂಲಕ ಯುಪಿ ವಾರಿಯರ್ಸ್ ತಂಡವನ್ನು 9 ವಿಕೆಟ್‌ಗೆ 120 ರನ್‌ಗಳಿಗೆ ಕಟ್ಟಿಹಾಕಿ ನಾಲ್ಕನೇ ಜಯ ದಾಖಲಿಸಿತು. ವಾರಿಯರ್ಸ್‌ಗೆ ಇದು ನಾಲ್ಕನೇ ಸೋಲು.

ವಾರಿಯರ್ಸ್ ಪರ ಮಧ್ಯಮ ಕ್ರಮಾಂಕದಲ್ಲಿ ಭಾರತ ತಂಡದ ಆಟಗಾರ್ತಿ ದೀಪ್ತಿ ಶರ್ಮಾ (ಔಟಾಗದೇ 53, 36ಎ, 4x6, 6x2) ಮಾತ್ರ ಹೋರಾಟ ತೋರಿದರು. ಉಳಿದವರಾರೂ 20ರ ಗಡಿ ದಾಟಲಿಲ್ಲ. 15 ರನ್‌ಗಳಾಗುವಷ್ಟರಲ್ಲಿ ಮೂರು ವಿಕೆಟ್‌ಗಳನ್ನು ಕಳೆದುಕೊಂಡ ವಾರಿಯರ್ಸ್ ನಂತರ ಚೇತರಿಸಲಿಲ್ಲ. ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು. ಸೈಕಾ ಇಶಾಖ್ ಮೂರು ವಿಕೆಟ್‌ಗಳನ್ನು ಪಡೆದರು.

ಮೊದಲು ಆಡಿದ್ದ ಮುಂಬೈ ತಂಡ 17 ರನ್‌ಗಳಾಗುವಷ್ಟರಲ್ಲಿ ಆರಂಭ ಆಟಗಾರ್ತಿಯರಾದ ಯಸ್ತಿಕಾ ಭಾಟಿಯಾ ಮತ್ತು ಹೇಯ್ಲಿ ಮ್ಯಾಥ್ಯೂಸ್ ಅವರನ್ನು ಕಳೆದುಕೊಂಡಿತ್ತು. ಆಫ್ ಸ್ಪಿನ್ನರ್ ಚಮರಿ ಅಟಪಟ್ಟು ಈ ಎರಡೂ ವಿಕೆಟ್‌ಗಳನ್ನು ಪಡೆದಿದ್ದರು. ಆದರೆ ಮಧ್ಯಮ ಕ್ರಮಾಂಕದ ಆಟಗಾರ್ತಿಯರು ತಂಡದ ನೆರವಿಗೆ ಬಂದರು.

ನಥಾಲಿಯಾ ಶಿವರ್ ಬ್ರಂಟ್ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (33, 30ಎ, 4x4, 6x1) ಅವರು ಮೂರನೇ ವಿಕೆಟ್‌ಗೆ 59 ರನ್ ಸೇರಿಸಿ ಕುಸಿತ ತಡೆಗಟ್ಟಿದರು. ಆಕ್ರಮಣಕಾರಿಯಾಗಿ ಆಡಿದ ಶಿವರ್ ಬ್ರಂಟ್ ಎಂಟು ಬೌಂಡರಿಗಳನ್ನು ಬಾರಿಸಿದರು. 15ನೇ ಓವರ್‌ನಲ್ಲಿ ಹರ್ಮನ್‌ಪ್ರೀತ್ ಸ್ವೀಪ್‌ಮಾಡುವ ಯತ್ನದಲ್ಲಿ ಸೈಮಾ ಠಾಕೂರ್ ಅವರಿಗೆ ಬೌಲ್ಡ್ ಆದರು. ಅಮೇಲಿಯಾ ಕೆರ್ (23 ಎಸೆತಗಳಲ್ಲಿ 39) ಮತ್ತು ಉದಯೋನ್ಮುಖ ಆಟಗಾರ್ತಿ ಸಜೀವನ್ ಸಜನಾ (ಅಜೇಯ 22, 14 ಎಸೆತ) ಅವರು ತಂಡದ ಮೊತ್ತವನ್ನು ಮತ್ತಷ್ಟು ಏರಿಸಿದರು. ಕೊನೆಯ 26 ಎಸೆತಗಳಲ್ಲಿ 43 ರನ್‌ಗಳು ಬಂದವು.

ಮುಂಬೈ ಇಂಡಿಯನ್ಸ್ ತಂಡದ ಆಟಗಾರ್ತಿ ನಥಾಲಿಯಾ ಶಿವರ್ ಬ್ರಂಟ್ —ಪಿಟಿಐ ಚಿತ್ರ

ಸ್ಕೋರುಗಳು: ಮುಂಬೈ ಇಂಡಿಯನ್ಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 160 (ನಥಾಲಿ ಶಿವರ್ ಬ್ರಂಟ್ 45, ಹರ್ಮನ್‌ಪ್ರೀತ್ ಕೌರ್ 33, ಅಮೇಲಿಯಾ ಕೆರ್ 39, ಸಜೀವನ್ ಸಜನಾ ಔಟಾಗದೇ 22; ಚಮರಿ ಅಟಪಟ್ಟು 27ಕ್ಕೆ2); ಯುಪಿ ವಾರಿಯರ್ಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 118 (ದೀಪ್ತಿ ಶರ್ಮಾ ಔಟಾಗದೇ 53, ಸೈಕಾ ಇಶಾಖ್ 27ಕ್ಕೆ3, ನಥಾಲಿಯಾ ಶಿವರ್ ಬ್ರಂಟ್ 14ಕ್ಕೆ2).

ಶುಕ್ರವಾರದ ಪಂದ್ಯ: ಯುಪಿ ವಾರಿಯರ್ಸ್– ಡೆಲ್ಲಿ ಕ್ಯಾಪಿಟಲ್ಸ್ (ರಾತ್ರಿ 7.30)

ಡಬ್ಲ್ಯುಎಫ್‌ಐನಿಂದ ಆಯ್ಕೆ ಟ್ರಯಲ್ಸ್ ಸುತ್ತೋಲೆ ವಾಪಸ್: ಹೈಕೋರ್ಟ್

ನವದೆಹಲಿ (ಪಿಟಿಐ): ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್ 2024 ಮತ್ತು ಏಷ್ಯನ್ ಒಲಿಂಪಿಕ್ ಗೇಮ್ಸ್ ಕ್ವಾಲಿಫೈಯರ್ ಕುಸ್ತಿ ಟೂರ್ನಿಗೆ ಆಯ್ಕೆ ಟ್ರಯಲ್ಸ್ ನಡೆಸುವ ಕುರಿತ ಸುತ್ತೋಲೆ ಹಿಂತೆಗೆದುಕೊಳ್ಳುವುದಾಗಿ ಅಮಾನತುಗೊಂಡಿರುವ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ)ಗುರುವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಡಬ್ಲ್ಯುಎಫ್‌ಐ ಪರ ವಕೀಲರು ನೀಡಿದ ಹೇಳಿಕೆ ಗಮನಿಸಿದ ನ್ಯಾಯಮೂರ್ತಿ ಸಚಿನ್ ದತ್ತಾ, ಡಬ್ಲ್ಯುಎಫ್‌ಐನ ತಾತ್ಕಾಲಿಕ ಸಮಿತಿ ಹೊರಡಿಸಿದ ಸುತ್ತೋಲೆಯ ಪ್ರಕಾರ ಆಯ್ಕೆ ಟ್ರಯಲ್ಸ್ ಮುಂದುವರಿಯುತ್ತವೆ ಎಂದು ಹೇಳಿದರು.

ಏಷ್ಯನ್ ಒಲಿಂಪಿಕ್ ಅರ್ಹತಾ ಟೂರ್ನಿ (ಏಪ್ರಿಲ್ 19-21) ಮತ್ತು ವಿಶ್ವ ಒಲಿಂಪಿಕ್ ಅರ್ಹತಾ ಟೂರ್ನಿಗೆ (ಮೇ 9-12) ಇದೇ 10 ಮತ್ತು 11 ರಂದು ಪಟಿಯಾಲಾದ ಎನ್‌ಎಸ್‌ಐ ಮತ್ತು ಸೋನಿಪತ್‌ನ ಸಾಯ್ ಕೇಂದ್ರದ ಸಂಕೀರ್ಣದಲ್ಲಿ ಟ್ರಯಲ್ಸ್ ನಡೆಯಲಿದೆ ಎಂದು ಡಬ್ಲ್ಯುಎಫ್‌ಐನ ತಾತ್ಕಾಲಿಕ ಸಮಿತಿ ಫೆಬ್ರುವರಿ 9 ರಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿತ್ತು.

ವಾದ–ಪ್ರತಿವಾದಗಳ ಬಳಿಕ ಹಿರಿಯ ವಕೀಲ ದಯಾನ್ ಕೃಷ್ಣನ್ ಅವರು ಡಬ್ಲ್ಯುಎಫ್‌ಐ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಫೆ.9ರ ಸುತ್ತೋಲೆಯ ಪ್ರಕಾರ ಆಯ್ಕೆ ಟ್ರಯಲ್ಸ್ ಮುಂದುವರಿಯುತ್ತವೆ.

ತಾತ್ಕಾಲಿಕ ಸಮಿತಿಯು ಎಲ್ಲಾ ಅರ್ಹ ಕ್ರೀಡಾಪಟುಗಳಿಗೆ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅನುಮತಿಸುವುದನ್ನು ಖಚಿತಪಡಿಸುತ್ತದೆ ಎಂದು ಹೇಳಬೇಕಾಗಿಲ್ಲ ಎಂದು ನ್ಯಾಯಾಲಯ ಹೇಳಿದೆ. ಮುಂದಿನ ವಿಚಾರಣೆ ಏಪ್ರಿಲ್ 26ಕ್ಕೆ ನಿಗದಿಪಡಿಸಿದೆ.

ಕಳೆದ ಡಿಸೆಂಬರ್‌ನಲ್ಲಿ ನಡೆದ ಭಾರತ ಕುಸ್ತಿ ಫೆಡರೇಷನ್ ಚುನಾವಣೆಯನ್ನು ಕಾನೂನುಬಾಹಿರ ಮತ್ತು ಅದನ್ನು ಅನೂರ್ಜಿಗೊಳಿಸಬೇಕು ಎಂದು ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್, ಸಾಕ್ಷಿ ಮಲಿಕ್ ಮತ್ತು ಅವರ ಪತಿ ಸತ್ಯವ್ರತ ಕಾದಿಯಾನ್ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್, ಮಾರ್ಚ್ 4ರಂದು ಕೇಂದ್ರ ಸರ್ಕಾರ ಮತ್ತು ಫೆಡರೇಷನ್ (ಡಬ್ಲ್ಯುಎಫ್‌ಐ) ಪ್ರತಿಕ್ರಿಯೆ ಕೋರಿತ್ತು.

ನಿವೃತ್ತಿ ಪ್ರಕಟಿಸಿದ ಎರಾಸ್ಮಸ್

ದುಬೈ (ಪಿಟಿಐ): ದಕ್ಷಿಣ ಆಫ್ರಿಕದ ಅಂಪೈರ್ ಮರಾಯಸ್ ಎರಾಸ್ಮಸ್ ಅವರು ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ನಡುವಣ ಕ್ರೈಸ್ಟ್‌ಚರ್ಚ್‌ನಲ್ಲಿ ಶುಕ್ರವಾರ ಆರಂಭವಾಗುವ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಕಾರ್ಯನಿರ್ವಹಿಸಿದ ನಂತರ ನಿವೃತ್ತರಾಗಲಿದ್ದಾರೆ.

60 ವರ್ಷದ ಎರಾಸ್ಮಸ್ ಅವರು ಎಮಿರೇಟ್ಸ್ ಐಸಿಸಿ ಎಲೈಟ್ ಅಂಪೈರ್‌ಗಳ ಪಾನೆಲ್‌ನಿಂದ ನಿವೃತ್ತರಾಗುವ ನಿರ್ಧಾರವನ್ನು ಗುರುವಾರ ಪ್ರಕಟಿಸಿದರು. ಪ್ರಥಮ ದರ್ಜೆ ಮಾಜಿ ಕ್ರಿಕೆಟರ್ ಆಗಿರುವ ಎರಾಸ್ಮಸ್ 2010ರಲ್ಲಿ ಮೊದಲ ಬಾರಿ ಎಲೈಟ್ ಪಾನೆಲ್‌ಗೆ ನೇಮಕಗೊಂಡಿದ್ದರು.

ಕ್ರೈಸ್ಟ್‌ಚರ್ಚ್ ಟೆಸ್ಟ್ ಅವರ ಪಾಲಿಗೆ ಅಂಪೈರ್ ಆಗಿ 82ನೇ ಪಂದ್ಯವಾಗಿದೆ. ಅವರು ಒಟ್ಟು 380 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅಂಪೈರ್ ಆಗಿದ್ದಾರೆ. ಇದರಲ್ಲಿ 131 ಪಂದ್ಯಗಳಲ್ಲಿ ಟಿವಿ ಅಂಪೈರ್ ಆಗಿದ್ದರು. ಅತಿ ಹೆಚ್ಚು ಟೆಸ್ಟ್ ಪಂದ್ಯಗಳಿಗೆ ಅಂಪೈರಿಂಗ್ ಮಾಡಿದವರಲ್ಲಿ ಅವರು 10ನೇ ಸ್ಥಾನದಲ್ಲಿದ್ದಾರೆ.

ಫ್ರೆಂಚ್ ಓಪನ್: ಸಿಂಧು ಮುನ್ನಡೆ

ಪ್ಯಾರಿಸ್ (ಪಿಟಿಐ): ಭಾರತದ ಪಿ.ವಿ. ಸಿಂಧು, ಫ್ರೆಂಚ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್‌ನಲ್ಲಿ ಅಮೆರಿಕದ ಬೀವೆನ್ ಜಾಂಗ್ ವಿರುದ್ಧ ಗೆಲುವು ಸಾಧಿಸಿ ಗುರುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ, ಪುರುಷರ ಸಿಂಗಲ್ಸ್ ನಲ್ಲಿ ಕಿದಂಬಿ ಶ್ರೀಕಾಂತ್ ಎರಡನೇ ಸುತ್ತಿನಲ್ಲಿ ಸೋತು ನಿರ್ಗಮಿಸಿದರು.

ಪಿ.ವಿ.ಸಿಂಧು

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು 13-21, 21-10, 21-14 ಅಂತರದಿಂದ ವಿಶ್ವದ 10ನೇ ಕ್ರಮಾಂಕದ ಜಾಂಗ್ ಅವರನ್ನು ಸೋಲಿಸಿದರು. ವಿಶ್ವದ 11ನೇ ರ‍್ಯಾಂಕ್‌ನ ಆಟಗಾರ್ತಿ ಸಿಂಧು ಮುಂದಿನ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಚೀನಾದ ಚೆನ್ ಯು ಫೀ ಅಥವಾ ಡೆನ್ಮಾರ್ಕ್‌ನ ಲೈನ್ ಕ್ರಿಸ್ಟೋಫರ್ಸನ್ ಅವರನ್ನು ಎದುರಿಸಲಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮೂರನೇ ಪದಕದ ಮೇಲೆ ಕಣ್ಣಿಟ್ಟಿರುವ ಅವರಿಗೆ ಈ ಟೂರ್ನಿ ಪ್ರಮುಖವಾಗಿದೆ.

ಶ್ರೀಕಾಂತ್ ಅವರು 21-19, 12-21, 20-22 ಅಂತರದಲ್ಲಿ ಚೀನಾದ ಗುವಾಂಗ್ ಜು ವಿರುದ್ಧ ಸೋಲನ್ನು ಅನುಭವಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅವರು ಜಪಾನಿನ ಯುಕಿ ಫುಕುಶಿಮಾ ಮತ್ತು ಸಯಾಕಾ ಹಿರೋಟಾ ಅವರನ್ನು 21-18 21-13ರಿಂದ ಮಣಿಸಿದರು

ಟೆನಿಸ್: ನಗಾಲ್‌ಗೆ ಒಲಿದ ಅದೃಷ್ಟ

ಇಂಡಿಯನ್ ವೆಲ್ಸ್ (ಅಮೆರಿಕ) (ಪಿಟಿಐ): ಸ್ಪೇನ್‌ನ ರಫೆಲ್ ನಡಾಲ್ ಹಿಂದೆ ಸರಿದ ಕಾರಣ ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಇಂಡಿಯನ್ ವೆಲ್ಸ್ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಪ್ರಧಾನ ಸುತ್ತಿಗೆ ಅರ್ಹತೆ ಪಡೆದಿದ್ದಾರೆ.

26 ವರ್ಷದ ನಗಾಲ್ ಅವರು ಅರ್ಹತಾ ವಿಭಾಗದ ಎರಡನೇ ಸುತ್ತಿನಲ್ಲಿ ಸೋತಿದ್ದರು. ಆದರೆ, ಆ ಡ್ರಾದಲ್ಲಿ ಅವರು ಅತ್ಯುನ್ನತ ಶ್ರೇಯಾಂಕದ ಆಟಗಾರನಾಗಿದ್ದರಿಂದ ಈ ಅವಕಾಶ ಪಡೆದರು. ಅವರು ಪ್ರಸ್ತುತ ಎಟಿಪಿ ರ‍್ಯಾಂಕಿಂಗ್‌ನಲ್ಲಿ 101ನೇ ಸ್ಥಾನದಲ್ಲಿದ್ದಾರೆ.

2016ರ ವಿಂಬಲ್ಡನ್ ಫೈನಲ್ ತಲುಪಿದ್ದ ಕೆನಡಾದ ಮಿಲೋಸ್ ರಾನಿಕ್ ವಿರುದ್ಧ ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ನಗಾಲ್ ಸೆಣಸಲಿದ್ದಾರೆ.

‘ಇಂಡಿಯನ್ ವೆಲ್ಸ್‌ನಲ್ಲಿ ನನ್ನ ಎಟಿಪಿ ಮಾಸ್ಟರ್ಸ್ 1000 ಚೊಚ್ಚಲ ಪಂದ್ಯಕ್ಕಾಗಿ ಉತ್ಸುಕನಾಗಿದ್ದೇನೆ’ ಎಂದು ನಗಾಲ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದಕ್ಕೂ ಮುನ್ನ 37 ವರ್ಷದ ನಡಾಲ್ ಅವರು ಟೂರ್ನಿಯಿಂದ ಹಿಂದೆ ಸರಿದಿರುವುದಾಗಿ ಹೇಳಿಕೆ ನೀಡಿದ್ದರು.

ಚೆಸ್: ನಾದಿರ್ಬೆಕ್‌ಗೆ ಪ್ರಶಸ್ತಿ

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್, ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಎಂಟನೇ ಸುತ್ತಿನಲ್ಲಿ ಗುರುವಾರ ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿದರು. ಆದರೆ ಭಾರತದ ಇನ್ನೊಬ್ಬ ಆರ್. ಪ್ರಜ್ಞಾನಂದ ಅವರು ಪೋಲೆಂಡ್‌ನ ಮ್ಯಾಥ್ಯೂಸ್ ಬಾರ್ಟೆಲ್ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು.

ನಾದಿರ್ಬೆಕ್ ಅಬ್ದುಸತ್ತಾರೋವ್

ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರು ಇನ್ನೂ ಒಂದು ಸುತ್ತು ಉಳಿದಿರುವಂತೆ ಈ ಟೂರ್ನಿಯನ್ನು ಗೆದ್ದುಕೊಂಡರು. ಅವರು ಎಂಟನೇ ಸುತ್ತಿನಲ್ಲಿ ಇರಾನ್‌ನ ಪರ್ಹಾಮ್ ಮಘಸೂಡ್ಲು ಅವರನ್ನು ಮಣಿಸಿದರು.

ಅವರು ಆರು ಪಾಯಿಂಟ್ಸ್ ಸಂಗ್ರಹಿಸಿದ್ದು ಇತರರಿಗಿಂತ 1.5 ಪಾಯಿಂಟ್ಸ್ ಮುಂದಿರುವ ಕಾರಣ ಪ್ರಶಸ್ತಿ ಗೆಲ್ಲುವುದು ಖಚಿತವಾಯಿತು. ಜೊತೆಗೆ ಇಲ್ಲಿನ ಅಮೋಘ ಪ್ರದರ್ಶನದ ಕಾರಣ ಹೆಚ್ಚು ರ‍್ಯಾಂಕಿಂಗ್ ಪಾಯಿಂಟ್‌ಗಳೊಡನೆ ಅವರು ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನಕ್ಕೆ ಏರಲಿದ್ದಾರೆ. ಕಣ ದಲ್ಲಿರುವ ಭಾರತದ ಇನ್ನೊಬ್ಬ ಆಟಗಾರ ವಿದಿತ್ ಗುಜರಾತಿ, ರುಮೇನಿಯಾದ ರಿಚರ್ಡ್ ರ‍್ಯಾಪೋರ್ಟ್ ಜೊತೆ ಡ್ರಾ ಮಾಡಿಕೊಂಡರು. ಕೊನೆಯ ಸುತ್ತು ಬಾಕಿಯಿರುವಂತೆ– ಮಘಸೂಡ್ಲು, ಪ್ರಜ್ಞಾನಂದ ಮತ್ತು ಝೆಕ್ ರಿಪಬ್ಲಿಕ್‌ನ ಎನ್ಗುಯೆನ್ ಥಾ ದೈವಾನ್ ಅವರು ತಲಾ 4.5 ಪಾಯಿಂಟ್‌ಗಳೊಡನೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಗುಕೇಶ್ (4) ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿ ಕೀಮರ್ ವಿರುದ್ಧ 27 ನಡೆಗಳಲ್ಲಿ ಜಯಗಳಿಸಿದರು.

ಅಂತರರಾಷ್ಟ್ರೀಯ ಎಸ್‌ಯುಪಿಗೆ ಸಸಿಹಿತ್ಲು ಸಜ್ಜು

ಪ್ರಜಾವಾಣಿ ವಾರ್ತೆ

ಮಂಗಳೂರು: ಅಸೋಸಿಯೇಷನ್ ಆಫ್ ಪೆಡಲ್ ಸರ್ಫ್ ಪ್ರೊಫೆಷನಲ್ಸ್ (ಎಪಿಪಿ), ಸರ್ಫಿಂಗ್ ಸ್ವಾಮಿ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಿರುವ ಅಂತರರಾಷ್ಟ್ರೀಯ ಸ್ಟ್ಯಾಂಡ್ ಅಪ್ ಪೆಡಲಿಂಗ್ ಚಾಂಪಿಯನ್‌ಷಿಪ್‌ಗೆ ನಗರದ ಸಸಿಹಿತ್ಲು ಕಡಲು ಸಜ್ಜಾಗಿದೆ. ಪ್ಯಾಡ್ಲಿಂಗ್ ವಿಶ್ವ ಟೂರ್ ಅಂಗವಾಗಿ ನಡೆಯಲಿರುವ ಚಾಂಪಿಯನ್‌ಷಿಪ್‌ನ ಸ್ಪರ್ಧೆಗಳು ಶುಕ್ರವಾರ (ಮಾ.8) ಆರಂಭವಾಗಲಿದ್ದು 10ರಂದು ಕೊನೆಗೊಳ್ಳಲಿವೆ.

ಇಂಡಿಯನ್ ಪ್ಯಾಡಲ್ ಫೆಸ್ಟಿವಲ್ ಎಂಬ ಹೆಸರಿನಲ್ಲಿ ನಡೆಯುವ ಚಾಂಪಿಯನ್‌ಷಿಪ್‌ಗೆ ಬಾಲಿವುಡ್ ನಟ ಸುನಿಲ್ ಶೆಟ್ಟಿ ರಾಯಭಾರಿಯಾಗಿದ್ದಾರೆ. ಪ್ರತಿದಿನ ಸಂಜೆ ಕಯಾಕಿಂಗ್, ಸೈಕ್ಲಿಂಗ್ ಮುಂತಾದವುಗಳನ್ನು ಆಧರಿಸಿದ ಸಾಹಸ ಚಲನಚಿತ್ರಗಳ ಪ್ರದರ್ಶನ ಇರುತ್ತದೆ ಎಂದು ಭಾರತ ಸರ್ಫಿಂಗ್ ಫೆಡರೇಷನ್ ಉಪಾಧ್ಯಕ್ಷ ರಾಮ್‌ಮೋಹನ್ ಪರಾಂಜಪೆ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ವಿದೇಶದ 25 ಮಂದಿ ಸೇರಿ ಒಟ್ಟು 45 ಪ್ಯಾಡ್ಲರ್‌ಗಳು ಪಾಲ್ಗೊಳ್ಳಲಿದ್ದು ಪುರುಷ, ಮಹಿಳೆಯರ ಮುಕ್ತ ಮತ್ತು 16 ವರ್ಷದೊಳಗಿನ ಬಾಲಕ, ಬಾಲಕಿಯರ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದರು.

‘ಭಾರತದಲ್ಲಿ ಇದೇ ಮೊದಲ ಬಾರಿ ಸ್ಟ್ಯಾಂಡ್ ಅಪ್ ಪ್ಯಾಡ್ಲಿಂಗ್ ವಿಶ್ವ ಟೂರ್‌ನ ಚಾಂಪಿಯನ್‌ಷಿಪ್ ನಡೆಯುತ್ತಿದೆ’ ಎಂದು ಎಪಿಪಿ ವಿಶ್ವ ಟೂರ್‌ನ ಸಿಇಒ ಟ್ರಿಸ್ಟನ್ ಬಾಕ್ಸ್‌ಫಾರ್ಡ್ ಹೇಳಿದರು.

‘ಹಾಕಿ; ಒಲಿಂಪಿಕ್ಸ್‌ನಲ್ಲಿ ಚಿನ್ನ ಗುರಿ’

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಭಾರತ ಪುರುಷರ ಹಾಕಿ ತಂಡ, ಮುಂಬರುವ ಪ್ಯಾರಿಸ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ಗುರಿ ಹೊಂದಿದೆ ಎಂದು ನಾಯಕ ಹರ್ಮನ್‌ಪ್ರೀತ್ ಸಿಂಗ್ ಹೇಳಿದ್ದಾರೆ.

ದಾಖಲೆಯ ಎಂಟು ಬಾರಿ ಚಿನ್ನದ ಪದಕ ವಿಜೇತ ಭಾರತ ತಂಡ, 2021ರ ಟೋಕಿಯೊ ಒಲಿಂಪಿಕ್ಸ್ ನಲ್ಲಿ ಜರ್ಮನಿಯನ್ನು 5-4 ಅಂತರದಿಂದ ಸೋಲಿಸಿ ಕಂಚಿನ ಪದಕ ಪಡೆದಿತ್ತು. ಒಲಿಂಪಿಕ್ ಪದಕಕ್ಕಾಗಿ 41 ವರ್ಷ ಕಾಯುವಿಕೆಯನ್ನು ಕೊನೆಗೊಳಿಸಿತು.

ಇದಕ್ಕೂ ಮುನ್ನ 1980ರ ಮಾಸ್ಕೋ ಒಲಿಂಪಿಕ್ಸ್‌ನಲ್ಲಿ ಭಾರತ ಕೊನೆ ಬಾರಿ ಚಿನ್ನದ ಪದಕ ಪಡೆದಿತ್ತು.

‘ಟೋಕಿಯೊ ಒಲಿಂಪಿಕ್ಸ್ ಒಂದು ಸ್ಮರಣೀಯ ಕ್ಷಣವಾಗಿತ್ತು. ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಚಿನ್ನ ಗೆಲ್ಲುವ ಗುರಿ ಹೊಂದಿದ್ದೇವೆ’ ಎಂದು ಹರ್ಮನ್‌ಪ್ರೀತ್ ಅವರು ಹಾಕಿ ಇಂಡಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ
ಶುಕ್ರವಾರ • ಮಾರ್ಚ್ 8, 2024

ಅವಳ ಸಾಧನೆ ಸಂಭ್ರಮ

mahindra Rise presents ಪ್ರಜಾವಾಣಿ

ಸಾಧಕಿಯರು

ಡಾ. ವಿಜಯಲಕ್ಷ್ಮಿ ದೇಶಮಾನೆ

ಯು. ವರ್ಷಾ

ಸುಜಾತಾ, ರೂಪಾ

ಶಾರದಾ ಬಡಿಗೇರ

ಕೆ.ಪಿ. ಅಶ್ವಿನಿ

ಗೌರಿ ಶಿವಯೋಗಿ

ಎಂ. ಶೀಲಾರಾಣಿ

ಶಿವಲಿಂಗಮ್ಮ

ಅಮೃತವಲ್ಲಿ

ಸಿಸ್ಟರ್ ಶೋಭನಾ

ಸಾಧಕಿಯರನ್ನು ಗುರುತಿಸುವ ಪ್ರಕ್ರಿಯೆ ಹೆಚ್ಚು ಖುಷಿ ನೀಡಿತು. ಸಹ ತೀರ್ಪುಗಾರರಿಂದ ಹೆಚ್ಚು ಕಲಿತೆ. ಸಾಧಕಿಯರ ಬದುಕು, ಅವರ ಜೀವನ ಮೌಲ್ಯ ನಮಗೂ ಪ್ರೇರಣೆ ನೀಡುವಂಥವು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಶ್ರಮಿಸುತ್ತಿರುವ ವಿವಿಧ ಸ್ತರದ ಮಹಿಳೆಯರನ್ನು ನೋಡಿದಾಗ ಸೋಜಿಗವೆನಿಸಿತು. ಅರ್ಹರನ್ನೇ ಅಂತಿಮ ಸುತ್ತಿಗೆ ತಂದ ಹೆಗ್ಗಳಿಕೆ ಪ್ರಜಾವಾಣಿಯದ್ದು. ಈ ಸಾಧಕಿಯರ ಬದುಕು ಉಳಿದವರಿಗೂ ಸ್ಫೂರ್ತಿಯಾಗಿದೆ

ಪ್ರಜಾವಾಣಿ ಸಾಧಕಿಯರನ್ನು ಆಯ್ಕೆ ಮಾಡಿದ್ದೇ ಅದ್ಭುತವಾದ ಅನುಭವ ನನಗೆ. ಎಲ್ಲ ರೀತಿಯ ಗಮನ ಮತ್ತು ಗೌರವಕ್ಕೆ ಅರ್ಹರಾಗಿರುವ ಈ ಸಾಧಕಿಯರನ್ನು ಸಮಾಜಕ್ಕೆ ಪರಿಚಯಿಸಬೇಕಾದ ಅಗತ್ಯ ಖಂಡಿತವಾಗಿ ಇದೆ. ಸಾಧಕಿಯರ ಆಯ್ಕೆಯಲ್ಲಿ ಸಮಿತಿಯಲ್ಲಿದ್ದ ಎಲ್ಲರದ್ದೂ ಒಕ್ಕೊರಲ ದನಿಯಾಗಿತ್ತು

ಸಾಧಕಿಯರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪಾರದರ್ಶಕವಾಗಿತ್ತು. ಆಯ್ಕೆ ಸಮಿತಿಯಲ್ಲಿ ಚರ್ಚಿಸಿ ಮತ್ತು ಅಳೆದೂ ತೂಗಿ ಸಾಧಕಿಯರನ್ನು ಆಯ್ಕೆ ಮಾಡಲಾಗಿದೆ. ಎಲ್ಲ ವಿಭಾಗಗಳಲ್ಲಿಯೂ ಉತ್ತಮ ಆಯ್ಕೆಗಳಿದ್ದವು. ಸಮಾಜಮುಖಿಯಾಗಿ ದುಡಿಯುತ್ತ ಎಲೆಮರೆಯ ಕಾಯಿಗಳಂತೆ ಇರುವ ಸಾಧಕಿಯರನ್ನು ಗುರುತಿಸಿರುವುದು ಶ್ಲಾಘನೀಯ

ಸಾಧಕಿಯರನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಿಷ್ಪಕ್ಷಪಾತವಾಗಿತ್ತು. ಆಯ್ಕೆ ಮಾಡಿದ ಎಲ್ಲರೂ ಅರ್ಹರೇ ಆಗಿದ್ದರು. ಅವರಲ್ಲಿ ಮತ್ತೆ ಆಯ್ಕೆ ಮಾಡುವುದೇ ಸವಾಲಿನ ಕೆಲಸವಾಗಿತ್ತು. ಸಾಮಾಜಿಕ ಸುಧಾರಣೆ ಮತ್ತು ಬದಲಾವಣೆ ತರುವಲ್ಲಿ ಹೆಚ್ಚು ಪ್ರೇರಣೆ ನೀಡುವಂಥ, ಪ್ರಭಾವ ಬೀರುವಂಥ ಸಾಧಕಿಯರನ್ನು ತೀರ್ಪುಗಾರರ ತಂಡ ಒಮ್ಮತದಿಂದ ಆಯ್ಕೆ ಮಾಡಿತು. 'ಪ್ರಜಾವಾಣಿ'ಯ ಈ ಸ್ತ್ರೀಪರ ನಿಲುವು ಸಮಾಜಮುಖಿಯಾಗಿದೆ. ಅಂತಿಮ ಸುತ್ತಿಗೆ ಬಂದ ಎಲ್ಲ ಸಾಧಕಿಯರಿಗೂ ಅಭಿನಂದನೆಗಳು

ಅವಳ ಸಾಧನೆ ಸಂಭ್ರಮಿಸೋಣ

ನಮ್ಮ ಸುತ್ತಲಿನ ಸಮಾಜ ಇಂದು ಇಷ್ಟು ಸಹ್ಯವಾಗಿ ಉಳಿಯುವಲ್ಲಿ ಸ್ತ್ರೀಶಕ್ತಿಯೇ ಪ್ರಧಾನ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಆ ಶಕ್ತಿ ಅಷ್ಟೊಂದು ಢಾಳಾಗಿ ಪ್ರಕಟಗೊಳ್ಳದೆ 'ಅದೃಶ್ಯ'ವಾಗಿ ಉಳಿದಿರುವುದೇ ಹೆಚ್ಚೇನೋ ಎಂಬ ಯೋಚನೆ ಕಾಡುವುದುಂಟು. ಮಹಿಳೆಯು ನಮ್ಮ ಸಮಾಜದ ಚಾಲಕ ಶಕ್ತಿ. ಶಿಕ್ಷಣತಜ್ಞೆಯಾಗಿ, ಸಮಾಜ ಪರಿವರ್ತನೆಯ ಹರಿಕಾರಳಾಗಿ, ಆವಿಷ್ಕಾರಗಳ ಮುಂದಾಳಾಗಿ, ನ್ಯಾಯಪರ ಹೋರಾಟಗಾರ್ತಿಯಾಗಿ, ನಮ್ಮ ಭವಿಷ್ಯದ ಪೋಷಕಿಯಾಗಿ ಅವಳ ಪಾತ್ರದ ಹಿರಿಮೆಗೆ ಎಲ್ಲೆಯೇ ಇಲ್ಲ. ಈ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಆದರೆ, ಇಂತಹ ಸಾಧಕಿಯರನ್ನು ಗೌರವಿಸುವ ಕೆಲಸ ಸಮಾಜದಲ್ಲಿ ಅಷ್ಟಾಗಿ ಆದಂತಿಲ್ಲ. ಮಹಿಳೆಯರ ಸಾಧನೆಗೆ ಸೂಕ್ತ ಮನ್ನಣೆ ಸಹ ಪೂರ್ಣ ಪ್ರಮಾಣದಲ್ಲಿ ಸಿಕ್ಕಂತಿಲ್ಲ. ಇಂತಹ ಯೋಚನೆಗಳು ಹರಳುಗಟ್ಟಿದ್ದೇ **'ಪ್ರಜಾವಾಣಿ ಸಾಧಕಿಯರು'** ಪ್ರಶಸ್ತಿಯನ್ನು ಆರಂಭಿಸಲು ಮುಖ್ಯ ಕಾರಣ. ಸುತ್ತಲ ಸಮಾಜದ ಪರಿವರ್ತನೆಗೆ ಕಾರಣರಾದ ಅಸಾಮಾನ್ಯ ಸಾಧಕಿಯರ ಯಶೋಗಾಥೆಗಳನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶವನ್ನೂ ಈ ಪ್ರಶಸ್ತಿಯು ತಲೆಯ ಮೇಲೆ ಹೊತ್ತುಕೊಂಡಿದೆ.

ತಮ್ಮ ಪ್ರತಿಭೆಯಿಂದ ಜಗದಗಲ ಬೆಳೆದು ನಿಂತ ಸಾಧಕಿಯರಿಗೆ ಲೆಕ್ಕವೇ ಇಲ್ಲ. ಆದರೆ, ಅವರೆಲ್ಲ ಎಲೆ ಮರೆಯ ಕಾಯಿಗಳಂತೆ ಸಮಾಜಕ್ಕೆ ತಮ್ಮ ಕೈಯಿಂದ ಆದ ಸೇವೆ ಸಲ್ಲಿಸುತ್ತಾ ಹೊರಟಿದ್ದಾರೆ. ಅಂತಹ ಅಸಂಖ್ಯ ಸಾಧಕಿಯರಲ್ಲಿ ಪ್ರಾತಿನಿಧಿಕವಾಗಿ ಹತ್ತು ಜನ ಸಾಧಕಿಯರ ಯಶೋಗಾಥೆಗಳನ್ನು ಪ್ರಜಾವಾಣಿ ಹೆಕ್ಕಿ ತೆಗೆದು ಇಲ್ಲಿ ಸಮಾಜದ ಮುಂದಿಟ್ಟಿದೆ.

ಬನ್ನಿ, ಸಮಾಜ ಪರಿವರ್ತನೆಗೆ ಕಾರಣರಾದ ಈ ಸಾಧಕಿಯರನ್ನು ಒಟ್ಟಾಗಿ ಗೌರವಿಸೋಣ.

ಕಾರ್ಯನಿರ್ವಾಹಕ ಸಂಪಾದಕ

PRESENTED BY
mahindra Rise
IN ASSOCIATION WITH
Gold Winner
REACH ROOT Premium HAIR OIL
MCBL
VICCO — TRUSTED AYURVEDA — SINCE 1952
TV PARTNER
ವಿಸ್ತಾರ NEWS

mahindra Rise presents ಪ್ರಜಾವಾಣಿ ಸಾಧಕಿಯರು

ಅಂಧರ ಕ್ರಿಕೆಟ್‌ನ 'ವರ್ಷ'ಧಾರೆ

• ಜಿ.ಬಿ.ನಾಗರಾಜ್

ಹುಟ್ಟುವಾಗಲೇ ದೃಷ್ಟಿದೋಷಕ್ಕೆ ಸಿಲುಕಿದ ಯು.ವರ್ಷಾ ಪ್ರಪಂಚವನ್ನು ಕಣ್ತುಂಬಿಕೊಳ್ಳುವ ಅವಕಾಶವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದು 16ನೇ ವಯಸ್ಸಿಗೆ. ದೃಷ್ಟಿ ನಿಧಾನವಾಗಿ ಮಂದವಾಗುತ್ತಿದ್ದಂತೆ ಉನ್ನತ ಸಾಧನೆಯ ಛಲ ಚಿಗುರೊಡೆಯಿತು. ಸ್ವಾವಲಂಬಿ ಬದುಕು ರೂಪಿಸಿಕೊಳ್ಳಲು ಬೆಂಗಳೂರು ತಲುಪಿದ ಯುವತಿ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರ್ತಿಯಾಗಿ ರೂಪುಗೊಂಡ ಪರಿ ವಿಸ್ಮಯ ಮೂಡಿಸುತ್ತದೆ. ಅವರು ಭಾರತದ ಅಂಧರ ಮಹಿಳಾ ಕ್ರಿಕೆಟ್ ತಂಡವನ್ನು ಮುನ್ನಡೆಸಿ ದೇಶದ ಕೀರ್ತಿಪತಾಕೆಯನ್ನು ಗಗನಕ್ಕೆ ಹಾರಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಸಮೀಪದ ಆದಿವಾಲ, ವರ್ಷಾ ಅವರ ಸ್ವಗ್ರಾಮ. ಉಮಾಪತಿ ಹಾಗೂ ಯಶೋದಾ ದಂಪತಿಯ ಪುತ್ರಿ. ಕೃಷಿ ಕುಟುಂಬದ ಹಿನ್ನೆಲೆಯವರು. 'ರೆಟಿನಾ ಪಿಗ್ಮೆಂಟೋಸ್' ಎಂಬ ದೃಷ್ಟಿದೋಷಕ್ಕೆ ಸಿಲುಕಿದ ಅವರಿಗೆ ಸಂಪೂರ್ಣ ಅಂಧತ್ವ (ಬಿ1 ಕೆಟಗರಿ) ಆವರಿಸಿದೆ. ಕತ್ತಲು ಆವರಿಸಿದ ಬದುಕಿಗೆ 'ಕಿಣಿ.. ಕಿಣಿ..' ಎಂಬ ಕ್ರಿಕೆಟ್ ಚೆಂಡು ಬೆಳಕಾಗಿದೆ. ಕ್ರಿಕೆಟ್ ಚೆಂಡು ಬದುಕಿಗೆ ಪ್ರವೇಶ ನೀಡಿದ ಬಳಿಕ ಜೀವನೋತ್ಸಾಹ ಪುಟಿದೆದ್ದಿದೆ. ಸಾಧನೆಯ ಉತ್ತುಂಗಕ್ಕೆ ಏರಲು ಪ್ರೇರೇಪಣೆ ಸಿಕ್ಕಿದೆ. ತನ್ನಂತೆ ಕತ್ತಲಲ್ಲಿ ಬಳಲುತ್ತಿರುವವರ ಬದುಕಿಗೆ ಬೆಳಕಾಗುವ ಹಂಬಲ ಹೆಚ್ಚಾಗಿದೆ.

ಯು.ವರ್ಷಾ

'ವರ್ಷಾ ಜನಿಸಿದಾಗ ತುಂಬಾ ಅಳುತ್ತಿದ್ದಳು. ಬೆರಳ ಚಿಟಿಕೆಯ ಶಬ್ದ ಕೇಳಿದಾಗ ಮಾತ್ರ ನಗುತ್ತಿದ್ದಳು. ಏಳು ತಿಂಗಳಿದ್ದಾಗ ವೈದ್ಯರನ್ನು ಸಂಪರ್ಕಿಸಿದೆವು. ಶೇ 20ರಷ್ಟು ದೃಷ್ಟಿದೋಷ ಇರುವುದು ಗೊತ್ತಾಯಿತು. ದೊಡ್ಡವಳಾದಂತೆ ಈ ಸಮಸ್ಯೆ ಹೆಚ್ಚಾಗುವ ಅಪಾಯದ ಮುನ್ಸೂಚನೆಯೂ ಸಿಕ್ಕಿತು. ಆಗ ಆಗಸವೇ ಕಳಚಿ ಬಿದ್ದಂತಹ ಅನುಭವವಾಯಿತು. ದೃಷ್ಟಿದೋಷದ ಸಮಸ್ಯೆ ಪರಿಹರಿಸಲು ಎಲ್ಲೆಡೆ ಅಲೆದಿದ್ದೆವು' ಎಂದು ದೀರ್ಘ ಉಸಿರು ಎಳೆದುಕೊಂಡರು ವರ್ಷಾ ತಾಯಿ ಯಶೋದಾ.

ಚಿಕ್ಕವಳಿದ್ದಾಗ ಮಕ್ಕಳೊಂದಿಗೆ ಆಟವಾಡುತ್ತ ಬೆಳೆದ ವರ್ಷಾ ಸಾಮಾನ್ಯ ಶಾಲೆಗೆ ಪ್ರವೇಶ ಪಡೆದರು. ರಾತ್ರಿ ವೇಳೆ ಮಾತ್ರ ಸ್ಪಷ್ಟವಾಗಿ ಕಣ್ಣು ಕಾಣುತ್ತಿರಲಿಲ್ಲ. ಶಾಲೆಯ ಬೋರ್ಡ್ ಮೇಲೆ ಶಿಕ್ಷಕರು ಬರೆದ ಅಕ್ಷರಗಳು ಮಸುಕಾಗುತ್ತಿದ್ದ ಕಾರಣಕ್ಕೆ ತರಗತಿಯ ಮೊದಲ ಸಾಲಿನಲ್ಲಿ ಕುಳಿತುಕೊಳ್ಳು-ತ್ತಿದ್ದರು. ಶಾಲೆ-ಮನೆಯ ನಡುವೆ ಏಕಾಂಗಿಯಾಗಿ ಸಂಚರಿಸಿ ಪೋಷಕರಲ್ಲಿ ಭರವಸೆ ಮೂಡಿಸಿದ್ದರು. ಆದರೆ, 14ನೇ ವಯಸ್ಸಿಗೆ ಬರುತ್ತಿದ್ದಂತೆ ದೃಷ್ಟಿ ಮಂದವಾಯಿತು. ಶಿಕ್ಷಕರು ನೀಡಿದ ಹೋಂವರ್ಕ್ ಬರೆಯಲು ಸಾಧ್ಯವಾಗದೇ ತೊಳಲಾಡತೊಡಗಿದರು. ಇದನ್ನು ಗುರುತಿಸಿದ ತಾಯಿ ಯಶೋದಾ ಪುತ್ರಿಯ ಬದುಕಿಗೆ ಆಸರೆಯಾದರು.

'ನಿಧಾನವಾಗಿ ದೃಷ್ಟಿ ಕಡಿಮೆಯಾಗುತ್ತಿರುವುದು 8ನೇ ತರಗತಿಯಲ್ಲಿ ಖಚಿತವಾಯಿತು. ನೋಟ್ಸ್ ಬರೆಯಲು, ಹೋಂವರ್ಕ್ ಪೂರ್ಣಗೊಳಿಸಲು ಸಾಧ್ಯವಾಗದೇ ನನ್ನೊಳಗೆ ತಳಮಳ ಶುರುವಾಗಿತ್ತು. ಬದುಕಿನ ಬಗೆಗಿನ ಭರವಸೆ ಕಳೆದುಕೊಳ್ಳುವ ಭಯ ಆವರಿಸಲಾರಂಭಿಸಿತು. ಎಷ್ಟೋ ಸಂದರ್ಭಗಳಲ್ಲಿ ತಾಯಿ ಹೋಂವರ್ಕ್ ಬರೆದುಕೊಟ್ಟಿದ್ದಾರೆ. ಆದರೆ, ಎಸ್ಎಸ್ಎಲ್‌ಸಿಯಲ್ಲಿ ಪರೀಕ್ಷೆ ಬರೆಯಲು ಸಾಧ್ಯವಿಲ್ಲ ಎಂಬುದು ಖಚಿತವಾದ ಬಳಿಕ ಮತ್ತೊಬ್ಬರ ನೆರವು ಪಡೆಯಲು ನಿರ್ಧರಿಸಿದೆ' ಎಂದು ಬದುಕು ಸಾಗಿಬಂದ ದಾರಿಯನ್ನು ಮೆಲುಕು ಹಾಕಿದರು ವರ್ಷಾ.

ಮತ್ತೊಬ್ಬರ ಸಹಾಯ ಪಡೆದು ಎಸ್ಎಸ್ಎಲ್‌ಸಿ ಪರೀಕ್ಷೆ ಎದುರಿಸಲು ವರ್ಷಾ ಬಳಿ ಅಂಧತ್ವದ ಪ್ರಮಾಣಪತ್ರ ಇರಲಿಲ್ಲ. ಪರೀಕ್ಷೆ ಬರೆಯಲು ಸಹಾಯಕಿಯ ಆಸರೆ ಪಡೆಯುವ ಹೊತ್ತಿಗೆ ಪರೀಕ್ಷೆಯ ದಿನ ಸಮೀಪಿಸಿತ್ತು. ಶೇ 79 ಅಂಕ ಪಡೆದು ಎಸ್ಎಸ್ಎಲ್‌ಸಿ ಉತ್ತೀರ್ಣರಾದ ವರ್ಷಾ ಬದುಕಿಗೆ ಭರವಸೆಯಾಗಿ ಬಂದವರು ಚಿಕ್ಕಪ್ಪ ರಮೇಶ್ ಮತ್ತು ಚಿಕ್ಕಮ್ಮ ಪುಷ್ಪಾ. ಅಂಧ ಮಕ್ಕಳ ಶಿಕ್ಷಣಕ್ಕೆ ಶ್ರಮಿಸುತ್ತಿರುವ ಅಶ್ವಿನಿ ಅಂಗಡಿ ಅವರ ಸಂಪರ್ಕ ಪಡೆದು ಬೆಂಗಳೂರಿಗೆ ಸ್ಥಳಾಂತರಗೊಂಡರು. ಬ್ರೈಲ್ ಲಿಪಿ ಕಲಿತು ಪದವಿ ಪೂರ್ವ ಕಾಲೇಜು ಸೇರಿದರು. ಕಲಾ ವಿಭಾಗದಲ್ಲಿ ಶೇ 88 ಅಂಕ ಪಡೆದು ಎಲ್ಲರನ್ನು ಚಕಿತಗೊಳಿಸಿದರು. ಓದಿನಲ್ಲಿ ತೋರುತ್ತಿದ್ದ ಆಸಕ್ತಿ ಕ್ರೀಡೆಯತ್ತ ಹೊರಳಿದ್ದು ಆಕಸ್ಮಿಕ.

'ಆಟೋಟಗಳ ಬಗ್ಗೆ ಮೊದಲಿನಿಂದಲೂ ಆಸಕ್ತಿ ಇತ್ತು. ಸ್ನೇಹಿತರೊಂದಿಗೆ ಆಟವಾಡಿದ ನೆನಪು ಇನ್ನೂ ಹಸಿರಾಗಿದೆ. ಪಿಯು ವ್ಯಾಸಂಗ ಮಾಡುವಾಗ ಫುಟ್‌ಬಾಲ್ ಬಗ್ಗೆ ಒಲವು ಮೂಡಿತ್ತು. ಚೆಂಡಿನ ಗೆಜ್ಜೆಯ ಶಬ್ದವನ್ನು ಆಲಿಸಿ ಆಟವಾಡುವ ಪರಿ ಹುಮ್ಮಸ್ಸು ಮೂಡಿಸಿತ್ತು. 2019ರಲ್ಲಿ ಪದವಿಯ ಸ್ನೇಹಿತೆಯೊಬ್ಬಳು ಕ್ರಿಕೆಟ್ ಬಗ್ಗೆ ಹೇಳಿದಾಗ ಕುತೂಹಲ ಕೆರಳಿತು. ಚಿಕ್ಕವಳಿದ್ದಾಗ ಕ್ರಿಕೆಟ್ ನೋಡಿದ್ದೇನೆಯೇ ಹೊರತು ಆಟವಾಡಿರಲಿಲ್ಲ. ಕಿಣಿ.. ಕಿಣಿ.. ಸದ್ದಿನ ಜಾಡು ಹಿಡಿದು ಆಡುವ ಪರಿಗೆ ಮನಸೋತುಬಿಟ್ಟೆ..' ಎಂದಾಗ ವರ್ಷಾ ಅವರ ಮೊಗ ಅರಳಿತು.

'ಸಮರ್ಥಂ ಟ್ರಸ್ಟ್' ನಡೆಸುವ ವಾರ್ಷಿಕ ಕ್ರಿಕೆಟ್ ಶಿಬಿರಕ್ಕೆ ವರ್ಷಾ ಸೇರಿದರು. ಅಂಧರ ಕ್ರಿಕೆಟ್ ತರಬೇತಿ ಪಡೆಯುವ ಆರಂಭದಲ್ಲಿ ಇವರನ್ನು ಭಯ ಕಾಡಿತ್ತು. ಕೋಚ್ ಕೃತಿಕಾ ಚಾರ್ವಿ ಹಾಗೂ ವ್ಯವಸ್ಥಾಪಕಿ ಶಿಖಾ ಧೈರ್ಯ ತುಂಬಿದರು. ಮಧ್ಯಮ ವೇಗದ ಬಲಗೈ ಬೌಲರ್ ಆಗಿರುವ ವರ್ಷಾ, ಆಲ್‌ರೌಂಡ್ ಕ್ರಿಕೆಟ್ ಆಟಗಾರ್ತಿಯು ಹೌದು. ಹ್ಯಾಟ್ರಿಕ್ ವಿಕೆಟ್, 13 ಎಸೆತಗಳಲ್ಲಿ ಅರ್ಧಶತಕ ಗಳಿಸಿದ ಸಾಧನೆ ಇವರ ಹೆಸರಿನಲ್ಲಿದೆ. ಅಂತರರಾಷ್ಟ್ರೀಯ ಅಂಧರ ಕ್ರೀಡಾ ಫೆಡರೇಷನ್ (ಐಬಿಎಸ್ಎ) ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ 2023ರಲ್ಲಿ ನಡೆಸಿದ ವಿಶ್ವ ಕ್ರೀಡಾಕೂಟದಲ್ಲಿ ವರ್ಷಾ ನೇತೃತ್ವದ ಭಾರತ ತಂಡ ಚಾಂಪಿಯನ್ ಆಯಿತು. ದೆಹಲಿಗೆ ಮರಳಿದ ಮಹಿಳಾ ಅಂಧರ ಕ್ರಿಕೆಟ್ ತಂಡವನ್ನು ಕೇಂದ್ರ ಸಚಿವೆ ಸ್ಮೃತಿ ಇರಾನಿ ವಿಮಾನ ನಿಲ್ದಾಣಕ್ಕೆ ಧಾವಿಸಿ ಸ್ವಾಗತಿಸಿದ್ದರು.

'ಭಾರತದ ತ್ರಿವರ್ಣ ಧ್ವಜವನ್ನು ವಿದೇಶದಲ್ಲಿ ಹಾರಿಸಿದ ಹೆಮ್ಮೆಯ ಕ್ಷಣಗಳನ್ನು ಮರೆಯಲು ಸಾಧ್ಯವಿಲ್ಲ. ನೇಪಾಳ, ಆಸ್ಟ್ರೇಲಿಯಾ ಸೇರಿ ಹಲವು ತಂಡಗಳ ವಿರುದ್ಧ ಗೆಲುವು ಸಾಧಿಸಿದ್ದೇವೆ. ವಿಶ್ವದ ಮಹಿಳಾ ಅಂಧರ ಕ್ರಿಕೆಟ್ ತಂಡದ ಪಟ್ಟಿಯಲ್ಲಿ ಭಾರತ ಮೊದಲ ಸ್ಥಾನದಲ್ಲಿದೆ. ಭಾಷೆ, ಊಟ, ಏಕಾಂಗಿಯಾಗಿ ಆಡುವ ಸವಾಲುಗಳನ್ನು ಮೆಟ್ಟಿ ಗೆಲುವು ಸಾಧಿಸಿದ್ದು ಖುಷಿ ಕೊಟ್ಟಿದೆ. 'ಬೇಟಿ ಬಚಾವೊ, ಬೇಟಿ ಪಢಾವೊ' ಆಂದೋಲನಕ್ಕೆ ಬ್ರಾಂಡ್ ಅಂಬಾಸಿಡರ್ ಆಗಿ ತಮ್ಮನ್ನು ನೇಮಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ವರ್ಷಾ ಸಂತಸ ಹಂಚಿಕೊಂಡರು. ❖

ಮಕ್ಕಳೊಂದಿಗೆ ಮುಖ್ಯ ಶಿಕ್ಷಕಿ ಎಂ. ಶೀಲಾರಾಣಿ –ಪ್ರಜಾವಾಣಿ ಚಿತ್ರ/ರಂಜು ಪಿ

ಶಾಲಾ ಆಸ್ತಿ ಉಳಿಸಿದ ಛಲಗಾರ್ತಿ

• ಚಂದ್ರಹಾಸ ಹಿರೇಮಳಲಿ

'**ಕಡೂರು** ತಾಲ್ಲೂಕಿನ ಕಾಡಂಚಿನ ಗ್ರಾಮದಲ್ಲಿ ಆಗ ತಾನೆ ಪ್ರೌಢಶಾಲೆ ಆರಂಭವಾಗಿತ್ತು. 1994ರಲ್ಲಿ ಮೊದಲ ಬಾರಿ ಸಹ ಶಿಕ್ಷಕಿಯಾಗಿ ನೇಮಕವಾಗಿದ್ದ ನಾನು ಹೊಸಶಾಲೆಯ ಹೊಸ ಶಿಕ್ಷಕಿಯಾಗಿ ವೃತ್ತಿ ಜೀವನ ಆರಂಭಿಸಿದ್ದೆ. ತರಗತಿಗಳು ಆರಂಭವಾಗಿ ನಾಲ್ಕು ತಿಂಗಳೂ ಆಗಿರಲಿಲ್ಲ. ಪೋಷಕ ದಂಪತಿಯೊಬ್ಬರು ತಮ್ಮ ಮನೆಯ ಮದುವೆ ಸಮಾರಂಭಕ್ಕೆ ಆಹ್ವಾನ ಪತ್ರಿಕೆ ನೀಡಲು ಬಂದಿದ್ದರು. ಲಗ್ನ ಪತ್ರಿಕೆ ತಿರುವಿ ನೋಡಿದಾಕ್ಷಣ.. ಅರೆ ಈಕೆ ನಮ್ಮ ಶಾಲೆಯ ವಿದ್ಯಾರ್ಥಿನಿ. ಅವಳಿನ್ನೂ 8ನೇ ತರಗತಿ. ಇಷ್ಟು ಬೇಗ ಮದುವೆ ಎಂದು ಉದ್ಗರಿಸಿದ್ದೆ. ಗುಟ್ಟಾಗಿ ಮೇಲಧಿಕಾರಿಗಳಿಗೆ ಮಾಹಿತಿ ನೀಡಿ ಬಾಲ್ಯ ವಿವಾಹ ತಡೆದಿದ್ದೆ...'

–ಇದು ಬೆಂಗಳೂರಿನ ಚಿಕ್ಕಪೇಟೆಯ ₹100 ಕೋಟಿ ಬೆಲೆ ಬಾಳುವ ಸರ್ಕಾರಿ ಶಾಲೆಯ ಜಾಗವನ್ನು ಮರಳಿ ಶಾಲೆಗೆ ಕೊಡಿಸಲು ಶ್ರಮಿಸಿ ಯಶಸ್ವಿಯಾದ ಆ ಶಾಲೆಯ ಮುಖ್ಯಶಿಕ್ಷಕಿ ಎಂ. ಶೀಲಾರಾಣಿ ಅವರ ವೃತ್ತಿ ಬದುಕಿನ ಆರಂಭದ ಸಾಹಸಗಾಥೆ.

ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಬೀರೂರಿನ ಆರ್.ಮರುಳಪ್ಪ–ಕಾತ್ಯಾಯಿನಿ ದಂಪತಿಯ ಇಬ್ಬರು ಪುತ್ರಿಯರಲ್ಲಿ ಶೀಲಾರಾಣಿ ಹಿರಿಯ ಮಗಳು. ಡಿಪ್ಲೊಮಾ ಎಂಜಿನಿಯರಿಂಗ್ ಮುಗಿಸಿದ ನಂತರ ದಿಕ್ಕು ಬದಲಿಸಿ ಮತ್ತೆ ಪದವಿ, ಬಿ.ಇಡಿ ಪೂರೈಸಿದರು. ನಂತರ ಎಂ.ಎ, ಎಂ.ಇಡಿ ಪದವಿ ಪಡೆದರು. 1998ರಲ್ಲಿ ಕರ್ನಾಟಕ ಶಿಕ್ಷಣ ಸೇವೆ (ಕೆಇಎಸ್) ಪರೀಕ್ಷೆ ಬರೆದು ಮುಖ್ಯ ಶಿಕ್ಷಕಿಯಾದರು. ಶೀಲಾರಾಣಿ ಅವರ ವೃತ್ತಿ ಬದುಕಿನ ಅತ್ಯಂತ ದಿಟ್ಟ ನಿರ್ಧಾರಗಳಲ್ಲಿ ತಾವು ಕೆಲಸ ಮಾಡಿದ ಶಾಲೆಗಳಲ್ಲಿ ನಕಲು ತಡೆಗೆ ತೆಗೆದುಕೊಂಡ ಕ್ರಮಗಳು ಮುಖ್ಯವಾದವು. ಮುಖ್ಯ ಶಿಕ್ಷಕಿಯಾಗಿ ಅವರು 1998ರಲ್ಲಿ ವರದಿ ಮಾಡಿಕೊಂಡ ಹಿಂದಿನ ವರ್ಷ ಆ ಶಾಲೆಯ ಫಲಿತಾಂಶ ಅತ್ಯುತ್ತಮವಾಗಿತ್ತು. ಆದರೆ, ಫಲಿತಾಂಶಕ್ಕಾಗಿ ಶಾಲೆಗಳು ಅನುಸರಿಸುತ್ತಿದ್ದ ಮಾರ್ಗ ಸರಿ ಇರಲಿಲ್ಲ. ನಕಲು ತಡೆದರೆ ಫಲಿತಾಂಶ ಕುಸಿಯುತ್ತದೆ. ಹಿರಿಯ ಅಧಿಕಾರಿಗಳ ಕ್ರಮಕ್ಕೆ ಒಳಗಾಗಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಒಪ್ಪದ ಅವರು ನಕಲು ಸಂಸ್ಕೃತಿಗೆ ತಿಲಾಂಜಲಿ ನೀಡಿದ್ದರು. ನಿರೀಕ್ಷಿಸಿದಂತೆಯೇ ಮರು ವರ್ಷ ಫಲಿತಾಂಶ ಕುಸಿದಿತ್ತು. ಮೇಲಧಿಕಾರಿಗಳಿಂದ ಕಿರಿಕಿರಿಯನ್ನೂ ಎದುರಿಸಬೇಕಾಯಿತು. ಕೊನೆಗೆ ಹೆಚ್ಚುವರಿ ತರಗತಿಗಳು, ಕಲಿಕೆಯಲ್ಲಿ ಹಿಂದುಳಿದವರಿಗೆ ವಿಶೇಷ ಪಾಠಗಳು ಮತ್ತಿತರ ಕ್ರಮಗಳ ಮೂಲಕ ಶಾಲೆ ಮತ್ತೆ 'ಫಲಿತಾಂಶ'ದ ಹಳಿಗೆ ಬಂದಿತ್ತು.

ಸುಮಾರು ₹100 ಕೋಟಿ ಮೌಲ್ಯದ ನಿವೇಶನ, ಕಟ್ಟಡ ಒಳಗೊಂಡ ಚಿಕ್ಕಪೇಟೆ ಸರ್ಕಾರಿ ಶಾಲೆಯ ಸ್ವತ್ತನ್ನು ಶಾಲೆಗೇ ಮರಳಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದ ನಂತರ ಶೀಲಾರಾಣಿ ಹೆಸರು ಶಿಕ್ಷಣವಲಯದಲ್ಲಿ ಚಿರಪರಿಚಿತವಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕು ಚಿಕ್ಕಪೇಟೆ ಒಟಿಸಿ ರಸ್ತೆಯ 13,735 ಚದರ ಅಡಿ ವಿಸ್ತೀರ್ಣದ ಮೈದಾನದಲ್ಲಿ ಸ್ವಾತಂತ್ರ್ಯಪೂರ್ವದಲ್ಲೇ ಪ್ರಾಥಮಿಕ, ಮಾಧ್ಯಮಿಕ ಶಾಲೆ ಆರಂಭಿಸಲಾಗಿತ್ತು. ಸ್ವಾತಂತ್ರ್ಯಾ ನಂತರ ಅದೇ ಜಾಗದಲ್ಲಿ ಪ್ರೌಢಶಾಲೆಯನ್ನೂ ತೆರೆಯಲಾಗಿತ್ತು. 1979ರ ವೇಳೆಗೆ ಶಿಥಿಲಾವಸ್ಥೆ ತಲುಪಿದ್ದ ಶಾಲಾ ಕೊಠಡಿಗಳನ್ನು ಕೆಡವಿ, ಹೊಸ ಕೊಠಡಿ ನಿರ್ಮಿಸಿಕೊಡಲು ಅವಕಾಶ ಕೋರಿ ರಜತಾ ಎಂಟರ್‌ಪ್ರೈಸಸ್ ಎಂಬ ಖಾಸಗಿ ಸಂಸ್ಥೆಯೊಂದು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಸಂಸ್ಥೆಯ ಮನವಿ ಪುರಸ್ಕರಿಸಿದ ಸರ್ಕಾರ, ನೆಲ ಹಾಗೂ ಮೊದಲ ಮಹಡಿಯಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಲು, ಎರಡನೇ ಮಹಡಿಯಲ್ಲಿ ಶಾಲೆಗಳಿಗೆ ಕೊಠಡಿ ನಿರ್ಮಿಸಿಕೊಡಲು ಒಪ್ಪಂದ ಮಾಡಿಕೊಂಡು ತಿಂಗಳಿಗೆ ₹16,350ರಂತೆ 26 ವರ್ಷಗಳಿಗೆ ಶಾಲಾ ಜಾಗವನ್ನು ಗುತ್ತಿಗೆ ನೀಡಿತ್ತು. ಗುತ್ತಿಗೆ ಅವಧಿ 2005ಕ್ಕೆ ಮುಕ್ತಾಯವಾಗಿತ್ತು.

ನಂತರ ರಜತಾ ಕಾಂಪ್ಲೆಕ್ಸ್ ಬಾಡಿಗೆದಾರರ ಕ್ಷೇಮಾಭಿವೃದ್ಧಿ ಸಂಘಕ್ಕೆ 2011ರಲ್ಲಿ ಪ್ರತಿ ತಿಂಗಳು ₹6.41 ಲಕ್ಷ ಬಾಡಿಗೆಗೆ 10 ವರ್ಷಗಳಿಗೆ ಗುತ್ತಿಗೆ ನೀಡಲಾಗಿತ್ತು. ಈ ಅವಧಿಯೂ 2021 ಜೂನ್‌ಗೆ ಮುಕ್ತಾಯವಾಗಿತ್ತು. ಬಳಿಕ ಸಂಘದ ಕೋರಿಕೆಯನ್ನು ಪರಿಗಣಿಸಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ, ನಾಲ್ಕು ಮಹಡಿಗಳ ಕಟ್ಟಡವನ್ನು ಮಾರಾಟ, ಗುತ್ತಿಗೆ ಅಥವಾ ಹರಾಜು ಹಾಕಲು ಅನುಮತಿ ನೀಡುವಂತೆ ಕೋರಿ ಕಂದಾಯ ಇಲಾಖೆಗೆ ಪತ್ರ ಬರೆದಿದ್ದರು. ಈ ಕುರಿತು 'ಪ್ರಜಾವಾಣಿ' 2022, ಆ.18ರ ಸಂಚಿಕೆಯಲ್ಲಿ 'ಸರ್ಕಾರಿ ಶಾಲೆ ಮಾರಾಟಕ್ಕಿದೆ' ಎಂಬ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ಶಾಲಾ ಆಸ್ತಿ ಕೈತಪ್ಪುತ್ತಿರುವ ವಿಷಯವನ್ನು ಇಲಾಖೆಯ ಗಮನಕ್ಕೆ ತಂದು ಕೆಲಸದ ಮಧ್ಯೆಯೂ ಶಾಲೆಯ ಆಸ್ತಿ ಉಳಿಸಲು ಶೀಲಾರಾಣಿ ನಿರಂತರ ಶ್ರಮಿಸಿದರು. ಶಾಲಾ ಕೆಲಸದ ಬಿಡುವಿನ ಸಮಯದಲ್ಲಿ ಕಚೇರಿಗಳಿಗೆ ಅಲೆದು, ತಾವು ಸಂಗ್ರಹಿಸಿದ ದಾಖಲೆಗಳನ್ನು ನೀಡಿದರು. ಅದು ಶಾಲೆಯ ಜಾಗ ಎಂದು ಸಾಬೀತುಪಡಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್.ಗಿರಿಜಮ್ಮ ಅವರಿಗೆ ಬೆನ್ನೆಲುಬಾಗಿ ನಿಂತರು. ಇದರ ಫಲವಾಗಿ ಕಂದಾಯ ಇಲಾಖೆ ಆಸ್ತಿಯನ್ನು ಶಾಲೆಗೆ ಮರಳಿಸಿ, ಆದೇಶ ಹೊರಡಿಸಿತು. ಬಡವರು, ಕೂಲಿ ಕಾರ್ಮಿಕರು, ದಿನಗೂಲಿಗಳ ಮಕ್ಕಳೇ ಹೆಚ್ಚಾಗಿರುವ ಶಾಲೆಯಲ್ಲಿ ಹಲವರ ಶಿಕ್ಷಣಕ್ಕೆ ಶೀಲಾರಾಣಿ ನೆರವಾಗಿದ್ದಾರೆ. ಶಾಲೆ ತೊರೆದ ಮಕ್ಕಳ ಮನೆಗಳಿಗೆ ತೆರಳಿ ಮರಳಿ ಕರೆತರುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಾ ಬಂದಿದ್ದಾರೆ. ಶಾಲಾ ಮಕ್ಕಳ ಪಾಲಿಗೆ 'ಅಮ್ಮ'ನೇ ಆಗಿದ್ದಾರೆ. ❖

ಎರಡನೇ ದರ್ಜೆ ಪ್ರಜೆಗಳು ನಾವಲ್ಲ...

• ಸಂತೋಷ ಈ. ಚಿನಗುಡಿ

ಬೆಳಗಾವಿ ಜಿಲ್ಲೆಯ ಎಂ.ಕೆ.ಹುಬ್ಬಳ್ಳಿ ಗ್ರಾಮದ ಸಹೋದರಿಯರಾದ ಸುಜಾತಾ ಮರಡಿ ಹಾಗೂ ರೂಪಾ ಮರಡಿ 'ಪುರುಷ ಪ್ರಧಾನ ಸಮಾಜ' ಎಂಬ ಮಾತಿಗೆ ಸಡ್ಡು ಹೊಡೆದು ನಿಂತವರು. ಗಂಡುಮಕ್ಕಳು ಹುಟ್ಟಲಿಲ್ಲ ಎಂದು ಕೊರಗುತ್ತಿದ್ದ ತಂದೆ– ತಾಯಿಗೆ ತಾವೇ ಗಂಡುಮಕ್ಕಳು ಎಂದು ಸಾಧಿಸಿ ತೋರಿಸಿದವರು. ಕೃಷಿ ಮಾಡಿ ಸ್ವಾವಲಂಬಿಯಾದವರು. 'ಹೆಣ್ಣು ಎರಡನೇ ದರ್ಜೆ ನಾಗರಿಕಳಲ್ಲ' ಎಂಬುದಕ್ಕೆ ಜ್ವಲಂತ ನಿದರ್ಶನವಾದವರು.

ಬಸವರಾಜ ಮರಡಿ ಹಾಗೂ ಶಕುಂತಲಾ ದಂಪತಿಗೆ ಆರು ಹೆಣ್ಣುಮಕ್ಕಳಿದ್ದಾರೆ. ಅವರಲ್ಲಿ ನಾಲ್ವರು ಮದುವೆಯಾಗಿ ಪತಿ ಮನೆಯಲ್ಲಿದ್ದಾರೆ. ಆದರೆ, ಸುಜಾತಾ ಮತ್ತು ರೂಪಾ ಮದುವೆ ಬಂಧನದಿಂದ ದೂರ ಉಳಿದು ಗಂಡುಮಕ್ಕಳಂತೆ ಬದುಕಲು ಪ್ರತಿಜ್ಞೆ ಮಾಡಿದ್ದಾರೆ. ಬಾಯಿಮಾತಿಗೆ ಮಾತ್ರವಲ್ಲ; ತಮ್ಮ ಜೀವನ ಪದ್ಧತಿಯನ್ನೂ ಅವರು ಗಂಡುಮಕ್ಕಳಂತೆ ಪರಿವರ್ತನೆ ಮಾಡಿಕೊಂಡಿದ್ದಾರೆ.

ಬಸವರಾಜ ಅವರಿಗೆ ಎಂಟು ಸಹೋದರರು. ಉಳಿದವರಿಗೆಲ್ಲ ಗಂಡುಮಕ್ಕಳಿದ್ದಾರೆ. ತಮಗೆ ಇಲ್ಲ ಎಂಬ ಮರುಕ ಬಸವರಾಜರಿಗೆ ಇತ್ತು. ಅದನ್ನೇ ಸವಾಲಾಗಿ ಸ್ವೀಕರಿಸಿದ ಈ ಗಟ್ಟಿಗಿತ್ತಿಯರು ಗಂಡುಮಕ್ಕಳಿಗಿಂತ ಚೆನ್ನಾಗಿ ಪಾಲಕರನ್ನು ನೋಡಿಕೊಳ್ಳಲು ಸಾಧ್ಯವಿದೆ. ಪುರುಷರು ಮಾಡುವ ಎಲ್ಲ ಕೆಲಸಗಳನ್ನೂ ಮಾಡುವ ಸಾಮರ್ಥ್ಯ ಹೆಣ್ಣುಮಕ್ಕಳಿಗೂ ಇದೆ ಎಂಬುದನ್ನು ತೋರಿಸಿದರು. ಸದ್ಯ ಸುಜಾತಾ ಅವರಿಗೆ 40 ವರ್ಷ, ರೂಪಾ ಅವರಿಗೆ 38 ವರ್ಷ ವಯಸ್ಸು. 30 ವರ್ಷಗಳಿಂದ ಇಬ್ಬರೂ ಗಂಡುಮಕ್ಕಳಂತೆ ಷರ್ಟು, ಪ್ಯಾಂಟು ಧರಿಸುತ್ತಿದ್ದಾರೆ. ತಲೆಗೊಂದು ಹಸಿರು ಟವಲ್ ಸುತ್ತಿಕೊಂಡು ವ್ಯವಸಾಯ ಮಾಡುತ್ತಾರೆ.

ಹೆಗಲ ಮೇಲೆ ನೇಗಿಲು ಹೊತ್ತು ನಿರಾಳವಾಗಿ ಹೆಜ್ಜೆಹಾಕುವ ಇವರ ನಡೆಯಲ್ಲಿ ದೃಢತೆ ಇದೆ. ಎತ್ತು–ಚಕ್ಕಡಿ ಕಟ್ಟಿಕೊಂಡು ಮಾಡುವ ಕೆಲಸದಲ್ಲಿ ಸಬಲತೆಯ ಉನ್ಮಾದವಿದೆ. ಟ್ರ್ಯಾಕ್ಟರ್ ಹತ್ತಿ ಹೊಲ ನೇಗಿಲು ಹೊಡೆಯುವಲ್ಲಿ ಹೆಣ್ಣು ಯಾರಿಗೂ ಕಮ್ಮಿಯಿಲ್ಲ ಎಂಬ ಸಂದೇಶವಿದೆ. ಪ್ರತಿದಿನ ಸೈಕಲ್ ಸವಾರಿ ಮಾಡುವ ಜೀವನಶೈಲಿಯಲ್ಲಿ ಸ್ವಾಭಿಮಾನದ ಹಿರಿಮೆ ಇದೆ.

'ಮಾತಾಡವರು ನೂರೆಂಟು ಮಾತಾಡ್ತಾರ ಯಣ್ಣ. ಯಾರು ನಮ್ಮ ಹೊಟ್ಟಿಗೆ ಹಾಕಾಂಗಿಲ್ಲ ಯಣ್ಣ. ನಾವ್ ಬದಕಬೇಕಂದ್ರ ನಾವೇ ದುಡೀಬೇಕು. ನಾವೇ ದುಡ್ಯಾಕತ್ತೀವಿ ಅಂದಮ್ಯಾಲ ಯಾರ ಮಾತು ಕಟಗೊಂಡ ನಮಗೇನ್ ಆಗಬೇಕು ಯಣ್ಣ. 'ಮಾನವಂತರಗೆ ಕಿವಿಗೊಡಬೇಕು– ಅವಮಾನದ ಮಾತಿಗೆ ಕಿವುಡಾಗಬೇಕು' ಅಂತ ಹಿರ್‍ಯಾರು ಹೇಳಿ ಹೋಗ್ಯಾರ ಯಣ್ಣ. ಆ ಮಾತಿನ ಮ್ಯಾಲ ನಿಂತೇನ್ ನೋಡ್ ಯಣ್ಣ..'

ಕೃಷಿಗಾರ್ತಿ ಸುಜಾತಾ ಮಾತಲ್ಲಿ ಅವರ ಗಟ್ಟಿಗಿತ್ತಿತನ ವ್ಯಕ್ತವಾಗುತ್ತದೆ. ಸಮಾಜದಲ್ಲಿ ಪರಿವರ್ತನೆ ತರಬೇಕು ಎಂದು ಹೊರಟವರಲ್ಲ ಇವರು. ಪರಿವರ್ತನೆ ಸಾಧ್ಯ ಎಂಬುದನ್ನು ಬದುಕಿ ತೋರಿಸಿದವರು. ಮೌಢ್ಯದ ವಿರುದ್ಧ, ಸಮಾಜದ ಅಲಿಖಿತ ನಿಯಮಗಳ ವಿರುದ್ಧ, ಸಾಂಪ್ರದಾಯಿಕ ಕಟ್ಟಳೆಗಳ ವಿರುದ್ಧ ಹೊರಟಾಗ ಟೀಕೆ– ಮೂದಲಿಕೆ ಸಹಜ. ಅವುಗಳನ್ನು ಮೆಟ್ಟಿನಿಲ್ಲುವ ಸಾಮರ್ಥ್ಯ ಇದ್ದವರಿಂದ ಮಾತ್ರ ಸಾಧನೆ ಸಾಧ್ಯ ಎಂಬುದಕ್ಕೆ ಇವರೇ ಉದಾಹರಣೆ.

ಪ್ರತಿ ಮಾತಿನಲ್ಲೂ 'ಯಣ್ಣಯಣ್ಣ' ಎಂದು ಅವರು ಹೇಳುವುದು ಆಪ್ತತೆ ಹುಟ್ಟಿಸುತ್ತದೆ. ಇದೇ ಕಾರಣಕ್ಕೆ ಅವರನ್ನು ಟೀಕೆ ಮಾಡಿದವರೇ ಈಗ ಪುರಸ್ಕಾರ ಮಾಡಿದ್ದಾರೆ. ದುಡಿಮೆ, ವ್ಯವಹಾರ, ನಡವಳಿಕೆ ಎಲ್ಲದರಲ್ಲೂ ಅವರನ್ನೂ ಸಾಮಾನ್ಯರಂತೆ ಕಾಣುತ್ತಾರೆ. ಗಂಡುಬೀರಿ ಎನ್ನುತ್ತಿದ್ದ ಬಾಯಿಗಳು ಈಗ 'ಭಲೇಹೆಣ್ಣು' ಎನ್ನುತ್ತಿವೆ. ಈ ಗೌರವವನ್ನು ಅವರು ಯಾರಿಂದಲೂ ಬೇಡಿ ಪಡೆದಿಲ್ಲ. ಬದುಕಿ ಪಡೆದಿದ್ದಾರೆ. ಹೆಣ್ಣು ಹುಟ್ಟಿದರೆ ಕಳವಳ ಪಡುವವರು, ಹೆಣ್ಣುಭ್ರೂಣ ಹತ್ಯೆ ಮಾಡಿಸುವವರು, ವರದಕ್ಷಿಣೆಗೆ ಪೀಡಿಸುವವರು, ಗಂಡುಮಕ್ಕಳಿಲ್ಲ ಎಂದು ಕೊರಗುವವರಿಗೆ ಈ ಸಹೋದರಿಯರ ಬದುಕೇ ಪಾಠ.

ಇಬ್ಬರೂ 2005ರಿಂದ ಒಕ್ಕಲುತನ ಆರಂಭಿಸಿದರು. ತಂದೆಯ ಪಾಲಿಗೆ ಬಂದಿದ್ದು ಒಂದೂವರೆ ಎಕರೆ ಜಮೀನು ಮಾತ್ರ. ಅಕ್ಕಪಕ್ಕದವರ ಇನ್ನೂ ಐದು ಎಕರೆ ಜಮೀನನ್ನು ಪಾಲುದಾರಿಕೆ ಪಡೆದು ಕೃಷಿ ಮಾಡುತ್ತಿದ್ದಾರೆ. ಈ ವರ್ಷ ಐದು ಎಕರೆಯಲ್ಲಿ ಕಬ್ಬು ನಾಟಿ ಮಾಡಿದ್ದಾರೆ. ಕಳೆದ ಹಂಗಾಮಿಲ್ಲಿ 210 ಟನ್ ಬೆಳೆದಿದ್ದು ₹5 ಲಕ್ಷದಷ್ಟು ಆದಾಯ ಪಡೆದಿದ್ದಾರೆ.

ಮೂರು ಬೋರ್‌ವೆಲ್ ಕೊರೆಸಿದ್ದಾರೆ. ಮೂರರಲ್ಲೂ ನಾಲ್ಕು ಇಂಚಿನಷ್ಟು ನೀರು ಬರುತ್ತಿದೆ. ಜಮೀನು ಪಕ್ಕದಲ್ಲಿ ಎಂಟು ಎಕರೆಯಷ್ಟು ಕೆರೆ ಇದೆ. ಬೇಸಿಗೆಯಲ್ಲಿ ಕೆರೆ ಒಣಗುತ್ತದೆ. ಬೋರ್‌ವೆಲ್ ನೀರನ್ನು ಪಕ್ಕದ ಕೆರೆಗೆ ಹರಿಸುವುದು ಸುಜಾತಾ– ರೂಪಾ ಅವರಿಗೆ ರೂಢಿ. ಪ್ರಾಣಿ– ಪಕ್ಷಿಗಳಿಗೂ ನೀರುಣಿಸಬೇಕು ಎಂಬ ಕಕ್ಕುಲಾತಿಯೇ ಇದಕ್ಕೆ ಕಾರಣ. ಹೆತ್ತವರನ್ನು ಮಾತ್ರಲ್ಲ; ಪ್ರಾಣಿ– ಪಕ್ಷಿಗಳನ್ನೂ ಕೂಸುಗಳಂತೆ ಜತನ ಮಾಡುತ್ತಿದ್ದಾರೆ.

ಮನೆ ಬಳಕೆಗೆ ಜೋಳ, ಕಡಲೆ, ತರಕಾರಿಗಳನ್ನೂ ಬೆಳೆಯುತ್ತಾರೆ. ಎರಡು ಎಮ್ಮೆ, ಒಂದು ಆಡು ಸಾಕಿದ್ದಾರೆ. ಪ್ರತಿದಿನ 10 ಲೀಟರ್ ಹಾಲು ಕರೆಯುತ್ತಾರೆ. ಸೈಕಲ್ ಏರಿ ಮನೆಮನೆಗೆ ಹಾಲು ಹಾಕಿ ಬರುವುದು ರೂಪಾ ಅವರ ಕೆಲಸ. ನಸುಕಿನ 5ಕ್ಕೇ ಎದ್ದು ದನಕರುಗಳ ಮೈ ಸವರಿ, ಹೊಲದಲ್ಲಿನ ಅಡಸಾಳ ಗಿಡದ ಎಲೆ ಕಿತ್ತುಕೊಂಡು ಬೆಳಗಾವಿಯ ಹೂವಿನ ಮಾರುಕಟ್ಟೆಗೆ ಹೋಗುವುದು ಸುಜಾತಾ ಅವರ ರೂಢಿ. ಅಡಸಾಳ ಎಲೆಗಳನ್ನು ಹೂಮಾಲೆಗಳ ಮಧ್ಯದಲ್ಲಿ ಸೇರಿಸುತ್ತಾರೆ. ಎಲೆಗಳ ಮಾರಾಟದಿಂದಲೇ ಪ್ರತಿದಿನ ಕನಿಷ್ಠ ₹2,500 ಗಳಿಸುತ್ತಾರೆ ಸುಜಾತಾ. ತಮ್ಮ ಹೊಲದಲ್ಲಿ ಬೆಳೆಯುವ ಒಂದು ಎಲೆಯ ತುಂಡನ್ನೂ ಅವರು ವ್ಯರ್ಥವಾಗಲು ಬಿಟ್ಟಿಲ್ಲ ಎಂಬುದು ಮಾದರಿ ಹೆಜ್ಜೆ. ಉತ್ತುವುದು, ಬಿತ್ತುವುದು, ಕಳೆ ತೆಗೆಯುದು, ಗೊಬ್ಬರ ಹಾಕುವುದು, ರೆಂಟೆ– ಕುಂಟೆ– ಗಳೆ ಹೊಡೆಯವುದು, ಬೆಳೆ ಕಾವಲು ಮಾಡುವುದು, ಕೊಯ್ಲು– ರಾಶಿ, ಮಾರುಕಟ್ಟೆಗೆ ಸಾಗಿಸುವುದು... ಎಲ್ಲವನ್ನೂ ಇವರೇ ನಿಭಾಯಿಸುತ್ತಾರೆ.

ತಂದೆ ಬಸವರಾಜ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರಾಗಿದ್ದರು. ಅತ್ಯಂತ ಕಡಿಮೆ ಕೂಲಿ. ಹೀಗಾಗಿ, ಮನೆ ಜವಾಬ್ದಾರಿ ಸಹೋದರಿಯರು ಹೆಗಲೇರಿಸಿಕೊಂಡರು. ತಮ್ಮ ನಾಲ್ವರು ಹಿರಿಯ ಅಕ್ಕಂದಿರನ್ನು ತವರಿಗೆ ಕರೆತರುವುದು, ಹಬ್ಬ– ಹರಿದಿನಗಳ ಉಡುಗೊರೆ ನೀಡುವುದು, ಬಾಣಂತನ ಹೀಗೆ ಎಲ್ಲವನ್ನೂ ಗಂಡುಮಕ್ಕಳಿಗಿಂತ ಹೆಚ್ಚಾಗಿ ನಿಭಾಯಿಸಿದ್ದಾರೆ.

ತಮ್ಮ ಹೊಲದಲ್ಲಿ ₹21 ಲಕ್ಷ ವೆಚ್ಚ ಮಾಡಿ ತಂದೆ–ತಾಯಿಗೆ ಆರ್‌ಸಿಸಿ ಮನೆ ಕಟ್ಟಿಸಿದ್ದಾರೆ. ಹತ್ತಿರದಲ್ಲಿ ₹1.80 ಲಕ್ಷ ಹಾಕಿ ಚಿಕ್ಕ ಕರೆಮ್ಮತಾಯಿ ಗುಡಿ ಕಟ್ಟಿಸಿದ್ದಾರೆ. ನೀರಿಗೆ, ನೆರಳಿಗೆ ತಿಂಡಿಗೆ, ಊಟಕ್ಕೆ, ಹರಕೆಗೆ ಅವರು ಎಲ್ಲೂ ಅಲೆಯಬೇಕಿಲ್ಲ. ತಮ್ಮಲ್ಲೇ ಎಲ್ಲ ಮಾಡಿಕೊಂಡಿದ್ದಾರೆ.

ಸುಜಾತಾ 10 ವರ್ಷದವರಿದ್ದಾಗ ಸೈಕಲ್ ಮೇಲಿನಿಂದ ಬಿದ್ದು ಎಡಗಣ್ಣು ಕಳೆದುಕೊಂಡಿದ್ದಾರೆ. ಕಿತ್ತು ಹೊರಗೆ ಬಿದ್ದ ಕಣ್ಣನ್ನು ಮತ್ತೆ ಜೋಡಿಸಿದ್ದರೂ ದೃಷ್ಟಿ ಬಂದಿಲ್ಲ. ಆದರೆ, ಅವರು ಅಳುತ್ತ ಕೂರಲಿಲ್ಲ. ಒಂಟಿಗಣ್ಣಿನಿಂದ ಬದುಕು ಕಟ್ಟಿಕೊಂಡರು. ಸುಜಾತಾ 5ನೇ ತರಗತಿ, ರೂಪಾ 4ನೇ ತರಗತಿವರೆಗೆ ಮಾತ್ರ ಓದಿದ್ದಾರೆ. ಆದರೆ, ಲೆಕ್ಕಪತ್ರದಲ್ಲಿ ರೂಪಾ ಅವರದ್ದು ಎತ್ತಿದ ಕೈ. ಶಿಕ್ಷಣ ಇಲ್ಲದಿದ್ದರೂ ವ್ಯವಹಾರಜ್ಞಾನ ಅವರನ್ನು ದೃಢವಾಗಿ ನಿಲ್ಲುವಂತೆ ಮಾಡಿದೆ.

ಮನೆಯಲ್ಲಿ ಆರು ಹೆಣ್ಣುಮಕ್ಕಳು ಇದ್ದ ಕಾರಣ ಸುಜಾತಾ ಹಾಗೂ ರೂಪಾ ಅವರಿಗೆ ಬಾಲ್ಯದಲ್ಲೇ ಮದುವೆ ಮಾಡಲಾಗಿತ್ತು. ಆದರೆ, ಬೆಳೆದುನಿಂತ ಮೇಲೆ ಅವರು ಕೌಟುಂಬಿಕ ಬಂಧನಕ್ಕೆ ಒಳಗಾಗಲಿಲ್ಲ. ತಮ್ಮ ಹೆತ್ತವರನ್ನು ಜೋಪಾನ ಮಾಡುವ ಪಣತೊಟ್ಟರು. ಅದೇ ದಾರಿಯಲ್ಲಿ ಹೆಜ್ಜೆ ಹಾಕಿದರು. ❖

ಕ್ಯಾನ್ಸರ್ ತಜ್ಞೆಯ ಅನನ್ಯ ಸಾಧನೆ

• ಸುಬ್ರಹ್ಮಣ್ಯ ವಿ.ಎಸ್.

ಕಲಬುರಗಿ ನಗರದ ಕೊಳೆಗೇರಿಯೊಂದರಲ್ಲಿ ಸಮಾಜದ ಕಟ್ಟಕಡೆಯ ಸಾಲಿನಲ್ಲಿದ್ದ ಸಮುದಾಯವೊಂದರ ಕಡು ಬಡ ಕುಟುಂಬದಲ್ಲಿ 1955ರಲ್ಲಿ ಜನಿಸಿದ್ದ ವಿಜಯಲಕ್ಷ್ಮಿ ದೇಶಮಾನೆ, ಕಷ್ಟಗಳನ್ನೇ ಯಶಸ್ಸಿನ ಮೆಟ್ಟಿಲುಗಳನ್ನಾಗಿ ಪರಿವರ್ತಿಸಿಕೊಂಡವರು. ಅವಿರತ ಪರಿಶ್ರಮ ಮತ್ತು ನಿಸ್ವಾರ್ಥ ಸೇವಾ ಮನೋಭಾವದ ಕಾರಣದಿಂದಾಗಿಯೇ ಭಾರತದ ಕ್ಯಾನ್ಸರ್ ಚಿಕಿತ್ಸಾ ಕ್ಷೇತ್ರದಲ್ಲಿ ನಕ್ಷತ್ರದಂತೆ ಬೆಳಗಿದವರು. ವಿಜಯಲಕ್ಷ್ಮಿ ಅವರ ಪೂರ್ವಿಕರು, ಬಳಸಿದ ಚಪ್ಪಲಿಗಳನ್ನು ಹೊಲಿಯುವ ವೃತ್ತಿಯಲ್ಲಿ ತೊಡಗಿದ್ದವರು. ಅವರ ತಂದೆ ಬಾಬುರಾವ್ ಆ ವೃತ್ತಿಯನ್ನು ತೊರೆದು ಕಟ್ಟಿಗೆ ಕಡಿಯುವುದು, ಕೂಲಿ ಮಾಡುವುದನ್ನು ಆಯ್ದುಕೊಂಡರು. ನಂತರ ಮಿಲ್ ಒಂದರಲ್ಲಿ ಕಾರ್ಮಿಕನಾಗಿ ಸೇರಿದರು. ತಾಯಿ ರತ್ನಮ್ಮ ತರಕಾರಿ ಮಾರಾಟದಿಂದ ಕುಟುಂಬಕ್ಕೆ ನೆರವಾಗಿದ್ದರು. ವಿಜಯಲಕ್ಷ್ಮಿ ಮತ್ತು ಅವರ ಸಹೋದರ ಕೂಡ ಬಿಡುವಿನ ಅವಧಿಯಲ್ಲಿ ತರಕಾರಿ ಮಾರಾಟದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಬಾಬುರಾವ್– ರತ್ನಮ್ಮ ದಂಪತಿಗೆ ವಿಜಯಲಕ್ಷ್ಮಿ ಸೇರಿದಂತೆ ಏಳು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ದಿನದ ದುಡಿಮೆಯನ್ನೇ ನೆಚ್ಚಿಕೊಂಡು ಬದುಕುತ್ತಿದ್ದ ಕುಟುಂಬದಲ್ಲಿ ವಿಜಯಲಕ್ಷ್ಮಿ ಅವರು ವೈದ್ಯೆಯಾಗಿ ಬಡವರಿಗೆ ಒಳ್ಳೆಯ ಸೇವೆ ಒದಗಿಸಬೇಕು ಎಂಬುದು ಅವರ ತಂದೆಯ ಕನಸಾಗಿತ್ತು. ಸ್ವಾತಂತ್ರ್ಯ ಹೋರಾಟದಿಂದ ಪ್ರಭಾವಿತರಾಗಿದ್ದ ಬಾಬುರಾವ್, ವೈದ್ಯಕೀಯ ಕ್ಷೇತ್ರದ ಮೂಲಕ ಮಗಳು ಸಾಮಾನ್ಯ ಜನರ ಸಬಲೀಕರಣಕ್ಕೆ ನೆರವಾಗಬೇಕು ಎಂದು ಬಯಸಿದ್ದರು. ದ್ವಿತೀಯ ಪಿಯುಸಿವರೆಗೂ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣ-ರಾಗಿದ್ದ ವಿಜಯಲಕ್ಷ್ಮಿ ಅವರು, ಕುಟುಂಬದ ಆರ್ಥಿಕ ಸ್ಥಿತಿಯ ಕಾರಣದಿಂದ ಶಿಕ್ಷಣ ಮುಂದುವರಿಸುವುದು ಅಸಾಧ್ಯ ಎಂಬ ಸ್ಥಿತಿಗೆ ತಲುಪಿದ್ದರು.

1980ರಲ್ಲಿ ಕಲಬುರಗಿ ಭಾಗದಲ್ಲಿ ಭೀಕರ ಬರಗಾಲ ಇತ್ತು. ಮಗಳ ಎಂಬಿಬಿಎಸ್ ಪದವಿ ಪ್ರವೇಶ ಪರೀಕ್ಷೆಯ ಶುಲ್ಕ ಪಾವತಿಗೆ ಹಣ ಹೊಂದಿಸುವುದಕ್ಕೂ ಬಾಬುರಾವ್ ಅವರಿಗೆ ಸಾಧ್ಯವಾಗಲಿಲ್ಲ. ಮಗಳು ವೈದ್ಯೆ ಆಗಲೇಬೇಕು ಎಂಬ ಪತಿಯ ತುಡಿತಕ್ಕೆ ಮನಸೋತ ಪತ್ನಿ ರತ್ನಮ್ಮ ಮಾಂಗಲ್ಯದ ಸರವನ್ನೇ ಬಿಚ್ಚಿ ಕೊಟ್ಟರು. ಅದನ್ನು ಅಡಮಾನ ಇರಿಸಿ ಪಡೆದ ಸಾಲದಲ್ಲೇ ವಿಜಯಲಕ್ಷ್ಮಿ ಅವರ ಎಂಬಿಬಿಎಸ್ ಪ್ರವೇಶ ಪರೀಕ್ಷೆಯ ಶುಲ್ಕ ಪಾವತಿಗೆ ವ್ಯವಸ್ಥೆಯಾಯಿತು. ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ದೊರಕಿತು. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದು ಬಂದಿದ್ದ ವಿಜಯಲಕ್ಷ್ಮಿ ಅವರಿಗೆ ವೈದ್ಯಕೀಯ ಶಿಕ್ಷಣದ ಮೊದಲ ವರ್ಷ ತುಸು ಕಷ್ಟವಾಯಿತು. ಮೊದಲ ವರ್ಷ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದರು. ಎರಡನೇ ವರ್ಷ ಸುಧಾರಿಸಿಕೊಂಡು ಮೇಲೆದ್ದ ಅವರು, ತಮ್ಮ ವಿಶ್ವವಿದ್ಯಾಲಯದಲ್ಲಿ ಎಂಬಿಬಿಎಸ್ ಪದವಿ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್‌ನೊಂದಿಗೆ ವೈದ್ಯೆಯಾಗಿ ಹೊರಬಂದರು. ಬಳಿಕ ಎಂ.ಎಸ್. ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಬಳ್ಳಾರಿಯ ವೈದ್ಯಕೀಯ ಕಾಲೇಜು ಸೇರಿದರು. ಜನರಲ್ ಸರ್ಜರಿ ವಿಭಾಗದಲ್ಲಿ ಎಂ.ಎಸ್. ಪದವಿಯನ್ನೂ ಪಡೆದರು.

ಎಂ.ಎಸ್. ಪದವಿ ಬಳಿಕ ಕ್ಯಾನ್ಸರ್ ತಜ್ಞೆಯಾಗುವ ನಿರ್ಧಾರಕ್ಕೆ ಬಂದ ವಿಜಯಲಕ್ಷ್ಮಿ, ರಾಜ್ಯ ಸರ್ಕಾರದ ಅಧೀನದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸೇರಿದ್ದರು. ಆ ಕಾಲಘಟ್ಟದಲ್ಲಿ ಶಸ್ತ್ರಚಿಕಿತ್ಸಾ ಕೊಠಡಿಯೊಳಕ್ಕೆ ವೈದ್ಯೆಯರು ಇರುವುದೇ ವಿರಳ ಎಂಬ ಸ್ಥಿತಿ ಇತ್ತು. ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗಗಳಲ್ಲಿ ಬಹುತೇಕ ಪುರುಷ ವೈದ್ಯರ ಪಾರಮ್ಯವೇ ಇತ್ತು. ಆ ಪರಿಸ್ಥಿತಿಯನ್ನೇ ಸವಾಲಾಗಿ ಸ್ವೀಕರಿಸಿ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ಕ್ಷೇತ್ರವನ್ನು ಪ್ರವೇಶಿಸಿದ ಡಾ.ವಿಜಯಲಕ್ಷ್ಮಿ ದೇಶಮಾನೆ, ದೇಶದ ಮುಂಚೂಣಿ ಕ್ಯಾನ್ಸರ್ ತಜ್ಞೆಯರಲ್ಲಿ ಒಬ್ಬರಾಗಿ ಹೊರಹೊಮ್ಮಿದರು. ಸ್ತನ ಕ್ಯಾನ್ಸರ್ ಚಿಕಿತ್ಸೆಯಲ್ಲಿ ದೇಶ ಕಂಡ ಅತ್ಯುತ್ತಮ ವೈದ್ಯರಲ್ಲಿ ಒಬ್ಬರಾದರು. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಉಪನ್ಯಾಸಕಿಯಾಗಿ, ಪ್ರಾಧ್ಯಾಪಕಿಯಾಗಿ, ಸಂಸ್ಥೆಯ ಪ್ರಭಾರ ನಿರ್ದೇಶಕಿಯಾಗುವವರೆಗೆ ಬೆಳೆದ ಅವರು, 2015ರಲ್ಲಿ ನಿವೃತ್ತಿ ಹೊಂದಿದರು.

ಡಾ. ವಿಜಯಲಕ್ಷ್ಮಿ ದೇಶಮಾನೆ ಅವರು ಆರ್ಥಿಕ ಮತ್ತು ಸಾಮಾಜಿಕ ಸವಾಲುಗಳ ಜತೆಯಲ್ಲೇ ಕ್ಯಾನ್ಸರ್ ತಜ್ಞೆಯಾಗಿ ಬೆಳೆದವರು. ಈ ಕಾರಣದಿಂದಾಗಿಯೇ ಅವರು ಕಿದ್ವಾಯಿ ಆಸ್ಪತ್ರೆಯಲ್ಲಿ ಸಮಯದ ಪರಿವೆ ಇಲ್ಲದೆ ಕೆಲಸ ಮಾಡುವುದನ್ನು ರೂಢಿಸಿಕೊಂಡಿದ್ದರು. ರೋಗಿಗಳ ಸೇವೆಯಲ್ಲಿ ಅವರ ತಲ್ಲೀನತೆ ಎಷ್ಟು ಗಾಢವಾಗಿ ಇತ್ತು ಎಂಬುದಕ್ಕೆ ವಿಜಯಲಕ್ಷ್ಮಿ ಅವರು ಕೈಗಡಿಯಾರ ಕಟ್ಟದೇ, ಜನರ ಚಲನವಲನಗಳ ಆಧಾರದಲ್ಲೇ ಸಮಯವನ್ನು ಗುರುತಿಸುವ ಸಾಮರ್ಥ್ಯ ಪಡೆದಿದ್ದರು.

ಡಾ. ವಿಜಯಲಕ್ಷ್ಮಿ ಅವರು ವಿಶೇಷವಾಗಿ ಸ್ತನ ಕ್ಯಾನ್ಸರ್ ಚಿಕಿತ್ಸೆ, ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕುರಿತಂತೆ ವ್ಯಾಪಕವಾಗಿ ಕೆಲಸ ಮಾಡಿದರು. ಕ್ಯಾನ್ಸರ್ ರೋಗ ಮತ್ತು ಅದರ ಚಿಕಿತ್ಸೆಗೆ ಸಂಬಂಧಿಸಿದಂತೆ ಆಳವಾದ ಜ್ಞಾನ ಹೊಂದಿರುವ ಅವರು, ಅನೇಕ ಕೃತಿಗಳನ್ನು ರಚಿಸುವ ಮೂಲಕ ಕನ್ನಡದಲ್ಲಿ ಕ್ಯಾನ್ಸರ್ ಕುರಿತು ಜ್ಞಾನ ಪ್ರಸಾರಕ್ಕೂ ಕೊಡುಗೆ ನೀಡಿದ್ದಾರೆ. ಬಹುತೇಕರ ಪಾಲಿಗೆ ನಿವೃತ್ತಿ ಜೀವನ ಎಂಬುದು ಆರಾಮದಿಂದ ಕಾಲ ಕಳೆಯುವುದಕ್ಕೆ ಸೀಮಿತ. ಆದರೆ, ಡಾ. ವಿಜಯಲಕ್ಷ್ಮಿ ದೇಶಮಾನೆ ಅವರು ನಿವೃತ್ತಿ ಜೀವನದ ಬಹುಭಾಗವನ್ನು ಸೇವೆಗಾಗಿಯೇ ಮೀಸಲಿರಿಸಿಕೊಂಡಿದ್ದಾರೆ. ತಿಂಗಳಲ್ಲಿ 15 ದಿನ ಕ್ಯಾನ್ಸರ್ ತಪಾಸಣೆ, ಜಾಗೃತಿ ಕಾರ್ಯಕ್ರಮಗಳಲ್ಲಿ ಬಿಡುವಿಲ್ಲದೆ ತೊಡಗಿಸಿ-ಕೊಳ್ಳುತ್ತಿದ್ದಾರೆ. ರಾಜ್ಯದ ಉದ್ದಗಲಕ್ಕೆ ಸುತ್ತುತ್ತಾ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಕೆಲಸದಲ್ಲಿ ತಲ್ಲೀನರಾಗಿದ್ದಾರೆ. ❖

ಹಮ್ಮು–ಬಿಮ್ಮು ಇಲ್ಲದ ವ್ಯಕ್ತಿತ್ವ

ಡಾ.ವಿಜಯಲಕ್ಷ್ಮಿ ದೇಶಮಾನೆ ಭಾರತೀಯ ಕ್ಯಾನ್ಸರ್ ಚಿಕಿತ್ಸಾ ಕ್ಷೇತ್ರದಲ್ಲಿ ಬಹುದೊಡ್ಡ ಸಾಧನೆ ಮಾಡಿ, ಹತ್ತು ಹಲವು ಕೃತಿಗಳನ್ನು ರಚಿಸಿ, ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾದವರು. ಆದರೆ, ಅವರದ್ದು ಕಿಂಚಿತ್ತೂ ಹಮ್ಮು-ಬಿಮ್ಮುಗಳಿಲ್ಲದ ವ್ಯಕ್ತಿತ್ವ. ಅತ್ಯಂತ ಸರಳ ಜೀವನ ಶೈಲಿಯನ್ನು ರೂಢಿಸಿಕೊಂಡಿರುವವರು.

PRESENTED BY mahindra Rise

IN ASSOCIATION WITH Gold Winner | REACH ROOT Premium HAIR OIL | MCBL

TV PARTNER VICCO TRUSTED AYURVEDA SINCE 1952 | ವಿಸ್ತಾರ NEWS

mahindra Rise presents ಪ್ರಜಾವಾಣಿ

ಸಾಧಕಿಯರು

ಗೌರಿ ಅವರಿಂದ ಪಕ್ಷಿಗಳ ಗರಿ ಸಂಗ್ರಹ

ಪಕ್ಷಿಗಳ ‘ಜೀವಗರಿ’ ಗೌರಿ...

● ಆದಿತ್ಯ ಕೆ.ಎ.

ಬೆಂಗಳೂರಿನಲ್ಲಿ ಕೇಬಲ್‌ಗೆ ಸಿಲುಕಿದ್ದ ಪಕ್ಷಿಯೊಂದು ‘ಗರಿ’ ಕಳೆದುಕೊಂಡು ಉದ್ಯಾನದಲ್ಲಿ ಬಿದ್ದು ನರಳುತ್ತಿತ್ತು. ಮೇಲಕ್ಕೆ ಹಾರಲು ಅಸಾಧ್ಯವಾಗಿತ್ತು. ಆ ಪಕ್ಷಿಯನ್ನು ಮನೆಗೆ ತಂದು ಆರೈಕೆ ಮಾಡಿದರೂ ಚೇತರಿಕೆ ಕಾಣಲಿಲ್ಲ. ನೀರನ್ನೂ ಗುಟುಕಿಸಲಿಲ್ಲ; ನಿತ್ರಾಣಗೊಂಡ ಪಕ್ಷಿಯನ್ನು ಕಂಡ ಅವರು ಮನಸ್ಸಿನಲ್ಲೇ ಮರುಕಪಟ್ಟರು.

ಸ್ನೇಹಿತರೊಬ್ಬರ ನೆರವು ಪಡೆದು, ಕೆಂಗೇರಿಯ ಪೀಪಲ್ಸ್ ಫಾರ್ ಅನಿಮಲ್‌ಗೆ (ಪಿಎಫ್‌ಎ–ವನ್ಯಜೀವಿಗಳ ಆಸ್ಪತ್ರೆ) ಕರೆ ಮಾಡಿ, ಪಕ್ಷಿಯ ಸ್ಥಿತಿಗತಿ ವಿವರಿಸಿದರು. ಸ್ಥಳಕ್ಕೆ ಬಂದ ಪಿಎಫ್‌ಎ ಸಿಬ್ಬಂದಿ ಪಕ್ಷಿಯನ್ನು ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ನೀಡಿದರು. ಎರಡು ದಿನಗಳ ಬಳಿಕ ಆ ಪಕ್ಷಿ ಮೊದಲಿನಂತೆಯೇ ‘ಗರಿಬಿಚ್ಚಿ’ ಹಾರಾಟ ನಡೆಸಿತ್ತು.

ಪಕ್ಷಿಗಳ ಗರಿಗಳು

ಮತ್ತೊಂದು ಘಟನೆ; ಧೋ... ಎಂದು ಬಿರುಗಾಳಿಯೊಂದಿಗೆ ಮಳೆ ಸುರಿಯುತ್ತಿತ್ತು. ಬಿರುಗಾಳಿಗೆ ಬೆದರಿದ ಪಕ್ಷಿಗಳು ಅತ್ತಿತ್ತ ಹಾರಾಡುತ್ತಿದ್ದವು. ಬಿರುಗಾಳಿಯ ಹೊಡೆತದಿಂದ ಕೆಲವು ಪಕ್ಷಿಗಳ ರೆಕ್ಕೆಗೆ ಪೆಟ್ಟು ಬಿದ್ದಿತ್ತು. ಕೆಲವು ಹಕ್ಕಿಗಳು ಗರಿ ಕಳೆದುಕೊಂಡು ಹಾರಲಾಗದ ಸ್ಥಿತಿಗೆ ತಲುಪಿದ್ದವು. ಅವುಗಳ ಸಂಕಷ್ಟ ನೋಡಲು ಆಗುತ್ತಿರಲಿಲ್ಲ. ಆ ಪಕ್ಷಿಗಳ ಆರೈಕೆ ಮಾಡಿ ಬದುಕಿಸಿದ್ದರು.

ಸಾಫ್ಟ್‌ವೇರ್ ಎಂಜಿನಿಯರ್ ಗೌರಿ ಶಿವಯೋಗಿ, ಹೀಗೆ ಸಂಕಷ್ಟದಲ್ಲಿ ಸಿಲುಕಿದ್ದ ನೂರಾರು ಪಕ್ಷಿಗಳಿಗೆ ಎರಡು ದಶಕಗಳಿಂದ ಆರೈಕೆ ಮಾಡಿದ್ದಾರೆ. ಕೆಲವು ಪಕ್ಷಿಗಳಿಗೆ ಮರುಜೀವ ನೀಡಿದ್ದಾರೆ. ವೈದ್ಯ ತಂಡದ ಜೊತೆಗೂಡಿ ಮಾನವೀಯ ಕೆಲಸ ಮಾಡುತ್ತಿದ್ದಾರೆ. ಇವರ ಸಾಮಾಜಿಕ ಕಾರ್ಯದಿಂದ ಪ್ರೇರಣೆ ಪಡೆದು ಬೆಂಗಳೂರಿನ ಹಲವು ಬಡಾವಣೆ ಮಕ್ಕಳು, ಹಿರಿಯರೂ ಪಕ್ಷಿಗಳ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ.

ಶಿವಪ್ಪ–ಶಶಿಕಲಾ ಅವರ ಪುತ್ರಿ ಗೌರಿ ಅವರಿಗೆ ಬಾಲ್ಯದಿಂದಲೂ ಪಕ್ಷಿಗಳ ಮೇಲೆ ಪ್ರೀತಿ, ಕಾಳಜಿ. ಗೌರಿ ಅವರ ಪತಿ, ಸಾಫ್ಟ್‌ವೇರ್ ಎಂಜಿನಿಯರ್ ಶಿವಯೋಗಿ ಸಹ ಈ ಮಾನವೀಯ ಕೆಲಸಕ್ಕೆ ಬೆಂಬಲ ನೀಡುತ್ತಿದ್ದಾರೆ. ಗೌರಿ ಅವರ ತಂದೆ ಉತ್ತರಕನ್ನಡ ಜಿಲ್ಲೆಯ ಕಾರವಾರ, ಯಲ್ಲಾಪುರ, ದಾಂಡೇಲಿ ಭಾಗದಲ್ಲಿ ಎಂಜಿನಿಯರ್ ಆಗಿ ಕೆಲಸ ಮಾಡಿದ್ದರು. ಕಾಡಿನ ಪರಿಸರದಲ್ಲಿದ್ದ ಗೌರಿಯವರಿಗೆ ಪಕ್ಷಿಗಳ ಮೇಲೆ ಆಗಲೇ ಪ್ರೀತಿ ಬೆಳೆಯಿತು. ಪ್ರೀತಿ ಕಾಳಜಿಯತ್ತ ತಿರುಗಿತು. ವಿದ್ಯಾಭ್ಯಾಸ ಮುಗಿಸಿ, ಬೆಂಗಳೂರಿಗೆ ಬಂದು ಸಾಫ್ಟ್‌ವೇರ್ ವೃತ್ತಿಗೆ ಸೇರಿದ ಮೇಲೆಯೂ ‘ಪಕ್ಷಿ ಕಾಳಜಿ’ ಮುಂದುವರಿಯಿತು.

ಬೆಂಗಳೂರಿನಲ್ಲಿ ವಿವಿಧ ಕಾರಣಗಳಿಂದ ಪಕ್ಷಿಗಳು ಅಫಡಕ್ಕೆ ಸಿಲುಕಿ ಸಂಕಟ ಅನುಭವಿಸುತ್ತಿದ್ದುದನ್ನು ಕಂಡು, ತಾವೂ ನೋವನ್ನು ಅನುಭವಿಸಿದ್ದಾರೆ. ಬೆಂಗಳೂರಲ್ಲಿ ಎಲ್ಲೇ ಪಕ್ಷಿಗಳು ಸಮಸ್ಯೆಗೆ ಸಿಲುಕಿದ್ದು ತಿಳಿದರೆ, ಸ್ಥಳಕ್ಕೆ ತೆರಳಿ ಅವುಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಕೇಬಲ್, ಬಹುಮಹಡಿ ಕಟ್ಟಡಗಳು, ನೆಟ್‌ವರ್ಕ್ ಟವರ್‌ಗಳಿಗೆ ಸಿಲುಕಿ ಗಾಯಗೊಳ್ಳುತ್ತಿರುವ ಪಕ್ಷಿಗಳ ಸಂಖ್ಯೆ ನಗರ ಪ್ರದೇಶದಲ್ಲಿ ಹೆಚ್ಚುತ್ತಿವೆ. ಈ ರೀತಿಯ ದುರಂತಗಳಲ್ಲಿ ಪಕ್ಷಿಗಳು ಗರಿ ಕಳೆದುಕೊಳ್ಳುತ್ತವೆ. ರೆಕ್ಕೆಗೆ ಪೆಟ್ಟು ಬಿದ್ದು ಗಾಯಗೊಂಡರೆ ಹಾರಾಟ ನಡೆಸುವುದು ಕಷ್ಟ. ಅಂತಹ ಪಕ್ಷಿಗಳನ್ನು ಪತ್ತೆಹಚ್ಚಿ ಪಿಎಫ್‌ಎಗೆ ಕಳುಹಿಸುತ್ತಾರೆ ಗೌರಿ. ಜತೆಗೆ, ರಸ್ತೆಬದಿ, ಉದ್ಯಾನಗಳಲ್ಲಿ ಬಿದ್ದಿರುವ ಗರಿಗಳನ್ನು ಸಂಗ್ರಹಿಸಿ ಆಸ್ಪತ್ರೆಗೆ ನೀಡುತ್ತಿದ್ದಾರೆ. ಅಲ್ಲಿ ಹಕ್ಕಿಗಳಿಗೆ ಗರಿಕಸಿ ಮಾಡಿ ಪಕ್ಷಿಗಳನ್ನು ಮೊದಲಿನಂತೆಯೇ ಹಾರಾಟಕ್ಕೆ ಅಣಿಗೊಳಿಸಲಾಗುತ್ತದೆ.

ಉದ್ಯಾನದಲ್ಲಿ ‘ಗರಿಬ್ಯಾಂಕ್’ ಸ್ಥಾಪನೆ

ಗೌರಿ ಅವರಷ್ಟೇ ಗರಿ ಸಂಗ್ರಹಿಸಿ ಪಿಎಫ್‌ಎಗೆ ಹಸ್ತಾಂತರಿಸುತ್ತಿಲ್ಲ. ಅಕ್ಕಪಕ್ಕದವರಲ್ಲೂ ಜಾಗೃತಿ ಮೂಡಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. ವಿಜಯನಗರ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳ ಉದ್ಯಾನಗಳಲ್ಲಿ ಗರಿಬ್ಯಾಂಕ್ ಸ್ಥಾಪಿಸಿದ್ದಾರೆ. ವಾಯುವಿಹಾರಿಗಳು, ಪಾದಚಾರಿಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಹೆಕ್ಕಿ ತಂದು ಗರಿಗಳನ್ನು ಬಾಕ್ಸ್‌ಗೆ ಹಾಕುತ್ತಿದ್ದಾರೆ.

‘ಪಕ್ಷಿಗಳ ಪ್ರಾಥಮಿಕ ಚಿಕಿತ್ಸೆಗೆ ಬೇಕಾಗುವ ಸಣ್ಣ ಕಿಟ್ ನನ್ನ ಬಳಿಯಿದೆ. ಕುಡಿಯಲು ನೀರು ಸಿಗದೆ ಪಕ್ಷಿಗಳು ನಿತ್ರಾಣಗೊಂಡಿದ್ದರೆ, ಸಣ್ಣ ಪ್ರಮಾಣದ ಗಾಯವಾಗಿದ್ದರೆ ನಾನೇ ಉಪಚರಿಸುತ್ತೇನೆ. ಟಿ.ವಿ ಕೇಬಲ್‌ಗಳೇ ಪಕ್ಷಿಗಳಿಗೆ ದೊಡ್ಡ ಶತ್ರುಗಳು. ಕೇಬಲ್‌ಗಳಿಗೆ ಪಾರಿವಾಳಗಳು ಹೆಚ್ಚು ಸಿಲುಕಿಕೊಳ್ಳುತ್ತವೆ. ಪಾರಿವಾಳಕ್ಕೆ ರಾಜಾಜಿನಗರದಲ್ಲೇ ಪ್ರತ್ಯೇಕ ಆಸ್ಪತ್ರೆಯಿದ್ದು ಚಿಕಿತ್ಸೆಗೆ ಅಲ್ಲಿಗೆ ರವಾನೆ ಮಾಡುತ್ತೇನೆ’ ಎನ್ನುತ್ತಾರೆ ಗೌರಿ.

‘ಹೆದ್ದಾರಿಗಳಲ್ಲಿ ಸಂಭವಿಸುವ ಅಪಘಾತದಲ್ಲಿ ನಾಯಿಗಳು ಸಾಯುತ್ತವೆ. ಸತ್ತ ನಾಯಿಗಳ ಕಳೇಬರ ತಿನ್ನಲು ರಣಹದ್ದುಗಳು ಸ್ಥಳಕ್ಕೆ ಬರುತ್ತವೆ. ರಣಹದ್ದುಗಳ ತೂಕ ಹೆಚ್ಚಿರುವ ಕಾರಣಕ್ಕೆ ಮೇಲಕ್ಕೆ ಹಾರಲು ಹೆಚ್ಚಿನ ಸಮಯ ಬೇಕು. ಆಗ ವಾಹನಗಳಿಗೆ ಸಿಲುಕಿ ರಣಹದ್ದುಗಳು, ರತ್ನಪಕ್ಷಿಗಳು ಸಾಯುತ್ತಿವೆ. ಸತ್ತ ಪಕ್ಷಿಗಳ ಗರಿಗಳನ್ನು ತಂದು, ಗಾಯಗೊಂಡ ಪಕ್ಷಿಗಳಿಗೆ ಗರಿಕಸಿ ಮಾಡಿಸಲಾಗುತ್ತಿದೆ’ ಎಂದೂ ಹೇಳಿದರು.

ಪಕ್ಷಿಗಳ ಅಧ್ಯಯನದಲ್ಲಿ ಆಸಕ್ತಿ...

ಗೌರಿ ಅವರಿಗೆ ಚಾರಣ, ಪ್ರವಾಸವೆಂದರೆ ಅಚ್ಚುಮೆಚ್ಚು. ವರ್ಷಕ್ಕೊಮ್ಮೆ ಕಂಪ್ಯೂಟರ್, ಮೊಬೈಲ್‌ಗಳನ್ನು ಬದಿಗಿಟ್ಟು ಕುಟುಂಬದೊಂದಿಗೆ ಪ್ರಶಾಂತ ಸ್ಥಳಕ್ಕೆ ತೆರಳುತ್ತಾರೆ. ಅಲ್ಲಿಯೂ ಪಕ್ಷಿಯದ್ದೇ ಧ್ಯಾನ. ‘ಕಾಡು–ಮೇಡುಗಳಲ್ಲಿ ಅಲೆದಾಡುತ್ತಾ ಪಕ್ಷಿಗಳ ಅಧ್ಯಯನ ನಡೆಸುತ್ತೇನೆ. ಕಾಡಿನ ಸುತ್ತಾಟದಿಂದ ನನ್ನ ಕೆಲಸಕ್ಕೆ ಮತ್ತಷ್ಟು ಪ್ರೇರಣೆ ಸಿಗುತ್ತಿದೆ. ಸಮಾಜ ನಮಗೆ ಅಗಾಧ ಅನುಭವ, ಬದುಕು ನೀಡುತ್ತಿದೆ. ನಾವು ಸಮಾಜಕ್ಕೆ ಏನಾದರೂ ನೀಡಬೇಕು’ ಎಂದು ಹೇಳುತ್ತಾರೆ ಅವರು.

ಎರಡೇ ದಿನದಲ್ಲಿ ಚೇತರಿಕೆ...

‘ಗರಿ ಕಳೆದುಕೊಂಡ ಪಕ್ಷಿಯಲ್ಲಿ ಸಹಜವಾಗಿ ಗರಿ ಬೆಳೆಯುವುದಕ್ಕೆ ಬಹಳ ಸಮಯ ಬೇಕಿದೆ. ಪಕ್ಷಿಗೆ ಹಾರಾಟ ನಡೆಸಲು ಸಾಧ್ಯವಾಗದಿದ್ದರೆ ಆಹಾರ, ನೀರು ದೊರೆಯದೆ ಮೃತಪಡುವ ಸಾಧ್ಯತೆ ಇರುತ್ತದೆ. ‘ಗರಿಕಸಿ’ ಮಾಡಿ ಉಪಚರಿಸಿದರೆ, ಎರಡರಿಂದ ಮೂರು ದಿನಗಳಲ್ಲಿ ಗಾಯಗೊಂಡ ಪಕ್ಷಿ ಚೇತರಿಸಿಕೊಳ್ಳುತ್ತದೆ. ಸಂಗ್ರಹಿಸಿದ ಗರಿಗಳ ಗುರುತಿಸುವಿಕೆ ಬಹಳ ಮುಖ್ಯ. ಗರಿಬ್ಯಾಂಕ್‌ಗಳಿಗೆ ಬಂದ ಗರಿಗಳನ್ನು ಪ್ರತ್ಯೇಕಿಸಿ ಆಸ್ಪತ್ರೆಗೆ ನೀಡುತ್ತೇನೆ. ಪಾರಿವಾಳಕ್ಕೆ ಪಾರಿವಾಳದ ಗರಿಯನ್ನೇ ಕಸಿ ಮಾಡಲಾಗುತ್ತದೆ. ಪಿಎಫ್‌ಎ ವೈದ್ಯ ನವಾಜ್ ಶರೀಫ್ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತಿದ್ದೇನೆ’ ಎಂದು ಗೌರಿ ಹೇಳುತ್ತಾರೆ.

ಗಾಯಗೊಂಡ ಪಕ್ಷಿಯೊಂದಕ್ಕೆ ಗರಿಕಸಿ

❖

ದಲಿತ ಚಳವಳಿಯ ಪ್ರಭಾವ ಹೋರಾಟದ ಕೆಚ್ಚು

● ಕೆ.ಓಂಕಾರ ಮೂರ್ತಿ

‘ನಮ್ಮ ಗುರುತುಗಳು ನಮಗೆ ಅಡಚಣೆ ಆಗಬಾರದು. ಸಾಧಿಸುವ ಬಗ್ಗೆ ನಂಬಿಕೆ ಇರಬೇಕು. ಆ ಹಟವಿದ್ದರೆ ಯಾರೂ ನಮ್ಮನ್ನು ತಡೆಯಲು ಆಗಲ್ಲ...’

ಇದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ (ಯುಎನ್‌ಎಚ್‌ಆರ್‌ಸಿ) ವಿಷಯ ತಜ್ಞೆಯಾಗಿ ಕೆಲಸ ಮಾಡುತ್ತಿರುವ ಕರ್ನಾಟಕದ ಕೆ.ಪಿ.ಅಶ್ವಿನಿ ಅವರ ಮಾತು.

ಕೋಲಾರ ಜಿಲ್ಲೆಯ ಕುರುಬರಹಳ್ಳಿ ಗ್ರಾಮದ ಇವರು ದಲಿತ ಚಳವಳಿಯ ಹಿನ್ನೆಲೆಯ ಕುಟುಂಬದಿಂದ ಬಂದವರು. ಜಾತಿ ವಿರೋಧಿ ಹಾಗೂ ಮಹಿಳಾ ಪರ ಚಳವಳಿಗಳಲ್ಲಿ ಹೆಚ್ಚು ತೊಡಗಿಸಿಕೊಂಡವರು. ಇವರ ಮನೆಯಲ್ಲಿ ನಡೆಯುತ್ತಿದ್ದ ಚರ್ಚೆಗಳು, ತಂದೆ ವಿ.ಪ್ರಸನ್ನಕುಮಾರ್ ಅವರಿಗಿದ್ದ ದಲಿತ ಚಳವಳಿಯ ಒಡನಾಟ, ಇವರ ಮನೆಗೆ ಭೇಟಿ ನೀಡುತ್ತಿದ್ದ ಕೋಟಿಗಾನಹಳ್ಳಿ ರಾಮಯ್ಯ ಅವರಂಥ ಸಾಹಿತಿಗಳು, ದಲಿತ ಮುಖಂಡರು, ಹೋರಾಟಗಾರರ ಜೊತೆಗಿನ ಸಂವಾದ ಇತ್ಯಾದಿ ಅಂಶಗಳು ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರಿದವು. ಬಾಲ್ಯದಲ್ಲೇ ಅಂಬೇಡ್ಕರ್ ಕುರಿತ ಓದು, ಸಿನಿಮಾ, ಸಾಮಾಜಿಕ ವಿಚಾರಗಳ ಬಗ್ಗೆ ಆಸಕ್ತಿ ಚಿಗುರೊಡೆಯಲು ಕಾರಣವಾದವು.

> ಶಿಕ್ಷಣ ಪಡೆಯುವುದು ಎಂದರೆ 100ಕ್ಕೆ 100 ಅಂಕ ಪಡೆಯುವುದಷ್ಟೇ ಅಲ್ಲ. ಶಿಕ್ಷಣ ಎಂದರೆ ಮನುಷ್ಯತ್ವದ ಕಣ್ಣಿನಿಂದ ನೋಡುವ ಕ್ರಮ

ಆನಂತರ, ನವದೆಹಲಿಯ ಪ್ರತಿಷ್ಠಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ಪಡೆದ ವ್ಯಾಸಂಗ ಹೋರಾಟದ ಕೆಚ್ಚು ಹೆಚ್ಚಿಸಿತು. ಯುನೈಟೆಡ್ ದಲಿತ್ ಸ್ಟೂಡೆಂಟ್ ಫ್ರಂಟ್ ಸದಸ್ಯೆ, ಬಿರ್ಸಾ ಅಂಬೇಡ್ಕರ್ ಫುಲೆ ಸ್ಟೂಡೆಂಟ್ ಅಸೋಸಿಯೇಷನ್ ಸಂಸ್ಥಾಪಕ ಸದಸ್ಯೆಯಾಗಿದ್ದರು. ಅಲ್ಲಿನ ವಿದ್ಯಾರ್ಥಿ ಹೋರಾಟಗಳಲ್ಲಿ ಪಾಲ್ಗೊಂಡಿದ್ದು, ಇವರ ಹೋರಾಟದ ಮನೋಭಾವಕ್ಕೆ ಸಾಣೆ ಹಿಡಿಯಿತು.

ಸಾಹಸಿ ಮನೋವೃತ್ತಿ ಇರುವ ಯುವತಿ ಅಶ್ವಿನಿ. ಏನಾದರೂ ಸಾಧನೆ ಮಾಡಬೇಕೆಂಬ ಗುರಿ ಅವರದ್ದು. ‘ಶಿಕ್ಷಣ ಪಡೆಯುವುದು ಎಂದರೆ 100ಕ್ಕೆ 100 ಅಂಕ ಪಡೆಯುವುದಷ್ಟೇ ಅಲ್ಲ. ಶಿಕ್ಷಣ ಎಂದರೆ ಮನುಷ್ಯತ್ವದ ಕಣ್ಣಿನಿಂದ ನೋಡುವ ಕ್ರಮ, ಜ್ಞಾನ ಪಡೆದುಕೊಳ್ಳುವ ಕ್ರಿಯೆ. ಜ್ಞಾನವೇ ಶಕ್ತಿ. ಸಾವಿತ್ರಿಬಾಯಿ ಫುಲೆ, ಜ್ಯೋತಿ ಬಾಫುಲೆ, ಡಾ.ಬಿ.ಆರ್. ಅಂಬೇಡ್ಕರ್ ಚಿಂತನೆಗಳನ್ನು ಓದುವುದು ಬಹಳ ಮುಖ್ಯ’ ಎಂದು ಅಶ್ವಿನಿ ಪ್ರತಿಪಾದಿಸುತ್ತಾರೆ.

‘ಕೋಲಾರ ಜಿಲ್ಲೆಯ ವ್ಯಕ್ತಿ ಎನ್ನಲು ನನಗೆ ಬಹಳ ಹೆಮ್ಮೆ ಇದೆ. ದಲಿತ ಸಮುದಾಯದಿಂದ ಹಲವು ಅಧಿಕಾರಿಗಳು ಈ ಜಿಲ್ಲೆಯಿಂದ ಬಂದಿದ್ದಾರೆ. ದಲಿತ ಚಳವಳಿಗೆ ಮಹತ್ತರ ಕೊಡುಗೆಯನ್ನೂ ನೀಡಿದೆ. ಕೆಜಿಎಫ್‌ಗೆ ಅಂಬೇಡ್ಕರ್ ಭೇಟಿ ನೀಡಿದ್ದರು. ನನ್ನ ಪೋಷಕರು ದಲಿತ ಚಳವಳಿಯಲ್ಲಿ ಇದ್ದವರು. ಇಂಥ ಶ್ರೀಮಂತ ದಲಿತ ಚಳವಳಿಯ ಕುಟುಂಬದಲ್ಲಿ ಬೆಳೆದಿರುವುದಕ್ಕೆ ಖುಷಿ ಇದೆ’ ಎನ್ನುತ್ತಾರೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ದಲಿತರು, ಮಹಿಳೆಯರು, ಬಡವರ ಸಮಸ್ಯೆಗಳಿಗೆ ಪರಿಹಾರ ನೀಡಲು ಸಾಧ್ಯವಾಗಿಲ್ಲ. ಅನೇಕ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಪ್ರವೇಶ ಮಾಡಲೂ ಸಾಧ್ಯವಾಗಿಲ್ಲ. ಅಂಥದ್ದರಲ್ಲಿ ಅಶ್ವಿನಿ ಯುಎನ್‌ಎಚ್‌ಆರ್‌ಸಿ ವಿಷಯ ತಜ್ಞೆಯಾಗಿ ಕೆಲಸ ಮಾಡುವ ಅವಕಾಶ ಗಿಟ್ಟಿಸಿಕೊಂಡು ಜಾತಿ ತಾರತಮ್ಯ, ಜನಾಂಗೀಯ ಭೇದ, ವರ್ಣಭೇದ ನೀತಿ, ಲಿಂಗಭೇದ ನೀತಿ, ಬುಡಕಟ್ಟು ಸಮುದಾಯದವರ ಮೇಲಿನ ದೌರ್ಜನ್ಯ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ.

ಇವರ ಕೆಲಸ ಭಾರತ ಅಥವಾ ಒಂದು ದೇಶಕ್ಕೆ ಸೀಮಿತವಾಗಿಲ್ಲ. ವಿಶ್ವದ ಯಾವುದೇ ಭಾಗದಲ್ಲಿ ಭೇದಭಾವ ಕಾಣಿಸಿದರೂ ಅಲ್ಲಿ ಹೋಗಿ ಕೆಲಸ ಮಾಡಬೇಕಾಗಿದೆ.

‘ನನ್ನ ಯಶಸ್ಸಿಗೆ ಅಂಬೇಡ್ಕರ್ ಆಶಯ ಮತ್ತು ಆದರ್ಶಗಳೇ ಕಾರಣ. ಆ ದಿಸೆಯಲ್ಲಿ ಅವರ ಆದರ್ಶ ಹಾಗೂ ಭಾರತದ ಸಂವಿಧಾನದ ಉದ್ದೇಶ ಜಾರಿ ಮಾಡಲು ಜಾಗತಿಕ ಮಟ್ಟದ ವೇದಿಕೆಯಲ್ಲಿ ಚರ್ಚಿಸುತ್ತೇನೆ. ಜಾತಿ, ವರ್ಣ ವ್ಯವಸ್ಥೆಯೊಳಗಿನ ಲಿಂಗ ತಾರತಮ್ಯದ ಬಗ್ಗೆ ಗಟ್ಟಿ ಧ್ವನಿ ಎತ್ತುವ ಬಯಕೆ ಇದೆ’ ಎಂದು ಹೇಳುತ್ತಾರೆ.

‘ಮೀಸಲಾತಿ ಬಗ್ಗೆ ನಗರ ಪ್ರದೇಶದ ಜನರ ಮನೋಭಾವ, ಅಪಸ್ವರ ಹಾಗೂ ಅವರ ಕುಹಕ ಮಾತುಗಳು ಬೇಸರ ತರಿಸುತ್ತವೆ. ನಾನು ವಿದ್ಯಾರ್ಥಿಯಾಗಿದ್ದಾಗಲೂ ಆ ಮಾತು ಕೇಳಿದ್ದೇನೆ, ನಂತರ ಉಪನ್ಯಾಸಕಿಯಾಗಿ ಕೆಲಸ ಮಾಡುವಾಗಲೂ ಈ ವಿಚಾರ ಪದೇಪದೇ ನನ್ನ ಕಿವಿಗೆ ಅಪ್ಪಳಿಸುತ್ತಿತ್ತು. ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾಗ ಪರಿಶಿಷ್ಟ ಜಾತಿಯವಳು ಎಂಬ ಕಾರಣಕ್ಕೆ ಕಾಲೇಜುವೊಂದರಲ್ಲಿ ನನ್ನ ಗುತ್ತಿಗೆ ನವೀಕರಿಸಲಿಲ್ಲ’ ಎಂದು ಬೇಸರ ವ್ಯಕ್ತಪಡಿಸುತ್ತಾರೆ.

❖

–ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ವಿಶ್ವಸಂಸ್ಥೆಯಲ್ಲಿ ಕನ್ನಡತಿ

ಕನ್ನಡತಿ, ದಲಿತ ಯುವತಿ ಕೆ.ಪಿ.ಅಶ್ವಿನಿ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ (ಯುಎನ್‌ಎಚ್‌ಆರ್‌ಸಿ) ವಿಷಯ ತಜ್ಞೆಯಾಗಿ (Special Rapporteur–SR) ಕೆಲಸ ಮಾಡುತ್ತಿದ್ದಾರೆ.

2022ರ ನ. 1ರಂದು ಅಧಿಕಾರ ಸ್ವೀಕರಿಸಿದ್ದು, ಈ ಹುದ್ದೆಗೆ ನೇಮಕವಾದ ಏಷ್ಯಾದ ಮತ್ತು ಭಾರತದ ಮೊದಲ ವ್ಯಕ್ತಿ. ಈ ಆಯ್ಕೆ ಪ್ರಕ್ರಿಯೆ ಕಠಿಣವಾಗಿತ್ತು. ಅವರ ಪ್ರಾತಿನಿಧ್ಯವನ್ನು 45 ದೇಶಗಳು ಅನುಮೋದಿಸಿವೆ.

ಜಾತಿ ತಾರತಮ್ಯ, ವರ್ಣಭೇದ ನೀತಿ ವಿಚಾರವಾಗಿ ಅವರು ಕೆಲಸ ಮಾಡುತ್ತಿದ್ದಾರೆ. ವಿವಿಧ ದೇಶಗಳಿಗೆ ತೆರಳಿ ಅಲ್ಲಿನ ಸ್ಥಿತಿಗತಿ ಅಧ್ಯಯನ ಮಾಡಿ ವರದಿ ಸಲ್ಲಿಸುತ್ತಾರೆ. ಈಗಾಗಲೇ ಅಮೆರಿಕದಲ್ಲಿ ವರ್ಣಭೇದ ನೀತಿ, ಜಾತಿ ತಾರತಮ್ಯ ಕುರಿತು ಅಧ್ಯಯನ ನಡೆಸಿದ್ದು, ವರದಿ ಸಲ್ಲಿಸಿದ್ದಾರೆ. ‘ಆನ್‌ಲೈನ್‌ನಲ್ಲಿ ದ್ವೇಷ ಭಾಷಣ’ ಕುರಿತ ವರದಿಯನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಮಂಡಿಸಿದ್ದಾರೆ. ‘ಕೃತಕ ಬುದ್ಧಿಮತ್ತೆ ಹಾಗೂ ವರ್ಣಭೇದ ನೀತಿ’ ಕುರಿತ ವರದಿಯನ್ನು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಗೆ ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ವರ್ಣಭೇದ ನೀತಿ, ಜಾತಿ ತಾರತಮ್ಯ ಕುರಿತು ಜೆಎನ್‌ಯುನಲ್ಲಿ ಶೈಕ್ಷಣಿಕ ಸಂಶೋಧನೆ (ಎಂ.ಫಿಲ್, ಪಿ.ಎಚ್‌ಡಿ) ಮಾಡಿದ್ದಾರೆ. ಅಂತರರಾಷ್ಟ್ರೀಯ ದೃಷ್ಟಿಕೋನದಲ್ಲಿ ಭಾರತ ಹಾಗೂ ನೇಪಾಳದಲ್ಲಿ ದಲಿತರ ಹಕ್ಕುಗಳು ಕುರಿತ ಅಧ್ಯಯನ ಅವರ ಸಂಶೋಧನೆ ವಿಷಯ. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯಲ್ಲಿ ಎರಡು ವರ್ಷ ಕಾರ್ಯ ನಿರ್ವಹಿಸಿದ್ದಾರೆ. ಛತ್ತೀಸಗಡ ಹಾಗೂ ಒಡಿಶಾ ರಾಜ್ಯಗಳ ಆದಿವಾಸಿಗಳ ಮೇಲೆ ಅಲ್ಲಿಯ ಗಣಿಗಾರಿಕೆಯಿಂದ ಆದ ಪರಿಣಾಮಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದಾರೆ. ಆದಿವಾಸಿಗಳ ಹೋರಾಟದಲ್ಲಿ ಕೈ ಜೋಡಿಸಿ ಕಾನೂನು ನೆರವು ನೀಡಿದ್ದಾರೆ.

ಇವರ ತಂದೆ ಸರ್ಕಾರಿ ಉದ್ಯೋಗಿಯಾಗಿದ್ದರಿಂದ ಶಿಕ್ಷಣ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಗಿದೆ. ರಾಮನಗರ, ಕೊಡಗು, ತುಮಕೂರು, ಹಾಸನ, ಮೈಸೂರು, ಮಂಗಳೂರು, ಕಲಬುರಗಿ ಹೀಗೆ ಹಲವೆಡೆ ಓದಿದ್ದಾರೆ. ಪದವಿಯನ್ನು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ, ಸ್ನಾತಕೋತ್ತರ ಪದವಿಯನ್ನು ರಾಜ್ಯಶಾಸ್ತ್ರ ವಿಷಯದಲ್ಲಿ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಚಿನ್ನದ ಪದಕದೊಂದಿಗೆ ಪೂರೈಸಿದರು.

ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜು ಹಾಗೂ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ನಿವೃತ್ತ ಕೆಎಎಸ್ ಅಧಿಕಾರಿ ವಿ.ಪ್ರಸನ್ನ ಕುಮಾರ್ ಹಾಗೂ ಜಯಮ್ಮ ಅಶ್ವಿನಿ ಪೋಷಕರು. ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಬಡವರ ಪಾಲಿನ ‘ತೆರೇಸಮ್ಮ’

> ಭದ್ರಾವತಿಯ ನಿರ್ಮಲಾ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬಂದ ಶೋಭನಾ, ಬಿಡುವಿನ ವೇಳೆಯಲ್ಲಿ ಗ್ರಾಮೀಣರು ಹಾಗೂ ಬಡವರ ಶುಶ್ರೂಷೆ ಆರಂಭಿಸಿದರು. ಈ ವೇಳೆ ಅಲ್ಲಿನ ಕೂಲಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಕೊಡಿಸಲು ಟೊಂಕ ಕಟ್ಟಿ ನಿಂತರು

● ವೆಂಕಟೇಶ ಜಿ.ಎಚ್.

ಅದು 1980ರ ದಶಕದ ಮಧ್ಯಭಾಗ. ವಿಐಎಸ್‌ಎಲ್, ಎಂಪಿಎಂ ಕಾರ್ಖಾನೆಗಳ ಸೈರನ್ ಸದ್ದು ಭದ್ರಾವತಿಗೆ ‘ಉದ್ಯಮ ನಗರ’ ಎಂಬ ಶ್ರೇಯ ತಂದುಕೊಟ್ಟಿತ್ತು. ಹೀಗಾಗಿ, ದೇಶದ ವಿವಿಧೆಡೆಯಿಂದ ಅದರಲ್ಲೂ ತಮಿಳುನಾಡಿನಿಂದ ದೊಡ್ಡ ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ಇಲ್ಲಿ ಬಂದು ಬದುಕು ಕಟ್ಟಿಕೊಳ್ಳಲು ಹೆಣಗುತ್ತಿದ್ದರು.

ಅವರೆಲ್ಲ ಭದ್ರಾವತಿ ಮಾತ್ರವಲ್ಲ ಸಮೀಪದ ಕಾರೇಹಳ್ಳಿ, ನಿರ್ಮಲಪುರ, ಹರಳೀಹಳ್ಳಿ, ಬಿಳಕಿ, ವೀರಾಪುರ, ಸಿದ್ದಾಪುರ, ಚಟ್‌ಪಟ್ ನಗರ, ಕೂಡ್ಲಿಗೆರೆ ಗ್ರಾಮಗಳ ಸುತ್ತಲೂ ‘ಕ್ಯಾಂಪ್’ ಹೆಸರಲ್ಲಿ ಜೋಪಡಿಗಳಲ್ಲಿ ನೆಲೆನಿಂತಿದ್ದರು.

ಬಡತನಕ್ಕೆ ಅನ್ವರ್ಥವಾಗಿದ್ದ ಅವರೆಲ್ಲರೂ ಅಂದಂದಿನ ಅನ್ನವನ್ನು ಅಂದೇ ದುಡಿಯಬೇಕಿತ್ತು. ದಿನವಿಡೀ ಮೈಮುರಿದು ದುಡಿದು ಸಂಜೆ ಪಡೆಯುತ್ತಿದ್ದ ಕೂಲಿಯು ಗಂಡಸರಿಗೆ ಸಾರಾಯಿ ಖರ್ಚಿಗೆ ಆಗಿ ಮಿಕ್ಕಿದರೆ ಮನೆಗೆ ಎಂಬಂತಿತ್ತು. ಹೆಣ್ಣು ಮಕ್ಕಳ ಕೂಲಿ ಮನೆಯ ವೆಚ್ಚಕ್ಕೆ ಸರಿಹೋಗುತ್ತಿತ್ತು. ಅಂತೆಯೇ ಮಕ್ಕಳಿಗೆ ಶಿಕ್ಷಣ ‘ಅನಿವಾರ್ಯವಲ್ಲ’ ಎಂಬ ಸ್ಥಿತಿ ಇತ್ತು. ಕುಡಿತ ಸೇರಿದಂತೆ ಬೇರೆ ಬೇರೆ ಚಟಗಳಿಗೆ ದುಡಿದ ಹಣ ಖರ್ಚಾಗುತ್ತಿದ್ದರೆ, ಮನೆಯ ಖರ್ಚಿಗೆ, ಅಪ್ಪ ಮಾಡುತ್ತಿದ್ದ ಸಾಲ ತೀರಿಸುವುದಕ್ಕೆ ಪುಟ್ಟ ಮಕ್ಕಳು ಅಕ್ಕಪಕ್ಕದ ಹಳ್ಳಿಗಳ ಕೃಷಿಕರ ಮನೆಯಲ್ಲಿ ದನ ಕಾಯುವ ಕೆಲಸಕ್ಕೆ, ಜೀತಕ್ಕೆ ಇರುತ್ತಿದ್ದರು. ಅದೂ ವರ್ಷಕ್ಕೆ ₹60 ಕೂಲಿಗೆ.

ಈ ಹೊತ್ತಿನಲ್ಲಿ ದೂರದ ಕೇರಳದ ಎರ್ನಾಕುಲದಿಂದ ಭದ್ರಾವತಿಗೆ ಬಂದವರು ಸಿಸ್ಟರ್ ಶೋಭನಾ. ಭದ್ರಾವತಿಯಲ್ಲಿ ಸೇಂಟ್ ಚಾರ್ಲ್ಸ್ ಬರೋಮಿಯಾ ಸಂಸ್ಥೆ 1954ರಿಂದಲೂ ನಡೆಸುತ್ತಿರುವ ನಿರ್ಮಲಾ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬಂದ ಶೋಭನಾ, ಬಿಡುವಿನ ವೇಳೆಯಲ್ಲಿ ಗ್ರಾಮೀಣರು ಹಾಗೂ ಬಡವರ ಶುಶ್ರೂಷೆ ಆರಂಭಿಸಿದರು. ಈ ವೇಳೆ ಅಲ್ಲಿನ ಕೂಲಿ ಕಾರ್ಮಿಕರ ಬದುಕನ್ನು ಹತ್ತಿರದಿಂದ ಕಂಡರು. ಅವರ ಮಕ್ಕಳಿಗೆ ಶಿಕ್ಷಣ ಕೊಡಿಸಲು ಟೊಂಕ ಕಟ್ಟಿ ನಿಂತರು.

ನಿತ್ಯ ಮನೆಮನೆಗೆ ಹೋಗಿ ಪಾಲಕರ ಮನವೊಲಿಸುತ್ತಿದ್ದರು. ಸ್ಥಳೀಯ ಕೃಷಿಕರ ಬಳಿ ಮುಂಗಡವಾಗಿ ಪಡೆದಿದ್ದ ಹಣ ತಾವೇ ಪಾವತಿಸಿ ಜೀತ ಬಿಡಿಸಿ ಮಕ್ಕಳನ್ನು ಮರಳಿ ಕರೆ ತಂದು ಸಮೀಪದ ಸರ್ಕಾರಿ ಶಾಲೆಗೆ ಸೇರಿಸತೊಡಗಿದರು. ಆ ಮಕ್ಕಳಿಗೆ ಭದ್ರಾವತಿಯಲ್ಲಿ ಶ್ರೀಮಂತರ ಮಕ್ಕಳು ಓದುತ್ತಿದ್ದ ಶಾಲೆಗಳಿಂದ ಬಟ್ಟೆ, ಪುಸ್ತಕ ಹಾಗೂ ಕಲಿಕಾ ಸಾಮಗ್ರಿಗಳನ್ನು ದಾನ ಪಡೆದು ತಂದುಕೊಟ್ಟು ಪ್ರೋತ್ಸಾಹಿಸಿದರು. ಆದರೆ, ಕೆಲ ದಿನಗಳಲ್ಲಿಯೇ ಆ ಮಕ್ಕಳು ಮನೆಯಲ್ಲಿನ ಬಡತನ ಪರಿಸ್ಥಿತಿಯ ಕಾರಣ ಮತ್ತೆ ಶಾಲೆ ಬಿಟ್ಟು ಜೀತಕ್ಕೆ ಮರಳುತ್ತಿದ್ದರು. ಅದರ ಹಿಂದೆ ಪಾಲಕರ ಒತ್ತಾಸೆಯೂ ಇರುತ್ತಿತ್ತು. ಪದೇಪದೇ ಮನೆಗಳಿಗೆ ಎಡತಾಕಿ ಹರಸಾಹಸಪಟ್ಟು ಮತ್ತೆ ಆ ಪಾಲಕರ ಮನವೊಲಿಸಲು ಯತ್ನಿಸುತ್ತಿದ್ದ ಶೋಭನಾ, ಆ ಮಕ್ಕಳನ್ನು ಊರಿನ ಹತ್ತಿರದ ಬದಲು ದೂರದ ಊರುಗಳಲ್ಲಿನ ಹಾಸ್ಟೆಲ್‌ಗೆ ದಾಖಲಿಸಿ ಓದು ಮುಂದುವರಿಸಲು ಅವಕಾಶ ಮಾಡಿಕೊಟ್ಟರು. ಅದರ ಫಲವಾಗಿ 170ಕ್ಕೂ ಹೆಚ್ಚು ಮಕ್ಕಳು ಈಗ ಸರ್ಕಾರಿ ನೌಕರಿ ಮಾತ್ರವಲ್ಲ ಖಾಸಗಿ ಕ್ಷೇತ್ರದಲ್ಲೂ ದೊಡ್ಡ ದೊಡ್ಡ ಹುದ್ದೆಯಲ್ಲಿದ್ದು ಸುಭದ್ರ ಬದುಕು ಕಟ್ಟಿಕೊಂಡಿದ್ದಾರೆ.

ಸ್ತ್ರೀಶಕ್ತಿ ಸ್ವ–ಸಹಾಯ ಸಂಘಗಳ ಬಲ

ಕಾರ್ಮಿಕರ ಕುಟುಂಬಗಳ ಬಹುತೇಕ ಗಂಡಸರು ಸಾರಾಯಿ, ಓ.ಸಿ. ಜೂಜಿನಂತಹ ದುಶ್ಚಟಗಳ ದಾಸರಾಗಿದ್ದರು. ಅಂತಹ ಮನೆಗಳ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಆ ಕುಟುಂಬಗಳ ಹೆಣ್ಣುಮಕ್ಕಳನ್ನು ಸಂಘಟಿಸಿದ ಸಿಸ್ಟರ್ ಶೋಭನಾ, ಸ್ತ್ರೀಶಕ್ತಿ ಸ್ವ–ಸಹಾಯ ಸಂಘಗಳನ್ನು ರಚಿಸಿ ನೋಂದಣಿ ಮಾಡಿಸಿದರು. ಅವರಿಗೆ ಸರ್ಕಾರದ ವಿವಿಧ ಇಲಾಖೆಗಳ ನೆರವು, ತರಬೇತಿ ಕೊಡಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರೇರಣೆಯಾದರು. ಅದರ ಫಲವಾಗಿ ಹೆಣ್ಣುಮಕ್ಕಳು ಹೈನುಗಾರಿಕೆ, ಕುರಿ ಸಾಕಾಣಿಕೆ, ಟೈಲರಿಂಗ್, ತಿನಿಸು ತಯಾರಿಕೆ, ಕರಕುಶಲ ವಸ್ತುಗಳ ತಯಾರಿಕೆ ಕೆಲಸದಲ್ಲಿ ತೊಡಗಿಕೊಂಡರು. ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಕೊಡಿಸಿ ಪ್ರೋತ್ಸಾಹಿಸಿದರು. ಶೋಭನಾ ಅವರ ಒತ್ತಾಸೆಯ ಫಲವಾಗಿ ಭದ್ರಾವತಿ ತಾಲ್ಲೂಕಿನಾದ್ಯಂತ 240 ಸ್ವ–ಸಹಾಯ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, 4,000ಕ್ಕೂ ಹೆಚ್ಚು ಮಹಿಳೆಯರು ಸದಸ್ಯತ್ವ ಪಡೆದಿದ್ದಾರೆ.

ದಾನಿಗಳಿಂದ ಆರ್ಥಿಕ ಸಹಾಯ ಪಡೆದು ಹೌಸಿಂಗ್ ಸ್ಕೀಮ್ ಯೋಜನೆಯಡಿ ತಾಲ್ಲೂಕಿನಲ್ಲಿ 12 ಕುಟುಂಬಗಳಿಗೆ ಮನೆ ಹಾಗೂ 140 ಶೌಚಾಲಯ ನಿರ್ಮಿಸಿಕೊಟ್ಟಿದ್ದಾರೆ. ಬಡ ಕುಟುಂಬದ 15 ಯುವತಿಯರಿಗೆ ವಿವಾಹ ಮಾಡಿಸಿದ್ದಾರೆ. ಕುಡಿತದ ವ್ಯಸನ ಬಿಡಿಸಲು ಉಚಿತ ಆಶ್ರಮ ವ್ಯವಸ್ಥೆ ಮಾಡಿದ್ದು, ಒಂದು ಬಾರಿಗೆ 30 ಮಂದಿಗೆ ಅಲ್ಲಿ ಆಶ್ರಯ ನೀಡಿ ವ್ಯಸನ ಬಿಡಿಸಲಾಗುತ್ತಿದೆ. ಗ್ರಾಮೀಣ ಭಾಗದ ಅನಕ್ಷರಸ್ಥ ಮಹಿಳೆಯರು ಬ್ಯಾಂಕ್ ವ್ಯವಹಾರದ ಬಗ್ಗೆ ತಿಳಿದುಕೊಳ್ಳಲು ಪ್ರತಿ ತಿಂಗಳು ತರಬೇತಿ, ಕಾರ್ಯಾಗಾರ ಮತ್ತು ಕರಕುಶಲ ವಸ್ತು ತಯಾರಿಕೆ ತರಬೇತಿ ಕಾರ್ಯಕ್ರಮ ನೀಡುತ್ತಿದ್ದಾರೆ.

ಸಿಸ್ಟರ್ ಶೋಭನಾ ಕೇರಳದ ಕೃಷಿಕ ಕುಟುಂಬದಿಂದ ಬಂದವರು. ತಂದೆ ವರ್ಗಿಸ್ ಚಾಕೊ, ತಾಯಿ ಯೆಲ್ಲಿ ಚಾಕೊ. ಇಬ್ಬರು ಸಹೋದರ– ಸಹೋದರಿ ಇದ್ದಾರೆ. ಪ್ರಾಥಮಿಕ ಶಿಕ್ಷಣ ಎರ್ನಾಕುಲದ ಸೇಂಟ್ ಲಿಟಲ್ ತೆರೇಸಾ ಶಾಲೆಯಲ್ಲಿ ಪ್ರಾರಂಭಿಸಿ, 1971ರಲ್ಲಿ ಕ್ರೈಸ್ತ ಧರ್ಮಭಗಿನಿಯಾಗಿ ಸೇಂಟ್ ಚಾರ್ಲ್ಸ್ ಬರೋಮಿಯೋ ಸಂಸ್ಥೆ ಸೇರಿದರು. ಸಾಮಾಜಿಕ ಸೇವೆಯಲ್ಲಿ ಮೂರು ವರ್ಷದ ಡಿಪ್ಲೊಮಾ ಕೋರ್ಸ್ ಮುಗಿಸಿದ ಅವರು, 1982ರಲ್ಲಿ ಬೆಂಗಳೂರಿಗೆ ಬಂದು ಬಿಎಸ್‌ಡಬ್ಲ್ಯು ಪದವಿ ಪಡೆದರು. 1986ರಲ್ಲಿ ಭದ್ರಾವತಿಗೆ ಬಂದ ಅವರು, 1987ರಲ್ಲಿ ಸಮಾಜ ಸೇವೆಯ ನಿರ್ದೇಶಕಿಯಾಗಿ ಆಯ್ಕೆಯಾದರು. ಅಲ್ಲಿಂದ ಅವರ ಸೇವಾ ಕಾರ್ಯಕ್ಕೆ ಗರಿ ಮೂಡಿತು.

ಮೂರೂವರೆ ದಶಕಗಳ ತಮ್ಮ ಈ ಸಮಾಜ ಸೇವೆ ಹಾದಿಯಲ್ಲಿ ಕಾಲ್ನಡಿಗೆ, ಸೈಕಲ್‌ನಲ್ಲಿ ಭದ್ರಾವತಿ ತಾಲ್ಲೂಕಿನ ಹಳ್ಳಿಹಳ್ಳಿಗಳನ್ನು ಸಿಸ್ಟರ್ ಶೋಭನಾ ಸುತ್ತಿದ್ದಾರೆ. ಗ್ರಾಮೀಣರ ಪ್ರೀತಿಗೂ ಪಾತ್ರರಾಗಿದ್ದಾರೆ. ಸ್ಥಳೀಯರು ‘ತೆರೇಸಮ್ಮಾ’ ಎಂದು ಕರೆದು ಶೋಭನಾ ಅವರಿಗೆ ಪ್ರೀತಿ ತೋರ್ಪಡಿಸುತ್ತಾರೆ. ಯಾವುದೇ ಪ್ರಚಾರ, ಸನ್ಮಾನಕ್ಕೆ ಒತ್ತುಕೊಡದೆ ಬಡಜನರ ಶ್ರೇಯೋಭಿವೃದ್ಧಿಗೆ ತೆರೆದುಕೊಂಡು ಎಲೆಮರೆಯ ಕಾಯಿಯಂತೆಯೇ ಈ ‘ತೆರೇಸಮ್ಮ’ (ಸಿಸ್ಟರ್ ಶೋಭನಾ) ಕಾಯಕದಲ್ಲಿ ತೊಡಗಿಕೊಂಡಿದ್ದಾರೆ.

❖

PRESENTED BY
mahindra Rise
IN ASSOCIATION WITH
Gold Winner
REACH ROOT Premium HAIR OIL
MCBL
VICCO — TRUSTED AYURVEDA — SINCE 1952
TV PARTNER
ವಿಸ್ತಾರ NEWS

mahindra Rise presents ಪ್ರಜಾವಾಣಿ

ಸಾಧಕಿಯರು

ಬುದ್ಧಿಮಾಂದ್ಯ ಮಕ್ಕಳ ‘ಅಮೃತ’

• ಡಿ.ಎಂ.ಕುರ್ಕೆ ಪ್ರಶಾಂತ್

ಕೂದಲು ಬಣ್ಣ ಕಪ್ಪು, ಹಲ್ಲಿನ ಬಣ್ಣ ಬಿಳುಪು, ಮೈಯಲ್ಲಿಲ್ಲ ಶಕ್ತಿ, ತಲೆಯಲ್ಲಿಲ್ಲ ಯುಕ್ತಿ....ಲಲಲ ಲಾಲಾಲಾ– ಹೀಗೆ 65 ವರ್ಷದ ಅಮೃತವಲ್ಲಿ ಟೀಚರ್ ನೃತ್ಯ ಮಾಡುತ್ತಿದ್ದರೆ ಅವರ ಸುತ್ತ ಕುಳಿತಿದ್ದ ಬುದ್ಧಿಮಾಂದ್ಯ ಮಕ್ಕಳು ಹಾಡು ಹೇಳುತ್ತ ನೃತ್ಯ ಮಾಡುವರು. ಮಂದಹಾಸ ಬೀರುವರು. ಹೀಗೆ ಒಂದೂವರೆ ದಶಕಗಳಿಂದ ಅಮೃತವಲ್ಲಿ ಟೀಚರ್ ‘ನನ್ನದು ಇದೇ ಕಾಯಕ’ ಎನ್ನುವಂತೆ ಬುದ್ಧಿಮಾಂದ್ಯ ಮಕ್ಕಳಲ್ಲಿ ಮಂದಹಾಸ ಮೂಡಿಸುತ್ತಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರದ ‘ಆಧಾರ್’ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ರೂವಾರಿಗಳಲ್ಲಿ ಅಮೃತವಲ್ಲಿ ಪ್ರಮುಖರು. ಅಂಥರಾದ ಅಮೃತವಲ್ಲಿ ಅವರು ಕಳೆದ ಒಂದೂವರೆ ದಶಕದಿಂದ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಿಷ್ಕಾಮವಾಗಿ ಕೆಲಸ ಮಾಡುತ್ತಿದ್ದಾರೆ. ಆ ಕಾರಣದಿಂದ ಸಮಾಜ, ಸಂಘ ಸಂಸ್ಥೆಗಳಿಂದ ವಿಶೇಷ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ.

ಚಿಂತಾಮಣಿಯ ಕಿಶೋರ ಶಾಲೆಯಲ್ಲಿ ಇಪ್ಪತ್ತು ವರ್ಷಕ್ಕೂ ಹೆಚ್ಚು ಕಾಲ ಶಿಕ್ಷಕಿಯಾಗಿದ್ದ ಅವರು ಸ್ವಯಂ ನಿವೃತ್ತಿ ಪಡೆದರು. ಅಧ್ಯಾತ್ಮದ ಒಲವುಳ್ಳ ಅಮೃತವಲ್ಲಿ ಅವರು ‘ಸೇವಕ್’ ಸಂಸ್ಥೆಯ ಆಚಾರ್ಯ ವಿನಯ್ ವಿನೇಕರ್ ಅವರ ಪ್ರಭಾವಕ್ಕೆ ಒಳಗಾದರು. ಗುರೂಜಿ ಅವರ ಸಲಹೆ ಮೇರೆಗೆ ‘ಆಧಾರ್’ ಬುದ್ಧಿಮಾಂದ್ಯ ಮಕ್ಕಳ ಶಾಲೆ ಆರಂಭಿಸಿದರು.

2007ರಲ್ಲಿ ಆರಂಭವಾದ ‘ಆಧಾರ್’ ಶಾಲೆಯಲ್ಲಿ ಮೊದಲಿಗೆ 7 ಮಕ್ಕಳು ಕಲಿಯುತ್ತಿದ್ದರು. ನಂತರ ಈ ಸಂಖ್ಯೆ 40 ತಲುಪಿತು. ಕೋವಿಡ್ ಕಾರಣದಿಂದ 11ಕ್ಕೆ ಇಳಿಯಿತು. ಮತ್ತೆ ಸಂಸ್ಥೆಯ ಪ್ರಯತ್ನದ ಫಲವಾಗಿ ಈಗ 24 ಮಕ್ಕಳು ಇಲ್ಲಿದ್ದಾರೆ.

ಆರಂಭದಲ್ಲಿ ಶಾಲೆಯನ್ನು ಟ್ರಸ್ಟಿ ಮದ್ದಿರೆಡ್ಡಿ ಅವರ ಕಾರ್ಖಾನೆಯಲ್ಲಿ ನಡೆಸಲಾಗುತ್ತಿತ್ತು. ನಂತರ ಉತ್ತಮ ಸ್ಥಳ ಪಡೆದು ಕಟ್ಟಡ ನಿರ್ಮಿಸಲಾಗಿದೆ. ಬೆಳಿಗ್ಗೆ 10ರಿಂದ ಸಂಜೆ 4ವರೆಗೆ ಬುದ್ಧಿಮಾಂದ್ಯ ಮಕ್ಕಳ ಕಲರವ ಶಾಲೆಯಲ್ಲಿ ಇರಲಿದೆ. ಅಮೃತವಲ್ಲಿ ಟೀಚರ್ ನೇತೃತ್ವದ ‘ಆಧಾರ್’ ಶಾಲೆಗೆ ಐದು ಮಂದಿ ಟ್ರಸ್ಟಿಗಳೂ ಇದ್ದಾರೆ.

ಸಾಮಾನ್ಯವಾಗಿ ಇಂತಹ ಶಾಲೆಗಳನ್ನು ನಡೆಸುವಾಗ ಅನುಕಂಪದ ಹೆಸರಿನಲ್ಲಿ ‘ನೆರವು’ ಸಂಗ್ರಹಿಸುವುದು ಹೆಚ್ಚು. ಆದರೆ ಇಂತಹ ಪ್ರಯತ್ನಗಳಿಂದ ಈ ಸಂಸ್ಥೆ ದೂರ. ಸ್ವಯಂಪ್ರೇರಿತರಾಗಿ ಮಕ್ಕಳ ಪೋಷಕರು, ದಾನಿಗಳು ಹಾಗೂ ಇವರ ಕಾರ್ಯಚಟುವಟಿಕೆಗಳನ್ನು ಗಮನಿಸಿದ ಸಹೃದಯಿಗಳು ನೆರವಾಗುತ್ತಿದ್ದಾರೆ.

‘ಕಿಶೋರ ಶಾಲೆಯಲ್ಲಿ ಶಿಕ್ಷಕಿಯಾಗಿದ್ದ ವೇಳೆ ನನಗೆ ಕಣ್ಣಿನ ಸಮಸ್ಯೆ ಕಾಣಿಸಿಕೊಂಡಿತು. ಆಗ ಸ್ವಯಂ ನಿವೃತ್ತಿ ಪಡದೆ. ನಂತರ ದೃಷ್ಟಿ ಹೊರಟು ಹೋಯಿತು. ವಿನಯ್ ವಿನೇಕರ್ ಗುರೂಜಿ ಅವರು ನಡೆಸುತ್ತಿದ್ದ ಆತ್ಮವಿಕಾಸ ಶಿಬಿರಗಳಲ್ಲಿ ಭಾಗವಹಿಸಿದೆ. ‘ಕಣ್ಣು ಇಲ್ಲದಿದ್ದರೂ ಚೆನ್ನಾಗಿ ಜೀವನ ಸಾಗಿಸಬಹುದು’ ಎಂದರು ಗುರೂಜಿ. ಬುದ್ಧಿಮಾಂದ್ಯ ಮಕ್ಕಳ ಶಾಲೆ ತೆರೆಯುವಂತೆ ಪ್ರೇರೇಪಿಸಿದರು. ಆ ಫಲವಾಗಿ ‘ಆಧಾರ್’ ಶಾಲೆ ಕಾರ್ಯಾರಂಭ ಮಾಡಿತು ಎಂದು ಮಾಹಿತಿ ನೀಡುವರು ಅಮೃತವಲ್ಲಿ ಟೀಚರ್.

> ವಿಶೇಷ ಮಕ್ಕಳ ಸೇವೆ ಮಾಡುವುದೇ ನನ್ನ ಪಾಲಿನ ಅಧ್ಯಾತ್ಮ

‘ಸಮಾಜದಲ್ಲಿ ಸಹಜ ಬೆಳವಣಿಗೆಯ ಮಕ್ಕಳ ಬಗ್ಗೆ ಎಲ್ಲರೂ ಕಾಳಜಿ ವಹಿಸುತ್ತಾರೆ. ಆದರೆ ಈ ಮಕ್ಕಳು ದೇವರಂತೆ. ಅವರ ಬಗ್ಗೆ ಕಾಳಜಿ ವಹಿಸಬೇಕು ಎಂದರು. ಆದರೆ ಗುರೂಜಿ ಅವರ ಮಾತುಗಳಲ್ಲಿ ನನಗೆ ಆರಂಭದಲ್ಲಿ ನಂಬಿಕೆ ಬರಲಿಲ್ಲ. ನಂತರ ಶಾಲೆ ತೆರೆದು ಮುನ್ನಡೆದಂತೆ ಈ ಮಕ್ಕಳು ಮುಖ ನೋಡಿ ಮಣೆ ಹಾಕುವುದಿಲ್ಲ, ಇವರು ದೈವೀಕ ಮಕ್ಕಳು ಎನ್ನುವುದು ಅರಿವಾಯಿತು’ ಎಂದರು.

‘ಶಾಲೆ ಆರಂಭಿಸಿದಾಗ ಪೋಷಕರಿಗೆ ಖುಷಿ ಆಯಿತು. ಬುದ್ಧಿಮಾಂದ್ಯ ಮಕ್ಕಳನ್ನು ಮನೆಯಲ್ಲಿ ಇಟ್ಟುಕೊಂಡಿರುವುದಕ್ಕಿಂತ ಶಾಲೆಗೆ ಕಳುಹಿಸಿದರೆ ಹೊರೆ ತಪ್ಪಿತು ಎಂದು ಹಲವರು ಬಗೆದರು. ಬಹಳಷ್ಟು ಪೋಷಕರು ಇಲ್ಲಿಯೇ ಮಕ್ಕಳನ್ನು ಬಿಟ್ಟು ಹೋಗಬೇಕು ಎಂದುಕೊಂಡಿದ್ದರು. ಇವೆಲ್ಲವು ನಮಗೆ ತಿಳಿದು ಪೋಷಕರಿಗೆ ತರಬೇತಿ ಆರಂಭಿಸಿದೆವು.

ಈ ಮಕ್ಕಳಿಗೆ ಪೋಷಕರ ಪ್ರೀತಿ ಅತ್ಯಗತ್ಯ. ಪ್ರೀತಿ ದೊರೆತರೆ ಅವರು ಮತ್ತಷ್ಟು ಪ್ರಗತಿ ಸಾಧಿಸುವರು. ನಮ್ಮಲ್ಲಿ ತರಬೇತಿ ಪಡೆದ ಪೋಷಕರು ನಿಲುವು ಬದಲಿಸಿದರು. ಶ್ರೀನಿವಾಸಪುರದಲ್ಲಿ ಸ್ವಂತ ಮನೆ, ವ್ಯವಹಾರವನ್ನು ಹೊಂದಿದ್ದ ದಂಪತಿ ಅವುಗಳನ್ನು ಬಿಟ್ಟು ಚಿಂತಾಮಣಿಯಲ್ಲಿ ಮನೆ ಮಾಡಿಕೊಂಡರು. ಇಲ್ಲಿಯೇ ಸಣ್ಣ ವ್ಯವಹಾರ ಆರಂಭಿಸಿದರು. ಅವರ ಮಗುವನ್ನು ನಮ್ಮಲ್ಲಿಗೆ ಸೇರಿಸಿದರು. ಇಂತಹ ಹಲವು ನಿದರ್ಶನಗಳು ಇವೆ’ ಎಂದರು ಅಮೃತವಲ್ಲಿ.

‘ಆಧಾರ್’ ಶಾಲೆಯಲ್ಲಿ ಮಕ್ಕಳಿಗೆ ಸೃಜನಾತ್ಮಕ ಕಲಿಕೆ ಇದೆ. ಇಲ್ಲಿಂದ ಹೊರ ಹೋದ 12 ಮಕ್ಕಳು ಇಂದು ದುಡಿಮೆಯ ಹಾದಿ ಕಂಡು ಕೊಂಡಿದ್ದಾರೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕಿರಾಣಿ ಅಂಗಡಿಗಳನ್ನು ನಡೆಸುತ್ತಿದ್ದಾರೆ. ಹೀಗೆ ಆಧಾರ್ ಶಾಲೆ ಅವರ ಬದುಕಿಗೂ ಬಲ ನೀಡಿದೆ.

ಸದ್ಯ ಶಾಲೆಯಲ್ಲಿ 13 ಸಿಬ್ಬಂದಿ ಇದ್ದಾರೆ. ಬುದ್ಧಿ ಮಾಂದ್ಯ ಮಕ್ಕಳ ಆರೈಕೆಗೆ ಹೆಚ್ಚು ನಿಗಾ ಅಗತ್ಯ. ಆರು ವರ್ಷದಿಂದ 35 ವರ್ಷದವರೆಗಿನವರು ಇಲ್ಲಿ ಕಲಿಕೆಗೆ ಬರುತ್ತಾರೆ. ಓದು, ಬರಹ ಅಗತ್ಯವಿದ್ದ ಮಕ್ಕಳಿಗೆ ಈ ಕಲಿಕೆಯೂ ನಡೆಯುತ್ತದೆ. ಹೊಲಿಗೆ ತರಬೇತಿ, ಹೂವಿನ ಹಾರ ಸಿದ್ಧಗೊಳಿಸುವುದು, ಶುಭಾಶಯ ಪತ್ರಗಳನ್ನು ರೂಪಿಸುವುದು–ಹೀಗೆ ಸೃಜನಾತ್ಮಕ ಚಟುವಟಿಕೆಗಳಲ್ಲಿ ಈ ಮಕ್ಕಳನ್ನು ತೊಡಗಿಸಲಾಗುತ್ತದೆ.

ಬುದ್ಧಿಮಾಂದ್ಯ ಮಕ್ಕಳಿಗೆ ಅಮೃತವಲ್ಲಿ ಟೀಚರ್ ಶಿಕ್ಷಕಿ, ತಾಯಿಯಾಗಿದ್ದಾರೆ. ಪ್ರಚಾರದ ಹಂಗಿನಿಂದ ದೂರವೇ ಉಳಿದಿರುವ ಅವರು, ಈ ಬುದ್ಧಿಮಾಂದ್ಯ ಮಕ್ಕಳ ಶಾಲೆ ನಡೆಸುವುದನ್ನು ‘ಇದು ನನ್ನ ಅಧ್ಯಾತ್ಮ’ ಎನ್ನುವರು.

‘ಮನೆಯಲ್ಲಿ ಇಟ್ಟುಕೊಳ್ಳಬೇಡಿ’

ಬುದ್ಧಿಮಾಂದ್ಯ ಮಕ್ಕಳ ಬಗ್ಗೆ ತಾತ್ಸಾರ ಅಥವಾ ಬೇಸರಪಟ್ಟುಕೊಂಡು ಮನೆಯಲ್ಲಿಯೇ ಇಟ್ಟುಕೊಳ್ಳಬಾರದು. ಶಾಲೆಗಳಿಗೆ ಕಳುಹಿಸಬೇಕು. ಆ ಮಗು ಇತರ ಮಗುವನ್ನು ನೋಡಿ ಅನುಕರಿಸುತ್ತದೆ. ಕಲಿಯುತ್ತದೆ ಎಂದರು ಅಮೃತವಲ್ಲಿ ಟೀಚರ್.

ಈ ಯಾವ ಕಾರ್ಯಗಳು ನನ್ನೊಬ್ಬಳದ್ದೇ ಅಲ್ಲ. ಟ್ರಸ್ಟಿಗಳು, ಶಿಕ್ಷಕಿಯರು ಎಲ್ಲರ ಸಹಕಾರದಿಂದ ಶಾಲೆ ನಡೆಯುತ್ತಿದೆ. ಸರ್ಕಾರದ ಅನುದಾನ ಪಡೆದಿಲ್ಲ. ಸರ್ಕಾರದ ಅನುದಾನ ಪಡೆದ ತಕ್ಷಣ ನಮಗೆ ಸ್ವಾತಂತ್ರ್ಯ ಇರುವುದಿಲ್ಲ. ಯಾವ ಆಸೆಗಳನ್ನೂ ಇಟ್ಟುಕೊಳ್ಳದೆ ಈ ಮಕ್ಕಳ ಸೇವೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಮಕ್ಕಳಿಗೆ ಹಾಡು ಹೇಳಿಕೊಡುತ್ತಿರುವ ಅಮೃತವಲ್ಲಿ ಟೀಚರ್

ಇರುಳಿಗರ ಪಾಲಿನ ಹೆರಿಗೆ ಡಾಕ್ಟರ್

• ಓದೇಶ ಸಕಲೇಶಪುರ

‘ನಮ್ಮ ಕಾಲದವರು ಆಸ್ಪತ್ರೆ ಕಂಡವರಲ್ಲ. ಅದರಲ್ಲೂ ಹೆರಿಗೆಗಂತೂ ಹೋದವರೇ ಅಲ್ಲ. ನನ್ನ ಮತ್ತು ನನ್ನ ಮಕ್ಕಳ ಕಾಲದಲ್ಲೂ ಅದೇ ಪರಿಸ್ಥಿತಿ. ನಮ್ಮಜ್ಜಿ, ಮುತ್ತಜ್ಜಿ, ದೊಡ್ಡಮ್ಮ ಸೇರಿದಂತೆ ಊರಿನ ಕೆಲ ಹಿರಿಯ ಜೀವಗಳೇ ನಮ್ಮವರಿಗೆ ಡಾಕ್ಟರು. ಹೊರಗಿನ ಪ್ರಪಂಚ ಗೊತ್ತಿಲ್ಲದ, ಆಸ್ಪತ್ರೆಗೆ ಹೋಗುವಷ್ಟು ಶಕ್ತರಲ್ಲದ ನಮಗೆ ಈ ಸೂಲಗಿತ್ತಿಯರೇ ಹೆರಿಗೆ ಮಾಡಿಸಿ, ಆರೈಕೆ ಮಾಡುತ್ತಿದ್ದರು. ಅವರನ್ನು ನೋಡಿಯೇ ನಾನು ಸೂಲಗಿತ್ತಿಯಾದೆ. ನನ್ನ ಮಕ್ಕಳಿಂದಲೇ ಇದು ಮೊದಲುಗೊಂಡಿತು...’

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೂತಗಾನಹಳ್ಳಿಯ ಇರುಳಿಗರ ಕಾಲೊನಿಯ 67 ವರ್ಷದ ಸೂಲಗಿತ್ತಿ ಶಿವಲಿಂಗಮ್ಮ ಅವರು, ತಮಗೊಲಿದ ಸೂಲಗಿತ್ತಿ ವಿದ್ಯೆಯ ಗುಟ್ಟನ್ನು ಬಿಚ್ಚಿಟ್ಟ ಬಗೆ ಇದು. ಆಧುನಿಕ ಬದುಕಿಗೆ ಇಂದಿಗೂ ಅಷ್ಟಾಗಿ ತೆರೆದುಕೊಳ್ಳದೆ, ಅರಣ್ಯದಂಚಿನಲ್ಲೇ ಬದುಕುತ್ತಿರುವ ಆದಿವಾಸಿ ಇರುಳಿಗ ಸಮುದಾಯದವರ ಪಾಲಿಗೆ ಶಿವಲಿಂಗಮ್ಮ ಹೆರಿಗೆ ಡಾಕ್ಟರಷ್ಟೇ ಅಲ್ಲದೆ, ನಾಟಿ ವೈದ್ಯೆ ಕೂಡ. ಐವತ್ತಕ್ಕೂ ಹೆಚ್ಚು ಹಸುಗೂಸುಗಳು ಅವರ ಕೈಯಿಂದ ಈ ಲೋಕವನ್ನು ಮೊದಲ ಬಾರಿಗೆ ಬೆರಗುಗಣ್ಣುಗಳಿಂದ ನೋಡಿವೆ.

ಅಜ್ಜಿ ನೋಡಿ ಕಲಿತೆ: ‘ನಮ್ಮವ್ವನ ಅವ್ವ ವೆಂಕಟಮ್ಮ ಸೂಲಗಿತ್ತಿಯಾಗಿದ್ದರು. ನಮ್ಮ ಜನರಷ್ಟೇ ಅಲ್ಲದೆ, ಬೇರೆಯವರೂ ಅವರನ್ನು ಹೆರಿಗೆ ಮಾಡಿಸಲು ಕರೆದುಕೊಂಡು ಹೋಗುತ್ತಿದ್ದರು. ಜೊತೆಗಿರಲಿ ಎಂದು ಕೆಲವೊಮ್ಮೆ ನನ್ನನ್ನೂ ಕರೆದೊಯ್ಯುತ್ತಿದ್ದರು. ಯಾವ ಕ್ರಮದಲ್ಲಿ ಹೆರಿಗೆ ಮಾಡಿಸಬೇಕು, ಏನೆಲ್ಲಾ ಎಚ್ಚರಿಕೆ ವಹಿಸಬೇಕು ಎಂಬುದನ್ನು ತಿಳಿಸುತ್ತಿದ್ದರು. ನಿಧಾನವಾಗಿ ನನಗೂ ಆ ವಿದ್ಯೆ ಒಲಿಯಿತು. ಚಿಕ್ಕಂದಿನಲ್ಲೇ ಮದುವೆಯಾದ ನನ್ನ ನಾಲ್ಕು ಮಕ್ಕಳ ಹೆರಿಗೆ ಮಾಡಿಸಿದ್ದು ಅವರೇ. ಸುಮಾರು 30 ವರ್ಷದ ಹಿಂದೆ ನಾನು ಈ ಸೇವೆ ಶುರು ಮಾಡಿದೆ’ ಎಂದು ಆರಂಭದ ದಿನಗಳನ್ನು ನೆನೆದರು.

‘ನೇತು ಹಾಕಿದ ಹಗ್ಗವನ್ನು ಗರ್ಭಿಣಿಯ ಕೈಗೆ ಕೊಟ್ಟು ನಿಲ್ಲಿಸಿ, ಮಗು ಹೊರಕ್ಕೆ ಬರುವಂತೆ ಹೊಟ್ಟೆ ಅದುಮುತ್ತೇನೆ ಮಗು ಬರಲು ಆರಂಭಿಸಿದಾಗ, ಗರ್ಭಿಣಿಯನ್ನು ಕೆಳಗಡೆ ಮಲಗಿಸಿ ಮತ್ತಷ್ಟು ಅದುಮಿ ಮಗು ಸುಸೂತ್ರವಾಗಿ ಹೊರಗೆ ಬರುವಂತೆ ಮಾಡಿ ಹೆರಿಗೆ ಮಾಡಿಸುತ್ತೇನೆ ನಂತರ, ನಮ್ಮ ಕೆಲ ಗಿಡಮೂಲಿಕೆಗಳ ಔಷಧೋಪಚಾರ ಮಾಡುತ್ತೇನೆ. ಬಾಣಂತಿಯನ್ನು ಸತತ ಮೂರು ತಿಂಗಳು ಆರೈಕೆ ಮಾಡುತ್ತೇನೆ’ ಎಂದು ಹೇಳಿದರು.

ಸೊಂಟದ ಬಲಕ್ಕೆ ಹಗ್ಗ: ‘ಹೆರಿಗೆ ನೋವಿಗೆ ಸಮನಾದದ್ದು ಯಾವುದೂ ಇಲ್ಲ. ತನ್ನ ರಕ್ತ, ಮಾಂಸ ಹಾಗೂ ಶಕ್ತಿಯನ್ನು ಕೂಸಿಗೆ ಧಾರೆಯೆರೆದು ಜನ್ಮ ಕೊಟ್ಟ ತಾಯಿ, ತನ್ನ ಮೈಯಲ್ಲಿರುವ ಶಕ್ತಿಯನ್ನೆಲ್ಲಾ ಕಳೆದುಕೊಳ್ಳುತ್ತಾಳೆ. ಸೊಂಟದಲ್ಲಿ ಬಲವಿರುವುದಿಲ್ಲ. ಅದಕ್ಕಾಗಿ, ನಾವು ಬಾಣಂತಿಯರ ಸೊಂಟಕ್ಕೆ ಎರಡು ಹಿಂಬಡಿಕೆಯ ಹಗ್ಗವನ್ನು ಬಿಗಿಯಾಗಿ ಕಟ್ಟುತ್ತೇವೆ. ಉಪ್ಪಿಲ್ಲದ ಅನ್ನಕ್ಕೆ ಖಾರ ಬೆರೆಸಿದ ಊಟ ತಿನ್ನಿಸುತ್ತೇವೆ. ಕೆಲ ಸೊಪ್ಪುಗಳನ್ನು ಅರೆದು ಚಟ್ನಿ ಮಾಡಿ ಕೊಡುತ್ತೇವೆ. ಸತತ ಮೂರು ತಿಂಗಳು ಹಗ್ಗ ಕಟ್ಟುವುದರಿಂದ ಸೊಂಟಕ್ಕೆ ಬಲ ಬರುತ್ತದೆ. ಆಗ ತಾಯಿ ಎದ್ದು ಮಗು ಮತ್ತು ತನ್ನ ಕೆಲಸ ಮಾಡಿಕೊಳ್ಳಲು ಶುರು ಮಾಡುತ್ತಾಳೆ’ ಎಂದು ತಮ್ಮ ವೈದ್ಯ ವಿದ್ಯೆಯನ್ನು ಹಂಚಿಕೊಂಡರು.

‘ಈಗ ಆಸ್ಪತ್ರೆ ಹಾದಿ ಚೆನ್ನಾಗಿದೆ. ಊರೊಳಕ್ಕೆ ಬಸ್ ಬರುತ್ತದೆ. ಬೈಕ್, ಕಾರು, ಆಟೊ ಊರಲ್ಲೇ ಸಿಗುತ್ತವೆ. ಅರ್ಜೆಂಟಿದ್ದಾಗ ಆಂಬುಲೆನ್ಸ್ ಬರುತ್ತದೆ. ಈಗಿನ ಹೆಣ್ಣು ಮಕ್ಕಳಿಗೆ ಎಲ್ಲಾ ಗೊತ್ತಿರುವುದರಿಂದ, ನಾವು ಹೆರಿಗೆ ಮಾಡಿಸುತ್ತೇವೆಂದರೆ ಭಯಪಡುತ್ತಾರೆ. ಸ್ವಲ್ಪ ಸಮಸ್ಯೆಯಾದರೂ ಆಸ್ಪತ್ರೆಗೆ ಹೋಗುತ್ತಾರೆ. ಹಾಗಾಗಿ, ನಮ್ಮಂತಹವರು ಹೆರಿಗೆ ಮಾಡಿಸುವುದು ಕಡಿಮೆಯಾಗಿದೆ. ನನಗೂ ವಯಸ್ಸಾಗಿರುವುದರಿಂದ ಏನಾದರೂ ತೊಂದರೆಯಾದರೆ ಎಂದು ಮಕ್ಕಳು ಹೆರಿಗೆ ಮಾಡಿಸಲು ಹೋಗಬೇಡ ಎನ್ನುತ್ತಾರೆ. ಹಾಗಾಗಿ, ಏಳೆಂಟು ವರ್ಷಗಳಿಂದ ಹೆರಿಗೆ ಮಾಡಿಸುತ್ತಿಲ್ಲ. ನನ್ನ ಮೊಮ್ಮಗಳಿಗೂ ಆಸ್ಪತ್ರೆಯಲ್ಲೇ ಹೆರಿಗೆಯಾಯಿತು. ಮಗಳ ಮನೆಯಲ್ಲಿರುವ ನಾನು ಎರಡು ತಿಂಗಳ ಮರಿಮೊಮ್ಮಗಳನ್ನು ನೋಡಿಕೊಳ್ಳುತ್ತಾ, ಮೊಮ್ಮಗಳ ಬಾಣಂತನ ಮಾಡುತ್ತಿದ್ದೇನೆ’ ಎಂದು ಹೇಳಿದರು.

ಹಣ ಪಡೆದಿಲ್ಲ; ದುಡಿಮೆ ನಿಂತಿಲ್ಲ

‘ಹೆರಿಗೆ ಮಾಡಿಸಿದ್ದಕ್ಕೆ ಹಣ ಪಡೆಯುವುದಿಲ್ಲ. ಹುಟ್ಟಿದ ಕೂಸಿನ ಮುಖ, ಮರುಜನ್ಮ ಪಡೆಯುವ ತಾಯಿಯ ನಗುವೇ ನನಗೆ ದೊಡ್ಡ ಬಹುಮಾನ. ಈ ವಿದ್ಯೆಯನ್ನು ದುಡ್ಡಿಗೆ ಮಾರಿಕೊಳ್ಳಬಾರದು ಎಂದು ನಮ್ಮಜ್ಜಿ, ದೊಡ್ಡವ್ವ ಹೇಳುತ್ತಿದ್ದರು. ಹೆರಿಗೆಯಾದ 15–20 ದಿನದಲ್ಲೇ ಕೂಲಿ ಕೆಲಸ ಶುರು ಮಾಡಿದವಳು ನಾನು. ಗಂಡನೊಂದಿಗೆ ಕಾಡಿಗೆ ಹೋಗಿ ಸೌದೆ ಕಡಿದು, ಕನಕಪುರಕ್ಕೆ ತಲೆ ಮೇಲೆ ಹೊತ್ತುಕೊಂಡು ಹೋಗಿ ಮಾರಿ ಮಕ್ಕಳನ್ನು ಸಾಕಿದವರು ನಾವು. ಮಕ್ಕಳು ದೊಡ್ಡವರಾದ ಮೇಲೆ, ಮನೆಯಲ್ಲೇ ಇರು ಅನ್ನುತ್ತಾರೆ. ಆದರೆ, ದುಡಿದ ಜೀವಕ್ಕೆ ಕೂರಲಾಗದು. ಅದಕ್ಕಾಗಿ ಒಂದಿಷ್ಟು ಕುರಿಗಳನ್ನು ಕಟ್ಟಿ ಮೇಯಿಸುತ್ತೇನೆ. ಮಾಡಿದ ಪುಣ್ಯ ಕಾಯುತ್ತದೆ. ಮೈಯಲ್ಲಿ ಇನ್ನೂ ಶಕ್ತಿ ಇದೆ. ಕೈಲಾಗದ ಕಾಲಕ್ಕೆ ಮಕ್ಕಳು ನೋಡುತ್ತಾರೆ. ಅಲ್ಲಿಯವರೆಗೆ ದುಡಿದು ತಿನ್ನಬೇಕು‘ ಎಂದು ತಮ್ಮ ಬದುಕಿನ ತತ್ವವನ್ನು ಶಿವಲಿಂಗಮ್ಮ ಬಿಚ್ಚಿಟ್ಟರು.

‘ಶೆಟ್ರು ಮನೆ ಮಕ್ಕಳು ಈಗಲೂ ನೆನೆಯುತ್ತಾರೆ’

ಶಿವಲಿಂಗಮ್ಮ ಅವರು ತಮ್ಮ ಸಮುದಾಯದ ಹೆಣ್ಣು ಮಕ್ಕಳಿಗಷ್ಟೇ ಅಲ್ಲದೆ, ಬೇರೆ ಸಮುದಾಯದವರಿಗೂ ಹೆರಿಗೆ ಮಾಡಿಸಿ ಸೈ ಎನಿಸಿಕೊಂಡಿದ್ದಾರೆ. ‘ಇವರ ಕೈಗುಣ ಚೆನ್ನಾಗಿದೆ’ ಎಂದು ಜನ ಮಾತನಾಡಿಕೊಳ್ಳ ತೊಡಗಿದಂತೆ ಶಿವಲಿಂಗಮ್ಮ ಅವರನ್ನು ಅಕ್ಕಪಕ್ಕದ ಹಳ್ಳಿಯವರು, ತಮ್ಮ ಮನೆಯ ಹೆಣ್ಣು ಮಕ್ಕಳ ಹೆರಿಗೆ ಮಾಡಿಸಲು ಮನೆಗೆ ಬಂದು ಕರೆದೊಯ್ದಿದ್ದಾರೆ.

> ಮರುಜನ್ಮ ಪಡೆಯುವ ತಾಯಿಯ ನಗುವೇ ನನಗೆ ದೊಡ್ಡ ಬಹುಮಾನ

‘ಕವಚ’ ಕಟ್ಟಿ, ಬದುಕೂ ಕಟ್ಟಿ...

• ಪ್ರಮೋದ

ಕವಚ (ಬಾಡಿ) ಅಳವಡಿಸುವ ಕೆಲಸಕ್ಕಾಗಿ ತಮ್ಮ ಅಂಗಡಿಯ ಮುಂಭಾಗದಲ್ಲಿ ನಿಲ್ಲಿಸಲಾಗಿದ್ದ ಲಾರಿಯನ್ನು ಸರಸರನೇ ಏರಿದ ಶಾರದಾ ಅಷ್ಟೇ ವೇಗದಲ್ಲಿ ವೆಲ್ಡಿಂಗ್ ಕೆಲಸ ಮುಗಿಸಿದರು. ಲಾರಿಯ ಹಿಂಭಾಗಕ್ಕೆ ಬಂದು ಕಟ್ಟಿಗೆಯ ಹಲಗೆಗಳನ್ನು ಮಟ್ಟಸವಾಗಿ ಜೋಡಿಸಿ ಅದಕ್ಕೊಂದು ರೂಪಕೊಟ್ಟರು. ಬಳಿಕ ಕ್ಯಾಬಿನ್ ಭಾಗಕ್ಕೆ ಬಂದು ದುರಸ್ತಿ ಕೆಲಸ ಮುಗಿಸಿದರು.

ಜೊತೆಗಿದ್ದ ಪುರುಷ ಕೆಲಸಗಾರರು ‘ಶಾರದಕ್ಕ, ಶಾರದಮ್ಮ’ ಎನ್ನುತ್ತ ಅವರ ಕೆಲಸಕ್ಕೆ ನೆರವಾಗುತ್ತಿದ್ದರು. ತಮ್ಮ ಪಾಲಿನ ಕೆಲಸ ಪೂರ್ಣಗೊಳಿಸಿ ಮತ್ತೊಂದು ಲಾರಿಯ ದುರಸ್ತಿಗೆ ಮುಂದಾದರು. ಪಾದರಸದ ವೇಗದಲ್ಲಿ ಕವಚ ಕಟ್ಟುವ ಶಾರದಾ ಅವರ ಕಾಯಕ ನಿಷ್ಠೆಯನ್ನು ಸುತ್ತಲಿನ ಪುರುಷ ಕೆಲಸಗಾರರು ನಿಬ್ಬೆರಗಾಗಿ ನೋಡುತ್ತಿದ್ದರು.

ಕೊಪ್ಪಳದ ಬನ್ನಿಕಟ್ಟಿ ಸಮೀಪದಲ್ಲಿರುವ ಶಾರದಾ ಅವರ ಅಂಗಡಿಯ ಸಾಲಿನಲ್ಲಿಯೇ ಲಾರಿಗಳಿಗೆ ಕವಚ ಅಳವಡಿಸುವ ಎರಡ್ಮೂರು ಅಂಗಡಿಗಳಿವೆ. ಅಲ್ಲಿ ಕೆಲಸ ಮಾಡುವವರೆಲ್ಲರೂ ಪುರುಷರೇ. ದೈಹಿಕವಾಗಿ ಬಹಳ ಶ್ರಮ ಬೇಕಾಗುವ, ದಿನಗಟ್ಟಲೆ ಬಿಸಿಲು, ದೂಳಿನಲ್ಲಿ ಕೆಲಸ ಮಾಡುವ ಪುರುಷರಷ್ಟೇ ಸಮರ್ಥವಾಗಿ ಶಾರದಾ ಕಾಯಕ ನಿರ್ವಹಣೆ ಮಾಡುತ್ತಾರೆ.

ಹೀಗಾಗಿ ಛಲಗಾತಿ, ಸಾಧಕಿ, ದಿಟ್ಟ ಮಹಿಳೆ ಎಂದು ಅನೇಕರು ಪ್ರಶಂಸೆ ವ್ಯಕ್ತಪಡಿಸುತ್ತಾರೆ. ಹೀಗೆ ಮೆಚ್ಚುಗೆ ವ್ಯಕ್ತಪಡಿಸುವ ಮಾತುಗಳನ್ನು ಕೇಳಿ ಶಾರದಾ ಅವರ ಮುಖದ ಮೇಲೆ ಆ ಕ್ಷಣಕ್ಕೆ ನಗು ಅರಳುತ್ತದೆಯಾದರೂ ನಗುವಿನ ಹಿಂದಿರುವ ನೋವುಗಳು ಮಾತ್ರ ಸದಾ ಅವರನ್ನು ಕಾಡುತ್ತಲೇ ಇವೆ.

ವಿಶ್ವಕರ್ಮ ಸಮುದಾಯದಲ್ಲಿ ಜನಿಸಿದ ಅವರ ಪೂರ್ಣ ಹೆಸರು ಶಾರದಾ ಬಡಿಗೇರ. ಗದಗ ಸ್ವಂತ ಊರು. ಕಟ್ಟಿಗೆಯಲ್ಲಿ ಕಲಾಕೃತಿಗಳನ್ನು, ಗೃಹಬಳಕೆಯ ವಸ್ತು ತಯಾರಿಸುವ ತಂದೆ ಈಶಪ್ಪ ಬಡಿಗೇರ ಅವರ ಕೆಲಸವನ್ನು ಬಾಲ್ಯದಿಂದಲೇ ನೋಡಿಕೊಂಡಿದ್ದರಿಂದ ಈ ಕೆಲಸದ ಬಗ್ಗೆ ತಿಳಿದಿತ್ತು. ಆದರೆ, ಕೆಲಸ ಮಾಡುವ ಸಂದರ್ಭ ಬಂದಿರಲಿಲ್ಲ. ಹಲವು ವರ್ಷಗಳ ಹಿಂದೆ ಕುಕನೂರು ತಾಲ್ಲೂಕಿನ ಮನ್ನಾಪುರ ಗ್ರಾಮದ ದೇವೇಂದ್ರಪ್ಪ ಅವರನ್ನು ಮದುವೆ ಮಾಡಿಕೊಂಡು ಕೊಪ್ಪಳದ ಭಾಗ್ಯನಗರದಲ್ಲಿ ವಾಸವಾಗಿದ್ದರು.

> ಲಾರಿ ಕವಚ ಕಟ್ಟುವ ಕೆಲಸ ಈಗ ನನಗೆ ತುಂಬಾ ಸಲೀಸು

ಪತಿ ದೇವೇಂದ್ರಪ್ಪ ಮೊದಲಿನಿಂದಲೂ ಲಾರಿಗೆ ಕವಚ ಕಟ್ಟುವ ಕೆಲಸ ಮಾಡಿಕೊಂಡಿದ್ದರು. ಅಯ್ಯಪ್ಪ ಸ್ವಾಮಿಯ ಪರಮಭಕ್ತರಾಗಿದ್ದರಿಂದ ಪ್ರತಿವರ್ಷ 15 ದಿನ ಶಬರಿಮಲೆ ಯಾತ್ರೆಗೆ ಹೋಗುತ್ತಿದ್ದರು. ಹೀಗೆ ಯಾತ್ರೆ ಮಾಡಿದಾಗ ಗಂಡನ ಕೆಲಸದ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿ ಶಾರದಾ ಅವರ ಹೆಗಲ ಮೇಲೆ ಬೀಳುತ್ತಿತ್ತು. ಆಗ ತಮ್ಮ ಅಂಗಡಿಯ ಕೆಲಸಗಾರರು ಮಾಡುತ್ತಿದ್ದ ಕೆಲಸವನ್ನು ದೂರದಿಂದಲೇ ಗಮನಿಸಿ ಅಷ್ಟಿಷ್ಟು ನೆರವಾಗುತ್ತಿದ್ದರು.

ವೆಲ್ಡಿಂಗ್ ಮಾಡುವ, ಲಾರಿಯ ಹಿಂಭಾಗದಲ್ಲಿ ಜಂತಿ ಹೊಂದಿಸುವ ಕೆಲಸಗಳನ್ನು ಮಾಡುತ್ತಿದ್ದವರನ್ನು ತದೇಕಚಿತ್ತದಿಂದ ನೋಡುತ್ತಿದ್ದರು. 2009ರಲ್ಲಿ ಪತಿ ದೇವೇಂದ್ರಪ್ಪ ಮೃತಪಟ್ಟಾಗ ಮುಂದಿನ ಬದುಕು ಏನು ಎನ್ನುವ ಪ್ರಶ್ನೆ ಅವರನ್ನು ಕಾಡಿತ್ತು. ಆಗ ಏಳು ವರ್ಷದವಳಿದ್ದ ಮಗಳು ವಿಜಯಲಕ್ಷ್ಮಿ, ನಾಲ್ಕು ವರ್ಷದ ಮಗ ನಾಗರಾಜ ಅವರ ಭವಿಷ್ಯ ರೂಪಿಸುವುದು ಹೇಗೆ ಎನ್ನುವ ಆತಂಕವಿತ್ತು.

ಪತಿ ಮೃತಪಟ್ಟ ಕೆಲವು ದಿನಗಳಲ್ಲಿ ಶಾರದಾ ಅವರ ತಂದೆ, ‘ಮಕ್ಕಳಿನ್ನೂ ಚಿಕ್ಕವರಿದ್ದಾರೆ, ತವರಿಗೆ ಹೋಗಿಬಿಡೋಣ’ ಎಂದು ಬಲವಂತ ಮಾಡಿದ್ದರು. ಆದರೆ, ಛಲಗಾತಿ ಶಾರದಾ ಮಾತ್ರ ಗಂಡನ ಮನೆ ಬಿಟ್ಟು ಕದಲಲಿಲ್ಲ. ವರ್ಷಕ್ಕೊಮ್ಮೆ ತಮ್ಮ ಅಂಗಡಿಯಲ್ಲಿ ಅಲ್ಪ ಸ್ವಲ್ಪ ನೋಡಿಕೊಂಡಿದ್ದ ಲಾರಿಗೆ ಕವಚ ಅಳವಡಿಸುವ ಕಾಯಕವನ್ನೇ ತಮ್ಮ ಬದುಕಿಗೆ ಆಸರೆ ಮಾಡಿಕೊಂಡರು. ಛಲ, ಧೈರ್ಯ, ಆತ್ಮವಿಶ್ವಾಸವೇ ಬಂಡವಾಳವಾಯಿತು. ಜೊತೆಗಾರರು ‘ನಿಮ್ಮ ಜೊತೆ ನಾವಿದ್ದೇವೆ’ ಎಂದರೆ, ಮೈದುನ ದ್ಯಾಮಣ್ಣ ಬಡಿಗೇರ ಅತ್ತಿಗೆಯ ಸಾಹಸಕ್ಕೆ ಕೈ ಜೋಡಿಸಿದರು.

ಒಂದೂವರೆ ದಶಕದ ಹಿಂದೆ ಬಳ್ಳಾರಿ ಹಾಗೂ ಹೊಸಪೇಟೆ ಭಾಗದಲ್ಲಿ ಗಣಿಗಾರಿಕೆ ಉತ್ತುಂಗದಲ್ಲಿದ್ದ ಕಾಲ. ಹೀಗಾಗಿ ನೆರೆಯ ಕೊಪ್ಪಳ ಜಿಲ್ಲೆಯಲ್ಲಿಯೂ ಗಣಿ ಸರಕು ತುಂಬಿಕೊಂಡು ನಿತ್ಯ ಸಾವಿರಾರು ಲಾರಿಗಳು ಓಡಾಡುವ ಸದ್ದು ಜೋರಾಗಿತ್ತು. ರಾಜ್ಯದ ಭತ್ತದ ಕಣಜ ಎನಿಸಿಕೊಂಡಿದ್ದ ಕೊಪ್ಪಳ ಜಿಲ್ಲೆಯಲ್ಲಿ ಹೊಸ ಲಾರಿಗಳ ಖರೀದಿ ಭರಾಟೆಯಿತ್ತು. ಹೀಗಾಗಿ ಜಿಲ್ಲೆಯ ಎಲ್ಲ ಲಾರಿ ದುರಸ್ತಿ ಕೆಲಸಗಾರರಿಗೆ ಹಗಲಿರುಳು ಕೆಲಸ. ಎಷ್ಟೇ ಕೆಲಸ ಮಾಡಿದರೂ ಸಮಯ ಸಾಲುತ್ತಿರಲಿಲ್ಲ. ಅಂಗಡಿಗಳ ಮುಂದೆ ಲಾರಿಗಳ ಸಾಲು. ಹೀಗಾಗಿ ಶಾರದಾ ಅವರಿಗೆ ಪತಿ ಮೃತಪಟ್ಟ ಬಳಿಕ ಹೆಚ್ಚು ದಿನ ಮನೆಯಲ್ಲಿ ಉಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಒಂದು ಲಾರಿಯ ಸಂಪೂರ್ಣ ಕವಚ ಕಟ್ಟಲು ಕನಿಷ್ಠ ಎರಡೂವರೆ ತಿಂಗಳು ಬೇಕಾಗುತ್ತದೆ. ಅಂಗಡಿ ಮುಂದೆ ಸರತಿಯಲ್ಲಿ ನಿಂತಿದ್ದ ಹತ್ತಾರು ಲಾರಿಗಳಿಗೆ ಕವಚ ಕಟ್ಟಿದರು. ಆರಂಭದಲ್ಲಿ ಒಂದಷ್ಟು ಕೆಲಸ ಮಾತ್ರ ಗೊತ್ತಿದ್ದ ಅವರಿಗೆ ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ಒಂದು ಲಾರಿಯನ್ನು ತಾವೇ ನಿರ್ವಹಣೆ ಮಾಡಿ ಚೆಂದದ ರೂಪಕೊಡುವ ಸಾಮರ್ಥ್ಯ ಕರಗತ ಆಯಿತು.

ನಿತ್ಯ ಇದೇ ಕೆಲಸ ಮಾಡುತ್ತ ಹಿಂದಿನ 15 ವರ್ಷಗಳಲ್ಲಿ 150ಕ್ಕೂ ಹೆಚ್ಚು ಲಾರಿಗಳಿಗೆ ಕವಚ ಕಟ್ಟಿದ್ದಾರೆ. ತಂತ್ರಜ್ಞಾನ ಹೊಸತನಕ್ಕೆ ಹೊರಳಿದ್ದರಿಂದ ಲಾರಿಗಳ ಮಾಲೀಕರು ಈಗ ಕಟ್ಟಿಗೆಗಿಂತ ಸ್ಟೀಲ್‌ನ ಕವಚ ಅಳವಡಿಸುತ್ತಿದ್ದಾರೆ. ಬೇಡಿಕೆಗೆ ತಕ್ಕಂತೆ ಶಾರದಾ ಕೆಲಸ ಕಲಿತುಕೊಂಡಿದ್ದಾರೆ. ಅವರ ಬಳಿ ಹಲವು ಪುರುಷ ಕೆಲಸಗಾರರು ಬಂದಿದ್ದಾರೆ. ಅವರಿಗೆಲ್ಲ ಕೆಲಸ ಕಲಿಸಿದ್ದಾರೆ.

ಶಾರದಾ ತಮ್ಮ ಬದುಕು ರೂಪಿಸಿಕೊಳ್ಳುವ ಜೊತೆಗೆ ಮಕ್ಕಳ ಪಾಲಿಗೆ ನೆಚ್ಚಿನ ಅಮ್ಮ ಎನಿಸಿಕೊಂಡಿದ್ದಾರೆ. ಮಗಳ ಬದುಕನ್ನು ಸುಂದರವಾಗಿ ಕಟ್ಟಿ ಮದುವೆ ಮಾಡಿಕೊಟ್ಟಿದ್ದಾರೆ. ಮಗ ಐಟಿಐ ಪೂರ್ಣಗೊಳಿಸಿದ್ದು ಅಮ್ಮನ ಕೆಲಸಕ್ಕೆ ನೆರವಾಗುತ್ತಿದ್ದಾನೆ.

ಹೀಗೆ ಗೃಹಿಣಿಯಾಗಿ, ಸಾಹಸಿಯಾಗಿ, ಉದ್ಯಮಿಯಾಗಿ ಈಗಲೂ ನಿತ್ಯ ಕವಚ ಅಳವಡಿಸುವ ಶಾರದಾ ಅವರ ಬದುಕು ಅನೇಕ ಹೆಣ್ಣುಮಕ್ಕಳ ಪಾಲಿಗೆ ಸಾಹಸದ, ಪ್ರೇರಣೆಯ ಕಥನ.

ಬದುಕಿನ ದೊಡ್ಡ ಹಾದಿ ಸಾಗಿ ಬಂದ ಅವರನ್ನು ಈ ಬಗ್ಗೆ ಕೇಳಿದಾಗ, ‘ಈಗಿನ ಸಮಾಜದಲ್ಲಿ ತಮ್ಮ ಮನೆಯ ಹೆಣ್ಣುಮಕ್ಕಳು ಸಾಹಸದ ಕೆಲಸ ಮಾಡಿದರೆ ಛಲಗಾತಿ, ಧೈರ್ಯವಂತೆ ಎನ್ನುತ್ತಾರೆ. ಇದೇ ಕೆಲಸ ಬೇರೆ ಹೆಣ್ಣುಮಕ್ಕಳು ಮಾಡಿದರೆ ಗಂಡುಬೀರಿ ಎನ್ನುವ ಪಟ್ಟ ಕೊಡುತ್ತಾರೆ. ಅನೇಕ ನೋವುಗಳನ್ನು ಉಂಡಿದ್ದೇನೆ. ಯಾರ ಮಾತಿಗೂ ಮಣೆ ಹಾಕದೇ ನನ್ನ ಮಕ್ಕಳ ಬದುಕಿಗಾಗಿ ಎಲ್ಲವನ್ನೂ ಸಹಿಸಿಕೊಂಡು ಕೆಲಸ ಮಾಡಿದ್ದೇನೆ. ಹಿಂದೆ ನನ್ನನ್ನು ಜರೆದವರೇ ಈಗ ಬೆನ್ನು ತಟ್ಟಿದ್ದಾರೆ. ಇದಕ್ಕಿಂತ ದೊಡ್ಡ ಖುಷಿ ಮತ್ತೇನೂ ಇಲ್ಲ’ ಎನ್ನುತ್ತಿದ್ದಾಗ ಅವರ ದನಿ ಗದ್ಗದಿತವಾಗಿತ್ತು. ಕಣ್ಣಿನಿಂದ ಅವರಿಗೆ ಅರಿವಿಲ್ಲದಂತೆ ಆನಂದಭಾಷ್ಪ ಸುರಿಯುತ್ತಿತ್ತು.

PRESENTED BY
mahindra Rise

IN ASSOCIATION WITH
Gold Winner
AMRITH NONI REACH ROOT Premium HAIR OIL
MCBL
VICCO TRUSTED AYURVEDA SINCE 1952

TV PARTNER
ವಿಸ್ತಾರ NEWS